# ಅಧ್ಯಾಯ – ೧೭
# ಪ್ರೇಕ್ಷಣೀಯ ಸ್ಥಳಗಳು

ಧಾರ್ಮಿಕ ಕೇಂದ್ರ, ಐತಿಹಾಸಿಕ ಸ್ಮಾರಕ, ನಿಸರ್ಗದತ್ತ ರಮಣೀಯ ಸ್ಥಳ, ಪೌರಾಣಿಕ ಕ್ಷೇತ್ರ, ಸಿದ್ಧಪುರುಷರು, ಮಹಾನ್‌ಸಾಧಕರ ಜನ್ಮಸ್ಥಳ, ಹೀಗೆ ವೈವಿಧ್ಯ ಹಿನ್ನೆಲೆಯನ್ನು ಹೊಂದಿರುವ ಸ್ಥಳಗಳು ಪ್ರೇಕ್ಷಣೀಯ ಸ್ಥಳವೆಂದೆನಿಸಿಕೊಳ್ಳುತ್ತವೆ. ಈ ರೀತಿಯ ಸುಪ್ರಸಿದ್ಧ ಸ್ಥಳಗಳು ಕರ್ನಾಟಕದ ಉದ್ದಗಲಕ್ಕೂ ಹಬ್ಬಿದ್ದು, ಈ ಜಿಲ್ಲೆಯಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿದ್ದು, ಪ್ರಮುಖವಾದವನ್ನು ಮಾತ್ರ ಇಲ್ಲಿ ಪರಿಚಯಿಸಲಾಗಿದೆ. ಜಿಲ್ಲೆಯು ಸಾಂಸ್ಕೃತಿಕವಾಗಿ ಸಂಪದ್ಭರಿತವಾಗಿದ್ದು, ಸ್ಥಳೀಯ ಜನರ ಬದುಕನ್ನು ಜಿಲ್ಲೆಯಲ್ಲಿರುವ ಚಾರಿತ್ರಿಕ ನೆಲೆಗಳು ಹಾಗೂ ದೇವಾಲಯಗಳು ದರ್ಪಣದಂತೆ ಬಿಂಬಿಸುತ್ತಿವೆ. ಜಿಲ್ಲೆಯಲ್ಲಿ ಶಾಸನ, ವೀರಗಲ್ಲು, ಕೋಟೆ–ಕೊತ್ತಲ, ದೇವಾಲಯಗಳು ಯಥೇಚ್ಛವಾಗಿದ್ದು ಇವು ಜಿಲ್ಲೆಯ ಸಾಂಸ್ಕೃತಿಕ ಹಿರಿಮೆಗೆ ಸಾಕ್ಷಿಯಾಗಿವೆ.

ಈ ಜಿಲ್ಲೆಯು ಕರ್ನಾಟಕದ ಆಗ್ನೇಯ ಭಾಗದಲ್ಲಿದ್ದು, ದಕ್ಷಿಣ ಭಾರತದ ದಖನ್ ಪ್ರಸ್ಥಭೂಮಿಯ ಭೂಭಾಗವಾಗಿದ್ದು, ಸ್ಫಟಿಕ ಶಿಲಾರೂಪದ ಬಂಡೆಗಳನ್ನೂ ಹೊಂದಿದೆ. ಗ್ರಾನೈಟ್ ಬೆಟ್ಟಸಾಲು ಉತ್ತರ ದಕ್ಷಿಣವಾಗಿ ಹಬ್ಬಿದೆ. ಧಾರವಾಡ ಭಿನ್ನಸ್ಥರ ಶಿಲಾಪಟ್ಟಿ ದಕ್ಷಿಣ ಭಾಗದಲ್ಲಿ ಹಾಯ್ದು ಹೋಗಿದೆ. ಜಿಲ್ಲೆಯ ಉತ್ತರ ಭಾಗದಲ್ಲಿರುವ ನಿಡುಗಲ್ಲು ದುರ್ಗ ಮತ್ತು ದಕ್ಷಿಣದ ಹುಲಿಯೂರು ದುರ್ಗಗಳ ನಡುವೆ ಕಾಮನದುರ್ಗ, ಮಿಡಿಗೇಶಿ ದುರ್ಗ, ಮಧುಗಿರಿ ಬೆಟ್ಟ, ಚನ್ನರಾಯನದುರ್ಗ, ಕೊರಟಗೆರೆ ಬೆಟ್ಟ, ಸಿದ್ಧರಬೆಟ್ಟ, ದೇವರಾಯನ ದುರ್ಗ, ಹುತ್ರಿದುರ್ಗ ಮೊದಲಾದ ಬೆಟ್ಟಗಳು ಮುಖ್ಯವಾಗಿ ಕಂಡುಬರುತ್ತವೆ. ಜಿಲ್ಲೆಯ ಇನ್ನಿತರ ಬೆಟ್ಟ ಸಾಲುಗಳೆಂದರೆ ರಾಮದೇವರ ಬೆಟ್ಟ, ಸೀತಕಲ್ಲು ಬೆಟ್ಟ, ಬ್ಯಾಲ ಬೆಟ್ಟ, ಬೊಮ್ಮೇನಹಳ್ಳಿ ಬೆಟ್ಟ, ಚೌಡನಹಳ್ಳಿ ಬೆಟ್ಟ ಮತ್ತು ರಂಗನಾಥಸ್ವಾಮಿ ಬೆಟ್ಟ. ಈ ಎಲ್ಲಾ ಬೆಟ್ಟಗಳೂ ಪ್ರಾಕೃತಿಕ ಬಂಡೆಗಳ ಜೊತೆಗೆ ಗಿಡಮೂಲಿಕೆಗಳನ್ನೊಳಗೊಂಡ ಸಸ್ಯಸಂಪತ್ತು ಮತ್ತು ವನ್ಯಜೀವಿಗಳನ್ನು ಹೊಂದಿವೆ. ಜಿಲ್ಲೆಯು ಮೂರು ನದಿಪಾತ್ರಗಳಿಗೆ ಹೊಂದಿಕೊಂಡಿದೆ. ತುಮಕೂರು, ಗುಬ್ಬಿ, ತಿಪಟೂರು ಮತ್ತು ಕುಣಿಗಲ್ ಪ್ರದೇಶವು, ಕಾವೇರಿ ಜಲಾನಯನ ಪ್ರದೇಶಕ್ಕೆ ಸೇರಿದೆ. ತುಮಕೂರು ಸಮೀಪದ ದೇವರಾಯನದುರ್ಗವು ಶಿಂಷಾ ನದಿಯ ಮೂಲವಾಗಿದ್ದು, ಮುಂದೆ ಇದು ಕಾವೇರಿಯನ್ನು ಸೇರುತ್ತದೆ. ಶಿಂಷಾ ನದಿಗೆ ಕುಣಿಗಲ್ಲಿನ ಮಾರ್ಕೋನಹಳ್ಳಿಯಲ್ಲಿ ಅಣೆಕಟ್ಟು ಕಟ್ಟಿ ಜಲಾಶಯವನ್ನು ನಿರ್ಮಿಸಲಾಗಿದೆ (ನಿರ್ಮಾಣ–೧೯೩೯ ಜಲಾನಯನ ಪ್ರದೇಶ–೧೧,೦೦೦ ಎಕರೆ). ಜಿಲ್ಲೆಯ ವಾಯವ್ಯ ಭಾಗವು ಕೃಷ್ಣಾ ಜಲಾನಯನ ಪ್ರದೇಶಕ್ಕೆ ಸೇರಿದುದಾಗಿದ್ದು,

ಇಲ್ಲಿನ ಪ್ರಮುಖ ನದಿ ಸುವರ್ಣಮುಖಿ. ಇದು ವೇದಾವತಿ ನದಿಯ ಉಪನದಿ. ಸುವರ್ಣಮುಖಿಗೆ ಬೋರನಕಣಿವೆಯ ಬಳಿ ಜಲಾಶಯವನ್ನು ನಿರ್ಮಿಸಲಾಗಿದೆ (೧೮೮೫-೧೮೯೨; ಜಲಾನಯನ ಪ್ರದೇಶ-೧೪೦೦ ಎಕರೆ). ಶಿರಾ ಮತ್ತು ಚಿಕ್ಕನಾಯನಹಳ್ಳಿ ಪ್ರದೇಶಗಳು ಈ ನದಿಪಾತ್ರಕ್ಕೆ ಸೇರುತ್ತವೆ. ಜಿಲ್ಲೆಯ ಉತ್ತರ ಹಾಗೂ ಈಶಾನ್ಯ ಭಾಗಗಳು ಉತ್ತರ ಪಿನಾಕಿನಿ ಜಲಾನಯನ ಪ್ರದೇಶಕ್ಕೆ ಸೇರಿದ್ದು ಜಿಲ್ಲೆಯ ಈ ಭಾಗದ ನದಿಗಳೆಂದರೆ ಜಯಮಂಗಲಿ ಮತ್ತು ಪಿನಾಕಿನಿ. ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ತಾಲ್ಲೂಕಿನ ಭಾಗಗಳು ಈ ನದಿಪಾತ್ರಕ್ಕೆ ಸೇರುತ್ತವೆ. ಈ ಮೂರು ಜಲಾನಯನ ಪ್ರದೇಶಗಳ ಜೊತೆಗೆ ಜಿಲ್ಲೆಯ ಮತ್ತೊಂದು ನೀರಿನಾಸರೆಯ ಕೇಂದ್ರ ಕೆರೆ-ಕಟ್ಟೆಗಳು. ಮಳೆಯ ನೀರನ್ನು ಸಂಗ್ರಹಿಸಿ ಬಳಸುವ ಪದ್ಧತಿ ಅನಾದಿ ಕಾಲದಿಂದಲೂ ಇದ್ದು ಹಲವು ಕೆರೆಗಳ ಶಾಸನೋಕ್ತ ಉಲ್ಲೇಖವನ್ನು ಕಾಣಬಹುದು. ಜಿಲ್ಲೆಯಲ್ಲಿ ಸುಮಾರು ೨೦೧೦ ಕೆರೆಗಳಿರುವುದಾಗಿ ತಿಳಿದು ಬರುತ್ತದೆ. ಅಲ್ಲಲ್ಲಿ ನೀರಿನ ಮಡುವುಗಳೂ ಇದ್ದು ಅವೂ ನೀರನ್ನೊದಗಿಸಿವೆ. ನಂತರದಲ್ಲಿ ಕೊಳವೆ ಬಾವಿಗಳ ನಿರ್ಮಾಣ ರೂಢಿಸಿಕೊಂಡಿದ್ದರ ಫಲವಾಗಿ ಅಂತರ್ಜಲ ಮಟ್ಟವು ಸಾಕಷ್ಟು ಕುಸಿದಿದೆ. ೧೯೯೬ರಿಂದ ಹೇಮಾವತಿ ನದಿಯ ನಾಲೆಯು ಜಿಲ್ಲೆಗೆ ವರವಾಗಿದ್ದು ಸಾಕಷ್ಟು ಜಲಕ್ಷಾಮವನ್ನು ನೀಗಿಸಿದೆ.

ಜಿಲ್ಲೆಯ ಉದ್ದಗಲಕ್ಕೂ ಪ್ರಾಗೈತಿಹಾಸಿಕ ನೆಲೆಗಳು ಪತ್ತೆಯಾಗಿದ್ದು ಇವು ಕಿಬ್ಬನಹಳ್ಳಿ ನೆಲೆಯಂತೆಯೇ ಪ್ರಮುಖ ನೆಲೆಗಳಾಗಿರುವುದನ್ನು ಗುರುತಿಸಲಾಗಿದೆ. ರಾಜ್ಯದಲ್ಲಿಯೇ ಅತಿ ಹೆಚ್ಚು ಸಂಖ್ಯೆಯಲ್ಲಿ ಶಿಲಾಯುಗದ ನೆಲೆಗಳನ್ನು ಹೊಂದಿರುವ ಜಿಲ್ಲೆ ಇದಾಗಿದೆ. ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿರುವ ಶಿಲಾಯುಗನೆಲೆಗಳು ಆದಿ-ಮಧ್ಯ-ಅಂತ್ಯ ಹಳೆ ಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗ, ಬೃಹತ್ ಶಿಲಾಯುಗ ಸಂಸ್ಕೃತಿ ಹಾಗೂ ಇತಿಹಾಸ ಆರಂಭಕಾಲದ ಅವಶೇಷಗಳನ್ನೊಳಗೊಂಡಿವೆ. ಕುಣಿಗಲ್ ತಾಲೂಕಿನ ತೆಪ್ಪಸಂದ್ರ, ಹಿಮಗಿರಿ, ಹುಲಿಯೂರುದುರ್ಗ, ಹೇರೂರು; ಕೊರಟಗೆರೆ ತಾಲೂಕಿನ ಇರಕಸಂದ್ರ ಕಾಲೋನಿ, ಕಲ್ಲೇನಹಳ್ಳಿ, ಗೊಲ್ಲರಹಟ್ಟಿ, ತಣ್ಣೇನಹಳ್ಳಿ, ಥರಟಿ, ಪಾಲ್ನಹಳ್ಳಿ, ಸಿದ್ಧರಬೆಟ್ಟ, ಸೀಗೆಹಳ್ಳ, ಹೊನ್ನೇನಹಳ್ಳಿ, ಹೊಸಕೋಟೆ; ಗುಬ್ಬಿ ತಾಲೂಕಿನ ಅದ್ಲಗೆರೆ, ಅಪ್ಪಾನಹಳ್ಳಿ, ಅಳಿಲಘಟ್ಟ, ಉನಗನಾಲ, ಓಬಳಾಪುರ, ಕೈಮರ ಗಳಿಗೆಕೆರೆ, ಜೋಗಿಹಳ್ಳಿ, ತ್ಯಾಗಟೂರು, ದೊಡ್ಡಗುಣಿ, ಬಂಡನಹಳ್ಳಿ, ಬಣ್ಣಿಗಾನಹಳ್ಳಿ, ಬೆಟ್ಟದಹಳ್ಳಿ ಬೋಗಸಂದ್ರ, ಮಾರಸಂದ್ರ, ಮೂಗನಾಯಕನಕೋಟೆ, ಮುದಿಪುರ, ಮಂಚಲ್ದೊರೆ, ಯಕ್ಕಲಕೋಟೆ, ಯಲ್ಲಾಪುರ, ಶಿವಪುರ, ಸಾಕಸಂದ್ರ, ಸೌರನಕೋಟೆ, ಹೂವಿನಕಟ್ಟೆ, ವೀರಾಪುರ, ಹೊಸಕೆರೆ; ಪಾವಗಡ ತಾಲೂಕಿನ ಕಣಿಕಲ್ಬಂಡೆ, ಕತ್ತಿಕ್ಯಾತನಹಳ್ಳಿ, ತೆಪ್ಪಗಾನದೊಡ್ಡಿ, ನಾಗಲಾಪುರ, ನಿಡುಗಲ್ಲು, ಪಳವಳ್ಳಿ, ಪಾವಗಡ, ಬಸವನಬೆಟ್ಟ, ಬೂದಿಬೆಟ್ಟ, ಮರಿದಾಸನಹಳ್ಳಿ, ಯಲ್ಲಪ್ಪನಾಯಕನಹಳ್ಳಿ, ಯಲ್ಲಪ್ಪನಾಯಕನ ಹೊಸಕೋಟೆ ಮತ್ತು ರಾಚಮಾರನಹಳ್ಳಿ; ಚಿಕ್ಕನಾಯಕನಹಳ್ಳಿ ತಾಲೂಕಿನ ಅಂಕನಬಾವಿ, ಕಾವಲಹಟ್ಟಿ, ಸಾಲುಕಟ್ಟೆ, ಹುಳಿಯಾರು, ಹೊಸಹಳ್ಳಿ; ತಿಪಟೂರು ತಾಲೂಕಿನ ಕರಡಿ, ಕಿಬ್ಬನಹಳ್ಳಿ, ಕಾರೇಕುರ್ಚಿ, ಜಕ್ಕನಹಳ್ಳಿ, ಬಿಳಿಗೆರೆ, ಬಾಣಸಂದ್ರ, ಬೊಮ್ಮೇನಹಳ್ಳಿ, ರಜತಾದ್ರಿಪುರ, ಶೆಟ್ಟಿಹಳ್ಳಿ, ಸಿಡ್ಲೇಹಳ್ಳಿ, ಹರೇನಹಳ್ಳಿ, ಹೊನ್ನೇಮಾರನಹಳ್ಳಿ; ತುಮಕೂರು ತಾಲೂಕಿನ ಅಗ್ರಹಾರ, ಕೈದಾಳ, ಗೌಡನಕಟ್ಟೆ, ಢಣಾಪುರ, ಚಿನಗ, ಚಿನವಾರ, ಬಂಡೇಹಳ್ಳಿ, ಬೆಳ್ಳಿಬಟ್ಟಲು, ಮಾರನಾಯಕನಪಾಳ್ಯ, ಮಂಚಕಲ್‌ಕುಪ್ಪೆ, ರಾಮದೇವರಬೆಟ್ಟ, ಸಿದ್ಧಗಂಗಾಬೆಟ್ಟ, ಸೀಗೆಹಳ್ಳ, ಹಿರೇಗುಂಡಗಲ್ಲು; ತುರುವೇಕೆರೆ ತಾಲೂಕಿನ ಬಾಣಸಂದ್ರ ಬೆಟ್ಟ, ಸಂಪಿಗೆ; ಮಧುಗಿರಿ ತಾಲೂಕಿನ ಕತ್ತಿರಾಜನಹಳ್ಳಿ, ಕೊಡಗೇನಹಳ್ಳಿ, ಗುಟ್ಟೆ, ಗುರಮ್ಮನಕಟ್ಟೆ, ಚಿಕ್ಕೇಗೌಡನರೊಪ್ಪ, ದಬ್ಬೆಗಟ್ಟ, ಬಿಜ್ಜಾವರ, ಕಲ್ಲೇನಹಳ್ಳಿ ಮಧುಗಿರಿ(ದಕ್ಷಿಣ ಏಷ್ಯಾದಲ್ಲೇ ಅತ್ಯಂತ ಎತ್ತರದ ಏಕಶಿಲಾಗಿರಿ ಎಂಬ ಹೆಗ್ಗಳಿಕೆ ಇದಕ್ಕಿದೆ), ಮಿಡಿಗೇಶಿ, ಸಿದ್ಧಾಪುರ; ಶಿರಾ ತಾಲೂಕಿನ ಬುಕ್ಕಾಪಟ್ಟಣ, ಬೂದಿಗುಡ್ಡ ಮೊದಲಾದೆಡೆಗಳಲ್ಲಿ ಶಿಲಾಯುಗಕ್ಕೆ ಸೇರಿದ ನೆಲೆಗಳನ್ನು ಗುರುತಿಸಲಾಗಿದೆ. ಮಾನವನ ಜೀವನಕ್ರಮ ಬೇರೆ ಪ್ರದೇಶಗಳಂತೆಯೇ ಇಲ್ಲಿಯೂ ಇದ್ದುದು ಅವುಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ.

ಜಿಲ್ಲೆಯಲ್ಲಿ ದೊರಕುವ ಪ್ರಾಚೀನ ದೇವಾಲಯಗಳಲ್ಲಿ ಅರಳುಗುಪ್ಪೆ, ನೊಣವಿನಕೆರೆ, ಕುಣಿಗಲ್, ತಂಡಗ, ಬರಗೂರು, ಹೇರೂರು, ಜಲಗಾರದಿಬ್ಬ, ಹುಲಿಕಲ್ಲು, ಹುಳಿಯಾರು, ನಿಡುಗಲ್ಲು, ವಿಘ್ನಸಂತೆ, ಸೆಟ್ಟಿಕೆರೆ, ತುರುವೇಕೆರೆ, ದಬ್ಬೇಘಟ್ಟ, ಹೊಸಹಳ್ಳಿ, ಹೆಗ್ಗೆರೆ, ಗೋಣಿ ತುಮಕೂರು, ಕೈದಾಳ, ಸೂಳೆಕೆರೆ, ನಾಗಲಾಪುರ, ನಿಟ್ಟೂರು, ತುಮಕೂರು ನಗರ, ಯಡೆಯೂರು, ಅಮೃತೂರು, ಯಳನಡು, ದೊಡ್ಡದಾಳವಟ್ಟ, ಚಿಕ್ಕನಾಯಕನಹಳ್ಳಿ, ಪಂಕಜನಹಳ್ಳಿ, ಕಡಬ, ಹೊನ್ನೇಬಾಗಿ, ಗುಬ್ಬಿ, ಹೊರಮನೆ ಕಾವಲ್, ಒಡೇರಹಳ್ಳಿ, ತುಂಗವಟಿ, ಮಿಡಿಗೇಶಿ, ಮಧುಗಿರಿ, ಪಾವಗಡ, ಗೋಡೆಕೆರೆ, ಕಾರೇಕುರ್ಚಿದೊಣೆ, ಹೆಬ್ಬೂರು, ಕುಡೂತಿ, ಕಡಗತ್ತೂರು, ತೋವಿನಕೆರೆ, ಬಿದರೆ, ಮಾಯಸಂದ್ರ, ರಾಂಪುರ, ಮೊದಲಾದೆಡೆಗಳಲ್ಲಿ ತಲಕಾಡಿನ ಗಂಗರ ಕಾಲಕ್ಕೆ ಸೇರಿದ ದೇವಾಲಯಗಳು ಕಂಡು ಬರುತ್ತವೆ. ನಂತರದವು ಪ್ರಮುಖವಾಗಿ ಚೋಳ, ನೊಳಂಬ,

ಕಲ್ಯಾಣದ ಚಾಳುಕ್ಯ, ಹೊಯ್ಸಳ ಹಾಗೂ ವಿಜಯನಗರ ಮನೆತನಕ್ಕೆ ಸೇರುತ್ತವೆ. ಜಿಲ್ಲೆಯು ಅನೇಕ ಪಾಳೆಪಟ್ಟು, ಸಾಮಂತ ಮನೆತನಗಳಿಗೂ ಪ್ರಸಿದ್ಧವಾಗಿದ್ದು, ಪ್ರತಿಯೊಂದು ಸಾಮಂತ ಮನೆತನವೂ ಸಾಂಸ್ಕೃತಿಕ ಕೊಡುಗೆಗಳನ್ನು ನೀಡಿವೆ.

ಜಿಲ್ಲೆಯ ಹಲವು ಭಾಗಗಳಲ್ಲಿ ಮೈಸೂರಿನ ಒಡೆಯರ ಕಾಲದ ಸ್ಮಾರಕಗಳು ಕಂಡುಬಂದಿವೆ. ಇವುಗಳಲ್ಲಿ ಪ್ರಮುಖವಾದವೆಂದರೆ ಅಮೃತೂರಿನ ಪಟ್ಟಲಮ್ಮ, ಬೆಳಗುಂಬದ ಸಿದ್ಧರಾಮೇಶ್ವರ, ಬೆಳ್ಳಾವೆಯ ಸೋಮೇಶ್ವರ, ಭಸ್ಮಾಂಗಿಯ ಭಸ್ಮಾಂಗೇಶ್ವರ, ಬಿಜ್ಜಾವರದ ಅಮ್ಮವ್ವೆ ಗುಡಿ, ದೇವರಾಯನದುರ್ಗದ ಯೋಗಾ ಹಾಗೂ ಭೋಗಾ ನರಸಿಂಹ, ಚಿಕ್ಕನಾಯಕನಹಳ್ಳಿಯ ವೆಂಕಟರಮಣ, ರಾಮೇಶ್ವರ, ಚನ್ನಕೇಶವ, ಗುಬ್ಬಿಯ ಓಹಿಲೇಶ್ವರ, ಬೇಟೆರಾಯ ಸ್ವಾಮಿ, ಹಾಗಲವಾಡಿಯ ವಿವಿಧ ದೇವಾಲಯಗಳು, ಹತ್ಯಾಳುವಿನ ಕಂಬದ ನರಸಿಂಹಸ್ವಾಮಿ, ಹೊಳವನಹಳ್ಳಿಯ ರಾಘವೇಂದ್ರ ಸ್ವಾಮಿ ಬೃಂದಾವನ, ಹೊನ್ನವಳ್ಳಿ ಲಕ್ಷ್ಮೀನಾರಾಯಣ, ಹುತ್ರಿದುರ್ಗದ ಆದಿನಾರಾಯಣ, ಕುಡುವತ್ತಿಯ ಗೋಪಾಲಕೃಷ್ಣ, ಮರಳೂರಿನ ರಾಮದೇವಾಲಯ, ಮಾಯಸಂದ್ರ ಬೆಟ್ಟದ ಮಹದೇಶ್ವರ, ಶಿರಾ ಬಳಿಯ ರಂಗನಹಳ್ಳಿಯ ರಂಗನಾಥ, ತಿಪಟೂರು ಸಮೀಪದ ರಂಗಾಪುರದ ರಂಗನಾಥ, ಶೀಬಿಯ ನರಸಿಂಹ ದೇವಾಲಯ, ಶೆಟ್ಟಿಹಳ್ಳಿ ಆಂಜನೇಯ, ಸಿದ್ಧಗಂಗೆಬೆಟ್ಟದ ಮೇಲಿರುವ ಸಿದ್ಧಲಿಂಗೇಶ್ವರ, ಹೀಗೆ ಪ್ರತಿಯೊಂದು ಗ್ರಾಮದಲ್ಲಿಯೂ ಒಂದಿಲ್ಲೊಂದು ಸ್ಮಾರಕಗಳು ಕಂಡುಬಂದಿದ್ದು, ಅವು ತನ್ನದೇ ಆದ ಇತಿಹಾಸವನ್ನು ಹೊಂದಿವೆ.

ಮೂಲತಃ ತುಮಕೂರು ಜಿಲ್ಲೆಯಲ್ಲಿಯೇ ಅಧಿಕಾರ ಆರಂಭಿಸಿದ ನೊಳಂಬ ಮನೆತನ (ಹೇಮಾವತಿ, ಇವರ ರಾಜಧಾನಿಯಾಗಿದ್ದು ಪ್ರಸ್ತುತ ಮಡಕಶಿರಾ ತಾಲ್ಲೂಕಿನಲ್ಲಿದ್ದು, ಆಂಧ್ರಪ್ರದೇಶದ ಭಾಗವಾಗಿದೆ) ತನ್ನದೇ ಆದ ವಿಶಿಷ್ಟ ವಾಸ್ತುಶಿಲ್ಪ ಶೈಲಿಯನ್ನೊಳಗೊಂಡಿದೆ. ಈ ಕಾಲದ ವಾಸ್ತುಶಿಲ್ಪ ಕೇಂದ್ರಗಳು ಈ ಜಿಲ್ಲೆಯಲ್ಲಿದ್ದು, ಅವುಗಳಲ್ಲಿ ಪ್ರಮುಖವಾದವೆಂದರೆ ಬರಗೂರು, ನೊಣವಿನಕೆರೆ ಮತ್ತು ಅರಳಗುಪ್ಪೆ ಹಾಗೂ ನೆರೆಯ ಆಂಧ್ರ ರಾಜ್ಯದಲ್ಲಿರುವ ಹೇಮಾವತಿ, ಅವರ ರಾಜ್ಯವಾಗಿತ್ತು.

ಜಿಲ್ಲೆಯ ಮತ್ತೊಂದು ವಾಸ್ತು ಆಕರ್ಷಣೆ ಕೋಟೆಯಾಗಿದ್ದು, ಅತಿ ಹೆಚ್ಚು ಕೋಟೆಗಳನ್ನು ಹೊಂದಿರುವ ಜಿಲ್ಲೆ ಇದಾಗಿದೆ. ಇವುಗಳನ್ನು ಗಿರಿದುರ್ಗ ಮತ್ತು ನೆಲದುರ್ಗಗಳೆಂದು ವಿಂಗಡಿಸಬಹುದಾಗಿದೆ. ಗಿರಿದುರ್ಗಗಳಲ್ಲಿ ನಿಡುಗಲ್ಲು, ಮಧುಗಿರಿ, ಪಾವಗಡ, ಮಿಡಿಗೇಶಿ, ಕೊರಟಗೆರೆ, ಚನ್ನರಾಯನದುರ್ಗ, ದೇವರಾಯನದುರ್ಗ, ಹುಲಿಯೂರುದುರ್ಗ, ಹುತ್ತರಿದುರ್ಗ, ಸಿದ್ಧರಬೆಟ್ಟ, ಭಸ್ಮಾಂಗಿದುರ್ಗ, ಗುಟ್ಟೆ, ಬಂಗಾರನಾಯಕನಬೆಟ್ಟ, ಬೇಡತ್ತೂರುದುರ್ಗ ಪ್ರಮುಖವಾದವು. ನೆಲದುರ್ಗಗಳು ಜಿಲ್ಲೆಯಲ್ಲಿ ಸಾಕಷ್ಟಿದ್ದು, ಹಲವು ಸ್ಥಳಗಳಲ್ಲಿ ಅವಶೇಷಗಳು ಮಾತ್ರ ದೊರಕುತ್ತವೆ. ಪ್ರಮುಖ ನೆಲದುರ್ಗಗಳೆಂದರೆ ಶಿರಾ, ಸಿದ್ಧಾಪುರ, ಹಾಗಲವಾಡಿ, ಮೂಗನಾಯಕನಕೋಟೆ, ಕುಣಿಗಲ್, ಹುಳಿಯಾರು, ತುಮಕೂರು, ತುರುವೇಕೆರೆ, ಚಿಕ್ಕನಾಯಕನಹಳ್ಳಿ ಮೊದಲಾದವು. ಆದರೆ ಜಿಲ್ಲೆಯಲ್ಲಿ ಯಾವುದೇ ಜಲದುರ್ಗಗಳಿಲ್ಲ.

ಜಿಲ್ಲೆಯಲ್ಲಿ ಇಂಡೋ–ಸಾರ್ಸೆನಿಕ್ ಅಥವಾ ಇಂಡೋ–ಇಸ್ಲಾಮಿಕ್ ಶೈಲಿಯ ನಿರ್ಮಿತಿಗಳಿಗೂ ಪ್ರಸಿದ್ಧವಾಗಿದೆ. ಶಿರಾ ಪಟ್ಟಣದಲ್ಲಿ ಮೊಘಲರ, ಬಿಜಾಪುರ ಸುಲ್ತಾನರ, ಹೈದರ್, ಟಿಪ್ಪೂ ಹಾಗೂ ಸ್ಥಳೀಯ ಆಡಳಿತಾಧಿಕಾರಿಗಳ ಸ್ಫೂರ್ತಿಯಿಂದಾಗಿ ಹಲವಾರು ನಿರ್ಮಿತಿಗಳು ರೂಪುಗೊಂಡಿವೆ. ಜುಮ್ಮಾ ಮಸೀದಿ, ಮಲಿಕ್ ರೆಹಾನ್ ದರ್ಗಾಗಳ ಜೊತೆಗೆ ಖಾನ್‌ಬಾಗ್ ಎಂಬ ಉದ್ಯಾನವನವೂ ಹಿಂದೆ ಇಲ್ಲಿತ್ತು. ಮುಂದೆ ಇದೇ ಉದ್ಯಾನ ಹೈದರಾಲಿಗೆ ಸ್ಫೂರ್ತಿಯಾಗಿ ಬೆಂಗಳೂರಿನ 'ಲಾಲ್‌ಬಾಗ್' ನಿರ್ಮಾಣಕ್ಕೆ ಕಾರಣವಾಯಿತು ಎಂದು ಹೇಳಲಾಗುತ್ತದೆ.

ಜಿಲ್ಲೆಯ ಸಾಂಪ್ರದಾಯಿಕ ವರ್ಣಕಲೆಯ ಭಿತ್ತಿಚಿತ್ರಗಳಿಗೂ ವಿಶಿಷ್ಟಸ್ಥಾನವಿದೆ. ತುಮಕೂರು ನಗರ, ಶೀಬಿ, ಶಿರಾ, ಮಿಂಚಕಲ್ಲುಗೊಲ್ಲಹಳ್ಳಿ, ಕೆರೆಗೋಡು–ರಂಗಾಪುರ, ಬೆನಕನಕೆರೆ, ಎಡೆಯೂರು, ಗುಬ್ಬಿ, ಹಾಗಲವಾಡಿ, ಅಮೃತೂರು, ತುಂಗವಟಿ ಮೊದಲಾದೆಡೆಗಳಲ್ಲಿ ಭಿತ್ತಿವರ್ಣಚಿತ್ರಗಳಿದ್ದು ರಾಜ್ಯದಲ್ಲಿಯೇ ಅತಿಹೆಚ್ಚು ಇಂತಹ ಸ್ಥಳಗಳನ್ನು ಹೊಂದಿರುವ ಜಿಲ್ಲೆ ಇದಾಗಿದೆ.

ತುಮಕೂರು ಜಿಲ್ಲಾ ಪ್ರದೇಶದಲ್ಲಿ ದೊರೆತಿರುವ ಶಾಸನಗಳು ವಿವಿಧ ಕಾಲಮಾನದಲ್ಲಿ ರೂಢಿಯಲ್ಲಿದ್ದ ಹಲವಾರು ಆಡಳಿತ ವಿಭಾಗಗಳನ್ನು ಉಲ್ಲೇಖಿಸುತ್ತವೆ. ಅದರಂತೆ ಕ್ರಿ. ಶ. ಸುಮಾರು ಐದನೆಯ ಶತಮಾನದಲ್ಲಿ (ಗಂಗರ ಆಳ್ವಿಕೆಗೆ ಮೊದಲು) ಮಗರವೆಡಂಗರೆಯ ಬಾಣವಂಶೀಯ ಮಾಂಡಲೀಕರ ನಿಯಂತ್ರಣದಲ್ಲಿದ್ದಿತು. ಗಂಗರ ಆಳ್ವಿಕೆ ಕ್ರಿ.ಶ. ಐದರಿಂದ ೧೧ನೇ ಶತಮಾನದ ಕೊನೆಯವರೆಗೆ ಇದ್ದು, ಹಲವು ಆಡಳಿತ ವಿಭಾಗಗಳ ಉಲ್ಲೇಖಗಳನ್ನು ಇವರ

ಶಾಸನಗಳಲ್ಲಿ ಕಾಣಬಹುದು. ಅವುಗಳೆಂದರೆ ವೆಣ್ಣೆನಾಡು, ಗಂಗವಾಡಿ ಷಣ್ಣವತಿ ಸಹಸ್ರ ಅಥವಾ ಗಂಗವಾಡಿ–೯೬೦೦೦, ಪೊನ್ನುಡಿಕೆ–೭೦ ಮುರುಗೆರೆನಾಡು, ಮಗರೆ ವಿಷಯ, ನಿರ್ಗುಂದ ವಿಷಯ, ಕುಣಿಂಗಲ್ ನಾಡು ಅಥವಾ ಕುಣಿಂಗಲ್ ನಾಡು, ಕೆರೆಗೋಡುನಾಡು, ಕೆಸುಮಣ್ಣುನಾಡು ಮೊದಲಾದ ಹೆಸರುಗಳನ್ನು ನೋಡಬಹುದು. ರಾಷ್ಟ್ರಕೂಟಶಾಸನದಲ್ಲಿ ಕುಣಿಂಗಿಲ್‌ದೇಶ ಅಥವಾ ಕುಣಿಂಗಲ್–೩೦೦ ಪ್ರಾಂತವೆಂದು ಉಲ್ಲೇಖಿಸಲಾಗಿದೆ. ಸುಮಾರು ೮ನೇ ಶತಮಾನದ ವೇಳೆಗೆ ನೊಳಂಬರ ಆಳ್ವಿಕೆ ಆರಂಭಗೊಂಡು ೧೧ನೇ ಶತಮಾನದವರೆಗೆ ಅವರ ಶಾಸನಗಳಲ್ಲಿ ಉಕ್ತವಾಗಿರುವ ಆಡಳಿತ ವಿಭಾಗಗಳೆಂದರೆ, ಸೀರೆನಾಡು–೩೦೦ ಮತ್ತು ಕಿರ್‌ಕೆರೆ–೩೦೦; ನಂತರದಲ್ಲಿ ಚೋಳರ ಆಳ್ವಿಕೆಯಡಿ ವಿಕ್ರಮ ಚೋಳ ಮಂಡಲದ ಉಲ್ಲೇಖ ದೊರೆಯುತ್ತದೆ. ಕಲ್ಯಾಣದ ಚಾಳುಕ್ಯರ ಸಾಮಂತರಾದ ಹೊಯ್ಸಳರ ಶಾಸನಗಳಲ್ಲಿ ಜಿಲ್ಲೆಯ ಆಡಳಿತ ಘಟಕ ಮಗರೆ ಮುನ್ನೂರು, ಮೊರಸೂರು ಮೂವತ್ತಾರು, ಕಿರುವನೂರು ಹನ್ನೆರಡು, ಕಾಡನೂರು ಇಪ್ಪತ್ತು, ಹೆಜ್ಜಾಜಿ ಹನ್ನೆರಡು, ನೊಣಬನಕೆರೆ ಹನ್ನೆರಡು, ಕುಕ್ಕಲನಾಡು ಮೊದಲಾದವುಗಳ ಉಲ್ಲೇಖವಿದೆ. ಆನೆಬಿದ್ದಸರಿ ಸ್ಥಳ(ದೇವರಾಯನದುರ್ಗ)ವನ್ನು ಉಲ್ಲೇಖಿಸಿದೆ, ಮರುಗಲನಾಡು, ದೇವಗುಂದನಾಡು, ಕೋರುನಾಡು, ಹೆಜಿಗೆ–೩೦೦, ಹೊಗರೆನಾಡು, ಕಲ್ಕುಣಿನಾಡು, ಹೊಯ್ಸಳರಾಜ್ಯ, ಹೊಯ್ಸಳಸೀಮೆ, ಬೂದಿಹಾಳು ಸೀಮೇ, ಮಗರವೇಂಠೆ, ಹುಳೇರಸೀಮೆ, ಗೂಳೂರುಸೀಮೆ, ಮರುಗಳೆನಾಡು, ಹೊಸವೂರ ಸೀಮೆ, ರಾಯದುರ್ಗವೇಠೆ, ರೊದ್ದನಾಡು, ಗುಜ್ಜನಾಡು, ಜೇಳೂರು ನಾಡು, ಕೊರಮತ್ತನಾಡು, ಪೆನಗುಂಡೆ ರಾಜ್ಯ ಅಥವಾ ಘನಗಿರಿ ರಾಜ್ಯಗಳ ಉಲ್ಲೇಖವೂ ಸಿಗುತ್ತದೆ. ನಿಡುಗಲ್ಲು ಚೋಳರ ಶಾಸನವೊಂದು ಅರಿವೆ–೩೦೦, ಕುಣಿಯಕಲ್–೩೦೦, ಸಿಂದವಾಡಿ ಸಾಸಿರಗಳನ್ನು ಉಲ್ಲೇಖಿಸಿದೆ. ವಿಜಯನಗರ ಕಾಲದ ಶಾಸನಗಳಲ್ಲಿ ಹಸ್ತಿನಾವತಿವಳಿತ, ಮಣ್ಣೆವಳಿತ, ಮುಕೋರಾವಳಿತ, ಶೀರ್ಯದ ಸೀಮೆವಳಿತ, ಬನುಗುಂಡಿಯ ಚಾವಡಿ (ಕಂದಾಯ ವಲಯ), ಮುರುಗಲ್‌ನಾಡ ವೇಂಠೆ, ಮೊದಲಾದವುಗಳ ಉಲ್ಲೇಖವಿದೆ. ಕೆಲವು ವೇಳೆ ಒಂದು ಗ್ರಾಮವನ್ನು ದಾನ ಕೊಟ್ಟ ಸಮಯದಲ್ಲಿ ಅದನ್ನು 'ಅಗ್ರಹಾರ' ಅಥವಾ 'ಬ್ರಹ್ಮಪುರಿ' ಅಥವಾ 'ಶಿವಪುರ' ಎಂಬುದಾಗಿ ಕರೆದು ಆ ಊರಿಗೆ ಪ್ರತಿನಾಮವಾಗಿ ಬೇರೊಂದು ಹೆಸರನ್ನು ಉಲ್ಲೇಖಿಸುವ ಶಾಸನಗಳೂ ಸಾಕಷ್ಟು ಕಂಡು ಬರುತ್ತವೆ. ಕೊತ್ತಗೆರೆ, ಮುಳುಕುಂಟೆ, ಸೆಟ್ಟಿಕೆರೆ, ತುರುವೇಕೆರೆ. ಇರುಪಸಂದ್ರ, ಅಯ್ಯರಸನಹಳ್ಳಿ, ಕರಡಿ, ಹೆಗ್ಗೆರೆ, ವಿಘ್ನಸಂತೆ, ಬೆನಕನಕೆರೆ, ಕನ್ನಮೇಡಿ, ನಲಂಜಿ, ಲಖಾಮಾಪುರ, ಕೋಳಾಲ, ಕರವರಹಳ್ಳಿ, ಗೋಪಗೊಂಡನಹಳ್ಳಿ, ಅಮೃತೂರು, ವಾಜರಹಳ್ಳಿ, ತೂಬಿನಕೆರೆ, ವೋಟುಕೆರೆ, ಕೊಂಡಜ್ಜಿ ಅಗ್ರಹಾರ, ಬರಗೀಹಳ್ಳಿ, ಸೆಟ್ಟಿಹಳ್ಳಿ ಮೊದಲಾದ ಊರುಗಳಲ್ಲಿ ದೊರೆತಿರುವ ಶಾಸನಗಳು ಇದಕ್ಕೆ ನಿದರ್ಶನವಾಗಿದೆ.

ಜಿಲ್ಲೆಯ ಧಾರ್ಮಿಕ ನಕಾಶೆಯಲ್ಲಿ ಬೌದ್ಧಧರ್ಮದ ಉಲ್ಲೇಖವನ್ನು ನೋಡಬಹುದಾಗಿದೆ. ಜಿಲ್ಲೆಯ ಮೊದಲ ಶಾಸನ ಮೆಳೆಕೋಟೆ ತಾಮ್ರ ಶಾಸನವಾಗಿದ್ದು, ಇದರಲ್ಲಿ ಗಂಗ ದೊರೆ ಇಮ್ಮಡಿ ಮಾಧವನು ಬೌದ್ಧವಿಹಾರಕ್ಕೆ ದಾನಕೊಟ್ಟ ವಿವರಣೆ ಇದೆ. ಈ ಶಾಸನದಲ್ಲಿ ಉಲ್ಲೇಖಿಸಿರುವ ಬೌದ್ಧ ವಿಹಾರದ ಹುಡುಕಾಟ ಇಲ್ಲಿಯವರೆಗೂ ನಡೆಯುತ್ತಲೇ ಇತ್ತು. ಆದರೆ ಇತ್ತೀಚಿನ ಕ್ಷೇತ್ರಕಾರ್ಯದ ಫಲವಾಗಿ ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲೂಕಿನ ಹರಳಕೋಟೆ ಎಂಬ ಗ್ರಾಮ ಈ ಬೌದ್ಧ ವಿಹಾರವಿದ್ದ ಸ್ಥಳ ಎಂದು ಸಂಶೋಧಕ ಎಂ.ಜಿ. ಮಂಜುನಾಥ್ ಅಭಿಪ್ರಾಯ ಪಡುತ್ತಾರೆ. ಆದರೆ ಈ ಬಗ್ಗೆ ವಿದ್ವಾಂಸರಲ್ಲಿ ಇನ್ನೂ ಒಮ್ಮತ ಮೂಡಬೇಕಿದೆ. ತುರುವೇಕೆರೆಯ ಶಾಸನವೊಂದು ಬೌದ್ಧರು ವಾಸಿಸುತ್ತಿದ್ದ ಕಲಾವತಿ ಎಂಬ ಗ್ರಾಮವನ್ನು ಉಲ್ಲೇಖಿಸಿದೆ. ಅದನ್ನು ರಾಮನಗರ ಜಿಲ್ಲೆಯ ಮಾಗಡಿ ತಾಲೂಕಿನ ಕಲ್ಯಾ ಎಂಬುದಾಗಿ ಗುರುತಿಸಲಾಗಿದೆ. ಅಲ್ಲಿ ಆಂಧ್ರ ಮೂಲದ ವೀರಶೈವಕವಿ ಪಾಲ್ಕುರಿಕೆ ಸೋಮನಾಥನ ಸಮಾಧಿ ಇದೆ. ಕೆರೆಗೋಡಿ ಗ್ರಾಮದ ಶಂಕರೇಶ್ವರ ದೇವಾಲಯದ ಮಂಟಪದ ಭಿತ್ತಿಯಲ್ಲಿ ಬುದ್ಧನ ಉಬ್ಬುಶಿಲ್ಪವಿದೆ. ಒಟ್ಟಾರೆ ಬೌದ್ಧ ಧರ್ಮದ ಉಲ್ಲೇಖ ಕ್ವಚಿತ್ತಾಗಿ ಕಂಡುಬಂದರೂ ಯಾವುದೇ ಸ್ಪಷ್ಟವಾದ ಕುರುಹುಗಳು ಜಿಲ್ಲೆಯಲ್ಲಿ ಕಂಡುಬಂದಿಲ್ಲ.

ತುಮಕೂರು ಜಿಲ್ಲೆಯಲ್ಲಿ ಸುಮಾರು ೯–೧೦ನೆಯ ಶತಮಾನದ ವೇಳೆಗೆ ಜೈನಧರ್ಮವು ಪ್ರಾಬಲ್ಯ ಹೊಂದಿದ ಅಂಶ ತಿಳಿಯುತ್ತದೆ. ಇದಕ್ಕೆ ಪೂರಕವಾಗಿ ಹಲವಾರು ಜಿನಾಲಯಗಳು, ಜಿನಶಾಸನಗಳು, ಶಿಲ್ಪಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ. ಅಂತಹ ಜಿನಾಲಯಗಳನ್ನು ತುಮಕೂರು ತಾಲೂಕಿನ ಮಂದರಗಿರಿ, ತೋವಿನಕೆರೆ, ಶೀತಕಲ್ಲು; ಗುಬ್ಬಿ ತಾಲೂಕಿನ ಬಿದರೆ, ನಿಟ್ಟೂರು; ತಿಪಟೂರು ತಾಲೂಕಿನ ಕರಡಾಳು, ಹಟ್ಣ; ಚಿಕ್ಕನಾಯಕನಹಳ್ಳಿ ತಾಲೂಕಿನ ಕಂದಿಕೆರೆ, ಹೆಗ್ಗೆರೆ, ಬೆಳಗಲಿ; ಮಧುಗಿರಿ ತಾಲೂಕಿನ ಮಧುಗಿರಿ; ಪಾವಗಡ ತಾಲೂಕಿನ ನಿಡುಗಲ್ಲು; ತುರುವೇಕೆರೆ ತಾಲೂಕಿನ ಮಾಯಸಂದ್ರ; ಕುಣಿಗಲ್ ತಾಲೂಕಿನ ಕುಣಿಗಲ್ಲು; ಕೊರಟಗೆರೆ ತಾಲೂಕಿನ ಅಕ್ಕಿರಾಂಪುರ ಮೊದಲಾದೆಡೆಗಳಲ್ಲಿ ನೋಡಬಹುದಾಗಿದೆ. ಅದೇ ರೀತಿ

ಶೈವ, ವೀರಶೈವ, ಶ್ರೀವೈಷ್ಣವ, ವೈಷ್ಣವ ಪಂಥಗಳಿಗೆ ಸೇರಿದ ಅಸಂಖ್ಯಾತ ದೇವಾಲಯಗಳು, ಮಠಗಳು, ದೇವಾನುದೇವತಾ ಮೂರ್ತಿಗಳು, ವೃಂದಾವನಗಳು; ಇಸ್ಲಾಂ ಧರ್ಮಕ್ಕೆ ಸೇರಿದ ದರ್ಗಾ; ಮಸೀದಿಗಳು; ಕ್ರೈಸ್ತ ಧರ್ಮಕ್ಕೆ ಸೇರಿದ ಇಗರ್ಜಿ, ಮೊದಲಾದವುಗಳಿಂದಾಗಿ ಜಿಲ್ಲೆಯು ಧಾರ್ಮಿಕತೆಯಲ್ಲೂ ಪ್ರಾಮುಖ್ಯ ಮೆರೆದಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಅತ್ಯಂತ ಆಕರ್ಷಣೀಯವೂ, ಪ್ರೇಕ್ಷಣೀಯವೂ ಆದಂತಹ ಆಯ್ದ ಪ್ರಮುಖ ಸ್ಥಳಗಳನ್ನು ಕಿರುವಿವರಣೆಯೊಂದಿಗೆ ನೀಡಲಾಗಿದೆ. ಆಯಾ ಸ್ಥಳದ ೨೦೧೧ ರ ಜನಸಂಖ್ಯೆಯನ್ನೂ ಕಂಸದಲ್ಲಿ ನೀಡಲಾಗಿದೆ.

**ಅಂಚೀನಹಳ್ಳಿ (ಜನಸಂಖ್ಯೆ. ೬೬೦)**: ಕೊರಟಗೆರೆ ತಾಲೂಕಿನಲ್ಲಿರುವ ಗ್ರಾಮವಾಗಿದ್ದು, ಸಮೀಪದಲ್ಲಿ ಉರುಗುಟ್ಟೆ ಎಂಬ ಬೆಟ್ಟವಿದೆ. ಗ್ರಾಮದ ಹಲವು ಭಾಗಗಳಲ್ಲಿ ಕೋಟೆಯ ಅವಶೇಷಗಳು ಕಂಡುಬಂದಿವೆ. ಉತ್ತರಕ್ಕೆ ಒಂದು ಬೃಹತ್ ಚಪ್ಪಡಿ ಕಲ್ಲಿದ್ದು, ಅದು 'ಒಕ್ಕೈಮಾಸ್ತಿ' (ಮಹಾಸತಿ) ಕಲ್ಲಾಗಿದೆ. ಒಂದು ಕೈತೋಳನ್ನು ತೋರಿಸಲಾಗಿದ್ದು ಮತ್ತೊಂದು ಕೈಯನ್ನು ಎತ್ತಿ ಹಿಡಿಯಲಾಗಿದೆ. ಕೆಳಭಾಗದಲ್ಲಿ ದಂಪತಿಗಳ ಚಿತ್ರಣವಿದೆ. ಒಟ್ಟಾರೆ ಇದೇ ಮಾದರಿಯ ಮಹಾಸತಿ ಕಲ್ಲುಗಳು ಸಾಕಷ್ಟು ಕಂಡುಬಂದಿವೆ.

**ಅಕ್ಕಿರಾಂಪುರ (ಜನಸಂಖ್ಯೆ. ೪,೧೧೯)**: ತಾಲೂಕು ಕೇಂದ್ರ ಕೊರಟಗೆರೆಯಿಂದ ೨೨ ಕಿ.ಮೀ. ದೂರದಲ್ಲಿದೆ. ಇಲ್ಲಿರುವ ವೆಂಕಟರಮಣ ದೇವಾಲಯವು ದ್ರಾವಿಡ ಶೈಲಿಯಲ್ಲಿದ್ದು, ವಿಸ್ತಾರವಾದ ಪ್ರಾಕಾರ ಹಾಗೂ ಎತ್ತರವಾದ ಗೋಪುರಗಳನ್ನು ಹೊಂದಿದೆ. ಗ್ರಾಮದಲ್ಲಿರುವ ಅನಂತನಾಥ ಬಸದಿಯಲ್ಲಿ ಅನಂತನಾಥನ ಮೂರ್ತಿಯಿದೆ.

**(ಜಟ್ಟಿ)ಅಗ್ರಹಾರ (ಜನಸಂಖ್ಯೆ. ೧,೩೯೦)**: ಇದು ಕೊರಟಗೆರೆ ತಾಲೂಕಿನಲ್ಲಿದ್ದು, ತುಮಕೂರಿಗೆ ೨೦ ಕಿ.ಮೀ. ಈಶಾನ್ಯಕ್ಕಿದೆ. ಈ ಅಗ್ರಹಾರವನ್ನು ಮಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಆರಾಧ್ಯ ಬ್ರಾಹ್ಮಣರಿಗೆ ದತ್ತಿ ನೀಡಿದ್ದಂತೆ ತೋರುತ್ತದೆ. ಇದಕ್ಕೆ ಪೂರಕವಾಗಿ ಲಿಂಗಮುದ್ರೆಯುಳ್ಳ ಗಡಿಕಲ್ಲುಗಳು ಕಂಡು ಬರುತ್ತವೆ. ಸ್ಥಳೀಯ ಜಟ್ಟಿಮನೆತನದ ಹಿರಿಯರಿಂದ ತಿಳಿದುಬಂದಂತೆ ಈ ವಂಶಸ್ಥರು ಮರಾಠ ಪ್ರಾಂತ ಬರೋಡಾದಿಂದ ಬಂದು ಹಾಗಲವಾಡಿ, ಚಾಮರಾಜನಗರ ಮತ್ತು ಅಗ್ರಹಾರಗಳಲ್ಲಿ ನೆಲೆಸಿದ್ದರೆಂದು ತಿಳಿದು ಬರುತ್ತವೆ. ಇವರು ಹಿಂದಿ, ಮರಾಠಿ ಪದಗಳೊಂದಿಗೆ ತಮ್ಮದೇ ಆದ ಮಲ್ಲ ಭಾಷೆಯನ್ನು ಆಡು ಭಾಷೆಯಾಗಿ ಬಳಸುತ್ತಾರೆ. ಇದು ಒಂದು ಉಪಭಾಷೆ, ಅಗ್ರಹಾರದಲ್ಲಿ ಜಟ್ಟಿಗಳು ಬಳಸುವ ಹಲವಾರು ಪರಿಕರಗಳು ಈಗಲೂ ಇವೆ. ಜಟ್ಟಿಗಳು ಕ್ಷತ್ರಿಯ ವರ್ಗದವರಾದರೂ ಈಗ ಕೃಷಿಕರಾಗಿರುತ್ತಾರೆ. ಇಲ್ಲಿನ ವೀರಭದ್ರಸ್ವಾಮಿಯ ದೇವಾಲಯದ ಅರ್ಚಕರ ಮನೆಯಲ್ಲಿ ಕೆಲವು ವೀರಶೈವ ಸಾಹಿತ್ಯಕೃತಿಗಳಿದ್ದು, ವೀರಭದ್ರ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ.

**ಅಪ್ಪಾನಹಳ್ಳಿ (ಜನಸಂಖ್ಯೆ. ೪೩೩)**: ಗುಬ್ಬಿ ತಾಲೂಕಿನಲ್ಲಿ ೨೧ ಕಿ.ಮೀ. ಪಶ್ಚಿಮಕ್ಕೆ, ಹಾಗಲವಾಡಿ ಹೋಬಳಿಯಲ್ಲಿರುವ ಅಪ್ಪಾನಹಳ್ಳಿಯ ಕಣಿವೆ ಪ್ರದೇಶವಾಗಿದೆ. ಗ್ರಾಮದ ಸುತ್ತಮುತ್ತಲ ಪ್ರದೇಶದಲ್ಲಿ ಸಾಕಷ್ಟು ನೀರಿನ ಹರಿವುಗಳಿದ್ದು, ಅಲ್ಲಿ ದೊರೆತ ಕ್ವಾರ್ಟ್ಸೈಟ್ ಶಿಲೆಯ ಉಂಡೆಕಲ್ಲುಗಳನ್ನು ಬಳಸಿ ಆದಿ ಹಳೆಶಿಲಾಯುಗದ ಮಾನವನು ರೂಪಿಸಿದ ಹಲವಾರು ಶಿಲಾ ಉಪಕರಣಗಳು ದೊರೆತಿವೆ. ನಂತರದಲ್ಲಿ ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ ಹಾಗೂ ಸೂಕ್ಷ್ಮ ಶಿಲಾಯುಗದಲ್ಲಿಯೂ ಕೇಂದ್ರಸ್ಥಳವಾಗಿ ಸುತ್ತಮುತ್ತಲಿನ ಕಾಡುಪ್ರದೇಶ ಹಾಗೂ ಇಲ್ಲಿನ ಪ್ರಾಣಿಗಳ ಬೇಟೆಗೆ ಯೋಗ್ಯ ಸ್ಥಳವಾಗಿದ್ದುದ್ದಾಗಿ ತಿಳಿಯುತ್ತದೆ. ಸುತ್ತಮುತ್ತಲಿನ ಯಕ್ಕಲಕಟ್ಟೆ, ಕೈಮರ, ಶಿವಪುರ, ಗಳಿಗೆಕೆರೆ, ಮಂಚಲ್ದೊರೆ ಮೊದಲಾದ ಗ್ರಾಮಗಳಲ್ಲಿಯೂ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕಂಡುಬಂದಿವೆ.

**ಅಮೃತೂರು (ಜನಸಂಖ್ಯೆ. ೪,೯೬೭)**: ಕುಣಿಗಲ್ ತಾಲೂಕಿನ ಹೋಬಳಿ ಕೇಂದ್ರವಾಗಿದ್ದು, ೨೨ ಕಿ.ಮೀ. ನೈಋತ್ಯಕ್ಕಿದೆ. ಮೊದಲು ಇದಕ್ಕೆ 'ಅತಕೂರು', 'ವೀರನರಸಿಂಹಪುರ' ಎಂಬ ಹೆಸರುಗಳಿದ್ದು ಇದೊಂದು ಅಗ್ರಹಾರವಾಗಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಇಲ್ಲಿನ ದ್ರಾವಿಡ ಸಂಪ್ರದಾಯದ ಚನ್ನಕೇಶವ, ಸೋಮೇಶ್ವರ ಮತ್ತು ಚಂದ್ರಮೌಳೇಶ್ವರ ದೇವಾಲಯಗಳು ಸುಮಾರು ೧೬ನೇ ಶತಮಾನದ ವಾಸ್ತುಶೈಲಿಯಲ್ಲಿವೆ. ಚಂದ್ರಮೌಳೇಶ್ವರ ಲಿಂಗವು ಉದ್ಭವಮೂರ್ತಿ ಎಂದು ನಂಬಲಾಗಿದೆ. ದೇವಾಲಯದ ಸಮೀಪ ೪೫ ಅಡಿ ಎತ್ತರದ ದೀಪಸ್ತಂಭ ಹಾಗೂ ೨೦ ಅಡಿ ಎತ್ತರದ ಉಯ್ಯಾಲೆ ಕಂಬಗಳಿವೆ. ಇಲ್ಲಿನ ಗ್ರಾಮದೇವತೆ ಪಟ್ಟಾಲದಮ್ಮ–ಲಕ್ಷ್ಮೀದೇವಿಯರಾಗಿದ್ದಾರೆ. ಇವು ಸುಮಾರು ಐದು ಅಡಿ ಎತ್ತರವಿದ್ದು, ಏಳು ಹೆಡೆಯ ಸರ್ಪದಿಂದ ಸುತ್ತುವರಿಯಲ್ಪಟ್ಟಿವೆ. ಈ ದೇವಾಲಯದ ಭಿತ್ತಿಯಲ್ಲಿರುವ ಮಹಾವಿಷ್ಣುವಿನ ದಶಾವತಾರಚಿತ್ರ,

ಪರಶಿವನ ಲೀಲಾವಿನೋದಗಳ ಚಿತ್ರಗಳು ಮನಮೋಹಕವಾಗಿವೆ. ಪಟ್ಟಾಲದಮ್ಮನ ಜಾತ್ರೆ ಪ್ರತಿವರ್ಷ ವೈಶಾಖ ಮಾಸದಲ್ಲಿ ನಡೆಯುತ್ತಿದ್ದು ಇಡೀ ತಾಲೂಕಿಗೆ ಪ್ರಸಿದ್ಧವಾಗಿದೆ. ಇಲ್ಲಿನ ಶಿಲಾಶಾಸನಗಳು ವಿಶಿಷ್ಟ ಮಾಹಿತಿಯನ್ನೊದಗಿಸುವುದರ ಜೊತೆಗೆ ಸ್ಥಳೀಯ ಕೆರೆಗಳ ದುರಸ್ತಿಗೆ ದಾನ ನೀಡಿರುವ ವಿಷಯವನ್ನು ದಾಖಲಿಸಿವೆ.

**ಅಮ್ಮಸಂದ್ರ (ಜನಸಂಖ್ಯೆ. ೧,೧೬೮):** ತುರುವೇಕೆರೆ ತಾಲೂಕಿನಲ್ಲಿ ಬೆಂಗಳೂರು–ಅರಸೀಕೆರೆ ರೈಲುಮಾರ್ಗ ಹಾಗೂ ಬೆಂಗಳೂರು–ಹೊನ್ನಾವರ ಹೆದ್ದಾರಿಗಳ ನಡುವೆ ತುಮಕೂರಿನಿಂದ ೫೦ ಕಿ.ಮೀ. ದೂರದಲ್ಲಿರುವ ಕೈಗಾರಿಕಾ ಪಟ್ಟಣವಾಗಿದ್ದು, ಸಿಮೆಂಟ್ ಕಾರ್ಖಾನೆ ಇದೆ. ಇದು ಆದಿತ್ಯಪಟ್ಟಣವೆಂಬುದಾಗಿಯೂ ಕರೆಯಲ್ಪಡುತ್ತಿದೆ. ಬಿರ್ಲಾ ಸಂಸ್ಥೆಯು ೧೯೬೦ರಲ್ಲಿ ಇಲ್ಲಿ ಸಿಮೆಂಟ್ ಕಾರ್ಖಾನೆ ಸ್ಥಾಪಿಸಿದ್ದು, ನಾಡಿಗೆ ಹೆಚ್ಚಿನ ಸಿಮೆಂಟನ್ನು ಪೂರೈಸುತ್ತಿದೆ. ಸಮೀಪದ ನರಸಿಂಹಸ್ವಾಮಿ ಬೆಟ್ಟದ ಸಾಲು ಹಾಗೂ ವಜ್ರಾ ಗ್ರಾಮದಲ್ಲಿ ಕಚ್ಚಾ ಮ್ಯಾಂಗನೀಸ್ ಮತ್ತು ಸುಣ್ಣಕಲ್ಲು ಹೇರಳವಾಗಿ ದೊರೆಯುತ್ತದೆ. ಆಧುನಿಕ ರೀತಿಯಲ್ಲಿ ಕಚ್ಚಾವಸ್ತುವನ್ನು ಪೂರೈಸಿಕೊಳ್ಳಲಾಗುತ್ತಿದ್ದು, ಇಲ್ಲಿ ಸಿದ್ಧಗೊಳ್ಳುವ 'ಡೈಮಂಡ್ ಸಿಮೆಂಟ್' ಸಾಕಷ್ಟು ಖ್ಯಾತಿ ಹೊಂದಿದೆ.

**ಅರಳಗುಪ್ಪೆ (ಜನಸಂಖ್ಯೆ. ೨,೨೧೨):** ತಿಪಟೂರು ತಾಲೂಕಿನಲ್ಲಿರುವ ಅರಳಗುಪ್ಪೆಯು ಬಾಣಸಂದ್ರ ರೈಲ್ವೆ ನಿಲ್ದಾಣದಿಂದ ಪಶ್ಚಿಮಕ್ಕೆ ಏಳು ಕಿ.ಮೀ. ಹಾಗೂ ಕಿಬ್ಬನಹಳ್ಳಿಯಿಂದ ದಕ್ಷಿಣಕ್ಕೆ ನಾಲ್ಕು ಕಿ.ಮೀ. ದೂರದಲ್ಲಿದೆ. ಈ ಊರಿಗೆ ಶಾಸನದಲ್ಲಿ 'ಅಲರಿಗುಪ್ಪೆ' ಎಂಬ ಉಲ್ಲೇಖವಿದೆ. ಗಂಗ ವಾಸ್ತುಶಿಲ್ಪ ವೈಭವವನ್ನು ಇಲ್ಲಿಯ ಕಲ್ಲೇಶ್ವರ ಹಾಗೂ ಇನ್ನಿತರ ಸಮೂಹ ದೇವಾಲಯಗಳಲ್ಲೂ ಮತ್ತು ಹೊಯ್ಸಳ ವಾಸ್ತುಶಿಲ್ಪದ ವೈಶಿಷ್ಟ್ಯತೆಯನ್ನು ಚನ್ನಕೇಶವ ದೇವಾಲಯದಲ್ಲಿಯೂ ಕಾಣಬಹುದಾಗಿದೆ. ಊರಿನ ಈಶಾನ್ಯ ಭಾಗದಲ್ಲಿ ಸುಮಾರು ೯–೧೦ನೇ ಶತಮಾನದ ಕಲ್ಲೇಶ್ವರ ದೇವಾಲಯ ಹಾಗೂ ಪಂಚಲಿಂಗ ಗುಡಿಗಳಿವೆ. ಕಲ್ಲೇಶ್ವರ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದ್ದು, ನವರಂಗದ ಮೇಲ್ಚಾವಣಿಯ ಭುವನೇಶ್ವರಿಯು ಅತ್ಯದ್ಭುತ ಶಿಲ್ಪಕಲಾ ಫಲಕವಾಗಿದೆ. ಕೇವಲ ಆರು ಅಡಿ ಚೌಕಾಕಾರದ ಕಪ್ಪುಕಲ್ಲಿನ ಮೇಲೆ ವಾಹನಾರೂಢ ಅಷ್ಟದಿಕ್ಪಾಲಕರ ನಡುವೆ ಅತ್ಯಂತ ಸುಂದರವಾದ ನಟರಾಜ ಅಥವಾ ಸಂಧ್ಯಾತಾಂಡವ ಈಶ್ವರನನ್ನು ಕೆತ್ತಲಾಗಿದೆ. ಜೊತೆಗೆ ನರ್ತನ ಭಂಗಿಯ ಗಣೇಶ, ಮೇಲ್ಭಾಗದಲ್ಲಿ ಹಾರ ಹಿಡಿದಿರುವ ಗಂಧರ್ವ ದಂಪತಿಗಳು ಹಾಗೂ ನಂದಿಯ ಮುಂಭಾಗದಲ್ಲಿ ತಾಳ–ಮದ್ದಳೆ ನುಡಿಸುತ್ತಿರುವ ಗಂಧರ್ವರನ್ನೊಳಗೊಂಡಿದೆ. ದೇವಾಲಯದ ನವರಂಗದ ದ್ವಾರಬಂಧವು ಗಂಗ ವಾಸ್ತುಶೈಲಿಗೆ ಅತ್ಯುತ್ತಮ ಉದಾಹರಣೆಯಾಗಿದೆ. ಅಲ್ಲಿಯೇ ಗಂಗ ರಾಚಮಲ್ಲನ ಕಾಲದ ವೀರಗಲ್ಲು ದೊರೆತಿದೆ.

ಚನ್ನಕೇಶವ ದೇವಾಲಯವು ಹೊಯ್ಸಳ ಶೈಲಿಯಲ್ಲಿ ಸುಮಾರು ೧೨೫೦ರಲ್ಲಿ ನಿರ್ಮಾಣಗೊಂಡಿರುವ ಏಕಕೂಟ ದೇವಾಲಯವಾಗಿದೆ. ಒಂದು ಮೀಟರ್ ಎತ್ತರದ ನಕ್ಷತ್ರಾಕಾರದ ಜಗತಿಯ ಮೇಲೆ ಈ ದೇವಾಲಯವನ್ನು ಹದಿನಾರು ಕೋನದಿಂದ ಕೂಡಿದ ತಳವಿನ್ಯಾಸದ ಮೇಲೆ ನಿರ್ಮಿಸಲಾಗಿದ್ದು, ಪ್ರವೇಶವು ಪೂರ್ವಾಭಿಮುಖವಾಗಿದೆ. ಪ್ರವೇಶದ ಎರಡು ಮಗ್ಗುಲಲ್ಲೂ ಕಿರುಗೋಪುರವಿದ್ದು, ನಕ್ಷತ್ರದ ಕೋನಗಳ ತುದಿಯಲ್ಲಿ ಆನೆಗಳನ್ನು ಕೆತ್ತಲಾಗಿತ್ತು. ಭಿತ್ತಿಯಲ್ಲಿ ಆರು ಪಟ್ಟಿಕೆಗಳಿದ್ದು ಆನೆ, ಕುದುರೆ, ಲತಾಸಾಲು, ಪೌರಾಣಿಕ ಕಥೆಯ ಚಿತ್ರಣ, ಮಕರ ಮತ್ತು ಹಂಸಗಳ ಸಾಲುಗಳಿವೆ. ಪೌರಾಣಿಕ ಕಥೆಯು ರಾಮಾಯಣದ ಕಥೆಯೊಂದಿಗೆ ಆರಂಭವಾಗಿ ಭಾಗವತ ಕಥೆ, ಕೃಷ್ಣನ ಬಾಲಲೀಲೆಗಳನ್ನೂ ಒಳಗೊಂಡಿದೆ. ನವರಂಗದ ಕಂಬಗಳು ಹಳೇಬೀಡು, ಬೇಲೂರುಗಳಲ್ಲಿರುವಂತೆಯೇ ವಿಶಿಷ್ಟ ಕಲಾವಿನ್ಯಾಸವನ್ನು ಹೊಂದಿದೆ. ಮೇಲ್ಚಾವಣಿಯನ್ನು ೧೦ ವಿಭಾಗ ಮಾಡಿ ವಿಭಿನ್ನವಾಗಿ ರಚಿಸಲಾಗಿದೆ. ಗರ್ಭಗೃಹದ ಪ್ರವೇಶದ ಇಕ್ಕೆಲದಲ್ಲಿರುವ ದ್ವಾರಪಾಲಕರು ಹಾಗೂ ಮಹಿಷಮರ್ಧಿನಿಯ ಶಿಲ್ಪಗಳು ಮೋಹಕವಾಗಿವೆ. ಗರ್ಭಗೃಹದಲ್ಲಿರುವ ಚನ್ನಕೇಶವನ ಮೂರ್ತಿಯು ಪ್ರಮಾಣಬದ್ಧ ಸುಂದರ ಕೆತ್ತನೆಯಾಗಿದೆ. ದೇವಾಲಯದ ಹೊರಭಾಗದ ಶಿಲ್ಪಗಳ ಮೇಲೆ ಶಿಲ್ಪಿ(ರೂವಾರಿ)ಗಳ ಹೆಸರುಗಳನ್ನು ನೋಡಬಹುದಾಗಿದೆ. ಈ ಶಿಲ್ಪಗಳು ಆಗ್ನೇಯದಿಂದ ಅಮರನಾರಾಯಣ, ಲಕ್ಷ್ಮೀ, ನೃತ್ಯಗಣೇಶ, ಮೋಹಿನಿ, ಷಡ್ಭುಜ ಸರಸ್ವತಿ, ಹರಿಹರ, ವಿಷ್ಣು, ವೇಣುಗೋಪಾಲ, ಕೃಷ್ಣ, ಲಕ್ಷ್ಮೀನರಸಿಂಹ, ಶ್ರೀರಾಮ, ಷಡ್ಭುಜ ವಿಷ್ಣು, ಯೋಗನಾರಾಯಣ, ಉಗ್ರನರಸಿಂಹ ಶಿಲ್ಪಗಳಿಂದ ಭವ್ಯವಾಗಿದೆ. ಇದು ನಾಲ್ಕು ಸ್ತರದ ಶಿಖರವನ್ನು ಹೊಂದಿದ್ದು, ಮುಂಭಾಗದಲ್ಲಿದ್ದ ಸಳನ ವಿಗ್ರಹವಿಂದು ಕಣ್ಮರೆಯಾಗಿದೆ.

**ಅರೆಯೂರು (ಜನಸಂಖ್ಯೆ. ೧,೨೫೧):** ಇದು ಮಲ್ಲಸಂದ್ರದ ಬಳಿಯಲ್ಲಿ ತುಮಕೂರಿಗೆ ೧೯ ಕಿ.ಮೀ. ಪಶ್ಚಿಮಕ್ಕಿದೆ. ಕೆರೆಯ ದಂಡೆಯ ಮೇಲಿರುವ ವೈದ್ಯನಾಥೇಶ್ವರ ದೇವಾಲಯದ ಮೂಲಮೂರ್ತಿಯನ್ನು ಹೊಳಪು ಕಲ್ಲಿನಲ್ಲಿ ನಿರ್ಮಿಸಲಾಗಿದೆ.

ಇಲ್ಲಿನ ಗೋಡೆಯಲ್ಲಿ ಶಿಲಾಶಾಸನವಿದ್ದು, ಇದು ಸೊನಾರಿಗಳ (ಓಲಗದವರು) ಉಲ್ಲೇಖದೊಂದಿಗೆ ಕಲಾವಿದನ ಕೊರೆದ ರೇಖಾಚಿತ್ರವನ್ನೂ ಹೊಂದಿದೆ. ಇಲ್ಲಿಯ ಮತ್ತೊಂದು ಬದಿಯಲ್ಲಿರುವುದೇ ಹಾಲುಮಲ್ಲಪ್ಪನ ಚಿಕ್ಕದಾದ ದೇವಾಲಯ. ಈ ಶಿವಲಿಂಗಕ್ಕೆ ಮಲ್ಲಿಕಾರ್ಜುನ ಮೂರ್ತಿ ಎಂಬ ಹೆಸರು ಬರಲು ಕಾರಣ ಮಣ್ಣಿನಲ್ಲಿ ಹುದುಗಿದ್ದ ಶಿವಲಿಂಗಕ್ಕೆ ಕಾಮಧೇನೊಂದು ಪ್ರತಿನಿತ್ಯ ಬಂದು ಹಾಲನ್ನು ಎರೆದು ಅಭಿಷೇಕ ಮಾಡಿ ಹೋಗುತ್ತಿತ್ತೆಂದು ಪ್ರತೀತಿ ಇದ್ದು, ಮುಂದೆ ಈ ಮೂರ್ತಿಗೆ ದೇವಾಲಯವನ್ನು ನಿರ್ಮಿಸಲಾಯಿತೆಂದು ಹೇಳಲಾಗುತ್ತದೆ. ಈ ದೇವಾಲಯದಲ್ಲಿ ಉತ್ಸವಮೂರ್ತಿ, ನಾಗಾಭರಣ, ಪಲ್ಲಕ್ಕಿ, ನಂದಿಧ್ವಜ ಮತ್ತು ಸಿಂಹವಾಹನಗಳಿವೆ. ಪ್ರತೀವರ್ಷ ಯುಗಾದಿ, ಸಂಕ್ರಾಂತಿ, ಶಿವರಾತ್ರಿ ಹಾಗೂ ಕಾರ್ತೀಕ ಮಾಸಗಳಲ್ಲಿ ವಿಶೇಷ ಪೂಜೆ ಉತ್ಸವಾದಿಗಳು ನಡೆಯುತ್ತವೆ. ವರ್ಷಕ್ಕೊಮ್ಮೆ ಕುಂಬಾಭಿಷೇಕ ನಡೆಯುತ್ತದೆ.

**ಆದಲೂರು**: ಶಿರಾ ತಾಲೂಕಿನಲ್ಲಿ, ಶಿರಾ–ಅಮರಾಪುರ ರಸ್ತೆಯಲ್ಲಿ ಅದಲೂರು ಗೇಟ್‌ನಿಂದ ಎಡಕ್ಕೆ ಒಂದು ಕಿ.ಮೀ. ಹಾಗೂ ಶಿರಾದಿಂದ ಐದು ಕಿ.ಮೀ. ದೂರದಲ್ಲಿದೆ. ಇಲ್ಲಿನ ಸಂಗಮೇಶ್ವರ ದೇವಾಲಯವು ನದಿಗಳ ಸಂಗಮ ಸ್ಥಳದಲ್ಲಿದ್ದು, ದೇವಾಲಯವು ವಿಜಯನಗರೋತ್ತರ ಕಾಲದ್ದಾಗಿದೆ. ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಮುಂದಿನ ಅಂತರಾಳದಲ್ಲಿ ನಂದಿಯಿದ್ದು ಬಾಗಿಲುವಾಡದಲ್ಲಿ ದ್ವಾರಪಾಲಕರನ್ನು ಬಿಡಿಸಲಾಗಿದೆ. ದ್ವಾರದ ಎಡಭಾಗಕ್ಕೆ ಗಣೇಶನನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗುಡಿಯ ಮೇಲ್ಭಾಗದಲ್ಲಿ ಶಿಖರವಿದೆ. ದೇವಾಲಯವು ಪೂರ್ವಾಭಿಮುಖವಾಗಿದ್ದು, ಮುಂಭಾಗದಲ್ಲಿ ದೀಪಸ್ತಂಭವಿದೆ. ಬಳಿಯಲ್ಲಿ ನಾಗರಕಲ್ಲುಗಳಿವೆ. ಈಶಾನ್ಯಕ್ಕೆ ಆಂಜನೇಯನ ಗುಡಿ ಇದೆ.

**ಆಲ್ಬೂರು (ಜನಸಂಖ್ಯೆ. ೨,೧೬೯)**: ತಿಪಟೂರು ತಾಲೂಕಿನ ನೊಣವಿನಕೆರೆ ಹೋಬಳಿಯಲ್ಲಿ ತಿಪಟೂರಿನಿಂದ ೨೨ಕಿ.ಮೀ. ದೂರದಲ್ಲಿದೆ. ಇಲ್ಲಿ ಹಲವಾರು ಶಾಸನ ಮತ್ತು ಸುಂದರ ಕೆತ್ತನೆಯ ಎರಡು ವೀರಗಲ್ಲುಗಳು ಕಂಡುಬಂದಿವೆ. ಒಂದು ವೀರಗಲ್ಲು ಶಿವದೇವಾಲಯದ ಸಮೀಪವಿದೆ. ಇದರಲ್ಲಿರುವ ಶಿಲ್ಪಗಳ ಕೆತ್ತನೆ ವರ್ಣನಾತ್ಮಕವಾಗಿದ್ದು, ಕುದುರೆ, ಆನೆ ಹಾಗೂ ಇನ್ನಿತರ ಶಿಲ್ಪಗಳು ಬಹು ಸುಂದರವಾಗಿವೆ. ಇದರ ಕಾಲ ಕ್ರಿ.ಶ. ೧೪೫೫. ಮತ್ತೊಂದು ವೀರಗಲ್ಲು ಗ್ರಾಮದ ವಾಯವ್ಯದ ಹೊಲದಲ್ಲಿದೆ. ಇದು ಏಳು ಅಡಿ ಎತ್ತರವಾಗಿದ್ದು, ಸುಮಾರು ೯ನೇ ಶತಮಾನಕ್ಕೆ ಸೇರಿದ್ದು ಹಲವಾರು ಪಟ್ಟಿಕೆಗಳನ್ನು ಒಳಗೊಂಡಿದೆ. ಮೇಲ್ಭಾಗದಲ್ಲಿ ಸಿಂಹಾಸನಾರೂಢ ವೀರನಿಗೆ ಎರಡು ಆನೆಗಳು ಜಲಪ್ರೋಕ್ಷಣೆ ಮಾಡುತ್ತಿರುವುದನ್ನು ಚಿತ್ರಿಸಲಾಗಿದೆ.

**ಇರಕಸಂದ್ರ (ಜನಸಂಖ್ಯೆ. ೪೨೦)**: ಇದು ತಾಲೂಕು ಕೇಂದ್ರ ಕೊರಟಗೆರೆಯಿಂದ ೧೩ ಕಿ.ಮೀ. ಅಂತರದಲ್ಲಿದೆ. ಇಲ್ಲಿ ಶಿಲಾಯುಗದ ಅವಶೇಷಗಳು ದೊರೆತಿದ್ದು, ಅವು ಅಂತ್ಯ ಹಳೆಶಿಲಾಯುಗ, ಸೂಕ್ಷ್ಮ ಶಿಲಾಯುಗ ಮತ್ತು ಬೃಹತ್‌ಶಿಲಾಯುಗ ಸಂಸ್ಕೃತಿಗೆ ಸೇರಿದವುಗಳಾಗಿವೆ. ಅಂತ್ಯ ಹಳೆಶಿಲಾಯುಗ ಸಂಸ್ಕೃತಿಯ ಶಿಲಾಉಪಕರಣಗಳಾದ ಹೆರೆಗತ್ತಿ ಕೊರೆಯುಳಿ ಮೊದಲಾದವುಗಳನ್ನು ಕ್ವಾರ್ಟ್ಸ್ ಶಿಲೆಯಲ್ಲಿ ರೂಪಿಸಲಾಗಿದೆ. ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನಿಳಚಕ್ಕೆ, ಮೊನೆ, ಹೆರೆಚಕ್ಕೆ, ಕೊರೆಯುಳಿ, ಬಾಣದಮೊನೆ, ಅರ್ಧಚಂದ್ರಾಕೃತಿ ಮತ್ತು ದಬ್ಬಳ ಮೊದಲಾದ ಉಪಕರಣಗಳು ದೊರೆತಿದ್ದು, ಇವುಗಳನ್ನು ಬೆಣಚುಕಲ್ಲು, ಜಾಸ್ಪರ್ ಮತ್ತು ಅದಿರುಯುಕ್ತ ಜಾಸ್ಪರ್ ಶಿಲೆಯಲ್ಲಿ ರೂಪಿಸಲಾಗಿದೆ. ಇದು ಬೃಹತ್‌ಶಿಲಾಯುಗ ಸಂಸ್ಕೃತಿಯ ಒಂದು ಪ್ರಮುಖ ಗೋರಿ ನೆಲೆಯಾಗಿದ್ದು, ೭೬ಕ್ಕೂ ಹೆಚ್ಚು ಗೋರಿಗಳು ಕಂಡುಬಂದಿವೆ. ಅಲ್ಲದೇ, ನಿಲಸುಗಲ್ಲು ಮತ್ತು ಕಪ್ಪು, ಕೆಂಪು ಮತ್ತು ಕಪ್ಪು–ಕೆಂಪು ದ್ವಿವರ್ಣದ ಮಡಕೆ ಚೂರುಗಳೂ ಕಂಡುಬಂದಿದ್ದು, ಹೆಚ್ಚಿನ ಗೋರಿಗಳಿಂದು ಹಾಳಾಗಿವೆ.

**ಎ(ಯ)ಡೆಯೂರು (ಜನಸಂಖ್ಯೆ. ೧,೧೩೩): ನಾಗಿನಿ ನದಿತಟದಲ್ಲಿರುವ** ಪುರಾಣಪ್ರಸಿದ್ಧ ಎಡೆಯೂರು, ಒಂದು ಹೋಬಳಿ ಕೇಂದ್ರವಾಗಿದ್ದು, ಬೆಂಗಳೂರು–ಹಾಸನ ರಾಷ್ಟ್ರೀಯ ಹೆದ್ದಾರಿಯಲ್ಲಿ ಕುಣಿಗಲ್‌ಗೆ ೧೪ ಕಿ.ಮೀ. ದೂರದಲ್ಲಿದೆ. ವಚನಕಾರರು, ತತ್ವಜ್ಞಾನಿಗಳು, ಶಿವಯೋಗಿಗಳು ಹಾಗೂ ಮಠಾಧ್ಯಕ್ಷರೂ ಆಗಿದ್ದು, ಜೀವವಿದ್ದಾಗಲೇ 'ಅಭಿನವ ಅಲ್ಲಮ' ಎಂಬ ಖ್ಯಾತಿಗೆ ಪಾತ್ರರಾಗಿದ್ದ ಶ್ರೀಸಿದ್ಧಲಿಂಗೇಶ್ವರರ ಗದ್ದುಗೆ ಇರುವ ದೇವಾಲಯವಿಲ್ಲಿದೆ. ಇದು ದ್ರಾವಿಡ ಶೈಲಿಯಲ್ಲಿದ್ದು, ಇತ್ತೀಚಿಗೆ ನವೀಕರಿಸಲಾಗಿದೆ. ಇದು ತ್ರಿದಳದ್ವಾರ, ಮುಖಮಂಟಪ, ನವರಂಗ, ತೆರೆದ ಸುಖನಾಸಿ ಮತ್ತು ಗರ್ಭಗೃಹಗಳನ್ನು ಹೊಂದಿದೆ. ಪ್ರಾಕಾರದ ಶಿಖರದ ಸುತ್ತಲೂ ಸಿದ್ಧಲಿಂಗಯತಿಗಳ ಜೀವನದ ವಿವರಣೆಯನ್ನು ಬಿಂಬಿಸುವ ಕಥನಶಿಲ್ಪಗಳನ್ನು ಗಾರೆಯಲ್ಲಿ ರಚಿಸಲಾಗಿದೆ. ಈ ದೇವಾಲಯವನ್ನು ದಾನಿವಾಸ ಮನೆತನದ ದೊರೆಗಳಾದ ಚೆನ್ನವೀರಪ್ಪ ಒಡೆಯರು ನಿರ್ಮಿಸಿದರೆಂದು, ಅಲ್ಲೆ ದೊರೆತಿರುವ ಶಾಸನ ತಿಳಿಸುತ್ತದೆ.

ಇಲ್ಲಿನ ದೇವಾಲಯದಲ್ಲಿ ಚಿತ್ರಕಲೆ ಇದ್ದುದ್ದಾಗಿ ತಿಳಿಯುತ್ತದೆ. ರಂಗಮಂಟಪದಲ್ಲಿ ರೇಖಾಚಿತ್ರಗಳಿದ್ದುದಕ್ಕೆ ಕುರುಹುಗಳು ಮಾತ್ರ ಕಂಡುಬರುತ್ತದೆ. ಹೊಳೆಯ ಸಮೀಪದಲ್ಲಿ ಚಿತ್ರಮಠವೊಂದು ಇದ್ದಿತೆಂದೂ ಪ್ರವಾಹ ಬಂದಾಗ ಅಲ್ಲಿನ ಚಿತ್ರಗಳೆಲ್ಲಾ ನಾಶವಾದವೆಂದೂ ತಿಳಿಯುತ್ತದೆ. ದೇವಾಲಯದ ಹಳೆಯ ರಥದ ಮೇಲಿನ ಕೆತ್ತನೆ ಬಹು ಸುಂದರವಾಗಿದೆ.

**ಕಂದಿಕೆರೆ (ಜನಸಂಖ್ಯೆ. ೨,೯೫೨)**: ತಾಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಿಂದ ೧೪ ಕಿ.ಮೀ. ದೂರದಲ್ಲಿರುವ ಇದು ಐತಿಹಾಸಿಕ ಅವಶೇಷಗಳಿಂದ ಕೂಡಿದ ಚಾರಿತ್ರಿಕ ಮಹತ್ವದ ಸ್ಥಳವಾಗಿದೆ. ಇಲ್ಲಿ ಕೋಟೆಯ ಅವಶೇಷ, ಗೋಪಾಲಕೃಷ್ಣ ದೇವಾಲಯ, ಶಾಂತಿನಾಥ ಬಸದಿ, ಕಲ್ಯಾಣದೇವರ ಮಠ ಹಾಗೂ ಶಿಥಿಲವಾದ ಶಿವದೇವಾಲಯಗಳಿವೆ. ಊರಿನ ಸುತ್ತಲೂ ಇದ್ದ ಬಲವಾದ ಕೋಟೆ ಈಗ ನಶಿಸಿಹೋಗಿದ್ದು, ಅಲ್ಲಲ್ಲಿ ಬುರುಜುಗಳ ಅವಶೇಷವಿದ್ದು, ಕಂದಕಗಳೂ ಕಾಣಸಿಗುತ್ತವೆ. ಇಲ್ಲಿನ ಗೋಪಾಲಕೃಷ್ಣ ದೇವಾಲಯದ ಮೂಲಮೂರ್ತಿ ಐದು ಅಡಿ ಎತ್ತರವಿದ್ದು, ಮಗ್ಗುಲಲ್ಲಿ ಗೋವನ್ನು ಚಿತ್ರಿಸಲಾಗಿದ್ದು, ಪ್ರಭಾವಳಿಯನ್ನೊಳಗೊಂಡಿದೆ. ನವರಂಗದಲ್ಲಿ ವಿಷ್ಣು ಮತ್ತು ಸೂರ್ಯನ ಮೂರ್ತಿಗಳಿವೆ.

ಇಲ್ಲಿಯ ಬಸದಿಯಲ್ಲಿರುವ ಜೈನಮೂರ್ತಿಯು ಶಾಂತಿನಾಥ ತೀರ್ಥಂಕರನಾಗಿದ್ದು, ನಾಲ್ಕು ಅಡಿ ಎತ್ತರವಿದೆ. ಗ್ರಾಮದ ವಾಯವ್ಯಕ್ಕೆ ಸ್ವಲ್ಪ ದೂರದಲ್ಲಿ ಕಲ್ಯಾಣದೇವರ ಮಠ ಮತ್ತು ಶಿವದೇವಾಲಯದ ಕಲ್ಲಿನ ಕಂಬ, ಶಿವಲಿಂಗ, ನಂದಿ ಹಾಗೂ ಇನ್ನಿತರ ಅವಶೇಷಗಳು ಇದ್ದುವೆಂದು ತಿಳಿದು ಬರುತ್ತದೆ.

**ಕಗ್ಗೆರೆ (ಜನಸಂಖ್ಯೆ. ೮೯೯)**: ಕುಣಿಗಲ್ ತಾಲೂಕಿನಲ್ಲಿರುವ ಇದು ಎಡೆಯೂರಿನಿಂದ ಎಂಟು ಕಿ.ಮೀ. ಪಶ್ಚಿಮಕ್ಕೆ, ನಾಗಿನಿ ನದಿ ದಂಡೆಯ ಮೇಲಿದೆ. ಈ ಗ್ರಾಮದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಗಳ ತಪೋವನ ಹಾಗೂ ದೇವಸ್ಥಾನಗಳಿದ್ದು, ಇದರ ಆಡಳಿತವನ್ನು ಎಡೆಯೂರು ಕ್ಷೇತ್ರದ ಮೇಲ್ವಿಚಾರಣಾ ಸಮಿತಿ ನೋಡಿಕೊಳ್ಳುತ್ತಿದೆ. ಪಾಲ್ಗುಣಮಾಸದಲ್ಲಿ ರಥೋತ್ಸವ ನಡೆಯುತ್ತದೆ. ಇಲ್ಲಿನ ಕ್ರಿ.ಶ. ೧೬೬೩ರ ಶಿಲಾಶಾಸನ ಕೆಳದಿ ಅರಸರ ವಿರುದ್ಧ ಮೈಸೂರು ಒಡೆಯರು ದಿಗ್ವಿಜಯ ಪಡೆದ ಸಂದರ್ಭದಲ್ಲಿ ದಳವಾಯಿ ನಂದಿನಾಥಯ್ಯನು ಭೂದಾನ ನೀಡಿರುವುದನ್ನು ದಾಖಲಿಸಿದೆ.

**ಕಡಗತ್ತೂರು (ಜನಸಂಖ್ಯೆ.೩,೪೪೦)**: ತಾಲೂಕು ಕೇಂದ್ರ ಮಧುಗಿರಿಯಿಂದ ಪೂರ್ವಕ್ಕೆ ೩೦ ಕಿ.ಮೀ. ದೂರದಲ್ಲಿ, ಕೊಡಗೇನಹಳ್ಳಿ ಹೋಬಳಿಯಲ್ಲಿದೆ. ಇಲ್ಲಿನ ಕೆರೆ ನೀರನ್ನೊದಗಿಸುತ್ತಿದ್ದುದ್ದರಿಂದ ಈ ಗ್ರಾಮವು ಹಿಂದೆ ಬತ್ತದ ಬೃಹತ್ ಕಣಜವಾಗಿದ್ದಿತು. ಇಲ್ಲಿನ ಜನ ಐಶ್ವರ್ಯವಂತರಾಗಿ, ಚಿನ್ನದ ಕಡಗ ತೊಡುವವರಾದ್ದರಿಂದ ಈ ಊರಿಗೆ 'ಕಡಗತ್ತೂರು' ಎಂಬ ಹೆಸರು ಬಂದಿತೆಂಬ ಐತಿಹ್ಯವಿದೆ. ಈ ಗ್ರಾಮ ದೇವಾಲಯಗಳ ಬೀಡಾಗಿದ್ದು, ಇಲ್ಲಿ, ಹಿಂದೆ ೧೮ ದೇವಾಲಯಗಳಿತ್ತೆಂಬ ಹೇಳಿಕೆ ರೂಢಿಯಲ್ಲಿದ್ದು, ಅವುಗಳಲ್ಲಿ ಕೆಲವು ದೇವಾಲಯಗಳು ಇಂದಿಗೂ ಉಳಿದುಕೊಂಡು ಬಂದಿರುವುದನ್ನು ಕಾಣಬಹುದು. ಗ್ರಾಮದ ಮಧ್ಯದಲ್ಲಿ ಜನಾರ್ಧನಸ್ವಾಮಿ ದೇವಸ್ಥಾನವಿದೆ. ಒಳಗಿನ ಪ್ರಾಕಾರ ನಾಲ್ಕು ಕಂಬಗಳನ್ನೊಳಗೊಂಡಿದೆ. ಈ ದೇವಾಲಯದ ಹಲವು ಭಾಗ ಶಿಥಿಲವಾಗಿದ್ದು, ಮೂಲ ಜನಾರ್ಧನನ ವಿಗ್ರಹವನ್ನು ಮೂರನೇ ದ್ವಾರದ ಸಮೀಪ ಪ್ರತಿಷ್ಠಾಪಿಸಲಾಗಿದೆ. ಅಲ್ಲದೆ ಭೀಮೇಶ್ವರ, ಚೌಡೇಶ್ವರಿ ಮೊದಲಾದ ಇನ್ನಿತರ ದೇವಾಲಯಗಳೂ ಇಲ್ಲಿವೆ.

**ಕಡಬ (ಜನಸಂಖ್ಯೆ. ೩,೪೭೯)**: ತಾಲೂಕು ಕೇಂದ್ರ ಗುಬ್ಬಿಗೆ ೧೮ ಕಿ.ಮೀ. ದೂರದಲ್ಲಿರುವ ಕಡಬ ತನ್ನದೇ ಆದ ಪ್ರಾಚೀನತೆಯನ್ನು ಪಡೆದಿದೆ. ಪೌರಾಣಿಕ ಹಿನ್ನೆಲೆಯಂತೆ 'ಶಿಂಶಪ' ಅಥವಾ ಶಿಂಷಾ ನದಿಯ ಬಲ ದಂಡೆಯ ಮೇಲೆ ಇರುವ ಈ ಊರಿನಲ್ಲಿ ಹಿಂದೆ ಕದಂಬ ಋಷಿಯ ಆಶ್ರಮವಿದ್ದು, ಅಲ್ಲಿಯೇ ತಪಸ್ಸು ನಡೆಸುತ್ತಿದ್ದುದರಿಂದ, ಈ ಊರಿಗೆ ಅವರ ಹೆಸರನ್ನೇ ಇಡಲಾಯಿತಂತೆ. ಶ್ರೀರಾಮನು ಲಂಕೆಯಿಂದ ಹಿಂತಿರುಗುವಾಗ ಋಷಿಗಳು ಅವನನ್ನು ಸತ್ಕರಿಸಿ, ಪರಿವಾರದವರೆಲ್ಲರ ಸ್ನಾನಪಾನಾದಿಯ ಅನುಕೂಲತೆಗಾಗಿ ನದಿ ಪಾತ್ರವನ್ನು ಕೆರೆಯನ್ನಾಗಿ ಮಾಡಲಾಯಿತೆಂದು ಹೇಳಲಾಗುತ್ತದೆ. ಕದಂಬ ಋಷಿಯ ಹೆಸರು ಕ್ರಮೇಣ 'ಕದಬ', 'ಕಡಬ'ವಾಗಿ ಪರಿವರ್ತನೆಗೊಂಡಿದೆ. ೧೮೮೬ರವರೆಗೆ ಕಡಬವೇ ತಾಲೂಕು ಕೇಂದ್ರವಾಗಿತ್ತು. ಇಲ್ಲಿ ದೊರೆತಿರುವ ಕ್ರಿ.ಶ. ೭೮೧ರ ರಾಷ್ಟ್ರಕೂಟ ತಾಮ್ರಶಾಸನದಲ್ಲಿ ಒಂದನೇ ಕೃಷ್ಣನು ಎಲ್ಲೋರದಲ್ಲಿ ನಿರ್ಮಿಸಿದ ಕೈಲಾಸ ದೇವಾಲಯದ ಉಲ್ಲೇಖವಿದೆ. ರಾಷ್ಟ್ರಕೂಟ ಪ್ರಾಂತಾಧಿಕಾರಿ ಚಿಕ್ಕರಾಜ ಗಂಗನು ಗಂಗ ದೊರೆ ಶಿವಮಾರನನ್ನು ಸೆರೆಹಿಡಿದು ಗಂಗಮಂಡಲದ ಮೇಲೆ ಅಧಿಪತ್ಯ ಪಡೆದಿದ್ದನೆಂದು ತಿಳಿಯುತ್ತದೆ. ರಾಮಾನುಜಾಚಾರ್ಯರು ಮೈಸೂರು ಪ್ರಾಂತಕ್ಕೆ ಬಂದಾಗ ಹೆಬ್ಬಾರ್ ಶ್ರೀವೈಷ್ಣವ ಪಂಚಗ್ರಾಮಗಳನ್ನು ನಿರ್ಮಿಸಲಾಯಿತು.

ಅವುಗಳಲ್ಲಿ ಒಂದು ಕಡಬ. (ಉಳಿದ ನಾಲ್ಕು ತುಮಕೂರು ಜಿಲ್ಲೆಯ ಮಾಯಸಂದ್ರ ಮತ್ತು ನೊಣವಿನಕೆರೆ, ಮಂಡ್ಯ ಜಿಲ್ಲೆಯ ಬಿಂಡಿಗನವಿಲೆ ಹಾಗೂ ಹಾಸನ ಜಿಲ್ಲೆಯ ನುಗ್ಗೇಹಳ್ಳಿ) ಈ ಗ್ರಾಮಗಳನ್ನು ತಮಿಳು ಶಾಸನಗಳು 'ದಶರಥ ರಾಮ ಚತುರ್ವೇದಿಮಂಗಳಂ' ಎಂದು ಕರೆದಿವೆ. ಈ ಪ್ರದೇಶದಲ್ಲಿ ಈಗಲೂ ಶ್ರೀವೈಷ್ಣವರ ಪ್ರಭಾವವಿರುವುದನ್ನು ನೋಡಬಹುದು.

ಊರ ಒಳಗಿರುವ ಶ್ರೀರಾಮ ದೇವಾಲಯವು ದ್ರಾವಿಡ ಶೈಲಿಯಲ್ಲಿದ್ದು, ಭವ್ಯ ಪ್ರಾಂಗಣ, ಸೊಗಸಾದ ಗೋಪುರ ಹಾಗೂ ೨೫ ಅಡಿ ಎತ್ತರದ ಗರುಡ ಗಂಬವನ್ನು ಹೊಂದಿದೆ. ಈ ದೇಗುಲವು ಮೂರು ಭಾಗಗಳನ್ನು ಹೊಂದಿದ್ದು ಮಧ್ಯದಲ್ಲಿ ಜನಾರ್ಧನ, ಉತ್ತರದಲ್ಲಿ ಯೋಗಾನರಸಿಂಹ ಹಾಗೂ ದಕ್ಷಿಣದಲ್ಲಿ ವೇಣುಗೋಪಾಲನ ವಿಗ್ರಹಗಳಿವೆ.

ಕಡಬದ ಕೆರೆಕೋಡಿಯ ಹನುಮಂತನ ಗುಡಿಯ ಬಳಿ ೧೫ ಅಡಿ ಎತ್ತರದ ಉಯ್ಯಾಲೆ ಕಂಬವಿದ್ದು, ಬಾಗಿಲುವಾಡದಂತೆ ಕಾಣುತ್ತದೆ. ಇದರ ಜಾತ್ರೆ ತುಂಬ ಪ್ರಸಿದ್ಧ. ಇದು ಶಿಂಷಾ ಹಾಗೂ ನಾಗಿನಿ ನದಿಗಳ ಸಂಗಮ ಸ್ಥಳವಾಗಿದೆ. ಇತ್ತೀಚೆಗೆ ಇಲ್ಲಿ ಶ್ರೀರಾಮ, ಲಕ್ಷ್ಮಣ, ಸೀತೆ ಮೊದಲಾದವರ ಮೂರ್ತಿಗಳನ್ನು ಹಾಲುಗಲ್ಲಿನಲ್ಲಿ ಸ್ಥಾಪಿಸಿರುವರು. ಊರಿನ ಮಡುವಿನ ಪಕ್ಕದಲ್ಲಿ ಈ ದೇವಾಲಯವಿದ್ದು, ಎದುರಿಗೆ ದೀಪಸ್ತಂಭವಿದೆ. ಇಲ್ಲಿ ನಾಲ್ಕು ತಮಿಳು ಶಾಸನಗಳಿಂದ ದತ್ತಿ ಬಿಟ್ಟಿರುವ ವಿವರ ತಿಳಿಯುತ್ತವೆ. ಈ ಊರಿನ ದೇವತೆ ದಂಡಿಗಮ್ಮ. ಇದು ಜನಪ್ರಿಯ ಉಗ್ರದೇವತೆಯಾಗಿದ್ದು ಊರಜನರಿಂದ ಪೂಜಿಸಲ್ಪಡುತ್ತಾಳೆ. ಕಡಬದ ಸಮೀಪದ **ನಾಗಸಂದ್ರ (ಜನಸಂಖ್ಯೆ.೭೦೫)** ಗ್ರಾಮದಲ್ಲಿ ಕಾಳಘಟ್ಟಮ್ಮ ಎಂಬ ಪ್ರಸಿದ್ಧ ದೇವಸ್ಥಾನವಿದೆ. ಸ್ಥಳ ಪುರಾಣದಂತೆ ಒಂದೇ ಕುಟುಂಬದವರಾದ ಕಾಳಘಟ್ಟಮ್ಮ, ಅವಸರದಮ್ಮ ಮತ್ತು ದಾಳಿಯಮ್ಮರುಗಳ ದೇವಸ್ಥಾನಗಳೂ, ಎದುರಲ್ಲಿರುವ ಪಾತಪ್ಪ (ಪಾತುರಾಜ) ಎಂಬ ಸೋದರನ ದೇಗುಲ ಹಾಗೂ **ಜೀಗನಹಳ್ಳಿ (ಜನಸಂಖ್ಯೆ. .೭೬೨)**ಯ ಚಿಕ್ಕ ಅವಸರದಮ್ಮ ದೇವಾಲಯಗಳು, ಹಳ್ಳಿಕಾರಗೌಡ ಒಕ್ಕಲಿಗರು ಪೂಜಿಸುವ ಪ್ರಮುಖ ದೇವರುಗಳಾಗಿವೆ. ಮಹಾನವಮಿಯಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ. ಪ್ರತಿ ಮಂಗಳವಾರ ಇಲ್ಲಿ ಜಾನುವಾರು ಸಂತೆ ನಡೆಯುತ್ತದೆ ಜೊತೆಗೆ ಕಾಳಘಟ್ಟದಮ್ಮನಿಗೆ ಅಂದು ವಿಶೇಷ ಪೂಜೆ ಹರೆ–ದೋಣುಗಳ ಮೊರೆತಗಳು ರಾತ್ರಿ ಇಡಿ ನಡೆಯುತ್ತದೆ. ಜಾನುವಾರುಗಳ ಆರೋಗ್ಯಕ್ಕೆ ಸುತ್ತಮುತ್ತಲ ಗ್ರಾಮಸ್ಥರು ಹರಕೆ ಹೊತ್ತು ಈ ದೇವರಿಗೆ ಪೂಜೆ ಸಲ್ಲಿಸುತ್ತಾರೆ.

**ಕ(ತ)ಡಸೂರು (ಜನಸಂಖ್ಯೆ. ೧,೮೬೧)**: ತಾಲೂಕು ಕೇಂದ್ರ ತಿಪಟೂರಿಗೆ ೧೧ ಕಿ.ಮೀ. ದೂರದಲ್ಲಿರುವ ಇದು ಭೈರವನ ದೇವಾಲಯದಿಂದಾಗಿ ಪ್ರಸಿದ್ಧವಾಗಿದೆ. ಭೈರವನಮೂರ್ತಿಯು ಸುಂದರವಾಗಿದ್ದು ಮೂರು ಅಡಿ ಎತ್ತರವಿದೆ. ಮೂರ್ತಿಗೆ ನಾಲ್ಕು ಕೈಗಳಿದ್ದು ಮೇಲಿನ ಕೈಗಳಲ್ಲಿ ಖಡ್ಗ ಮತ್ತು ಡಮರುಗಳಿದ್ದು ಕೆಳ ಬಲಗೈಯಲ್ಲಿ ಕತ್ತಿಯೂ ಎಡಗೈನಲ್ಲಿ ರುಂಡವನ್ನು ಹಿಡಿದಿದ್ದು, ಅದರಿಂದ ಸೋರುತ್ತಿರುವ ರಕ್ತವನ್ನು ನಾಯಿ ನೆಕ್ಕುತ್ತಿರುವಂತಿದೆ. ಭೈರವನ ತಲೆಕೂದಲು ಒರಟಾಗಿದ್ದು, ರುಂಡಮಾಲೆಯನ್ನು, ಸರ್ಪಮಾಲೆಯನ್ನು ತೊಡೆಗೆ ಹಾಗೂ ಕಾಲಿಗೆ ಧರಿಸಿದ್ದು, ಅವನ ಚಿಹ್ನೆಯಾದ ಚೇಳನ್ನು ಬಿಡಿಸಲಾಗಿದೆ.

**ಕತ್ತಿರಾಜನಹಳ್ಳಿ (ಜನಸಂಖ್ಯೆ. ೬೮೦)**: ಇದು ಮಧುಗಿರಿ ತಾಲೂಕು ಮಿಡಿಗೇಶಿ ಹೋಬಳಿಯ ಒಂದು ಗ್ರಾಮವಾಗಿದ್ದು, ೧೫ ಕಿ.ಮೀ. ದೂರದಲ್ಲಿದೆ. ಗ್ರಾಮದ ಪಶ್ಚಿಮಕ್ಕೆ ಒಂದು ಕಿ.ಮೀ. ದೂರದಲ್ಲಿ, 'ಕೋತಗಲ್' ಎಂದು ಕರೆಯುವ ಪ್ರದೇಶದಲ್ಲಿ ಬೃಹತ್ ಶಿಲಾಯುಗದ ಗೋರಿ ನೆಲೆ ಇದ್ದು, ಇದೇ ಪರಿಸರದಲ್ಲಿ ಸೂಕ್ಷ್ಮ ಶಿಲಾ ಉಪಕರಣ, ನೂತನ ಶಿಲಾಯುಗದ ಅವಶೇಷಗಳ ಜೊತೆಗೆ ಇತಿಹಾಸ ಆರಂಭ ಕಾಲದ ಹಲವಾರು ವಸ್ತು ಅವಶೇಷಗಳನ್ನು ಗುರುತಿಸಲಾಗಿದೆ. ಈ ಪರಿಸರವು ಕಣಿವೆ ಪ್ರದೇಶವಾಗಿದ್ದು ಜನವಾಸ್ತವ್ಯಕ್ಕೆ ಯೋಗ್ಯ ಸ್ಥಳವೆಂದು ಹೇಳಬಹುದು.

ಇದೇ ಪ್ರದೇಶದಲ್ಲಿ ಸೂಕ್ಷ್ಮ ಶಿಲಾಯುಗಕಾಲದ ವೈವಿಧ್ಯ ಉಪಕರಣಗಳು ದೊರೆತಿದ್ದು, ಅವುಗಳನ್ನು ಕ್ವಾರ್ಟ್ಸ್‌ಕಲ್ಲಿನಿಂದ ತಯಾರಿಸಲಾಗಿದೆ. ನೂತನ ಶಿಲಾಯುಗದ ಕೆಲವು ಅವಶೇಷಗಳನ್ನು ಸಂಗ್ರಹಿಸಲಾಗಿದ್ದು, ಮುಖ್ಯವಾಗಿ ಇವು ಭಗ್ನ ಶಿಲೋಪಕರಣಗಳಾಗಿವೆ. ಇವುಗಳನ್ನು ಡಾಲರೈಟ್ ಶಿಲೆಯಲ್ಲಿ ರೂಪಿಸಲಾಗಿದ್ದು, ಇಲ್ಲಿ ನೂತನ ಶಿಲಾಯುಗದ ವಾಸ್ತವ್ಯದ ನೆಲೆಯನ್ನು ಗುರುತಿಸಲಾಗಿದೆ. ಹೀಗಾಗಿ ಈ ಪ್ರದೇಶವು ನೂತನ ಶಿಲಾಯುಗ ಸಂಸ್ಕೃತಿಯ ಪ್ರಮುಖ ಕೇಂದ್ರವಾಗಿದ್ದಿತೆಂಬ ಅಂಶ ತಿಳಿಯುತ್ತದೆ. ಸಮೀಪದ ಮಿಡಿಗೇಶಿಯಲ್ಲಿಯೂ ನೂತನ ಶಿಲಾಯುಗದ ಅವಶೇಷಗಳು ದೊರೆತಿವೆ.

ಜಿಲ್ಲೆಯ ಬೃಹತ್ ಶಿಲಾಯುಗ ಸಂಸ್ಕೃತಿಯ ಪ್ರಮುಖ ಗೋರಿ ನೆಲೆ ಇದಾಗಿದ್ದು, ಇಲ್ಲಿ ಸುಮಾರು ೬೦ ಕ್ಕೂ ಹೆಚ್ಚು ಶಿಲಾಗೋರಿ ಹಾಗೂ ಎರಡು ನಿಲುಸುಗಲ್ಲುಗಳು ಪತ್ತೆಯಾಗಿವೆ. ಇವುಗಳನ್ನು ಸ್ಥಳೀಯರು "ಪಾಂಡವರಕಲ್ಲು"

ಎಂದು ಕರೆಯುತ್ತಾರೆ. ಇವುಗಳಲ್ಲಿ ೧೭ ಕಲ್ಲುಗುಪ್ಪೆಗಳು, ೪೩ ಕಲ್ಲುವೃತ್ತಗಳಿದ್ದು, ಅವುಗಳಲ್ಲಿ ೧೭ ಕಲ್ಲುಚಪ್ಪಡಿಯಲ್ಲಿಯೂ ೨೬ ಉಂಡೆಕಲ್ಲುಗಳಲ್ಲಿಯೂ ರೂಪಿಸಲಾಗಿದ್ದು, ಕೆಲವು ಸ್ವಸ್ತಿಕ್ ಮಾದರಿಯ ಕಿಂಡಿ ಕೋಣೆಗಳಾಗಿವೆ. ಇಲ್ಲಿಯ ಎರಡು ನಿಲುಸುಗಲ್ಲುಗಳಲ್ಲಿ ಒಂದು ವಿಶಿಷ್ಟವಾಗಿದ್ದು ಮೇಲ್ಭಾಗವು ಓರೆಯಾಗಿದ್ದು, ಕತ್ತಿಯಾಕಾರದಲ್ಲಿರುವುದರಿಂದ ಈ ಗ್ರಾಮವನ್ನು ಕತ್ತಿರಾಜನಹಳ್ಳಿ ಎಂದು ಕರೆಯುತ್ತಾರೆ ಎಂದು ಹೇಳಲಾಗುತ್ತದೆ. ಇದೇ ಪ್ರದೇಶದಲ್ಲಿ ಇತಿಹಾಸ ಆರಂಭ ಕಾಲದ ಮಡಕೆಚೂರುಗಳು ದೊರೆತಿದ್ದು, ಅವು ಕೆಂಪು, ಕಪ್ಪು ಹಾಗೂ ಕೆಂಪು–ಕಪ್ಪು ವರ್ಣದಲ್ಲಿದ್ದು, ಕೆಂಪು ಲೇಪನದಡಿ ಬಿಳಿವರ್ಣದ ಗೆರೆಗಳುಳ್ಳ ಮಡಕೆ ಭಾಗಗಳಾಗಿದ್ದು, ಇವು ಬ್ರಹ್ಮಗಿರಿಯಲ್ಲಿ ದೊರೆತಿರುವ ಮಡಕೆ ಮಾದರಿಗಳನ್ನು ಹೋಲುತ್ತವೆ.

**ಕರಡಿ (ಜನಸಂಖ್ಯೆ. ೬೩೫)**: ತಾಲೂಕು ಕೇಂದ್ರ ತಿಪಟೂರಿಗೆ ಒಂಬತ್ತು ಕಿ.ಮೀ. ಪೂರ್ವಕಿದ್ದು ಇದೊಂದು ಪ್ರಾಗಿತಿಹಾಸಕಾಲದ ನೆಲೆ. 'ಕರ್‌ವಿಡಿ' ಎಂದರೆ 'ಕಬ್ಬಿಣದ ಕಾರ್ಖಾನೆ' ಎಂದರ್ಥ. ಕಬ್ಬಿಣವನ್ನು ಸಿದ್ದಗೊಳಿಸುತ್ತಿದ್ದಂತಹ ಪ್ರಾಚೀನ ಕೇಂದ್ರ. ನಂತರದಲ್ಲಿ ಕರ್‌ವಿಡಿಯು 'ಕರಡಿ' ಎಂದಾಗಿದೆ. ಶಿಲಾಯುಗಕ್ಕೆ ಸೇರಿದ ಆದಿ, ಮಧ್ಯ, ಅಂತ್ಯ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ ಹಾಗೂ ಬೃಹತ್‌ಶಿಲಾಯುಗದ ಅವಶೇಷಗಳನ್ನು ನೆರೆಯ ಕಿಬ್ಬನಹಳ್ಳಿ, ಬಿಳಿಗೆರೆ, ಬಾಣಸಂದ್ರ, ಕಾರೇಕುರ್ಚಿ, ಜಕ್ಕನಹಳ್ಳಿ, ಬೊಮ್ಮೇನಹಳ್ಳಿ, ಹೊನ್ನೇಮಾರನಹಳ್ಳಿಗಳಲ್ಲಿ ಗುರುತಿಸಲಾಗಿದ್ದು, ಕರಡಿಯೂ ಇವುಗಳಂತೆ ಅತಿ ಪ್ರಮುಖ ನೆಲೆಯಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಭೂವಿಜ್ಞಾನ ಹಾಗೂ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗಗಳು ಜಂಟಿಯಾಗಿ ಈ ಪ್ರದೇಶದ ಸುತ್ತಮುತ್ತಲೂ ಕ್ಷೇತ್ರಕಾರ್ಯ ಕೈಗೊಂಡು ಶಿಲಾಯುಗಕಾಲದ ಪರಿಸರ, ಪ್ರಾಕೃತಿಕ ಹಿನ್ನೆಲೆ, ಜಲದ ಮೂಲ ಮೊದಲಾದ ವಿಷಯಗಳ ಕುರಿತ ವೈಜ್ಞಾನಿಕ ಅಧ್ಯಯನ ಕೈಗೊಂಡು, ಇದು ಒಂದು ಸಮೃದ್ಧ ಕೇಂದ್ರವಾಗಿದ್ದಿತೆಂಬ ಅಂಶವನ್ನು ತಿಳಿಸಿಕೊಟ್ಟಿರುವರು. ಇಲ್ಲಿನ ಬೆಟ್ಟದ ಮೇಲೆ ಗೋಪಾಲಕೃಷ್ಣನ ದೇವಾಲಯವಿದೆ.

**ಕಲ್ಲೂರು (ಜನಸಂಖ್ಯೆ. ೫,೧೦೬)**: ತಾಲೂಕು ಕೇಂದ್ರ ಗುಬ್ಬಿಗೆ ಎಂಟು ಕಿ.ಮೀ. ದೂರದಲ್ಲಿದೆ. ಇದು ಶಿಂಷಾ ಮತ್ತು ನಾಗಿನಿ ನದಿಗಳ ಸಂಗಮಸ್ಥಳವಾಗಿದ್ದು ಇಲ್ಲಿ ದೊಡ್ಡ ಕೆರೆಯೊಂದಿದೆ. ಇದೊಂದು ವಾಣಿಜ್ಯ ಕೇಂದ್ರವಾಗಿದ್ದು, ಹಿಂದೆ ರೇಷ್ಮೆ ಮತ್ತು ಹತ್ತಿನೂಲಿನ ಸೀರೆಗಳ ನೇಕಾರರಿಗೆ ಪ್ರಾಶಸ್ತ್ಯ ನೀಡಲಾಗುತ್ತಿದ್ದು ಹಿಂದೆ ಸುಮಾರು ೩೦೦೦ ಮನೆಗಳು ಈ ಉದ್ಯಮದಲ್ಲಿ ತೊಡಗಿದ್ದವು. ಇತ್ತೀಚಿನ ದಿನಗಳಲ್ಲಿ ಹಲವು ಕಾರಣಗಳಿಂದ ಈ ಕಾರ್ಯ ಕುಂಠಿತಗೊಂಡಿದೆ. ಇಲ್ಲಿ ಆಂಜನೇಯಸ್ವಾಮಿ ದೇವಾಲಯವಿದ್ದು, ಚೈತ್ರಮಾಸದಲ್ಲಿ ಹತ್ತು ದಿನಗಳ ಕಾಲ ಜಾತ್ರೆ ನಡೆಯುತ್ತದೆ, ಇತ್ತೀಚೆಗೆ ಇಲ್ಲಿ ಶ್ರೀರಾಮನ ಗುಡಿಯನ್ನು ನಿರ್ಮಿಸಿ ಭವ್ಯಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಾರೆ. ಜಾತ್ರೆಯ ಸಂದರ್ಭದಲ್ಲಿ ಜನಪದ ಕಲಾ ಪ್ರದರ್ಶನ ನಡೆಯುತ್ತದೆ. ವೀರಶೈವಯತಿ ರುದ್ರಮುನಿಸ್ವಾಮಿಗಳ ಗದ್ದಿಗೆಯು ಇಲ್ಲಿದೆ.

**ಕಳ್ಳಂಬೆಳ್ಳ (ಜನಸಂಖ್ಯೆ. ೪,೬೭೭)**: ಇದು ತಾಲೂಕು ಕೇಂದ್ರ ಶಿರಾಕ್ಕೆ ೧೨ ಕಿ.ಮೀ. ದೂರದಲ್ಲಿ, ಶಿರಾ–ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಇಲ್ಲಿನ ವಿರೂಪಾಕ್ಷ (ಚೋಳೇಶ್ವರ) ದೇವಾಲಯವು ಕೆರೆಯ ಹಿಂದಿನ ತೋಟದಲ್ಲಿದೆ. ಗರ್ಭಗುಡಿಯಲ್ಲಿ ಇರುವ ಶಿವಲಿಂಗವು ಸುಮಾರು ೧೨ನೇ ಶತಮಾನಕ್ಕೆ ಸೇರಿದ್ದು ಗರ್ಭಗುಡಿಯ ಮುಂದಿನ ಮುಖಮಂಟಪದಲ್ಲಿರುವ ನೊಳಂಬಶೈಲಿಯ ನಂದಿಯ ವಿಗ್ರಹವು ಸರ್ವಾಲಂಕೃತವಾಗಿದ್ದು, ಶಿಥಿಲಾವಸ್ಥೆಯಲ್ಲಿದೆ. ಕೆರೆಯ ಏರಿಯ ಮೇಲೆ ಪೂರ್ವಾಭಿಮುಖವಾಗಿರುವ ಕನ್ನೇರಮ್ಮ ಗುಡಿಗೆ ಮೇಲ್ಛಾವಣಿ ಇಲ್ಲ. ಯಾವುದೇ ರೂಪವಿಲ್ಲದ, ಸಪ್ತಮಾತೃಕೆಯರೆಂದು ಹೇಳಲಾಗುವ ಏಳು ಕಲ್ಲುಗಳಿಲ್ಲಿವೆ. ನಾಗರಕಲ್ಲು, ಗಣಪತಿ ಹಾಗೂ ವೀರಗಲ್ಲುಗಳು ವಿಜಯನಗರ ಕಾಲದ್ದೆಂದು ತಿಳಿದು ಬರುತ್ತದೆ.

ಕಳ್ಳಂಬೆಳ್ಳ ಗ್ರಾಮದಲ್ಲಿ ಮರಡಿ ರಂಗನಾಥಸ್ವಾಮಿಯ ಉತ್ಸವಮೂರ್ತಿಯ ಗುಡಿ ಇದ್ದು, ಇದು ಗರ್ಭಗೃಹ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಮುಖಮಂಟಪದ ತೊಲೆಯಲ್ಲಿ ಹೆಡೆಬಿಚ್ಚಿದ ದ್ವಿ–ಸರ್ಪಗಳ ಚಿತ್ರವನ್ನು ಬಿಡಿಸಲಾಗಿದೆ. ಚೌಕಾಕಾರದ ಕಂಬಗಳು, ಸಾಮಾನ್ಯ ಬೋದಿಗೆಯನ್ನೊಳಗೊಂಡಿವೆ. ಗರ್ಭಗುಡಿಯ ಬಾಗಿಲುವಾಡದಲ್ಲಿ ಲತಾತೋರಣ ಹಾಗೂ ಮೇಲ್ಭಾಗದಲ್ಲಿ ಕಮಲದ ಹೂವನ್ನು ಬಿಡಿಸಲಾಗಿದೆ. ಗರ್ಭಗುಡಿಯ ಮುಂದೆ ಕಿರು ಗೋಪುರವಿದ್ದು, ಮೇಲೆ ಕಳಸವನ್ನು ಪ್ರತಿಷ್ಠಾಪಿಸಲಾಗಿದೆ.

**ಕ್ಯಾತ್ಸಂದ್ರ:** ಇದು ತುಮಕೂರು ನಗರದ ಪೂರ್ವಕ್ಕೆ ಮೂರು ಕಿ.ಮೀ. ದೂರದಲ್ಲಿದ್ದು, ಪ್ರಸ್ತುತ ತುಮಕೂರು ನಗರದ ಭಾಗವೇ ಆಗಿದೆ. ಬೆಟ್ಟಗಳ ಸಮೀಪದ ಈ ಊರು ವಿಶಾಲ ಜಲಾಶಯದಿಂದ ಕೂಡಿದ್ದರಿಂದ ಇದ್ದನ್ನು ಖ್ಯಾ(ಕೇ) ತಸಮುದ್ರವೆಂದು ಕರೆಯಲಾಗಿದ್ದು, ಈಗ ಅಪಭ್ರಂಶಗೊಂಡು ಕ್ಯಾತ್ಸಂದ್ರ ಆಗಿದೆ ಎಂಬ ಅಭಿಪ್ರಾಯವಿದೆ.

ಇದಕ್ಕೆ 'ಕೈತಶರಧಿ', ಕೇತಸಮುದ್ರ', ಖ್ಯಾತಿಸಂದ್ರ', 'ಕೇತಸಂದ್ರ' ನಾಮರೂಪಗಳು ಶಾಸನಗಳಲ್ಲಿವೆ. ಸುಮಾರು ೧೫–೧೬ನೇ ಶತಮಾನದಲ್ಲಿ ಹೇರಂಬ ಕವಿಯಿಂದ ರಚಿತವಾದ ಶ್ರೀ ಸಿದ್ಧಲಿಂಗೇಶ್ವರ ಸಾಂಗತ್ಯದಲ್ಲಿ 'ಕೇತ್ಸಮುದ್ರ'ವೆಂದು ಉಲ್ಲೇಖವಾಗಿದೆ. ಕೇತ ಎಂಬುವನಿಂದ ನಿರ್ಮಾಣಗೊಂಡ ಸಮುದ್ರೋಪಾದಿಯಲ್ಲಿದ್ದ ಈ ಕೆರೆಯಿಂದಾಗಿ ಊರಿಗೆ ಕೇತಸಮುದ್ರ ಎಂಬ ಹೆಸರು ಬಂದು, ಮುಂದೆ ಸಮುದ್ರ ಎಂಬ ಪದ ಸಂದ್ರವಾಗಿ ಮಾರ್ಪಾಟಾಗಿ ಊರ ಹೆಸರು ಕ್ಯಾತಸಂದ್ರ ಆಗಿದೆ. ಊರಿನ ಸುತ್ತಮುತ್ತ ಶಿಥಿಲಗೊಂಡ ಕೋಡಿ, ಕಂದಕಗಳು, ಕೋಟೆಯ ದಿಡ್ಡಿಬಾಗಿಲು, ಕೋಡಿಬಸವಣ್ಣ ದೇವಾಲಯ, ಆಂಜನೇಯಸ್ವಾಮಿ ದೇವಾಲಯ, ಲಕ್ಷ್ಮೀದೇವಾಲಯದ ಎಡ ಬಲಕ್ಕೆ ರಾಮೇಶ್ವರ ಮತ್ತು ಗೋಪಾಲಕೃಷ್ಣ ದೇವಾಲಯ, ಗ್ರಾಮದೇವಮ್ಮ, ನಂದಿಗುಡಿ, ಗುಂಡಲಮ್ಮ, ಯಲ್ಲಮ್ಮ, ಕತ್ತಲೆ ಹನುಮಂತರಾಯ, ಚಂದ್ರಮೌಳೀಶ್ವರ, ಸೋಮೇಶ್ವರ, ದಿಬ್ಬದ ಲಕ್ಷ್ಮೀಗುಡಿ ಮೊದಲಾದವುಗಳಿವೆ. ಇವುಗಳು ವಿಜಯನಗರೋತ್ತರ ಕಾಲದ ಕಿರು ದೇವಾಲಯಗಳಾಗಿದ್ದು, ಗ್ರಾಮ ದೇವತೆಯ ಉತ್ಸವವು ಪ್ರತೀವರ್ಷ ಏಪ್ರಿಲ್‌ನಲ್ಲಿ ನಡೆಯುತ್ತದೆ.

**ಕಾರೇಕುರ್ಚಿ (ಜನಸಂಖ್ಯೆ. ೪೦೦)**: ತಾಲೂಕು ಕೇಂದ್ರ ತಿಪಟೂರಿಗೆ ಸಮೀಪವಿರುವ ಈ ಸ್ಥಳದಲ್ಲಿ ಶ್ರೀದೊಣೆ ಗಂಗಾಕ್ಷೇತ್ರವಿದೆ.ಇದು ಶ್ರೀಸಿದ್ಧರಾಮ ಶಿವಯೋಗೀಶ್ವರರು ದೀರ್ಘಕಾಲ ನೈಸರ್ಗಿಕ ಗವಿಯಲ್ಲಿ ತಪವನ್ನಾಚರಿಸಿದ ಕ್ಷೇತ್ರವೆಂದು ತಿಳಿದುಬರುತ್ತದೆ. ಶ್ರೀಗಂಗಾಕ್ಷೇತ್ರವು ಗದ್ದುಗೆಯಿಂದಾಗಿ ಪ್ರಸಿದ್ಧಿ ಪಡೆದಿದೆ. ಈ ಕ್ಷೇತ್ರದಲ್ಲಿ ಸದಾಕಾಲ ಶ್ರೀಗಂಗಾಪೂಜೆ ಹಾಗೂ ಸ್ವಾಮಿಗಳ ಪೂಜೆ ನಡೆಯುತ್ತಿರುತ್ತದೆ. ಶ್ರಾವಣಮಾಸ, ಕಾರ್ತೀಕಮಾಸ, ಧನುರ್ಮಾಸಗಳಲ್ಲಿ ಶ್ರೀಕ್ಷೇತ್ರವು ಭಕ್ತರಿಂದ ತುಂಬಿರುತ್ತದೆ. ಭಕ್ತರ ಅನುಕೂಲಕ್ಕಾಗಿ ಇಲ್ಲಿನ ಮಠವು ದಾಸೋಹ ವ್ಯವಸ್ಥೆ ಮಾಡಿದೆ. ಭಕ್ತಮಹಾಶಯರ ಉದಾರ ಸಹಾಯದಿಂದ ಕಲ್ಯಾಣಮಂಟಪ ಹಾಗೂ ಇತರ ಸೌಕರ್ಯಗಳನ್ನು ರೂಪಿಸಲಾಗುತ್ತಿದೆ. ಇಲ್ಲಿ ಶಿವೈಕ್ಯರಾಗಿ ಸಮಾಧಿಸ್ತರಾಗಿರುವ ಶ್ರೀಫಲಹಾರ ಶಿವಯೋಗಿ ಹಾಗೂ ಇತರ ಐವರು ಶಿವಶರಣರ ಗದ್ದುಗೆಗಳಿದ್ದು, ಅವನ್ನು ಹುಸಿ ಗದ್ದುಗೆಗಳೆಂದು ಸ್ಥಳೀಯರು ಕರೆಯುತ್ತಾರೆ.

**ಕಿಬ್ಬನಹಳ್ಳಿ–ಬಿಳಿಗೆರೆ:** ತಾಲೂಕು ಕೇಂದ್ರ ತಿಪಟೂರಿನಿಂದ **ಕಿಬ್ಬನಹಳ್ಳಿ (ಜನಸಂಖ್ಯೆ. ೨,೪೬೮)**ಯು ೨೦ ಕಿ.ಮೀ. ಹಾಗೂ **ಬಿಳಿಗೆರೆ (ಜನಸಂಖ್ಯೆ. ೧,೮೩೮)** ೧೮ ಕಿ.ಮೀ. ಹಾಗೂ **ಜಕ್ಕನಹಳ್ಳಿ (ಜನಸಂಖ್ಯೆ. ೧,೦೫೯)** ಯಿಂದ ೧೫ ಕಿ.ಮೀ. ಪೂರ್ವಕ್ಕಿದೆ. ಸಮೀಪದ **ಬಾಣಸಂದ್ರ (ಜನಸಂಖ್ಯೆ. ೨,೫೯೪)** ತುರುವೇಕೆರೆ ತಾಲೂಕಿಗೆ ಸೇರಿದ್ದು, ಇಲ್ಲಿನ ಬೆಟ್ಟದ ಸಾಲು, ಈಗಾಗಲೇ ಜಗಜ್ಜನಿತವಾದ ಪ್ರಾಗಿತಿಹಾಸದ ನೆಲೆ ಎಂದು ಗುರುತಿಸಲ್ಪಟ್ಟಿರುವ ಪ್ರದೇಶವಾಗಿದೆ. ೧೯೨೯ರ ಸಮಯದಲ್ಲೇ ಇಲ್ಲಿ ಭೂ ವೈಜ್ಞಾನಿಕ ಸರ್ವೇಕ್ಷಣೆಯನ್ನು ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರೊ. ಸಂಪತ್ ಐಯಂಗಾರ್ ಮತ್ತು ರಾಮರಾವ್ ಕೈಗೊಂಡು, ಈ ಪ್ರದೇಶದ ಪ್ರಾಗೈತಿಹಾಸಿಕ ಮಹತ್ವವನ್ನು ತಿಳಿಯಪಡಿಸಿ ದೊರೆತ ಶಿಲಾ ಉಪಕರಣಗಳ ಮಹತ್ವವನ್ನು ತಿಳಿಸುವುದರ ಜೊತೆಗೆ ಈ ಪ್ರದೇಶವು ಆದಿಮಾನವನು ಜೀವಿಸಿದ್ದ ಆಯಕಟ್ಟಿನ ಸ್ಥಳವಾಗಿತ್ತೆಂಬುದಾಗಿ ಪ್ರಚುರಪಡಿಸಿರುವರು. ಅನಂತರ ೧೯೫೬ರಲ್ಲಿ ಪ್ರೊ. ಎಂ. ಶೇಷಾದ್ರಿಯವರು ಪುನರ್ ಅಧ್ಯಯನ ಕೈಗೊಂಡು ದೊರೆತ ಕೈಕೊಡಲಿ, ಕೊಕ್ಕಿನಾಕಾರದ ಉಪಕರಣ, ಸುತ್ತಿಗೆಕಲ್ಲು, ಬಾಣದ ಮೊನೆ, ಕಿರಿದಾದ ಉಳಿ, ದುಂಡಾದ ಎಸೆಗಲ್ಲು ಮೊದಲಾದ ಉಪಕರಣಗಳನ್ನು ಪತ್ತೆ ಹಚ್ಚುವ ಮೂಲಕ ಈ ನೆಲೆಯ ಮಹತ್ವವನ್ನು ಮತ್ತಷ್ಟು ವಿಸ್ತಾರವಾಗಿ ತಿಳಿಸಿದ್ದಾರೆ. ಮುಂದೆ, ಬ್ರಿಟಿಷ್ ಪುರಾತತ್ವಜ್ಞೆ ಅಲ್ಚಿನ್‌ರವರು ಸೂಕ್ಷ್ಮಶಿಲಾಯುಗ ಕಾಲದಲ್ಲೂ ಇದು ಒಂದು ಪ್ರಮುಖ ನೆಲೆಯಾಗಿತ್ತೆಂದು ತೋರಿಸಿಕೊಟ್ಟರು. ಇತ್ತೀಚಿನ ಕ್ಷೇತ್ರಕಾರ್ಯ ಸಮಯದಲ್ಲಿ ಸಮೀಪದ ಜಕ್ಕನಹಳ್ಳಿಯಲ್ಲಿ ನಂತರದ ಕಾಲಮಾನದ ಬೃಹತ್ ಶಿಲಾಯುಗ ಸಂಸ್ಕೃತಿಯ ಶಿಲಾವೃತ್ತಗೋರಿಗಳು ಕಂಡುಬಂದಿದ್ದು, ನಿರಂತರವಾಗಿ ಇದು ಜನವಸತಿ ಪ್ರದೇಶವಾಗಿತ್ತೆಂಬುದಾಗಿ ತಿಳಿದುಬರುತ್ತದೆ. ಕಿಬ್ಬನಹಳ್ಳಿಯ ಸುತ್ತಮುತ್ತಲಿರುವ ಕರಡಿ, ಕಾರೇಕುರ್ಚಿ, ಬೊಮ್ಮೇನಹಳ್ಳಿ, ರಜತಾದ್ರಿಪುರ, ಸಿಡ್ಲೇಹಳ್ಳಿ, ಹೊನ್ನೇಮಾರನಹಳ್ಳಿ, ಮೂಗನಾಯಕನಕೋಟೆ, ದೊಡ್ಡಗುಣಿ, ಅಪ್ಪಾನಹಳ್ಳಿ ಮೊದಲಾದ ನೆಲೆಗಳು ಸಹ ಇದರಂತೆಯೆ ಪ್ರಮುಖ ಶಿಲಾಯುಗ ನೆಲೆ ಎಂಬುದಾಗಿ ತಿಳಿದು ಬರುತ್ತದೆ. ಒಟ್ಟಾರೆ ಕಿಬ್ಬನಹಳ್ಳಿ ನೆಲೆಯು ವಿಶ್ವ ಪ್ರಾಗಿತಿಹಾಸ ಭೂಪಟದಲ್ಲಿ ಶಾಶ್ವತ ಸ್ಥಾನವನ್ನು ಪಡೆದುಕೊಂಡಿದೆ.

**ಕುದುವಟ್ಟಿ (ಬೇಚರಾಕ್)**: ಮಧುಗಿರಿ ಬೆಟ್ಟದ ಬುಡದಲ್ಲಿರುವ ಒಂದು ನಿರ್ವಸತಿ ಗ್ರಾಮ. ಈ ಗ್ರಾಮದ ಸಮೀಪ ಗೋಪಾಲಕೃಷ್ಣ, ಲಕ್ಷ್ಮೀದೇವಿ ಮತ್ತು ಕಂಬದರಾಯಸ್ವಾಮಿ ದೇವಾಲಯಗಳಿವೆ. ಇಲ್ಲಿ ಐದು ವೀರಗಲ್ಲುಗಳಿದ್ದು, ಯಾವುದೇ ಬರಹವಿಲ್ಲ. ಕಂಬದರಾಯ ದೇವಾಲಯದಲ್ಲಿ ಜೋಡಿ ಕಂಬಗಳಿದ್ದು, ಬಲಭಾಗದಲ್ಲಿ ರಾಮನ ಪಟ್ಟಾಭಿಷೇಕ ಹಾಗೂ ಎಡಗಡೆ ರಂಗನಾಥ ಜೊತೆಗೆ ತಂಬೂರ ಮತ್ತು ನಾರದ ಶಿಲ್ಪಗಳಿವೆ. ದೇವಾಲಯದ ಕಂಬಗಳಲ್ಲಿ ಹಲವು ಉಬ್ಬು ಶಿಲ್ಪಗಳನ್ನೂ ಬಿಡಿಸಲಾಗಿದೆ. ಇಲ್ಲಿಯ ಗೋಪಾಲಕೃಷ್ಣ, ಲಕ್ಷ್ಮೀದೇವಿ ದೇವಾಲಯ ಹಾಗೂ ಒಂದು ಕೊಳವನ್ನು ಭಕ್ತೆ ಜಿರಲೆ ಮಲ್ಲಮ್ಮ ಕಟ್ಟಿಸಿದ್ದೆಂದು ಹೇಳಲಾಗುತ್ತಿದೆ. ಈಕೆಯು ಈ ಗ್ರಾಮದ ಬೆಣ್ಣೆ ಮಾರುವವಳಾಗಿದ್ದು, ತನ್ನ ಆದಾಯದಿಂದ ಈ ನಿರ್ಮಾಣಗಳನ್ನು ಮಾಡಿಸಿದಳೆಂದು ಹೇಳಲಾಗುತ್ತದೆ.

**ಕುಣಿಗಲ್ (ಜನಸಂಖ್ಯೆ. ೩೦,೩೪೩)**: ಬೆಂಗಳೂರು–ಹಾಸನ ಮಾರ್ಗದಲ್ಲಿ ಬೆಂಗಳೂರಿನಿಂದ ೭೫ ಕಿ.ಮೀ. ಹಾಗೂ ತುಮಕೂರಿನಿಂದ ದಕ್ಷಿಣಕ್ಕೆ ೩೫ ಕಿ.ಮೀ. ದೂರದಲ್ಲಿರುವ ತಾಲೂಕು ಕೇಂದ್ರವಾಗಿದೆ. ಶಿವಗಂಗೆಯಲ್ಲಿ ಉದ್ಭವಿಸುವ ನಳಿನಿ, ನಾಗಿನಿ ಮತ್ತು ಕಮಲ ಎಂಬ ತೊರೆಗಳು ಇಲ್ಲಿಯೇ ಕುಣಿಗಲ್ಲಿನ ಕೆರೆಯಲ್ಲಿ ಸೇರಿಕೊಳ್ಳುತ್ತವೆ. ಕುಣಿಗಲ್ಲಿನ ಕೆರೆ ಜನಪದಗೀತೆಯೊಂದಕ್ಕೆ ಸ್ಫೂರ್ತಿ ನೀಡಿದೆ. ಸ್ಥಳೀಯ ಐತಿಹ್ಯದಂತೆ, ಉತ್ತರ ಭಾರತದ ನೃಗ ಎಂಬ ರಾಜನೊಬ್ಬ ಮೂರು ನದಿಗಳ ಈ ಸಂಗಮಸ್ಥಳದಲ್ಲಿ ಸ್ನಾನ ಮಾಡಿದನಂತೆ. ಆಗ ಅವನಿಗಿದ್ದ ಕುಷ್ಠರೋಗ ನಿವಾರಣೆಯಾದ್ದರಿಂದ ಆತನೇ ಈ ಬೃಹತ್ ಕೆರೆಯನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ. ಇದು ೨೩ ಕಿ.ಮೀ. ಸುತ್ತಳತೆಯನ್ನು ಹೊಂದಿದೆ.

'ಕುಣಿಗಲ್ಲು' ಸ್ಥಳನಾಮದ ನಿಷ್ಪತ್ತಿಗೆ ಸಂಬಂಧಿಸಿದಂತೆ ಎರಡು ಹೇಳಿಕೆಗಳಿವೆ. ಪ್ರಾಚೀನ ಶಾಸನಗಳಲ್ಲಿ 'ಕುಣುಂಗಿಲ', 'ಕುಣಿಂಗಿಲ್' ಎಂಬ ಶಬ್ಧ ಪ್ರಯೋಗವಿದೆ. ಇವು ಸಸ್ಯ ಮತ್ತು ಖನಿಜ ಸಂಪತ್ತನ್ನು ಸೂಚಿಸುವ ಪದಗಳೆಂಬುದಾಗಿ ತಿಳಿಯುತ್ತದೆ. ಪೌರಾಣಿಕ ಹಿನ್ನೆಲೆಯಂತೆ ಶಿವನು ನರ್ತಿಸಿದಾಗ ಅಲ್ಲಿದ್ದ ಕಲ್ಲುಗಳು ಕೂಡ ಕುಣಿದವಂತೆ, ಹಾಗಾಗಿ ಶಿವನ ಜೊತೆ ಕಲ್ಲುಗಳೂ ಕುಣಿದಿದ್ದರಿಂದ 'ಕುಣಿಗಲ್ಲು' ಎಂದಾಯಿತು ಎಂಬ ಅಭಿಪ್ರಾಯವಿದೆ. ಕುಣಿಗಲ್ಲಿನ ಇತಿಹಾಸ ಕ್ರಿ.ಶ. ೬ನೇ ಶತಮಾನದಿಂದ ಕಂಡು ಬರುತ್ತದೆ. ಕ್ರಿ.ಶ. ೭೮೫ರ ಶಾಸನದಂತೆ ಗಂಗ ಶಿವಮಾರ ಕುಣಿಂಗಿಲ್ ನಾಡಿನ ರಾಜ್ಯಪಾಲನಾಗಿದ್ದನು. ಇದೇ ರೀತಿ ಚಾಲುಕ್ಯ ವಿಮಲಾದಿತ್ಯನು ಕುಣಿಂಗಿಲ್ ೫೦೦ ವಿಭಾಗದ ರಾಜ್ಯಪಾಲನಾಗಿದ್ದನು. ಚೋಳರ ಆಳ್ವಿಕೆಯಲ್ಲಿ 'ಕುಣಿಗಲ್ಲು', 'ರಾಜೇಂದ್ರ ಚೋಳಪುರಂ' ಎಂಬ ಅಭಿದಾನವನ್ನು ಪಡೆದಿತ್ತು. ಹೊಯ್ಸಳರ ಆಳ್ವಿಕೆಯಲ್ಲಿ ಇದೊಂದು ಅಗ್ರಹಾರವಾಗಿತ್ತು. ಇಲ್ಲಿಯ ಸೋಮೇಶ್ವರ ದೇವಾಲಯ ಚಾರಿತ್ರಿಕ ಮಹತ್ವ ಪಡೆದಿದ್ದು ಉಲ್ಲೇಖಾರ್ಹವಾಗಿದೆ.

ಕುಣಿಗಲ್ ಕೋಟೆಯ ನಿರ್ಮಾಣವನ್ನು ರಾಷ್ಟ್ರಕೂಟ ದೊರೆ ಒಂದನೇ ಧ್ರುವನ ಮಗ ವೀರಕಂಬರಾಯನು ಮಾಡಿಸಿದನೆಂದು ತಿಳಿದು ಬರುತ್ತದೆ. ಇದಕ್ಕೆ ನಾಲ್ಕು ದ್ವಾರಗಳಿದ್ದು, ಒಂದಕ್ಕೆ ಮೈಸೂರು ಹೆಬ್ಬಾಗಿಲು ಎಂದು ಹೇಳುತ್ತಿದ್ದರೆಂದು ತಿಳಿಯುತ್ತದೆ. ಅನಂತರ ಮಾಗಡಿಯ ನಾಯಕನು ಕೋಟೆಯನ್ನು ವಿಸ್ತರಿಸಿದನೆಂದು ತಿಳಿಯುತ್ತದೆ. ವಿಜಯನಗರದರಸರಾದ ಕೃಷ್ಣದೇವರಾಯ, ಅಚ್ಯುತರಾಯ ಹಾಗೂ ಸದಾಶಿವರಾಯರ ಪ್ರಾಬಲ್ಯ ಕುಣಿಗಲ್ ಮೇಲೆ ಇದ್ದುದನ್ನು ಶಾಸನಗಳು ಉಲ್ಲೇಖಿಸುತ್ತವೆ.

ಕುಣಿಗಲ್, ಕುದುರೆ ಸಾಕಾಣಿಕೆಗೆ ಪ್ರಸಿದ್ಧವಾಗಿದೆ. ೧೭೫ ವರ್ಷಗಳಿಂದಲೂ ಅಶ್ವವರ್ಧನಶಾಲೆ (ಸ್ಟಡ್ ಫಾರ್ಮ್) ಇದ್ದು ಅಂತಾರಾಷ್ಟ್ರೀಯ ಖ್ಯಾತಿಯ ಅಶ್ವಗಳು ಇಲ್ಲಿ ತರಬೇತಿ ಪಡೆಯುತ್ತವೆ. ರಂಗಭೂಮಿ, ಚಿತ್ರರಂಗ ಹಾಗೂ ಸಾಹಿತ್ಯಾಭಿವೃದ್ಧಿಗೂ ಕುಣಿಗಲ್ ಕೊಡುಗೆ ನೀಡಿದೆ. ಇಲ್ಲಿನ ಹುಲಿಯೂರು ದುರ್ಗದಲ್ಲಿ ಮೊಗಲರ ಹಾಗೂ ಮರಾಠರ ಪ್ರಾಬಲ್ಯವನ್ನು ಸೂಚಿಸುವ ಹಲವು ಕುರುಹುಗಳಿವೆ. ಮೈಸೂರು ಒಡೆಯರು, ಹೈದರ್ ಮತ್ತು ಟಿಪ್ಪುವಿನ ಕಾಲದಲ್ಲಿ ಹುಲಿಯೂರು ಮತ್ತು ಹುತ್ರಿದುರ್ಗಗಳು ಪ್ರಾಮುಖ್ಯ ಪಡೆದಿದ್ದು, ಮಾಗಡಿ ಕೆಂಪೇಗೌಡ ಹುತ್ರಿದುರ್ಗಕೋಟೆಯನ್ನು ನಿರ್ಮಿಸಿದ್ದೆಂದು ತಿಳಿದು ಬರುತ್ತದೆ.

**ಕುಪ್ಪೂರು (ಜನಸಂಖ್ಯೆ.೧,೦೩೮)**: ಇದು ತಾಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಿಂದ ೧೧ಕಿ.ಮೀ. ದೂರದಲ್ಲಿರುವ ಗ್ರಾಮವಾಗಿದ್ದು ಇಲ್ಲಿ ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ಗದ್ದುಗೆ ಇದ್ದು, ಪ್ರತೀವರ್ಷ ಉತ್ಸವವು ಬಹು ವಿಜೃಂಭಣೆಯಿಂದ ನಡೆಯುತ್ತದೆ.

**ಕೆರೆಗೋಡಿ (ಜನಸಂಖ್ಯೆ. ೧,೨೨೪) – ರಂಗಾಪುರ (ಜನಸಂಖ್ಯೆ. ೧,೨೪೫):** ಈ ಜೋಡಿ ಗ್ರಾಮಗಳು ತಾಲೂಕು ಕೇಂದ್ರ ತಿಪಟೂರಿನಿಂದ ಆರು ಕಿ.ಮೀ. ದಕ್ಷಿಣಕ್ಕಿವೆ. ಕೆರೆಗೋಡಿ ರಂಗಾಪುರದ ಶ್ರೀಮಠವು ಮೂರುನೂರು ವರ್ಷಗಳಷ್ಟು ಇತಿಹಾಸವನ್ನು ಹೊಂದಿದೆ. ಶ್ರೀಮಠವು ಶ್ರೀವೈಷ್ಣವ–ಶೈವ ಧರ್ಮಗಳ ಸಂಗಮ ಕ್ಷೇತ್ರವಾಗಿದೆ. ಕೆರೆಗೋಡಿ ರಂಗಾಪುರದ ಶಂಕರೇಶ್ವರ ದೇವಾಲಯ ಬಹು ಪ್ರಾಚೀನವಾದುದು. ಶಂಕರೇಶ್ವರ ದೇವಾಲಯ ಕೆರೆಗೋಡಿಯ ಕೆರೆಯ ಏರಿಯ ಮೇಲಿದೆ. ಗರ್ಭಗುಡಿಗೆ ಮೂರು ಭಾಗವಿದ್ದು, ಮಧ್ಯದಲ್ಲಿ ಶಂಕರೇಶ್ವರ ಹಾಗೂ ಅಕ್ಕಪಕ್ಕದಲ್ಲಿ ಪಾರ್ವತಿ ಮತ್ತು ಗಣಪತಿಯ ಮೂರ್ತಿಗಳಿವೆ. ನಿತ್ಯಪೂಜೆಯ ಜೊತೆಗೆ ಮಾರ್ಚ್ ತಿಂಗಳಿನಲ್ಲಿ ಜಾತ್ರೆ ವಿಶೇಷವಾಗಿ ನಡೆಯುತ್ತದೆ. ಶಂಕರೇಶ್ವರ ದೇವಾಲಯದ ಒಳಗೆ, ಜಗಲಿಯ ಮೇಲ್ಛಾವಣಿ ಮೊದಲಾದೆಡೆಗಳಲ್ಲಿರುವ ಭಿತ್ತಿಚಿತ್ರಗಳಲ್ಲಿ ತ್ರಿಪುರಸಂಹಾರ, ರಾಮಾಯಣ ಹಾಗೂ ಶಿವನ ಇಪ್ಪತ್ತೈದು ಶಿವಲೀಲೆಗಳನ್ನು ಚಿತ್ರಿಸಲಾಗಿದೆ. ಈ ಭಿತ್ತಿಚಿತ್ರಗಳು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ್ದೆಂದು ಹೇಳಲಾಗುತ್ತದೆ.

ಪಕ್ಕದಲ್ಲಿಯೇ ರಂಗನಾಥಸ್ವಾಮಿ ದೇವಾಲಯ ಹಾಗೂ ಮಠಗಳಿದ್ದು ಶ್ರೀವೈಷ್ಣವರ ಪುಣ್ಯ ಕ್ಷೇತ್ರವಾಗಿದೆ. ರಂಗನಾಥ ದೇವಾಲಯವು ಟಿಪ್ಪು ಕಾಲದ್ದೆಂದು ಹೇಳಲಾಗುತ್ತದೆ. ಶೈವ–ವೈಷ್ಣವ ಪೂಜಾವಿಧಿಗಳನ್ನು ಇಲ್ಲಿ ವೀರಶೈವ ಅರ್ಚಕರು ನೆರವೇರಿಸುತ್ತಾರೆ. ಇದೇ ದೇವಾಲಯದಲ್ಲಿರುವ ಪಾರಂಪರಿಕ ಚಿತ್ರಕಲೆಯ ಅಭಿವ್ಯಕ್ತಿಯಲ್ಲಿ ಮೈಸೂರು ಸಂಪ್ರದಾಯವನ್ನು ಬಳಸಲಾಗಿದ್ದು, ಶ್ರೀರಂಗಪಟ್ಟಣದ ಅರಮನೆಯ ಚಿತ್ರಕಲೆಯನ್ನೇ ಹೋಲುತ್ತವೆ. ದೇವಾಲಯದಲ್ಲಿ ಬೃಂದಾವನ, ನಾಗರಕಲ್ಲು, ಗಣಪತಿ ಮೊದಲಾದ ಮೂರ್ತಿ ಶಿಲ್ಪಗಳಿವೆ. ಅನತಿ ದೂರದಲ್ಲಿ ಬಸವೇಶ್ವರ ದೇವಾಲಯ ಹಾಗೂ ಗದ್ದುಗೆಗಳಿವೆ.

ಶ್ರೀ ಗುರು ಪರದೇಶಿಕೇಂದ್ರ ಸ್ವಾಮಿ ಹಾಗೂ ಇತರ ಸ್ವಾಮಿಗಳ ಪರಿಶ್ರಮದಿಂದಾಗಿ ಹೆಚ್ಚಿನ ಅಭಿವೃದ್ಧಿಹೊಂದಿ, ಗದ್ದುಗೆವನದ ನಿರ್ಮಾಣ, ಪೂಜೆ, ಪ್ರಾರ್ಥನೆ, ಭಜನೆ, ನಿತ್ಯದಾಸೋಹ, ಧಾರ್ಮಿಕ ಕಾರ್ಯಗಳು ನಿರಂತರವಾಗಿ ಸಾಗಿಬರುತ್ತಿವೆ. ಜ್ಞಾನ ದಾಸೋಹವನ್ನು ನೀಡುವ ಸಲುವಾಗಿ "ಶ್ರೀ ಪರದೇಶಿಕೇಂದ್ರ ಸ್ವಾಮೀಜಿ ವಿದ್ಯಾಪೀಠ" ಸ್ಥಾಪಿಸಿದ್ದು, ವೇದ, ಸಂಸ್ಕೃತ–ಜ್ಯೋತಿಷ್ಯ ಅಧ್ಯಯನಕ್ಕೂ ಆದ್ಯತೆ ನೀಡಲಾಗಿದೆ. ಈ ಕ್ಷೇತ್ರದಲ್ಲಿ ಅನಾಥಾಲಯವನ್ನು ಸ್ಥಾಪಿಸಿದ್ದು ದಿಕ್ಕಿಲ್ಲದವರಿಗೆ ಆಶ್ರಯಧಾಮವಾಗಿದೆ.

**ಕೈದಾಳ (ಜನಸಂಖ್ಯೆ. ೧,೫೩೧):** ತುಮಕೂರಿನಿಂದ ಐದು ಕಿ.ಮೀ. ದಕ್ಷಿಣಕ್ಕಿರುವ ಚಾರಿತ್ರಿಕ ಸ್ಥಳ. ಇದನ್ನು ಹಿಂದೆ 'ಕ್ರೀಡಾಪುರ'ವೆಂದು ಕರೆಯುತ್ತಿದ್ದರು. ಕ್ರಿ.ಶ. ೧೧೫೦–೫೧ರಲ್ಲಿ ಹೊಯ್ಸಳ ದೊರೆ ಮೊದಲನೆಯ ನರಸಿಂಹನ ಸಾಮಂತ ಗೂಳೀಬಾಚಿಯು ಇಲ್ಲಿ ಶಿವ, ವಿಷ್ಣು ಮತ್ತು ಜಿನದೇವಾಲಯಗಳನ್ನು ನಿರ್ಮಿಸಿದನೆಂದು ಶಾಸನದಿಂದ ತಿಳಿದುಬರುತ್ತದೆ. ಈಗ ಚನ್ನಕೇಶವ ಮತ್ತು ಗಂಗಾಧರೇಶ್ವರ ದೇವಾಲಯಗಳು ಮಾತ್ರ ಉಳಿದಿವೆ.

'ಕಯ್ದಾಳ', 'ಕೈದಾಳ'ನಾಮ ನಿಷ್ಪತ್ತಿಗೆ ಸಂಬಂಧಿಸಿದಂತೆ ಐತಿಹ್ಯವೊಂದಿದ್ದು ಶಿಲ್ಪಿ ಜಕಣಾಚಾರಿಯು ಬೇಲೂರು ಚೆನ್ನಕೇಶವ ಮೂರ್ತಿಯನ್ನು ಕೆತ್ತಿದಾಗ ಆತನ ಮಗ ಡಕಣಾಚಾರಿಯು ಅದರಲ್ಲಿದ್ದ ದೋಷವನ್ನು ತೋರಿಸಲು ಜಕಣಾಚಾರಿಯು ತನ್ನ ಕೈಗಳನ್ನು ಕತ್ತರಿಸಿಕೊಂಡು ತನ್ನ ಜನ್ಮಸ್ಥಳ ಕ್ರೀಡಾಪುರಕ್ಕೆ ಬಂದನೆಂದು, ನಂತರ ಇಲ್ಲಿ ಚೆನ್ನಿಗರಾಯನ ಮೂರ್ತಿಯನ್ನು ನಿರ್ಮಿಸಿದ್ದರಿಂದ ಆತನಿಗೆ ಮತ್ತೆ ಕೈ ಬಂದಿದ್ದರಿಂದ ಈ ಊರಿಗೆ ಕೈದಾಳವೆಂದು ಕರೆಯಲಾಗುತ್ತದೆಂಬ ಐತಿಹ್ಯವಿದೆ. ಆದರೆ ಈ ಕಟ್ಟುಕತೆಯನ್ನು ಇತಿಹಾಸವೆಂದು ಅನೇಕರು ನಂಬಿರುವುದು ಅಭಾಸಕರವಾಗಿದೆ. ಈ ಬಗ್ಗೆ ಕರ್ನಾಟಕ ಸರ್ಕಾರವು ಮರುಪರಿಶೀಲನೆ ಮಾಡುವುದು ಸೂಕ್ತವಾಗಿದೆ.

ಚನ್ನಕೇಶವ ದೇವಾಲಯದ ಮೂಲ ವಿಗ್ರಹವು ಹೊಯ್ಸಳರ ಕಾಲದ್ದಾಗಿದ್ದು, ದೇವಾಲಯದ ಮಹಾದ್ವಾರ ಹಾಗೂ ಅದರ ಮೇಲಿರುವ ಗೋಪುರ ವಿಜಯನಗರ ಕಾಲಕ್ಕೆ ಸೇರಿದವುಗಳಾಗಿವೆ. ಚೆನ್ನಿಗರಾಯ ವಿಗ್ರಹವು ಅತ್ಯಂತ ಅಪರೂಪದ್ದಾಗಿದೆ. ಪ್ರಭಾವಳಿಯ ಸುತ್ತ ದಶಾವತಾರ ಕೆತ್ತನೆಯನ್ನು ಹೊಂದಿದೆ. ವಿಗ್ರಹ ಐದು ಅಡಿ ಇದ್ದು ಪೀಠ ಎಂಟು ಅಡಿ ಇದೆ. ಉಭಯ ಪಾರ್ಶ್ವಗಳಲ್ಲಿ ಶ್ರೀದೇವಿ–ಭೂದೇವಿಯರ ವಿಗ್ರಹವಿದೆ. ನವರಂಗದ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿವೆ. ಮಹಾದ್ವಾರದ ಎದುರುಗಡೆ ಕಂಬದ ಮೇಲೆ ಕೇಶವನ ಚಿಕ್ಕ ಮೂರ್ತಿ ಇದೆ. ಈ ಕಂಬಕ್ಕೆ ಎದುರಾಗಿ ಮೂರು ಅಡಿ ಎತ್ತರದ ವೀರನ ಅಂಜಲೀಬದ್ಧ ವಿಗ್ರಹವಿದೆ. ಇದು ಸಾಮಂತ ಗೂಳಿಬಾಚಿಯ ಶಿಲ್ಪವಿರಬೇಕು.

ಉತ್ತರದ ಪ್ರಾಕಾರದಲ್ಲಿರುವ ಎರಡು ಉಬ್ಬು ಶಿಲ್ಪಗಳು ಸವೆದಿದ್ದು, ಅವುಗಳನ್ನು ಜಕಣಾಚಾರಿ ಮತ್ತು ಡಕಣಾಚಾರಿಯದ್ದು ಎಂದು ಜನರು ನಂಬಿದ್ದಾರೆ.

ಚನ್ನಕೇಶವ ದೇವಾಲಯದ ಪೂರ್ವಭಾಗಕ್ಕೆ ದ್ರಾವಿಡ ಶೈಲಿಯ ಗಂಗಾಧರೇಶ್ವರ ದೇವಾಲಯವಿದ್ದು, ನವರಂಗದಲ್ಲಿ ಹೊಯ್ಸಳ ಶೈಲಿಯ ಕರಿಕಲ್ಲಿನ ನಾಲ್ಕು ಕಂಬಗಳಿದ್ದು, ಕಂಬದ ತಳಭಾಗದ ನಾಲ್ಕೂ ಪಕ್ಕಗಳಲ್ಲೂ ಶಿವ, ಬ್ರಹ್ಮ, ವಿಷ್ಣು, ಭೈರವ, ಕೃಷ್ಣ, ಗಣಪತಿ, ವೀರಭದ್ರ ಮೊದಲಾದ ಉಬ್ಬು ಶಿಲ್ಪಗಳನ್ನು ರೂಪಿಸಲಾಗಿದೆ. ನವರಂಗದ ಹೊರ ಗೋಡೆಯಲ್ಲಿ ಆನೆಗಳ ಹಾಗೂ ಹೂವಿನ ಚಿತ್ರಪಟ್ಟಿಕೆಯ ಅಲಂಕರಣವಿದೆ. ಗಂಗಾಧರೇಶ್ವರ ದೇವಾಯವು ಬಹಳ ಶಿಥಿಲವಾಗಿದ್ದರಿಂದ ಇತ್ತೀಚೆಗೆ ಧರ್ಮಸ್ಥಳ ಪುನರುತ್ಥಾನ ಸಮಿತಿಯ ಸಹಾಯದಿಂದ ಅದನ್ನು ಜೀರ್ಣೋದ್ಧಾರ ಮಾಡಲಾಗಿದೆ.

ಕೈದಾಳವು ಒಂದು ಸಾಮಂತಮನೆತನದ ಆಡಳಿತಕ್ಕೆ ಒಳಪಟ್ಟಿದ್ದ ವಿಷಯವನ್ನು ಇಲ್ಲಿನ ಹಾಗೂ ಸಮೀಪದ ಕೊಂಡಾಪುರದಲ್ಲಿ ಹೊಸದಾಗಿ ದೊರೆತಿರುವ ಶಿಲಾಶಾಸನಗಳು ತಿಳಿಸುತ್ತವೆ. ಗೂಳಿಬಾಚಿಯು ತನ್ನ ತಂದೆಯ ಹೆಸರಿನಲ್ಲಿ ಗಂಗೇಶ್ವರ(ಈಗಿನ ಗಂಗಾಧರೇಶ್ವರ) ಹಾಗೂ ಮುತ್ತಾತನಾದ ಚಲವಣಿವನ ಹೆಸರಿನಲ್ಲಿ ಚಲವಣೀಶ್ವರ ದೇವಾಲಯವನ್ನೂ, ನಾರಾಯಣ ಅಥವಾ ಕೇಶವ (ಈಗ ಚನ್ನಕೇಶವ) ದೇವಾಲಯಗಳನ್ನು, ದೊಡ್ಡ ಕೆರೆಯನ್ನು ಕಟ್ಟಿಸಿ ಅದರ ಅಚ್ಚುಕಟ್ಟಿಗೆ ಹಾಗೂ ದೇವಾಲಯದ ಪೂಜಾವಿಧಿಗೆ ಈಗಿನ ದಿಬ್ಬೂರು, ಕೈದಾಳ ಮತ್ತು ಕಿತ್ತಗಾನಹಳ್ಳಿಗಳಲ್ಲಿ ಗದ್ದೆಯನ್ನು ನೀಡಿರುವುದಾಗಿ ತಿಳಿದುಬರುತ್ತದೆ. ಊರ ಹೊರಗಿರುವ ರಾಮೇಶ್ವರ ಮತ್ತು ಗೌರೀಶ್ವರ ದೇವಾಲಯಗಳು ಶಿಥಿಲಾವಸ್ಥೆಯಲ್ಲಿವೆ. ರಾಮೇಶ್ವರ ದೇಗುಲ ಗೂಳಿಬಾಚಿಯ ಮಗಳ ಸ್ಮಾರಕ. ಅಲ್ಲಿಯೇ ಅನೇಕ ವೀರಗಲ್ಲುಗಳಿವೆ. ಊರಿನ ದಕ್ಷಿಣಕ್ಕೆ ಎತ್ತರದ ದಿಣ್ಣೆಯ ಮೇಲೆ ಶೂಲಗಂಬದ ಆಂಜನೇಯ ದೇವಾಲಯವಿದೆ.

ಕೈದಾಳದಲ್ಲಿ ಆರು ವೀರಗಲ್ಲುಗಳಿವೆ. ಇವುಗಳಲ್ಲಿ ನಾಲ್ಕು ರಾಮೇಶ್ವರ ದೇವಾಲಯದಲ್ಲೂ, ಒಂದು ಪ್ರಸನ್ನ ಗಂಗಾಧರೇಶ್ವರ ದೇವಾಲಯದ ಬಳಿ ಹಾಗೂ ಮತ್ತೊಂದು ಕೆರೆಯ ಪಶ್ಚಿಮ ಕೋಡಿಗೆ ಹೋಗುವ ದಾರಿಯಲ್ಲಿ ತಿಪ್ಪೆ ಗುಂಡಿಯ ಬಳಿ ಇದೆ. ಒಂದು ವೀರಗಲ್ಲಿನ ಮಧ್ಯಭಾಗದಲ್ಲಿ ಹುಲಿಯನ್ನು ಕೊಲ್ಲುತ್ತಿರುವ ವೀರನಚಿತ್ರ ಹಾಗೂ ಶಾಸನವೂ ಇದೆ. ಇದು ೧೨ನೇ ಶತಮಾನದ್ದಾಗಿದೆ.

**ಕೊಂಡಾಪುರ (ಜನಸಂಖ್ಯೆ. ೨೩೦)**: ಗೂಳೂರಿಗೆ ಒಂದು ಕಿ.ಮೀ. ನೈಋತ್ಯಕ್ಕಿದ್ದು, ಕೊಂಡಶೆಟ್ಟಿಯು ಇಲ್ಲಿ ಕೆರೆಯೊಂದನ್ನು ಕಟ್ಟಿಸಿದನೆಂದೂ, ಅವನ ನೆನಪಿಗಾಗಿ ಈ ಗ್ರಾಮಕ್ಕೆ 'ಕೊಂಡಾಪುರ'ವೆಂದು ಕರೆಯಲಾಗಿದೆ ಎಂದು ಹೇಳಲಾಗುತ್ತದೆ. ಇಲ್ಲಿ ಜೀರ್ಣೋದ್ಧಾರಗೊಂಡಿರುವ ಆಂಜನೇಯ ದೇವಸ್ಥಾನವಿದೆ. ಅಲ್ಲಿಯೇ ಇರುವ ಹೊಯ್ಸಳರ ಶಿಲಾಶಾಸನದಲ್ಲಿ ಒಂದನೇ ನರಸಿಂಹನ ಸಾಮಂತಾಧಿಪತಿಯಾಗಿದ್ದ ಮರುಗೆರೆಯ ಗೂಳಿಬಾಚಿಯ ವಂಶಸ್ಥರ ವಿವರವಿದೆ. ಇವನು ಶೈವನಾಗಿದ್ದು ಆತನ ಸತಿ ಭೀಮಲೆ ಜೈನಳಾಗಿದ್ದಿರಬೇಕೆಂದು ತೋರುತ್ತದೆ. ಗೂಳಿಬಾಚಿಯು ತನ್ನ ತಾತ, ತಂದೆಯರ ಜೊತೆಗೆ ಪತ್ನಿ ಮತ್ತು ಮಗಳನ್ನೂ ಕಳೆದುಕೊಂಡಿದ್ದನೆಂದೂ, ಅವರ ನೆನಪಿಗೆ ಜಿನಾಲಯ, ಶಿವಾಲಯ ಹಾಗೂ ವಿಷ್ಣುದೇವಾಲಯಗಳನ್ನು ನಿರ್ಮಿಸಿದನೆಂದೂ ಹೇಳಲಾಗಿದೆ. ಜೊತೆಗೆ ಈತನು ಈಗಿನ ದಿಬ್ಬೂರು, ಕೈದಾಳ ಮತ್ತು ಕಿತ್ತಗಾನಹಳ್ಳಿಗಳ ವ್ಯಾಪ್ತಿಯಲ್ಲಿ ಕೆರೆಗಳನ್ನು ನಿರ್ಮಿಸಿ, ಅಲ್ಲಿನ ಗದ್ದೆ ಭೂಮಿಯನ್ನು ಎಲ್ಲಾ ದೇವರುಗಳ ಪೂಜಾ ಕೈಂಕರ್ಯಕ್ಕೆ, ಕೆರೆಗಳ ದುರಸ್ತಿಗೆ ಹಾಗೂ ಬ್ರಾಹ್ಮಣರ ಆಹಾರ ದಾನಕ್ಕೂ ದತ್ತಿ ನೀಡಿರುವ ವಿವರ ದೊರಕುತ್ತದೆ. ಈ ಶಾಸನದಲ್ಲಿ ಕೈದಾಳವನ್ನು 'ಕಯ್ದಾಳ' ಎಂದು ಬರೆಯಲಾಗಿದೆ. ಈ ಶಾಸನವನ್ನು ಸಾಮಂತ ಗೂಳಿಬಾಚಿಯ ಸೇನಬೋವನಾದ ಮಾರಮಯ್ಯನು ಕ್ರಿ.ಶ. ೧೧೫೦ರಲ್ಲಿ ಬರೆಯಿಸಿದ್ದೆಂದು ತಿಳಿದುಬರುತ್ತದೆ. ಕೈದಾಳವು ಮರುಗೆರೆ ನಾಡಿನ ಸಾಮಂತಾಧಿಪತಿಗಳ ಒಂದು ಕೇಂದ್ರ ಸ್ಥಾನವಾಗಿದ್ದಿತೆಂದು ಈ ಶಾಸನದಿಂದ ವೇದ್ಯವಾಗುತ್ತದೆ.

**ಕೊನೇಹಳ್ಳಿ (ಜನಸಂಖ್ಯೆ. ೨೧೭)**: ಇದು ತಾಲೂಕು ಕೇಂದ್ರ ತಿಪಟೂರಿನಿಂದ ಪಶ್ಚಿಮಕ್ಕೆ ೧೩ ಕಿ.ಮೀ. ದೂರದಲ್ಲಿದೆ. ಜಿಲ್ಲೆಯ ಕೊನೆಯ ಗ್ರಾಮವಾದ್ದರಿಂದ ಇದಕ್ಕೆ 'ಕೊನೇಹಳ್ಳಿ' ಎಂಬ ಹೆಸರು ಬಂತೆಂಬ ಅಭಿಪ್ರಾಯವಿದೆ. ಇಲ್ಲಿರುವ ಬಯಲಾಟ ಕಲಾಮಂಡಳಿ ಬಹಳ ಹೆಸರುವಾಸಿಯಾಗಿದೆ. ಇವರ ಯಕ್ಷಗಾನ ಬಯಲಾಟ ಜೀವಂತ ಕಲೆಯಾಗಿದೆ. ಇದನ್ನು ಮೂಡಲಪಾಯ, ದೊಡ್ಡಾಟ ಮೇಳ ಎಂದೆಲ್ಲಾ ಕರೆಯುತ್ತಾರೆ. ಇವರ ಹಾಡುಗಾರಿಕೆ, ಮಾತುಗಾರಿಕೆ, ಸಂಗೀತ, ಸಾಹಿತ್ಯ, ಸಮ್ಮಿಶ್ರ ಸಂಭಾಷಣೆಗಳು, ಭೂಷಣಗಳಲ್ಲಿನ ಕಿರೀಟ, ಭುಜಕೀರ್ತಿ, ಮಣಿಹಾರ, ನಡುಪಟ್ಟಿ, ಕೈಉಂಗುರ,

ಕಾಲ್ಗೆಜ್ಜೆ ಹಾಗೂ ಬಣ್ಣದ ವಸ್ತ್ರ, ಉಡುಗೆ ವಿಶಿಷ್ಟವಾಗಿವೆ. ಇವರ ಕಥಾವಸ್ತು ಕರಿಭಂಟ, ರಾಮಾಯಣ, ಕರ್ಣಾರ್ಜುನ ಕಾಳಗ, ಶನಿಮಹಾತ್ಮೆ ಮೊದಲಾದವುಗಳಾಗಿವೆ. ಕಥಾಪ್ರಸಂಗಗಳಲ್ಲಿ ವಿವಿಧ ರೀತಿಯ ಹಿನ್ನೆಲೆ ವಾದ್ಯಗಳ ಬಳಕೆ ಇದ್ದು, ಭಾಗವತರೇ ನಿರ್ದೇಶಕರಾಗಿರುತ್ತಾರೆ.

ಈ ಊರು ಕರಪಾಲ ಮೇಳಕ್ಕೂ ಹೆಸರುವಾಸಿಯಾಗಿದೆ. ಹಾಡು, ಸಾಹಿತ್ಯ, ಸಂಗೀತ, ನೃತ್ಯಗಳ ಮೂಲಕ ಮೇಳದ ಕತೆ ಸಾಗುತ್ತದೆ. ಮೂಲ ಗಾಯಕರ ಜೊತೆಗೆ ಇನ್ನಿಬ್ಬರಿದ್ದು, ಇವರ ವೇಷ ಭೂಷಣ, ಕುಣಿತ ಮತ್ತು ಹಾಡು ಅತ್ಯಾಕರ್ಷಕವಾದವುಗಳು. ಹೀಗೆ ಈ ಗ್ರಾಮ ಜಾನಪದ ಸಿರಿ ಸಂಪತ್ತನ್ನು ಹೊಂದಿರುವ ಗ್ರಾಮವಾಗಿದೆ. ಇಲ್ಲಿಯೇ ವಿಸ್ತಾರವಾದ ಪ್ರದೇಶದಲ್ಲಿ ಕೃಷಿ ಸಂಶೋಧನಾ ಕೇಂದ್ರವಿದೆ.

**ಕೊಟ್ಟ(ತ್ತ)ಗೆರೆ (ಜನಸಂಖ್ಯೆ. ೧,೯೮೧)**: ತಾಲೂಕು ಕೇಂದ್ರ ಕುಣಿಗಲ್ ಪಟ್ಟಣದ ಉತ್ತರಕ್ಕೆ ತುಮಕೂರು–ಕುಣಿಗಲ್ ರಸ್ತೆಯಲ್ಲಿರುವ ಧಾರ್ಮಿಕ ಹಾಗೂ ಸಾಮಾಜಿಕ ಮಹತ್ವದ ಸ್ಥಳ. ಹಿಂದೆ, ಈ ಗ್ರಾಮವನ್ನು ಸಿದ್ಧಾಪುರ ಎಂದು ಕರೆಯಲಾಗುತ್ತಿದ್ದು, ಹೊಯ್ಸಳ ವಿಷ್ಣುವರ್ಧನನ ಕ್ರಿ.ಶ. ೧೧೫೮ರ ಶಾಸನವು ಈ ಗ್ರಾಮವನ್ನು ಅಗ್ರಹಾರವನ್ನಾಗಿಸಿ **'ಶ್ರೀಧರಪುರ'** ಎಂದು ಕರೆದು, ದತ್ತಿ ನೀಡಿದ್ದನ್ನು ದಾಖಲಿಸಿದೆ. ವಿಷ್ಣುವರ್ಧನನಿಗೆ ಮಗ ನರಸಿಂಹ ಜನಿಸಿದ ನೆನಪಿಗೆ ಮನೆವೆಗ್ಗಡೆ ಬಿಲುಪಯ್ಯ ದಂಡನಾಯಕನು ಉದಯಣ್ಣನಿಗೆ ಹೇಳಿ ದಾನದ ಕಾರ್ಯ ಮಾಡಲಾಗಿದೆ ಎಂದು ಶಾಸನ ತಿಳಿಸುತ್ತದೆ. ಇಲ್ಲಿನ ಕೋಟೇಶ್ವರ ದೇವಸ್ಥಾನ ಶಿಥಿಲವಾಗಿದೆ. ದೇವಾಲಯವು ದ್ರಾವಿಡ ಶೈಲಿಯಲ್ಲಿದ್ದು, ಪೂರ್ವ ಮತ್ತು ದಕ್ಷಿಣಕ್ಕೆ ದ್ವಾರವನ್ನು ಹೊಂದಿದೆ. ಕೋಟಪ್ಪನೆಂಬಾತನು ಗೋಸಾಯಿಗಳ ನೆರವಿನೊಂದಿಗೆ ಇದನ್ನು ನಿರ್ಮಿಸಿದ್ದೆಂದು ತಿಳಿದುಬರುತ್ತದೆ. ಇಲ್ಲಿಯೇ ಜೈನ ಬಸದಿಯ ಅವಶೇಷಗಳು ಕಂಡುಬಂದಿವೆ. ಸಮೀಪದಲ್ಲಿಯೇ ಕೆರೆಯೊಂದನ್ನು ನಿರ್ಮಿಸಲಾಗಿತ್ತೆಂದು ಶಾಸನದಿಂದ ತಿಳಿಯುತ್ತದೆ.

**ಕೊರಟಗೆರೆ (ಜನಸಂಖ್ಯೆ. ೧೩,೬೫೫)**: ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಒಂದಾಗಿದ್ದು, ತುಮಕೂರಿಗೆ ೨೪ಕಿ.ಮೀ ದೂರದಲ್ಲಿದೆ. ಕೊರಟಗೆರೆ ಬೆಟ್ಟವು ತೆಂಗಿನ ಕರಟದ ಆಕಾರದಲ್ಲಿರುವುದರಿಂದ **'ಕರಟಗಿರಿ'** ಎಂಬ ಹೆಸರನ್ನು ಪಡೆದಿದ್ದು ಕಾಲಾಂತರದಲ್ಲಿ ಅದೇ **'ಕೊರಟಗೆರೆ'** ಆಯಿತೆಂದು ಹೇಳಲಾಗುತ್ತದೆ. ಈ ಬೆಟ್ಟದ ಕೋಟೆಯನ್ನು ಸ್ಥಳೀಯರಾದ ಹೊಳವನಹಳ್ಳಿ–ಕೊರಟಗೆರೆ ಪಾಳೆಯಗಾರರು ನಿರ್ಮಿಸಿದರು. ಇಲ್ಲಿನ ದೇವಾಲಯಗಳಲ್ಲಿ ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯ ದೊಡ್ಡದಿದ್ದು, ನರಸಿಂಹಸ್ವಾಮಿಯ ಗುಡಿಯೂ ಇಲ್ಲಿದೆ. ಬೆಟ್ಟದ ಮಧ್ಯದಲ್ಲಿರುವ ಶ್ರೀ ಗಂಗಾಧರಸ್ವಾಮಿ ದೇವಾಲಯ ಹಾಗೂ ಬೆಟ್ಟದ ಶಿಖರದಲ್ಲಿ ಬಸವನಗುಡಿಗಳು ಪ್ರಮುಖವಾಗಿವೆ.

ಊರನ್ನೂ ಒಳಗೊಂಡಂತೆ ಕೊರಟಗೆರೆಯ ಸುತ್ತ ಏಳುಸುತ್ತಿನ ಕೋಟೆಯಿದ್ದು ಹಲವೆಡೆ ಭಗ್ನವಾಗಿದೆ. ಗಿರಿಯನ್ನೇರುವ ಆರಂಭದಲ್ಲಿ ಕಟ್ಟೇಗಣಪತಿಯ ವಿಗ್ರಹವಿದ್ದು, ಗಂಗಾಧರೇಶ್ವರ ದೇವಾಲಯಕ್ಕೆ ಅಭಿಮುಖವಾಗಿದೆ. ಸ್ವಲ್ಪ ಎತ್ತರದಲ್ಲಿ ನಗರಕ್ಕಿದ್ದ ಹೆಬ್ಬಾಗಿಲು ಕಂಡುಬರುತ್ತದೆ. ಎರಡನೇ ಸುತ್ತಿನ ಕೋಟೆಯಲ್ಲಿ ಗೌತಮರಾಯನ ಗುಡಿ ಇದ್ದು ಪಾಳೆಯಗಾರರಿಂದ ನಿರ್ಮಾಣವಾಗಿದೆ. ಇಲ್ಲಿನ ಉಬ್ಬು ಶಿಲ್ಪಗಳಾದ ಗರುಡ, ಆನೆ, ವೃಷಭ, ಮೀನು ಮೊದಲಾದವುಗಳು ಆಕರ್ಷಣೀಯವಾಗಿವೆ. ಸಮೀಪದಲ್ಲಿದ್ದ ಅರಮನೆ ಮತ್ತು ಪರಿವಾರದ ಮನೆಗಳು ಶಿಥಿಲವಾಗಿವೆ. ಗಿರಿಯ ಮಧ್ಯದಲ್ಲಿ ಉದ್ಭವಲಿಂಗ, ಸಮೀಪದಲ್ಲಿ ಕಲ್ಯಾಣಿ ಹಾಗೂ ಬಸವನ ಮೂರ್ತಿಗಳಿವೆ.

ಹೊಳವನಹಳ್ಳಿ ಪಾಳೆಯಗಾರ ಸಣ್ಣಬೈರೇಗೌಡ ಈ ಕೋಟೆ, ಅರಮನೆ ಮತ್ತು ಗಂಗಾಧರೇಶ್ವರ ದೇವಾಲಯಗಳನ್ನು ನಿರ್ಮಿಸಿ ಈ ಗಿರಿಯನ್ನೇ ತನ್ನ ಅಧಿಕಾರದ ಕೇಂದ್ರವನ್ನಾಗಿ ಮಾಡಿಕೊಂಡಿದ್ದನೆಂದು ತಿಳಿದುಬರುತ್ತದೆ. ಗಂಗಾಧರೇಶ್ವರ ದೇವಾಲಯದ ರಥೋತ್ಸವವು ಶಿವರಾತ್ರಿಯಾದ ಮೇಲೆ ಬಹು ವಿಜೃಂಭಣೆಯಿಂದ ನಡೆಯುತ್ತದೆ.

**ಕ್ಯಾಮೇನಹಳ್ಳಿ (ಜನಸಂಖ್ಯೆ. ೪೫೯)**: ಇದು ತಾಲೂಕು ಕೇಂದ್ರ ಕೊರಟಗೆರೆಗೆ ೧೧ ಕಿ.ಮೀ. ದೂರದಲ್ಲಿದೆ. ಇಲ್ಲಿ ಆಂಜನೇಯನ ಬೃಹತ್ ವಿಗ್ರಹವಿದೆ. ಸಮೀಪದಲ್ಲಿಯೇ ಜಯಮಂಗಲಿ ನದಿಯು ಹರಿಯುತ್ತದೆ. ಇಲ್ಲಿ ಫೆಬ್ರವರಿ–ಮಾರ್ಚ್ ತಿಂಗಳಿನಲ್ಲಿ ಜಾತ್ರೆ, ಉತ್ಸವ ಬಹುದೊಡ್ಡ ಪ್ರಮಾಣದಲ್ಲಿ ನಡೆಯುತ್ತದೆ. ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವ, ಈ ಊರನ್ನು ಹನುಮ ಕ್ಷೇತ್ರವೆಂದೂ, ಇಲ್ಲಿನ ಆಂಜನೇಯನ ವಿಗ್ರಹ ಜನಮೇಜಯನ ಪ್ರತಿಷ್ಠಾಪನೆ ಎಂದೂ ಪ್ರತೀತಿ ಇದೆ.

**ಗುಂಡ್ಲಹಳ್ಳಿ (ಜನಸಂಖ್ಯೆ. ೨,೭೯೭)**: ತಾಲೂಕು ಕೇಂದ್ರ ಪಾವಗಡಕ್ಕೆ ಎಂಟು ಕಿ.ಮೀ. ದೂರದಲ್ಲಿರುವ ಗುಂಡ್ಲಹಳ್ಳಿಯಲ್ಲಿ, ಇತಿಹಾಸ ಪ್ರಸಿದ್ಧ ಕೆರೆಯೊಂದನ್ನು ಹೊಂದಿದ್ದು, ಕೆರೆಯ ತೂಬನ್ನು ಕರಿಕಲ್ಲಿನಲ್ಲಿ ಕಲಾತ್ಮಕವಾಗಿ ರೂಪಿಸಲಾಗಿದ್ದು ಮೇಲ್ಭಾಗದಲ್ಲಿ ಶಂಖ ಚಕ್ರಗಳನ್ನು ಬಿಡಿಸಲಾಗಿದೆ. ಅಲ್ಲಿರುವ ಎರಡು ಶಿಲಾಶಾಸನಗಳಿಂದ, ಈ ಕೆರೆಯನ್ನು ಅಕ್ಕಲೇಟಿ ಎಂಬ ಮಹಿಳೆ ನಿರ್ಮಿಸಿ 'ಅಕ್ಕಲಸಮುದ್ರ' ಎಂದು ಹೆಸರಿಸಲಾಗಿದ್ದಿತೆಂದು ಗೊತ್ತಾಗುತ್ತದೆ. ಈ ಕೆರೆಯು ಸುಮಾರು ಏಳನೆಯ ಶತಮಾನದ್ದಾಗಿದ್ದು ಇಂದಿಗೂ ಬಳಕೆಯಾಗುತ್ತಿರುವುದು ಗಮನಾರ್ಹ.ಚಿಕ್ಕಕೆರೆಯ ಮೇಲಿರುವ ಶಿವಾಲಯದ ಪ್ರಾಕಾರದಲ್ಲಿರುವ ಶಿಲಾಫಲಕದಲ್ಲಿ ಹಾವಿನಾಕೃತಿಯ ಅನೇಕ ರೇಖೆಗಳು ಕಂಡು ಬರುತ್ತವೆ. ಇಲ್ಲಿಯ ಆಂಜನೇಯ ದೇವಾಲಯದ ಮೂರ್ತಿಯು ಹತ್ತು ಅಡಿ ಎತ್ತರವಿದೆ.

**ಗುಬ್ಬಿ (ಜನಸಂಖ್ಯೆ. ೧೬,೮೦೫)**: ತುಮಕೂರು ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿದ್ದು, ಬೆಂಗಳೂರು–ಪೂನಾ ರೈಲು ಮಾರ್ಗ, ಬೆಂಗಳೂರು–ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ೨೦೬ರಲ್ಲಿ ತುಮಕೂರಿನಿಂದ ೨೧ ಕಿ.ಮೀ. ದೂರದಲ್ಲಿದೆ. ಗುಬ್ಬಿ ಎಂಬ ಹೆಸರನ್ನು ಹೊಂದುವುದಕ್ಕೂ ಮುನ್ನ ಈ ಪಟ್ಟಣವು 'ಚಟಕಪುರಿ' ಮತ್ತು 'ಅಮರಗೊಂಡ ಕ್ಷೇತ್ರ' ಎಂಬ ಹೆಸರಿನಿಂದ ಪ್ರಸಿದ್ಧಿ ಹೊಂದಿತ್ತು. 'ಗುಬ್ಬಿ' ಹೆಸರಿಗೆ ಸ್ವಾರಸ್ಯದ ದಂತಕಥೆಯೊಂದಿದ್ದು, ಅಮರಗೊಂಡ ಕ್ಷೇತ್ರದ ಮಲ್ಲಿಕಾರ್ಜುನ ದೇವಾಲಯದಲ್ಲಿ ಮಲ್ಲಿಕಾರ್ಜುನನೆಂಬ ವೀರಶೈವ ವಿದ್ವಾಂಸ ದಿನನಿತ್ಯವೂ ಪುರಾಣ ಪ್ರವಚನ ನಡೆಸುತ್ತಿದ್ದ ಸಮಯದಲ್ಲಿ ಎರಡು ಗುಬ್ಬಚ್ಚಿಗಳು ಪ್ರವಚನವನ್ನು ನಿತ್ಯವೂ ಆಲಿಸುತ್ತಿದ್ದು, ಪ್ರವಚನದ ಕೊನೆಯ ದಿನ ಈ ಎರಡೂ ಗುಬ್ಬಚ್ಚಿಗಳು ದೇಹತ್ಯಾಗ ಮಾಡಿದವೆಂದೂ, ಆ ಘಟನೆಯಿಂದಾಗಿ ಈ ಪಟ್ಟಣಕ್ಕೆ ಗುಬ್ಬಿ ಎಂಬ ಹೆಸರು ಬಂದಿತೆಂಬ ನಂಬಿಕೆ ಜನರಲ್ಲಿದೆ. ಇದೇ ಮಲ್ಲಿಕಾರ್ಜುನ ದೇವಾಲಯದಲ್ಲಿ ಆ ಗುಬ್ಬಚ್ಚಿಗಳದ್ದೆಂದು ಹೇಳಲಾಗುವ ಸಮಾಧಿ ಇದೆ.

ಸುಮಾರು ೧೫ನೇ ಶತಮಾನದಲ್ಲಿ ಗುಬ್ಬಿ ಎಂಬ ಹೆಸರನ್ನು ಪಡೆದಿದ್ದ ಈ ಪಟ್ಟಣವನ್ನು ಇಲ್ಲಿಗೆ ಮೂರು ಕಿ.ಮೀ. ದೂರದಲ್ಲಿರುವ ಗುಬ್ಬಿ ಹೊಸಳ್ಳಿಯ ಪಾಳೆಪಟ್ಟಿನ ನೊಳಂಬ ಮನೆತನದ ಮಹಾನಾಡಪ್ರಭು ಹೊನ್ನಪ್ಪಗೌಡರು ಸ್ಥಾಪಿಸಿದರೆಂದು ಹೇಳಲಾಗುತ್ತದೆ. ಈ ಪ್ರದೇಶವು ಮೈಸೂರು ಒಡೆಯರು, ಗುಬ್ಬಿ ಹೊಸಹಳ್ಳಿ ಮತ್ತು ಹಾಗಲವಾಡಿ ಪಾಳೆಯಗಾರರ ಆಳ್ವಿಕೆಗೂ ಒಳಪಟ್ಟಿದ್ದಿತೆಂದು ಚಾರಿತ್ರಿಕ ದಾಖಲೆಗಳು ದೃಢಪಡಿಸುತ್ತವೆ. ಆದರೆ ೧೮೮೬ರಲ್ಲಿ ಗುಬ್ಬಿಯನ್ನು ತಾಲೂಕು ಕೇಂದ್ರವನ್ನಾಗಿ ಮಾಡಲಾಯಿತು. ಅದಕ್ಕೂ ಮೊದಲು ಕಡಬ ತಾಲೂಕು ಕೇಂದ್ರವಾಗಿದ್ದಿತು. ಮೈಸೂರು ಅರಸ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಫೌಜುದಾರರಾಗಿದ್ದ ಬೋರೇಗೌಡರು ಗುಬ್ಬಿಯ ಅಭಿವೃದ್ಧಿ ಕೆಲಸಗಳನ್ನು ಕೈಗೊಂಡು ಒಡೆಯರ ಅನುಗ್ರಹಕ್ಕೆ ಪಾತ್ರರಾಗಿದ್ದು, ೧೯೨೮ರಲ್ಲಿ ಗತಿಸಿದರು. ಅವರ ಸಮಾಧಿಯು ಚನ್ನಬಸವೇಶ್ವರ ದೇವಾಲಯದ ಸಮೀಪವಿದ್ದು, ಅವರೇ ಈ ದೇವಾಲಯದ ನಿರ್ಮಾಪಕರೆಂದು ಹೇಳಲಾಗುತ್ತದೆ. ೧೯೬೯ ರಲ್ಲಿ ಇವರ ಸಮಾಧಿಯನ್ನು ಜೀರ್ಣೋದ್ಧಾರ ಮಾಡಲಾಗಿದೆ.

ಗುಬ್ಬಿಯು ಧಾರ್ಮಿಕ, ಸಾಹಿತ್ಯ, ಸಾಂಸ್ಕೃತಿಕ, ವ್ಯಾಪಾರ ಮತ್ತು ವಾಣಿಜ್ಯೋದ್ಯಮ ಕೇಂದ್ರವು ಆಗಿದ್ದಿತು. ಇಲ್ಲಿನ ಅತ್ಯಂತ ಪ್ರಾಚೀನ ದೇವಾಲಯ ಗದ್ದೆಮಲ್ಲೇಶ್ವರ. ಇದು ಮೊದಲು ಊರಹೊರಗಿನ ಗದ್ದೆಯಲ್ಲಿತ್ತೆಂದೂ, ನಂತರದಲ್ಲಿ ಊರು ಬೆಳೆದು ಈಗ ಜವಳಿಪೇಟೆಯ ಪಕ್ಕದಲ್ಲಿಯೇ ಇದೆ. ಅಮರಗೊಂಡ ಮಲ್ಲೇಶ್ವರ ಅಥವಾ ಮಲ್ಲಿಕಾರ್ಜುನ ಎಂಬ ವೀರಶೈವ ಮುನಿ ಇಲ್ಲಿ ನೆಲೆಸಿದ್ದರೆಂದು ತಿಳಿದುಬರುತ್ತದೆ. ದೇವಾಲಯದ ನವರಂಗದ ಮೂರು ಗರ್ಭಗೃಹಗಳಲ್ಲಿ ದಕ್ಷಿಣಾಮೂರ್ತಿ, ಪಾರ್ವತಿ ಮತ್ತು ವೀರಭದ್ರನ ವಿಗ್ರಹಗಳಿವೆ. ಹೊರಗಿನ ಎರಡು ಗರ್ಭಗುಡಿಗಳಲ್ಲಿ ಗಣಪತಿ ಹಾಗೂ ಸುಬ್ರಹ್ಮಣ್ಯನ ಮೂರ್ತಿಗಳಿವೆ. ದಕ್ಷಿಣಾಮೂರ್ತಿಯ ಗುಡಿಯ ಬಲಭಾಗದಲ್ಲಿರುವ ಪುರುಷನ ವಿಗ್ರಹವನ್ನು ಓಹಿಲ ಅಥವಾ ಮೈಲಪ್ಪನೆಂಬ ಭಕ್ತನ ವಿಗ್ರಹವೆಂದು ನಂಬಲಾಗಿದೆ. ನವರಂಗದ ಉತ್ತರದ ಗರ್ಭಗುಡಿಯಲ್ಲಿ ರಾಮಲಿಂಗೇಶ್ವರ ಲಿಂಗವಿದೆ.

ಇಲ್ಲಿನ ಶ್ರೀಚನ್ನಬಸವೇಶ್ವರ ಅಥವಾ ಗುಬ್ಬಿಯಪ್ಪನ ದೇವಾಲಯವು ಶ್ರೀ ಚನ್ನಬವೇಶ್ವರ ಅಥವಾ ಗೋಸಲ ಚೆನ್ನಬಸವೇಶ್ವರರ ಗದ್ದುಗೆಯಾಗಿದೆ. ಗದ್ದುಗೆಯ ಮೇಲೆ ಮೂರ್ತಿ ಸ್ಥಾಪಿಸಿ ಪೂಜಾಕಾರ್ಯ ನಿರ್ವಹಿಸಲಾಗುತ್ತಿದೆ. ಪ್ರತಿ ವರ್ಷ ಮಾರ್ಚ್ ತಿಂಗಳಿನಲ್ಲಿ ೧೫ ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಭಕ್ತರ ನೆರವಿನಿಂದ ದೇವಾಲಯದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ಅಲ್ಲದೆ, ಊರಲ್ಲಿ ಬೇಟೆರಾಯಸ್ವಾಮಿ, ಜನಾರ್ಧನ, ಆಂಜನೇಯ ದೇವಾಲಯಗಳಿವೆ. ಬೇಟೆರಾಯಸ್ವಾಮಿ ದೇವಾಲಯದಲ್ಲಿರುವ ಎರಡೂವರೆ ಅಡಿ ಎತ್ತರದ ವಿಷ್ಣುಮೂರ್ತಿಗೆ, ನಾಲ್ಕು ಕೈಗಳಿದ್ದು ಶಂಖ, ಚಕ್ರ, ಬಿಲ್ಲು, ಬಾಣಗಳನ್ನು ಹಿಡಿದು ಬೇಟೆಯ ಭಂಗಿಯಲ್ಲಿರುವುರಿಂದ ಈ ಹೆಸರು ಬಂದಿರುವುದಾಗಿ ತಿಳಿಯುತ್ತದೆ. ಜನಾರ್ಧನ ವಿಗ್ರಹ ನಾಲ್ಕು ಅಡಿ ಎತ್ತರವಿದ್ದು, ನಾಲ್ಕು ಕೈಗಳನ್ನು ಹೊಂದಿದೆ. ಅಲ್ಲದೇ, ಕನ್ನಿಕಾ ಪರಮೇಶ್ವರಿ ಗುಡಿ, ಜಿನಮಂದಿರ, ಮಸೀದಿ, ಚರ್ಚುಗಳೂ ಇವೆ.

ಗುಬ್ಬಿಯು ಅನೇಕ ಪ್ರಸಿದ್ಧ ಕವಿ ಹಾಗೂ ಚಿಂತಕರನ್ನು ಹೊಂದಿದ್ದಿತು. ಸುಮಾರು ೧೫–೧೬ನೇ ಶತಮಾನದಲ್ಲಿ ಸಾಹಿತ್ಯದ ಬೆಳವಣಿಗೆಯಾಗಿದ್ದು, ವೀರಶೈವಧರ್ಮದ ಹಲವು ಪ್ರಮುಖ ಸಾಹಿತ್ಯ ಕೃತಿಗಳು ರಚನೆಯಾದವು. ಅಮರಗೊಂಡ ಮಲ್ಲಿಕಾರ್ಜುನ, ಗೋಸಲ ಚನ್ನಬಸವೇಶ್ವರ, ಗುಬ್ಬಿಯ ಮಲ್ಲಣಾರ್ಯ, ಪ್ರಭಾಗ, ಜೇರಮಾಂಕ, ಮುಂತಾದವರು. ಇಲ್ಲಿಯ ಪ್ರಮುಖ ಕವಿಗಳಿಂದ ಗುಬ್ಬಿಯು ಲಲಿತಕಲೆಯ ಬೀಡಾಗಿದ್ದು, ವಿಶೇಷವಾಗಿ ನಾಟಕ ಕಲೆಗೆ ಮಹತ್ವ ನೀಡಿದೆ. ಇಲ್ಲಿ ೧೮೮೪ರಲ್ಲಿ ಶ್ರೀ ಚನ್ನಬಸವೇಶ್ವರ ಕೃಪಾ ಪೋಷಿತ ನಾಟಕ ಕಂಪನಿ ಸ್ಥಾಪಿತವಾಗಿ ಕಲೆಗೆ ಅಪಾರ ಕೊಡುಗೆ ನೀಡಿದೆ. ೧೯೧೯ ರಲ್ಲಿ ಸುಪ್ರಸಿದ್ಧ ನಟರಾದ ಜಿ.ಹೆಚ್.ವೀರಣ್ಣನವರು ಈ ಕಂಪನಿಯ ಮಾಲೀಕರಾಗಿ ನಾಟಕದಲ್ಲಿ ಹೊಸ ಹೊಸ ಪ್ರಯೋಗಗಳನ್ನು ನಡೆಸಿ, ಹಲವಾರು ಕಲಾವಿದರಿಗೆ ಆಶ್ರಯದಾತರಾಗಿ ಮೆರೆದು, ಸಾಮಾನ್ಯರ, ರಾಜಮಹಾರಾಜರ ಕೀರ್ತಿ, ಗೌರವಗಳಿಗೆ ಪಾತ್ರರಾಗಿದ್ದು, ಗುಬ್ಬಿಯ ಹಿರಿಮೆ ರಾಷ್ಟ್ರಾದ್ಯಂತ ಪಸರಿಸುವಂತೆ ಮಾಡಿರುವರು. ಇವರಿಗೆ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ. ಗುಬ್ಬಿಯು ಇತ್ತೀಚೆಗೆ ಶೈಕ್ಷಣಿಕ ಬೆಳವಣಿಗೆಯನ್ನು ಹೊಂದಿ ಅನೇಕ ಶಾಲೆ, ಕಾಲೇಜು, ತಾಂತ್ರಿಕ ಕಾಲೇಜು ಸಹ ಆರಂಭವಾಗಿದೆ. ಇಲ್ಲಿನ ಚಿದಂಬರ ಆಶ್ರಮ ತಾರ್ಕಿಕ, ಆಧ್ಯಾತ್ಮಿಕ ವಿದ್ಯೆಗೆ ಆಗರವಾಗಿದೆ. ಗುಬ್ಬಿಯ ಸಂತೆಯ ಮೈದಾನದಲ್ಲಿ ಆದಿತೀರ್ಥಂಕರರ ಜೈನಬಸದಿ ಇದೆ. ಅಮೃತಶಿಲೆಯ ವಿಗ್ರಹ ಹಾಗೂ ಪಂಚಲೋಹದ ಪಾರ್ಶ್ವನಾಥ ವಿಗ್ರಹವೂ ಇದೆ. ಕ್ರೈಸ್ತಧರ್ಮ ೧೮೩೬ರಲ್ಲಿ ಇಲ್ಲಿಗೆ ಬಂದಿದ್ದು, ಪ್ರಾಟಿಸ್ಟೆಂಟ್ ಕ್ರೈಸ್ತರ ಪ್ರಾರ್ಥನಾ ಮಂದಿರವಿದೆ.

**ಗುಬ್ಬಿ ಹೊಸಳ್ಳಿ (ಜನಸಂಖ್ಯೆ. ೧,೮೬೧)**: ತಾಲೂಕು ಕೇಂದ್ರ ಗುಬ್ಬಿಗೆ ಮೂರು ಕಿ.ಮೀ. ದಕ್ಷಿಣಕ್ಕಾದಂತಿದೆ. ಇಲ್ಲಿ ಹಿಂದೊಂದು ಪಾಳೆಯಪಟ್ಟು ಇದ್ದಿತು. ಅರ್ವಾಚೀನ ವೀರಶೈವ ಮನೆತನದ ಏಳು ಜನ ಸಹೋದರರು ಸ್ವತಂತ್ರವಾಗಿ ಏಳು ಕಡೆ ತಮ್ಮ ಪಾಳೆಯಪಟ್ಟುಗಳನ್ನು ಸ್ಥಾಪಿಸಿದ್ದು, ಅವುಗಳಲ್ಲಿ ಒಂದು 'ಗುಬ್ಬಿಹೊಸಳ್ಳಿ ಪಾಳೆಯಪಟ್ಟು'.

ಇವರ ಆಡಳಿತ ಕೇಂದ್ರ ಹೊಸಹಳ್ಳಿ ಆಗಿದ್ದು ಇಲ್ಲಿ ಅವರ ಕಾಲದ ಚಾರಿತ್ರಿಕ ಅವಶೇಷಗಳು ದೊರಕುತ್ತವೆ. ಅವುಗಳೆಂದರೆ ಕೆರೆಕಟ್ಟೆ, ಗುಡಿಗೋಪುರ, ಮತಮಾನ್ಯ, ವೀರಗಲ್ಲು, ಕೋಟೆಕೊತ್ತಲ ಮೊದಲಾದವು. ತೋಟಪ್ಪಗೌಡರು ಕೋಟೆ, ಅರಮನೆ, ಕುಲದೇವರಾದ ವೀರಭದ್ರ ದೇವಸ್ಥಾನಗಳನ್ನು ನಿರ್ಮಿಸಿದರೆಂದು ತಿಳಿಯುತ್ತದೆ. ತಮ್ಮ ಸ್ಥಾನಮಾನಕ್ಕೆ ತಕ್ಕಂತೆ ಭವ್ಯ ಅರಮನೆ ಕಟ್ಟಿಸಿರಬೇಕು. ಆದರೆ ಇಂದು ಅರಮನೆಯ ಅವಶೇಷಗಳು ಮಾತ್ರ ಉಳಿದಿದೆ. ಕೋಟೆಯ ಅವಶೇಷ ಅಲ್ಲಲ್ಲಿ ಇದ್ದು, ಕಂದಕಗಳೂ ಕಾಣಸಿಗುತ್ತವೆ.

ವೀರಭದ್ರ ದೇವಾಲಯವನ್ನು ತೋಟಪ್ಪಗೌಡರು ದ್ರಾವಿಡ ಶೈಲಿಯಲ್ಲಿ ನಿರ್ಮಾಣ ಮಾಡಿಸಿದ್ದು ಮುಖಮಂಟಪದ ಭಾರೀ ಗಾತ್ರದ ಕಂಬಗಳ ಮೇಲೆ ದೇವತೆಗಳ ಸುಂದರ ವಿಗ್ರಹಗಳಿವೆ. ಆದರೆ ಸುಣ್ಣ ಬಳಿದಿರುವುದರಿಂದ ವಿವರಣೆ ಕಾಣುವುದಿಲ್ಲ. ವಿಗ್ರಹದಲ್ಲಿ ಪ್ರಭಾವಳಿ ಇದ್ದು ಹಿತ್ತಾಳೆ ಕವಚವನ್ನು ಸೇರಿಸಲಾಗಿದೆ. ಮುಖಮಂಟಪದಲ್ಲಿರುವ ಎರಡು ಕಿರು ಗುಡಿಗಳಲ್ಲಿ ಶಿವಪಾರ್ವತಿ ಹಾಗೂ ಮತ್ತೊಂದರಲ್ಲಿ ಭದ್ರಕಾಳಿಯ ಶಿಲ್ಪಗಳಿವೆ. ದೇವಾಲಯದ ಮುಂಭಾಗದಲ್ಲಿ ಐವತ್ತು ಅಡಿ ಎತ್ತರದ ಸ್ತಂಭವಿದೆ. ಇದನ್ನು ಇತ್ತೀಚೆಗೆ ನವೀಕರಿಸಲಾಗಿದ್ದು ಚಿಕ್ಕಗೋಪುರವನ್ನೂ ಕಟ್ಟಲಾಗಿದೆ.

ಪಾಳೆಯಗಾರರು ನಿರ್ಮಿಸಿದ ನೂರು ಅಡಿ ಉದ್ದ ಹಾಗೂ ಎಂಬತ್ತು ಅಡಿ ಅಗಲದ ಕಲ್ಯಾಣಿ ಊರಿನ ಮಧ್ಯ ಭಾಗದಲ್ಲಿದ್ದು ಹಿಂದೆ ಇಡೀ ಗ್ರಾಮಕ್ಕೆ ನೀರನ್ನೊದಗಿಸುತ್ತಿತ್ತು. ಈಗ ಪರಿಸ್ಥಿತಿ ಬದಲಾಗಿದೆ. ಕಲ್ಯಾಣಿಗೆ ಸಮೀಪದಲ್ಲಿ ಹಲವು ಅವಶೇಷಗಳಿದ್ದು ಧರ್ಮಛತ್ರ ಇದ್ದುದ್ದಕ್ಕೆ ಮುರಿದಿರುವ ಕಂಬ, ಕಲ್ಲು ಚಪ್ಪಡಿಗಳು ಕಾಣಸಿಗುತ್ತವೆ.

ಈ ವಂಶಸ್ಥರ ಮನೆಯಲ್ಲಿ ಗತವೈಭವದ ಹಲವು ಪುರಾತನ ವಸ್ತುಗಳಿವೆ. ನೀಳ್ಗತ್ತಿ, ಕಬ್ಬಿಣದ ಆಯುಧ, ಸಣ್ಣಕತ್ತಿ (ಪಟ್ಟದರಸರಕತ್ತಿ) ಕುದುರೆಯ ಅಲಂಕಾರಿಕ ವಸ್ತುಗಳು, ಅಂಗರಕ್ಷಕರ ಕೆಂಪುಪಟ್ಟಿ ಮುಂತಾದವುಗಳಿವೆ. ಇದರಲ್ಲಿ ನಾಗರಾಕ್ಷರದಲ್ಲಿ 'ಶ್ರೀ ವೀರಭದ್ರಸ್ವಾಮಿ ಪ್ರಸನ್ನ, ಹೊಸಹಳ್ಳಿ, ಗುಬ್ಬಿ ತಾಲೂಕು' ಎಂಬ ಬರಹವಿದೆ. ಇದು ದರ್ಬಾರಿನ ಬೆಳ್ಳಿಯ ಪಟ್ಟಿಯಾಗಿದ್ದು, ಇದರಲ್ಲಿ ಹತ್ತು ವಿಧದ ಲಾಂಛನಗಳಿವೆ. ಪೂಜಾ ಸಾಮಗ್ರಿಯ ಹಲವು ವಸ್ತುಗಳೂ ಕಂಡುಬಂದಿವೆ. ಗ್ರಾಮದ ಆಸುಪಾಸಿನಲ್ಲಿ ವೀರಗಲ್ಲುಗಳಿದ್ದು, ಅವುಗಳಲ್ಲಿ ಯಾವುದೇ ಬರಹವಿಲ್ಲ. ಈಗ ಈ ವಂಶಸ್ಥರು ಸಾಮಾನ್ಯ ಕೃಷಿಕರಾಗಿದ್ದು, ಊರಿನ ಧಾರ್ಮಿಕ ಹಾಗೂ ಸಾಂಸ್ಕೃತಿಕ ಉತ್ಸವಗಳನ್ನು ಇವರ ಮುಖಂಡತ್ವದಲ್ಲಿಯೇ ನಿರ್ವಹಿಸಲಾಗುತ್ತಿತ್ತೆಂದು ತಿಳಿದುಬರುತ್ತದೆ.

**ಗೂಳೂರು(ಜನಸಂಖ್ಯೆ. ೪,೩೨೮)**: ಜಿಲ್ಲಾ ಕೇಂದ್ರ ತುಮಕೂರಿಗೆ ನಾಲ್ಕು ಕಿ.ಮೀ. ದೂರದಲ್ಲಿದೆ. ಈ ಗ್ರಾಮಕ್ಕೆ ಹಿಂದೆ 'ನಂದಿಪುರ'ವೆಂಬ ಹೆಸರಿದ್ದಿತೆಂದು ತಿಳಿಯುತ್ತದೆ. ವಿಜಯನಗರ ಮತ್ತು ಮೈಸೂರು ಒಡೆಯರ ಶಾಸನಗಳಲ್ಲಿ 'ಗೂಳೂರು ಸೀಮೆ' ಎಂದು ಉಲ್ಲೇಖಿತಗೊಂಡಿದ್ದು ಹಲವು ಗ್ರಾಮಗಳ ಆಡಳಿತ ಕೇಂದ್ರವಾಗಿದ್ದಿತೆಂದು ತಿಳಿಯುತ್ತದೆ. ಗಣೇಶನ ಬೃಹತ್ ವಿಗ್ರಹದಿಂದಾಗಿ ಗೂಳೂರು ಪ್ರಸಿದ್ಧಿ ಪಡೆದಿದೆ. ಪ್ರತಿ ವರ್ಷ ಭಾದ್ರಪದ ಚೌತಿಯಂದು ಸಾಮಾನ್ಯ ಗಣೇಶನ ವಿಗ್ರಹವನ್ನು ಸ್ಥಾಪಿಸಿ ಪೂಜಿಸುತ್ತಾರೆ. ಜೊತೆಗೆ ಅಂದಿನಿಂದ ಬೃಹತ್ ಗಣೇಶಮೂರ್ತಿಯ ರಚನೆ ಆರಂಭಗೊಂಡು ಸುಮಾರು ಎರಡು ತಿಂಗಳು ಕಾಲ ನಡೆಯುವುದು. ಸಾಮಾನ್ಯ ಮೂರ್ತಿಯು ಬೃಹತ್‌ಮೂರ್ತಿಯ ಹೊಟ್ಟೆಯೊಳಗಿರುತ್ತದೆ. ರಚನೆಯ ಅನಂತರ ಎಂಟು ಅಡಿಯ ಬೃಹತ್‌ಮೂರ್ತಿಯ ಪೂಜಾಕಾರ್ಯ ಒಂದು ತಿಂಗಳ ಕಾಲ ನಡೆದು ನವೆಂಬರ್–ಡಿಸೆಂಬರ್‌ನಲ್ಲಿ ಜಾತ್ರೆ ಉತ್ಸವಗಳನ್ನು ನಡೆಸಿ ಕೊನೆಗೆ ಊರಿನ ಕೆರೆಯಲ್ಲಿ ವಿಸರ್ಜಿಸಲಾಗುತ್ತದೆ.

ಗೂಳೂರು ಹಲವು ಪ್ರಸಿದ್ಧ ವೀರಶೈವ ಕವಿಗಳಿಗೆ ಆಶ್ರಯ ನೀಡಿತ್ತು. ವೀರಶೈವ ವಚನ ಸಂಗ್ರಹದ ನಾಲ್ಕನೆಯ ಶೂನ್ಯ ಸಂಪಾದನೆಯ ಕರ್ತೃ ಸಿದ್ಧವೀರಣ್ಣೊಡೆಯ, ಸಂಪಾದನೆಯ ಪರ್ವತೇಶ್ವರ ಮತ್ತು ವಿರಕ್ತತೋಂಟದಾರ್ಯ ಮೊದಲಾದವರು ಇಲ್ಲಿದ್ದರೆಂದು ತಿಳಿಯುತ್ತದೆ. ಎಡೆಯೂರು ಸಿದ್ಧಲಿಂಗೇಶ್ವರರು ಸ್ವಲ್ಪಕಾಲ ಇಲ್ಲಿ ವಾಸ್ತವ್ಯ ಹೂಡಿದ್ದರೆಂದೂ ಪ್ರತೀತಿ ಇದೆ.

ಇಲ್ಲಿ ಬೇಟೆರಾಯಸ್ವಾಮಿ, ಪ್ರಸನ್ನ ವೆಂಕಟರಮಣಸ್ವಾಮಿ, ಹೊನ್ನಾದೇವಿ, ಯಲ್ಲಮ್ಮ, ಗೂಳೂರಮ್ಮ, ಶಿವರಾತ್ರಿ ಬಸವಣ್ಣ, ಕಾಳಿಕಾಂಬ, ಗಂಗಾಧರೇಶ್ವರ, ಗೂಳೂರು ಗಣೇಶ ಹೀಗೆ ಹಲವಾರು ದೇವಾಲಯಗಳಿವೆ. ಜೊತೆಗೆ ಉಪ್ಪರಿಗೆಮಠ, ಹಿರೇಮಠ, ಕಲ್ಲುಮಠ, ಪಾಳುಮಠ, ಮಾನಂಗಿಮಠ, ಕೋರಿದೇವರಮಠ, ನಡುವಲಮಠ, ಬ್ಯಾಲದಾಯಿಮಠ ಮೊದಲಾದ ಮಠಗಳೂ, ಗದ್ದುಗೆಗಳು, ಬಸವಣ್ಣ ಹಾಗೂ ಇನ್ನಿತರ ಶರಣರ ಶಿಲ್ಪಗಳೂ ಕಂಡುಬಂದಿವೆ.

**ಗೊರವನಹಳ್ಳಿ (ಜನಸಂಖ್ಯೆ.೭೨೮)**: ಕೊರಟಗೆರೆ ತಾಲೂಕಿನಲ್ಲಿರುವ ಇದು ತುಮಕೂರಿನಿಂದ ೩೦ ಕಿ.ಮೀ. ದೂರದಲ್ಲಿದ್ದು, ಇಲ್ಲಿ ಪ್ರಸಿದ್ಧ ಲಕ್ಷ್ಮೀದೇವಾಲಯವಿದೆ. ಇಲ್ಲಿ ಶುಕ್ರವಾರ ವಿಶೇಷ ಪೂಜೆಗಳು ನಡೆಯುವುದರಿಂದ ಜನಸಂದಣಿ ಅಧಿಕವಾಗಿದ್ದು, ಬೇಕಾದ ಎಲ್ಲಾ ಅನುಕೂಲತೆಗಳಿಗೆ ಆದ್ಯತೆ ನೀಡಲಾಗುತ್ತಿದೆ. ಸಮೀಪದಲ್ಲೇ ತೀರ್ಥ ಜಲಾಶಯವಿದೆ. ಯಾತ್ರಾರ್ಥಿಗಳಿಗೆ ನಿತ್ಯದಾಸೋಹ ವ್ಯವಸ್ಥೆಯಿದೆ.

**ಗೋಡೆಕೆರೆ (ಜನಸಂಖ್ಯೆ. ೨,೧೦೪)**: ತಾಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಿಂದ ಎಂಟು ಕಿ.ಮೀ. ದಕ್ಷಿಣಕ್ಕಿದೆ. ಇಲ್ಲಿ ಸ್ಥಿರಪಟ್ಟಾಧ್ಯಕ್ಷ ಮತ್ತು ಚರಪಟ್ಟಾಧ್ಯಕ್ಷರುಗಳ ಮಠವಿದೆ. ಬಾಳೆಹೊನ್ನೂರು ಜಗದ್ಗುರು ಶ್ರೀಶಾಂತದೇಶಿಕೇಂದ್ರರು ತಮ್ಮ ಸಂಚಾರದ ಸಮಯದಲ್ಲಿ ಗೋಡೆಕೆರೆಗೆ ಬಂದಾಗ ಮಠವೊಂದನ್ನು ಸ್ಥಾಪಿಸಿ ಅದರ ಪೀಠಾಧಿಪತಿಗಳಾಗಿ, ಶ್ರೀ ಶಿವನಂಜುಂಡ ದೇಶಿಕೇಂದ್ರರನ್ನು ನೇಮಿಸಿ ಮುಂದೆ ಸಾಗಿದರು. ಆನಂತರ ಎರಡನೆ ಶ್ರೀಸಿದ್ಧರಾಮ ದೇಶಿಕೇಂದ್ರರವರೆಗೆ ಎಂಟು ಜನ ಗುರುಪರಂಪರೆ ಆಗಿ ಹೋಗಿದ್ದು, ಅವರಲ್ಲಿ ಐದನೆಯ ಗುರುಗಳಾದ ಶ್ರೀ ಬಸವಪ್ರಭುಸ್ವಾಮಿಗಳು ವೀರಶೈವ ಧರ್ಮದ ಅಭಿವೃದ್ಧಿಗೆ ಶ್ರಮಿಸಿ, ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸಿಕೊಂಡು ಬಂದಿದ್ದು, ಅವರ ವಿದ್ವತ್ತಿಗೆ ಮೈಸೂರು ಅರಸರು ಮನ್ನಣೆ ನೀಡಿ ಗೌರವಿಸಿದರೆಂದು ತಿಳಿಯುತ್ತದೆ. ಇವರಿಗೆ ಮೈಸೂರು ಅರಸರಿಂದ ದೊರೆತ ದತ್ತಿಯಿಂದಾಗಿ ಮಠವು ಸರ್ವತೋಮುಖ ಅಭಿವೃದ್ಧಿ ಹೊಂದಿತು. ಜೊತೆಗೆ ಚಿಕ್ಕನಾಯಕನಹಳ್ಳಿ–ಹಾಗಲವಾಡಿ ಪಾಳೆಯಗಾರರು ಇವರನ್ನು ತಮ್ಮ ರಾಜಗುರುಗಳೆಂದು ಸ್ವೀಕರಿಸಿ, ಶ್ರೀ ಸಿದ್ಧರಾಮೇಶ್ವರ ದೇವಾಲಯದ ನಿತ್ಯ ಅನ್ನದಾಸೋಹಕ್ಕೆ ವ್ಯವಸ್ಥೆ ಮಾಡಿಸಿದರು. ಶ್ರೀಬಸವಪ್ರಭುಸ್ವಾಮಿಗಳು ನಿರಂತರ ಸಂಚಾರದಲ್ಲಿರುತ್ತಿದ್ದುದರಿಂದ ಚರಪಟ್ಟಾಧ್ಯಕ್ಷರ ನೇಮಕವಾಗಿ ಚರ ಮತ್ತು ಸ್ಥಿರ

ಎಂಬುದಾಗಿ ಮುಂದುವರಿದುಕೊಂಡು ಬರುತ್ತಿದೆ. ಗ್ರಾಮಾಂತರ ವಿದ್ಯಾಭ್ಯಾಸಕ್ಕೆ ಒತ್ತು ಕೊಟ್ಟು ಶ್ರೀಮದ್ ರಂಭಾಪುರಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಹಲವಾರು ವಿದ್ಯಾಸಂಸ್ಥೆಗಳನ್ನು ತೆರೆದಿದ್ದಾರೆ. ವೀರಶೈವಧರ್ಮ, ಸಿದ್ಧಾಂತಗಳ ಬಗೆಗೆ ಕೃತಿಗಳನ್ನೂ ಹೊರತಂದಿದ್ದಾರೆ. ಜನರಲ್ಲಿ ವೈಚಾರಿಕ ಜಾಗೃತಿಯನ್ನು ಬೆಳೆಸುತ್ತಿದ್ದಾರೆ. ಶ್ರೀಮಠದಲ್ಲಿ ಪ್ರಾಚೀನ ತಾಳೆಗರಿಗಳು, ಅರಸರು ನೀಡಿದ ಹಲವಾರು ವಸ್ತುಗಳು, ತಾಮ್ರಶಾಸನಗಳನ್ನು ಇಂದಿಗೂ ಸಂಗ್ರಹಿಸಿಡಲಾಗಿದೆ. ಅಮಾವಾಸ್ಯೆ, ಕಾರ್ತೀಕ ಮಾಸದಲ್ಲಿ ಲಕ್ಷದೀಪೋತ್ಸವ ಮೊದಲಾದ ಧರ್ಮಕಾರ್ಯಗಳು ಮಠದ ಆಶ್ರಯದಲ್ಲಿ ಜರುಗುತ್ತಿದೆ. ಅನ್ನದಾಸೋಹ ನಿರಂತರವಾಗಿ ನಡೆದಿದೆ.

ಶ್ರೀ ಸಿದ್ಧರಾಮೇಶ್ವರರು ನಿಜಾನಂದ ಯೋಗದಲ್ಲಿ ನಿಂತ ಸ್ಥಳದಲ್ಲಿ ಅವರ ಗದ್ದುಗೆ ಇದ್ದು, ಜೊತೆಗೆ ಇನ್ನೂ ಮೂರು ಮಂದಿ ಶಿವಯೋಗಿಗಳ ಗದ್ದುಗೆಗಳಿವೆ. ಮುದಿಮಲ್ಲಿಕಾರ್ಜುನಸ್ವಾಮಿ, ವೀರಭದ್ರಸ್ವಾಮಿ, ಭೈರವೇಶ್ವರ ಮೊದಲಾದ ದೇವಾಲಯಗಳು ಇವೆ. ಸುಮಾರು ೩೫ ಎಕರೆ ಪ್ರದೇಶದ ಆವರಣದಲ್ಲಿ ಹಲವಾರು ಗಿಡಮರಗಳನ್ನೊಳಗೊಂಡ ತಪೋಭೂಮಿಯೂ ಇದೆ. ಗೋಡೆಕೆರೆ ೧೯೪೦ರ ದಶಕದಲ್ಲಿಯೇ ತಾಲೂಕು ಬೋರ್ಡ್ ಗ್ರಾಮಾಂತರ ಪ್ರೌಢಶಾಲೆಯನ್ನು ಹೊಂದಿ ಗ್ರಾಮೀಣ ವಿದ್ಯಾಭಿವೃದ್ಧಿಯ ಗ್ರಾಮವಾಗಿದ್ದಿತು.

**ಗೋಣಿ ತುಮಕೂರು (ಜನಸಂಖ್ಯೆ. ೧,೭೨೪)**: ತಾಲೂಕು ಕೇಂದ್ರ ತುರುವೇಕೆರೆ, ಪಟ್ಟಣದ ಸಮೀಪದಲ್ಲಿಯೇ ಇದೆ. ಇಲ್ಲಿರುವ ಈಶ್ವರ ದೇವಾಲಯ ಹೊಯ್ಸಳ ಶೈಲಿಯಲ್ಲಿದ್ದು, ಗರ್ಭಗೃಹ, ಸುಖನಾಸಿ ಮತ್ತು ನವರಂಗಗಳನ್ನು ಹೊಂದಿದೆ. ಈ ದೇವಾಲಯದಲ್ಲಿ ತಾವರೆಯ ವಿವಿಧ ಹಂತಗಳನ್ನು ಚಿತ್ರಿಸುವ ಒಂಬತ್ತು ಅಂಕಣದ ಭುವನೇಶ್ವರಿ ಇದೆ. ನವರಂಗದಲ್ಲಿ ಗಣಪತಿ, ಸರಸ್ವತಿ ಹಾಗೂ ನಾಗಶಿಲ್ಪಗಳಿವೆ. ದೇವಾಲಯದ ಹೊರಗೋಡೆ ಚೌಕಾಕಾರದ ಅರೆ ಕಂಬಗಳನ್ನೊಳಗೊಂಡಿದೆ. ಗರ್ಭಗೃಹದ ಮೇಲೆ ಸುಂದರ ಗೋಪುರವಿದೆ. ಅಲ್ಲದೇ ಈ ಗ್ರಾಮದಲ್ಲಿ ಹೊಯ್ಸಳರ ಕಾಲದ ಮೂರು ವೀರಗಲ್ಲುಗಳಿವೆ.

**ಚಂಗಾವರ(ಜನಸಂಖ್ಯೆ. ೩,೬೭೨)**: ಇದು ತಾಲೂಕು ಕೇಂದ್ರ ಶಿರಾದಿಂದ, ೨೪ ಕಿ.ಮೀ. ದೂರದಲ್ಲಿದೆ. ಇಲ್ಲಿನ ಕಲ್ಲೇಶ್ವರ ದೇವಾಲಯವು ಉತ್ತರಾಭಿಮುಖವಾಗಿದ್ದು, ನವರಂಗದ ಮೂರು ದಿಕ್ಕಿನಲ್ಲೂ ಗರ್ಭಗುಡಿಯನ್ನು ಹೊಂದಿರುವ ತ್ರಿಕೂಟ ದೇವಾಲಯವಾಗಿದ್ದು, ಇಲ್ಲಿರುವ ರಾಮಲಿಂಗೇಶ್ವರ, ಕಲ್ಲೇಶ್ವರ ಮತ್ತು ಮಲ್ಲೇಶ್ವರ ಲಿಂಗಗಳು ನೊಳಂಬರ ಕಾಲದ್ದಾಗಿದ್ದು, ಸಂಗಮ ಸ್ಥಳದಲ್ಲಿದೆ.

**ಚಿಕ್ಕ ತೊಟ್ಲುಕೆರೆ(ಜನಸಂಖ್ಯೆ. ೩,೦೦೯)**: ತುಮಕೂರಿನಿಂದ ಸಿದ್ಧರಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿ ೧೫ ಕಿ.ಮೀ. ದೂರದಲ್ಲಿದೆ. ಇದು ವಿರಕ್ತಮಠಗಳ ಪರಂಪರೆಯ ಪ್ರಸಿದ್ಧ ಕ್ಷೇತ್ರವಾಗಿದ್ದು, ಶ್ರೀಅಟವೀಸ್ವಾಮಿಗಳು ಇಲ್ಲಿ ವಿರಕ್ತಮಠ ಸ್ಥಾಪಿಸಿದರೆಂದು ತಿಳಿಯುತ್ತದೆ. ಇಲ್ಲಿ ನರಸಿಂಹ ಸಾಗರವೆಂಬ ಕೆರೆ, ಶ್ರೀಲಕ್ಷ್ಮೀನರಸಿಂಹಸ್ವಾಮಿ ಮತ್ತು ಬಸವೇಶ್ವರಸ್ವಾಮಿ ದೇವಾಲಯಗಳೂ ಜೊತೆಗೆ ಓಂಕಾರಸ್ವಾಮಿ, ಜಡೇಸ್ವಾಮಿ ಹಾಗೂ ಶ್ರೀ ಅಟವೀಸ್ವಾಮಿಗಳ ಗದ್ದುಗೆಗಳು ಇತ್ತೀಚೆಗೆ ಜನಪ್ರಿಯಗೊಂಡಿವೆ. ಇಲ್ಲಿ ವಿಶೇಷ ಉತ್ಸವವು ನವಂಬರ್ ತಿಂಗಳಿನಲ್ಲಿ ನಡೆಯುತ್ತದೆ.

**ಚಿಕ್ಕನಾಯಕನಹಳ್ಳಿ (ಜನಸಂಖ್ಯೆ. ೨೨,೩೮೯)**: ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಒಂದಾಗಿದ್ದು, ಜಿಲ್ಲಾ ಕೇಂದ್ರದಿಂದ ಪಶ್ಚಿಮಕ್ಕೆ ೬೯ ಕಿ.ಮೀ. ಅಂತರದಲ್ಲಿದೆ. ಹಾಗಲವಾಡಿ ಪಾಳೆಯಗಾರ ಮನೆತನದ ಚಿಕ್ಕನಾಯಕನ ಹೆಸರಿನಿಂದ ಈ ಊರಿಗೆ 'ಚಿಕ್ಕನಾಯಕನಹಳ್ಳಿ' ಎಂಬ ಹೆಸರು ಬಂದಿತೆಂದು ತಿಳಿಯುತ್ತದೆ. ಇದು ಹಲವು ರಾಜ ಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದನ್ನು ಅಲ್ಲೇ ದೊರೆತಿರುವ ಶಿಲಾಶಾಸನ, ವೀರಗಲ್ಲು, ಮಹಾಸತಿ ಕಲ್ಲು, ದೇವಾಲಯ, ಮೂರ್ತಿಶಿಲ್ಪಗಳು ಸೂಚಿಸುತ್ತವೆ. ಇಲ್ಲಿನ ವೆಂಕಟರಮಣ ದೇವಾಲಯ ಅತ್ಯಂತ ಬೃಹತ್ ಆಗಿದ್ದು, ದ್ರಾವಿಡ ಶೈಲಿಯಲ್ಲಿದೆ. ಎತ್ತರದ ಜಗತಿಯ ಮೇಲೆ ನಿರ್ಮಾಣಗೊಂಡಿದ್ದು, ಸುತ್ತಲೂ ಪ್ರಾಕಾರವನ್ನು ಹೊಂದಿದೆ. ನವರಂಗದ ಸ್ತಂಭಗಳಲ್ಲಿ ಆನೆ, ನಂದಿ ಮುಂತಾದ ಸುಂದರ ಉಬ್ಬು ಶಿಲ್ಪಗಳಿವೆ. ವೆಂಕಟರಮಣಸ್ವಾಮಿಯ ಮೂಲಮೂರ್ತಿ ಸುಂದರ ಶಿಲ್ಪಕೃತಿಯಾಗಿದೆ. ಇಲ್ಲಿನ ಕಂಬದ ಮೇಲೆ ಕಮಲವನ್ನು ಬಲಗೈನಲ್ಲಿ ಹಿಡಿದು ಸಿಂಹಾಸನಾರೂಢ ಮೂರ್ತಿ ಇದ್ದು, ಇದು ರಾಜನ ಶಿಲ್ಪವೆಂದು ತಿಳಿಯಲಾಗಿದೆ. ದ್ವಾರಮಂಟಪದ ಕಂಬಗಳಲ್ಲಿ ರಾಮ ಮತ್ತೂ ಲಕ್ಷಣ ಮೂರ್ತಿಗಳೂ ಇವೆ.

ಇಲ್ಲಿಯ ರಾಮೇಶ್ವರ ಗುಡಿ ದ್ರಾವಿಡ ಶೈಲಿಯಲ್ಲಿದ್ದು, ಹಾಗಲವಾಡಿ ಪಾಳೆಯಗಾರರ ಕಾಲದ ನಿರ್ಮಾಣವಾಗಿದೆ. ಸುಕನಾಸಿಯ ದ್ವಾರದ ಬಲಗಡೆ ಗಣಪತಿ ಹಾಗೂ ಎಡಭಾಗದಲ್ಲಿ ಭೈರವ ಮೂರ್ತಿಗಳಿವೆ. ಈ ದ್ವಾರದ ಮುಂಭಾಗದ

ಎರಡು ಕಂಬಗಳ ಮೇಲೆ ಒಂದೊಂದು ಉಬ್ಬು ಶಿಲ್ಪಗಳಿದ್ದು ಒಂದು ಎರಡುವರೆ ಅಡಿ ಎತ್ತರದ ಪುರುಷ ಶಿಲ್ಪ ಹಾಗೂ ಮತ್ತೊಂದು ಒಂದೂ ಕಾಲು ಅಡಿ ಎತ್ತರದ ಕುಳಿತಿರುವ ಮೂರ್ತಿಗಳಾಗಿವೆ. ಇದು ಈ ದೇವಾಲಯದ ನಿರ್ಮಾತೃಗಳದ್ದಾಗಿರಬೇಕು ಎಂದು ಹೇಳಲಾಗುತ್ತಿದೆ. ಇವುಗಳ ಜೊತೆಗಿರುವ ಇನ್ನೆರಡು ಮೂರ್ತಿಗಳು ಆಕರ್ಷಕವಾಗಿದ್ದು, ಶಿವಲಿಂಗವನ್ನು ಪೂಜಿಸುತ್ತಿರುವ ವ್ಯಾಘ್ರಪಾದ ಹಾಗೂ ಲಿಂಗವನ್ನು ಮೆಟ್ಟಿ ತನ್ನ ಕಣ್ಣನ್ನು ಬಾಣದಿಂದ ತೆಗೆಯುತ್ತಿರುವ ಬೇಡರ ಕಣ್ಣಪ್ಪನ ವಿಗ್ರಹಗಳಾಗಿವೆ.

ಇಲ್ಲಿನ ಇನ್ನಿತರ ದೇವಾಲಯಗಳಲ್ಲಿ ರುದ್ರೇಶ್ವರ ದೇವಾಲಯದ ಮೂಲ ಮೂರ್ತಿ ವೀರಭದ್ರ ದೇವರ ಅಕ್ಕಪಕ್ಕದಲ್ಲಿ ಭದ್ರಕಾಳಿ ಹಾಗೂ ದಕ್ಷರ ಮೂರ್ತಿಗಳಿವೆ. ಇಲ್ಲಿಯ ಕೇಶವ ದೇವಾಲಯದಲ್ಲಿ ಚಾಮರಾಜ ಒಡೆಯರ ಪಟ್ಟಾಭಿಷೇಕ ಮಹೋತ್ಸವದ ನೆನಪಿಗಾಗಿ ೧೮೮೧ರಲ್ಲಿ ಮಂಟಪವನ್ನು ನಿರ್ಮಿಸಲಾಗಿದೆ. ಬೇಡರಕಣ್ಣಪ್ಪನ ಗುಡಿಯ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಅದರ ಹಿಂಭಾಗದಲ್ಲಿ ಬಿಲ್ಲುದಾರಿ ಬೇಡರಕಣ್ಣಪ್ಪನು ಈಶ್ವರಲಿಂಗವನ್ನು ಪೂಜೆಗೈಯುತ್ತಿರುವ ಮೂರ್ತಿಶಿಲ್ಪವಿದೆ. ಯಲ್ಲಮ್ಮ ದೇವಾಲಯವು ಗ್ರಾಮದೇವತೆಯದ್ದಾಗಿದ್ದು, ಈ ದೇವತೆಯನ್ನು ರೇಣುಕಾದೇವಿ ಎಂಬುದಾಗಿಯೂ ಕರೆಯುತ್ತಾರೆ. ಹಿರಿಮಾವರದಾ ಯಲ್ಲಮ್ಮ ಎನ್ನುವುದು ರೂಢಿಮೂಲವಾಗಿದೆ. ಉತ್ಸವ ಮೂರ್ತಿಯು ರೇಣುಕಾದೇವಿಯ ಮಗ ಪರಶುರಾಮನದ್ದಾಗಿದೆ. ಇದನ್ನು ಮರದಲ್ಲಿ ಮಾಡಲಾಗಿದೆ. ರೇಣುಕಾದೇವಿ ಮೂರ್ತಿಯ ಬಲಭಾಗದಲ್ಲಿ ರೇಣುಕೆಯ ಪತಿ ಜಮದಗ್ನಿಯ ಆಸೀನ ಮೂರ್ತಿ ಇದೆ. ದೇವಾಲಯದ ಹೊರಗೆ ಮಾತಂಗಿ ಹಾಗೂ ಆಕೆಯ ಮಗ ಪಾತಪ್ಪರ ವಿಗ್ರಹವಿರುವ ಎರಡು ಚಿಕ್ಕಗುಡಿಗಳಿವೆ.

ಇಲ್ಲಿ ಪ್ರಮುಖವಾಗಿ ಉಲ್ಲೇಖಿಸಬೇಕಾದ ಸ್ಮಾರಕ ಮುಸಲ್ಮಾನ್ ಸಂತ ತಾತಯ್ಯನ ಗೋರಿ. ಪ್ರತೀವರ್ಷ ಉರುಸ್ ನಡೆಯುತ್ತದೆ. ಇದರಲ್ಲಿ ಮುಸಲ್ಮಾನರು ಮತ್ತು ಹಿಂದೂಗಳು ಒಟ್ಟಾಗಿ ಭಾಗಿವಹಿಸುತ್ತಾರೆ. ಉತ್ಸವದ ವಿಶೇಷ, ಕವಾಲಿ ಗಾಯನ. ಒಟ್ಟಾರೆ ಇದು ಭಾವೈಕ್ಯತೆಯ ಕೇಂದ್ರವಾಗಿದೆ.

**ಚೆನ್ನರಾಯನದುರ್ಗ (ಜನಸಂಖ್ಯೆ. ೮೩೭)**: ತಾಲೂಕು ಕೇಂದ್ರ ಕೊರಟಗೆರೆಯಿಂದ ಉತ್ತರಕ್ಕೆ ೧೦.ಕಿ.ಮೀ. ಹಾಗೂ ಮಧುಗಿರಿಯಿಂದ ಎಂಟು ಕಿ.ಮೀ. ನೈಋತ್ಯಕ್ಕಿದ್ದು, ಊರಿನ ಪಕ್ಕದಲ್ಲಿ ಕೋಟೆಯಿದೆ. ಮಧುಗಿರಿ–ಬಿಜ್ಜಾವರ ಮಹಾನಾಡಪ್ರಭುಗಳ ವಂಶದ ಅರಸ ಇಮ್ಮಡಿ ಭೂಪಾಲ ತನ್ನ ದ್ವಿತೀಯ ಪುತ್ರ ಚೆನ್ನಪ್ಪಗೌಡನ ಸ್ಮರಣಾರ್ಥವಾಗಿ ಕ್ರಿ.ಶ. ೧೬೧೩ರಲ್ಲಿ ಈ ಕೋಟೆಯನ್ನು ನಿರ್ಮಿಸಿ, ಚೆನ್ನಕೇಶವಮೂರ್ತಿಯನ್ನು ಪ್ರತಿಷ್ಠಾಪಿಸಿದನೆಂದು ತಿಳಿದುಬರುತ್ತದೆ. ಹಾಗಾಗಿ ಈ ಊರಿಗೆ ಚೆನ್ನರಾಯನದುರ್ಗವೆಂದು ಹೆಸರು ಬಂದಿದೆ.

ಗ್ರಾಮವನ್ನು ಸುತ್ತುವರಿದಿರುವ ಕೋಟೆಯ ಪೂರ್ವ ಮತ್ತು ಪಶ್ಚಿಮಕ್ಕೆ ಬಾಗಿಲುಗಳ ಕುರುಹುಗಳಿವೆ. ಊರಿನ ಉತ್ತರಕ್ಕೆ ಬೆಟ್ಟದ ಮೇಲೆ ಬಲವಾದ ಕೋಟೆ ಇದೆ. ಆದರೆ ಬಹಳಷ್ಟು ಭಾಗ ಶಿಥಿಲವಾಗಿದೆ. ಕೋಟೆಯ ಗೋಡೆಗೆ ತಾಗಿದಂತೆ ಕಾವಲುಗಾರರ ಗೃಹಗಳಿವೆ. ಪೂರ್ವಭಾಗ ಕಡಿದಾಗಿರುವುದರಿಂದ ಅಲ್ಲಿ ಕೋಟೆಯನ್ನು ನಿರ್ಮಿಸಿಲ್ಲ. ಬೆಟ್ಟದ ಮೇಲೆ ಮೂರು ಸುತ್ತಿನ ಕೋಟೆ ಇದೆ. ಮೊದಲನೆ ಸುತ್ತಿನ ಕೋಟೆಯ ನಾಲ್ಕೂ ಕಡೆಗಳಲ್ಲೂ ದ್ವಾರವಿದ್ದು, ಅಲ್ಲಲ್ಲಿ ನೀರಿನ ಆಸರೆಗಳಿವೆ. ಇಲ್ಲಿ ಎರಡು ಬಾಗಿಲುಗಳಿದ್ದು, ಒಂದು ಬಾಗಿಲು ದಕ್ಷಿಣಕ್ಕಿದೆ, ಮತ್ತೊಂದು ಬಾಗಿಲು ಉತ್ತರಕ್ಕಿದೆ. ಇವನ್ನು ಮಧ್ಯಮ ಗಾತ್ರದ ಕಲ್ಲು ಮತ್ತು ಗಾರೆಯನ್ನು ಬಳಸಿ ನಿರ್ಮಿಸಲಾಗಿದೆ. ಅಲ್ಲಲ್ಲಿ ಆಯಾತಾಕಾರದ ಕೊತ್ತಲಗಳಿವೆ. ಇಲ್ಲಿ ತೋಪುಕಿಂಡಿ ಹಾಗೂ ಬಂದೂಕು ಕಿಂಡಿಗಳಿವೆ. ಕೋಟೆಗೆ ಅಲ್ಲಲ್ಲಿ ತೋಪಿನ ಗುಂಡುಗಳ ಗುರುತು ಕಂಡುಬರುತ್ತದೆ. ದಕ್ಷಿಣ ದಿಕ್ಕಿನ ಬಾಗಿಲಿನ ಪ್ರವೇಶ ದುಸ್ತರವಾಗಿದ್ದು, ಶತ್ರುಗಳಿಗೆ ಸುಲಭವಾಗಿ ಒಳಪ್ರವೇಶಕ್ಕೆ ಅಡ್ಡಿಯಾಗಲೆಂದು ಈ ರೀತಿ ನಿರ್ಮಿಸಲಾಗಿದೆ. ಒಳಭಾಗದ ಪಶ್ಚಿಮ ಗೋಡೆಯಲ್ಲಿ ಗಣೇಶಶಿಲ್ಪ, ಮಂಟಪದ ಪಕ್ಕದಲ್ಲಿ ಉತ್ತರದಲ್ಲಿ ನಂದಿಯಶಿಲ್ಪ, ಬಾಗಿಲಿನ ಹೊರಗೆ ಗೋಡೆಯಲ್ಲಿ ನಾಗರ ಹಾವಿನಶಿಲ್ಪ ಹಾಗೂ ಎರಡು ಮರಾಠಿ ಶಾಸನಗಳಿವೆ. ಮಧುಗಿರಿ ಬಾಗಿಲಿನ ಎದುರು ಆಂಜನೇಯ ಶಿಲ್ಪವಿದೆ. ಹೊರಬಾಗಿಲಿನಲ್ಲಿ ಗಣೇಶನಶಿಲ್ಪವಿದೆ. ಮೊದಲನೆ ಕೋಟೆಯೊಳಗಿರುವ ಚೌಕಾಕಾರದ ಮೂರು ಬತೇರುಗಳು ತೋಪು ಕಿಂಡಿಯನ್ನೊಳಗೊಂಡಿದೆ. ಇಲ್ಲಿ ದೊಣೆ, ಕಣಜಗಳಿದ್ದು, ಚನ್ನಿಗರಾಯ ಹಾಗೂ ಈಶ್ವರನ ಚಿಕ್ಕ ದೇವಾಲಯಗಳಿವೆ. ಉತ್ತರ ಭಾಗದಲ್ಲಿ ಮಂಟಪವೊಂದಿದೆ. ಎರಡನೆಯ ಕೋಟೆಯೂ ಮೊದಲ ಸುತ್ತಿನಂತೆಯೇ ಇದ್ದು, ಈ ಕೋಟೆಯೊಳಗೆ ಸಭಾಂಗಣ ಹಾಗೂ ಕಟ್ಟಡದ ಅವಶೇಷಗಳಿವೆ. ಬೆಟ್ಟದ ತುದಿಯಲ್ಲಿರುವ ಮೂರನೇ ಸುತ್ತಿನ ಕೋಟೆಯು ಉತ್ತರಕ್ಕೆ ಚಾಚಿಕೊಂಡಿದ್ದು, ಆಯತಾಕಾರದ ಕೊತ್ತಲಗಳು, ದೊಣೆ, ಕಣಜ ಮತ್ತು ಮದ್ದಿನ ಮನೆಗಳನ್ನು ಹೊಂದಿದೆ.

**ಚೇಳೂರು (ಜನಸಂಖ್ಯೆ. ೪,೮೮೦)**: ಚೇಳೂರು ಧಾರ್ಮಿಕ ಕ್ಷೇತ್ರವೆನಿಸಿದ್ದು, ತಾಲೂಕು ಕೇಂದ್ರ ಗುಬ್ಬಿಗೆ ೨೦ ಕಿ.ಮೀ. ದೂರದಲ್ಲಿದೆ. ಈ ಗ್ರಾಮದ ಪ್ರಾಮುಖ್ಯತೆ ಇರುವುದು ಮರಳು ಬಸವಣ್ಣ, ಕಲ್ಲುಬಾವಿ ಹಾಗೂ ಕಲ್ಲುಕೋಳಿ ಇರುವ ಕಲ್ಲಿನಬಾಗಿಲು. ಚೋಳಮನೆತನದ ಆಳ್ವಿಕೆಯಿಂದಾಗಿ ಈ ಊರಿಗೆ ಚೋಳನೂರು, ಎಂಬ ಹೆಸರು ಬಂದು, ಮುಂದೆ ಅದೇ 'ಚೇಳೂರು' ಎಂದಾಯಿತೆಂದು ಹೇಳಲಾಗುತ್ತದೆ. ನೊಳಂಬ ವೀರಶೈವ ಮನೆತನದ ಒಂದು ಶಾಖೆ ಇಲ್ಲಿಂದ ಆಳುತ್ತಿತ್ತೆಂದು ತಿಳಿದುಬರುತ್ತದೆ.

ಮರಳುಬಸವೇಶ್ವರ ದೇಗುಲವು ಮರಳಿನಿಂದ ಉದ್ಭವವಾಗಿದೆ ಎಂಬ ಐತಿಹ್ಯವಿದೆ. ಊರಿನ ದಕ್ಷಿಣಕ್ಕೆ ಅರ್ಧ ಕಿ.ಮೀ. ದೂರದಲ್ಲಿದೆ. ಇದನ್ನು ಶರಣರ ನೆನಪಿಗೆ ನಿರ್ಮಿಸಿದ್ದೆಂದು ಹೇಳಲಾಗಿದೆ. ಮೊದಲು ಇದಕ್ಕೆ ಮಂಟಪ ಮಾತ್ರ ಇದ್ದಿತು. ಆದರೆ ಈಗ ದೇವಾಲಯ ನಿರ್ಮಾಣವಾಗಿದೆ. ಮರುಳು ಬಸವೇಶ್ವರನ ಒಂದು ಪಕ್ಕದಲ್ಲಿ ಗಂಗಾದೇವತೆ, ಮತ್ತೊಂದು ಪಕ್ಕದಲ್ಲಿ ನವಗ್ರಹ ವಿಗ್ರಹಗಳನ್ನು ಸ್ಥಾಪಿಸಲಾಗಿದೆ. ಗರ್ಭಗುಡಿಯ ಸುತ್ತ ೧೦೧ ಶಿವಲಿಂಗಗಳನ್ನು ಕೆತ್ತಲಾಗಿದೆ. ಪ್ರತೀವರ್ಷ ಬಸವಜಯಂತಿಯಂದು ಮರಳುಬಸವೇಶ್ವರನ ಜಾತ್ರೆ ನಡೆಯುತ್ತದೆ.

ಕಲ್ಲು ಬಾವಿಯು ಭೈರವೇಶ್ವರ ದೇವಾಲಯದ ಸಮೀಪವೇ ಇದೆ. ಈ ಬಾವಿಯನ್ನು ಸೂಳೆಯೊಬ್ಬಳು ತನ್ನ ಜ್ಞಾಪಕಾರ್ಥವಾಗಿ ನಿರ್ಮಿಸಿದ್ದೆಂದು ಹೇಳಲಾಗುತ್ತದೆ. ಇದನ್ನು ಚೇಳೂರುಬಾವಿ ಎಂದೇ ಕರೆಯುತ್ತಾರೆ. ಈ ಕಲ್ಲುಬಾವಿ ೪೫ ಅಡಿ ಆಳವಿದ್ದು ಬಾವಿಗೆ ಇಳಿಯಲು ಮೆಟ್ಟಿಲುಗಳಿವೆ. ಕಲ್ಲನ್ನು ಬಳಸಿ ಬಾವಿಯನ್ನು ನಿರ್ಮಿಸಿರುವುದರಿಂದ ಕಲ್ಲುಬಾವಿ ಎಂದು ಕರೆಯುತ್ತಾರೆ. ಊರ ಬಾಗಿಲಿನಲ್ಲಿ ಬೃಹತ್ ಶಿಲೆಯೊಂದರಲ್ಲಿ ಕೋಳಿಯೊಂದನ್ನು ಕೆತ್ತಲಾಗಿದೆ. ಕೋಳಿ ಕೂಗಿದರೆ ಕಲ್ಲುಬಾವಿ ಉಕ್ಕಿ ಹರಿದರೆ ಬಸವಣ್ಣ ಗುಟುರು ಹಾಕಿದರೆ ಪ್ರಳಯವಾಗುತ್ತದೆ ಎಂಬ ಐತಿಹ್ಯವಿದೆ. ಇವುಗಳ ಜೊತೆಗೆ ಬೀಡಿನ ಸಿದ್ದೇಶ್ವರ, ಭೈರವೇಶ್ವರ, ಧೃಷ್ಟೇಶ್ವರ, ತಿರುಮಲವೆಂಕಟೇಶ್ವರ ಮೊದಲಾದ ಇನ್ನಿತರ ದೇವಾಲಯಗಳೂ ಇವೆ.

**ತಂಡಗ (ಜನಸಂಖ್ಯೆ. ೧,೮೫೩)**: ತಾಲೂಕು ಕೇಂದ್ರ ತುರುವೇಕೆರೆಗೆ ಎಂಟು ಕಿ.ಮೀ. ದೂರದಲ್ಲಿದ್ದು, ಹಿಂದೆ ಇದೊಂದು ಅಗ್ರಹಾರವಾಗಿತ್ತು. ಶಾಸನದಲ್ಲಿ ಇದನ್ನು 'ಶಂಕರನಾರಾಯಣಪುರ' ಎಂದು ಕರೆಯಲಾಗಿದೆ. ಊರಿನ ಮಧ್ಯದಲ್ಲಿ ಚನ್ನಕೇಶವ ದೇವಾಲಯವಿದ್ದು, ಆಗ್ನೇಯದಲ್ಲಿ ಮೂಲಸ್ಥಾನೇಶ್ವರ ಅಥವಾ ಮಲ್ಲೇಶ್ವರ ದೇವಾಲಯವಿದೆ. ಶಕಪುರಷ 'ಶಾಲಿವಾಹನ'ನ ಜನ್ಮಸ್ಥಳ ಇದೆಂಬ ಐತಿಹ್ಯವಿದೆ.

ಚನ್ನಕೇಶವ ದೇವಾಲಯವು ಸುಮಾರು ೧೪ನೇ ಶತಮಾನದ ಹೊಯ್ಸಳ ನಿರ್ಮಿತಿಯಾಗಿದೆ. ಇದಕ್ಕೆ ಜಗತಿ ಇಲ್ಲ. ಗೋಡೆಯಲ್ಲಿ ಐದು ಪಟ್ಟಿಕೆಗಳು, ಗೋಡೆಯ ಮೇಲೆ ಕಿರುಕಂಬ ಹಾಗೂ ಗೋಪುರಗಳಿವೆ. ಗರ್ಭಗುಡಿಯ ಗೋಡೆಯಲ್ಲಿ ಸ್ಥಾನಕವಿಷ್ಣು, ಉಗ್ರನರಸಿಂಹ, ಬ್ರಹ್ಮ, ಉಮಾಮಹೇಶ್ವರ ಮೊದಲಾದ ವಿಗ್ರಹಗಳಿವೆ. ಮುಖಮಂಟಪದಲ್ಲಿ ಬಳಪದಕಲ್ಲಿನ ಎರಡು ಸ್ತಂಭಗಳಿದ್ದು ಮೇಲ್ಚಾವಣಿಯಲ್ಲಿ ಕಮಲವನ್ನು ಬಿಡಿಸಲಾಗಿದೆ. ನವರಂಗದಲ್ಲಿ ಕ್ರಿ.ಶ. ೧೩೧೬ರ ಹೊಯ್ಸಳ ಶಾಸನವಿದೆ. ಸುಕನಾಸಿಯ ದ್ವಾರವು ಜಾಲಾಂದ್ರವನ್ನು ಹೊಂದಿದ್ದು, ಮೇಲ್ಭಾಗದಲ್ಲಿ ಗಜಲಕ್ಷ್ಮಿ ವಿಗ್ರಹವಿದೆ. ಗರ್ಭಗೃಹದಲ್ಲಿ ಐದು ಅಡಿ ಎತ್ತರದ ಕೇಶವನ ಮೂರ್ತಿ ಇದೆ.

ಮಲ್ಲೇಶ್ವರ ದೇವಾಲಯ ಇಲ್ಲಿಯ ಮತ್ತೊಂದು ಪ್ರಾಚೀನ ದೇವಾಲಯವಾಗಿದ್ದು, ಇದು ನೊಣವಿನಕೆರೆಯ ನೊಣಬೇಶ್ವರ ಗುಡಿಯನ್ನೇ ಹೋಲುತ್ತದೆ. ನವರಂಗದ ಬಾಗಿಲು ಅಷ್ಟೇನೂ ಅಲಂಕೃತವಾಗಿಲ್ಲ. ಭುವನೇಶ್ವರಿಯು ಏಕಶಿಲಾ ಪದ್ಮಪುಷ್ಪವನ್ನು ಹೊಂದಿದ್ದು, ಇದು ಕ್ರಿ.ಶ. ೧೦೦೦ದಲ್ಲಿ ನಿರ್ಮಿತವಾದುದೆಂದು ತಿಳಿಯುತ್ತದೆ. ನವರಂಗ ದ್ವಾರದಲ್ಲಿ ಗಣೇಶ ಮತ್ತು ಆಸೀನ ಪಾರ್ವತಿ ವಿಗ್ರಹಗಳಿವೆ. ಸುಖನಾಸಿಯಲ್ಲಿ ನಂದಿ, ನವರಂಗ ದ್ವಾರದ ಮುಂದೆ ಹಾಗೂ ಮತ್ತೊಂದು ನಂದಿ ದೇವಾಲಯದ ಮುಂದಿದೆ. ಭೈರವ, ವೀರಭದ್ರ, ಇಂದ್ರಾಣೀ, ಕೌಮಾರಿ, ಮಾಹೇಶ್ವರಿ (ಸಪ್ತಮಾತೃಕೆಯರ) ವಿಗ್ರಹಗಳಿಂದ ಕೂಡಿದ ಸಪ್ತಮಾತೃಕಾ ದೇವಾಲಯವಿದೆ. ಇಲ್ಲಿ ಹೊಯ್ಸಳ ವೀರ ಬಲ್ಲಾಳನ ಕಾಲದ ಎರಡು ಹಾಗೂ ವಿಷ್ಣುವರ್ಧನನ ಕಾಲದ ಒಂದು ವೀರಗಲ್ಲುಗಳಿವೆ.

**ತಡಕಲೂರು (ಜನಸಂಖ್ಯೆ. ೩,೬೯೦)**: ಶಿರಾ ತಾಲೂಕಿನಲ್ಲಿ ಶಿರಾ–ಅಮರಾಪುರ ಮಾರ್ಗದಲ್ಲಿ ತಡಕಲೂರು ಗೇಟ್‌ನಿಂದ ಬಲಕ್ಕೆ ಮೂರು ಕಿ.ಮೀ. ಹಾಗೂ ಶಿರಾದಿಂದ ೩೬ ಕಿ.ಮೀ. ದೂರದಲ್ಲಿದೆ. ಇಲ್ಲಿನ ಪ್ರಾಚೀನ ಬಸವೇಶ್ವರ

ದೇವಾಲಯ, ದ್ರಾವಿಡ ಶೈಲಿಯಲ್ಲಿದ್ದು ನವರಂಗದ ಬಾಗಿಲುವಾಡವು ಎರಡು ಶಾಖೆಗಳನ್ನು ಹೊಂದಿದೆ. ಒಂದು ಹಗ್ಗದ ಹುರಿಯಂತೆ ಹಾಗೂ ಇನ್ನೊಂದು ಪದ್ಮದಳದಂತೆ ಚಿತ್ರಿತವಾಗಿದೆ. ದ್ವಾರಬಂಧದಲ್ಲಿ ಪಾಲಕರಾಗಲೀ, ಲಲಾಟಬಿಂಬವಾಗಲೀ ಇಲ್ಲ. ಇದನ್ನು ಮರದಲ್ಲಿ ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ನಂದಿ ವಿಗ್ರಹವಿದ್ದು, ನೊಳಂಬ ಕಾಲದ್ದಾಗಿದೆ. ನಂದಿಯು ನಾಲ್ಕುವರೆ ಅಡಿ ಎತ್ತರವಿದೆ. ದ್ವಾರಬಂಧವು ಅಲಂಕೃತವಾಗಿದೆ. ಇದರಲ್ಲಿ ಗಂಧರ್ವ ಸ್ತ್ರೀಯರ ಅರೆನಗ್ನ ಶಿಲ್ಪಗಳಿವೆ. ಇವರು ಚಾಮರಧಾರಿಣಿಯರಾಗಿದ್ದು, ಕೈಯಲ್ಲಿ ಕಮಂಡಲವನ್ನು ಹಿಡಿದಿದ್ದು, ಈ ದೇವಾಲಯವು ಇತ್ತೀಚೆಗೆ ಜೀರ್ಣೋದ್ಧಾರಗೊಂಡಿದೆ. ಗರ್ಭಗುಡಿಯ ಮುಂದೆ ನವರಂಗ ಮಂಟಪವಿದ್ದು, ಇಲ್ಲಿನ ಕಂಬಗಳು ೧೨ನೇ ಶತಮಾನದ್ದಾಗಿದ್ದು, ಅಷ್ಟಪಟ್ಟಿಕೆ ಹಾಗೂ ಹದಿನಾರು ಪಟ್ಟಿಕೆಗಳನ್ನೊಳಗೊಂಡಿವೆ. ಇಲ್ಲಿರುವ ದ್ವಾರಮಂಟಪವು ಎಂಟು ಕಂಬಗಳನ್ನು ಹೊಂದಿದೆ. ಇಲ್ಲಿನ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ವಾರ್ಷಿಕ ಉತ್ಸವವು ಕದರಿ ಹುಣ್ಣಿಮೆಯಂದು ನಡೆಯುತ್ತದೆ. ಇಲ್ಲಿಯ ಕೆರೆಯು ತುಂಬಿದ ಮೇಲೆ ದೇಶವಿದೇಶದಿಂದ ಪಕ್ಷಿಗಳು ಬಂದು ತಂಗುತ್ತಿದ್ದು, ಇದೊಂದು ಪ್ರಮುಖ ಪಕ್ಷಿಧಾಮವಾಗಿ ರೂಪುಗೊಳ್ಳುತ್ತಿದೆ.

**ತಾವರೆಕೆರೆ (ಜನಸಂಖ್ಯೆ. ೩,೨೧೭)**: ಶಿರಾ ತಾಲೂಕಿನಲ್ಲಿದ್ದು, ೧೨ ಕಿ.ಮೀ. ದೂರದಲ್ಲಿದೆ. ಇಲ್ಲಿ ಮೊರಡಿ ರಂಗನಾಥಸ್ವಾಮಿ, ಬಂಡಿ ರಂಗನಾಥಸ್ವಾಮಿ ಹಾಗೂ ಆಂಜನೇಯಸ್ವಾಮಿ ದೇವಾಲಯಗಳು ಪ್ರಸಿದ್ಧವಾಗಿವೆ. ಮೊರಡಿ ರಂಗನಾಥ ದೇವಾಲಯವು ಶಿರಾ-ತಾವರೆಕೆರೆ-ಬುಕ್ಕಾಪಟ್ಟ ಮಾರ್ಗದಲ್ಲಿ ಮಾರನಗೆರೆ ಗೊಲ್ಲರಹಟ್ಟಿಯಿಂದ ಮೂರು ಕಿ.ಮೀ. ದೂರದಲ್ಲಿ ಗುಡ್ಡದ ಮೇಲಿದೆ. ದೇವಾಲಯವು ಗರ್ಭಗೃಹ ಮತ್ತು ನವರಂಗಗಳನ್ನು ಹೊಂದಿದ್ದು, ಶ್ರೀನಿವಾಸಮೂರ್ತಿಯನ್ನು ಸ್ಥಾಪಿಸಲಾಗಿದೆ. ಬಲಭಾಗದಲ್ಲಿ ನಾಗಶಿಲ್ಪವನ್ನು ಇಡಲಾಗಿದೆ. ನವರಂಗವು ಸಾಮಾನ್ಯ ರೀತಿಯ ನಾಲ್ಕು ಚಚ್ಚೌಕಾಕಾರದ ಕಂಬಗಳನ್ನು ಹೊಂದಿದೆ. ವಿಜಯನಗರೋತ್ತರ ಕಾಲದ ವಿಮಾನವನ್ನು ಗರ್ಭಗುಡಿಯ ಮೇಲೆ ನೋಡಬಹುದಾಗಿದೆ.

ಬಂಡಿ ರಂಗನಾಥಸ್ವಾಮಿ ದೇವಾಲಯವು ಶಿರಾ-ಹಿರಿಯೂರು ಹೆದ್ದಾರಿಯಲ್ಲಿದೆ. ದೇವರ ಮೂಲರೂಪವು ರಥದ ಗಾಲಿಯಾದುದರಿಂದ ಬಂಡಿರಂಗನಾಥ, ಗಾಲಿರಂಗನಾಥ ಹಾಗೂ ಪಾಡುರಂಗನಾಥಸ್ವಾಮಿ ಎಂದೂ ಕರೆಯುತ್ತಾರೆ. ಈ ದೇವಾಲಯಕ್ಕೆ ಪೂರ್ವ ಮತ್ತು ಉತ್ತರ ದಿಕ್ಕಿಗೆ ಪ್ರವೇಶದ್ವಾರವಿದ್ದು, ಉತ್ಸವಾದಿಗಳಿಗೆ ಪ್ರದಕ್ಷಿಣಾಪಥವಿದೆ. ಗರ್ಭಗೃಹದಲ್ಲಿ ರಂಗನಾಥಸ್ವಾಮಿಯ ಮೂರ್ತಿ ಹಾಗೂ ಎಡಭಾಗದ ಗರ್ಭಗೃಹದಲ್ಲಿ ಮಹಾಲಕ್ಷ್ಮೀ ವಿಗ್ರಹ, ಬಲಭಾಗದ ಗರ್ಭಗೃಹದಲ್ಲಿ ಉತ್ಸವಮೂರ್ತಿಯನ್ನು ಇಡಲಾಗಿದೆ. ಮುಂಭಾಗದಲ್ಲಿ ಹದಿನಾರು ಕಂಬಗಳಿರುವ ತೆರೆದ ನವರಂಗ ಮಂಟಪವಿದೆ. ಗರ್ಭಗೃಹದ ಮೇಲ್ಭಾಗದಲ್ಲಿ ಒಂಬತ್ತು ಸೋಪಾನದ ಗಾರೆ ಶಿಖರವನ್ನು ಹೊಸದಾಗಿ ನಿರ್ಮಿಸಿದಂತಿದೆ. ವಾಯವ್ಯದಲ್ಲಿ ನವಗ್ರಹಗಳನ್ನು ನಿರ್ಮಿಸಲಾಗಿದೆ. ದೇವಾಲಯದ ಮುಂದೆ ಸುಮಾರು ಹದಿನೆಂಟು ಅಡಿ ಎತ್ತರದ ಧ್ವಜಸ್ತಂಭವಿದೆ. ಆಂಜನೇಯಸ್ವಾಮಿ ದೇವಾಲಯವು ದಕ್ಷಿಣಾಭಿಮುಖವಾಗಿದ್ದು, ಗರ್ಭಗೃಹ ಮತ್ತು ಮುಖಮಂಟಪಗಳನ್ನು ಹೊಂದಿದೆ. ಮೂಲಮೂರ್ತಿ ಆರು ಅಡಿ ಎತ್ತರ ಹಾಗೂ ನಾಲ್ಕು ಅಡಿ ಅಗಲವಿದ್ದು, ವಿಜಯನಗರ ಕಾಲದ್ದಾಗಿದೆ. ಮುಖಮಂಟಪವು ಹದಿನಾಲ್ಕು ಅಡಿ ಇದ್ದು, ಚಚ್ಚೌಕವಾಗಿದೆ. ಮುಂಭಾಗದಲ್ಲಿ ಹದಿನಾಲ್ಕು ಅಡಿ ಎತ್ತರದ ಧ್ವಜಸ್ತಂಭವಿದೆ.

**ತಿಪಟೂರು (ಜನಸಂಖ್ಯೆ. ೫೩,೧೦೪)**:'ಕಲ್ಪತರುವಿನ ಬೀಡು' ಎಂದು ಪ್ರಸಿದ್ದವಾಗಿರುವ ತಿಪಟೂರು, ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಲ್ಲೊಂದು. ಜಿಲ್ಲಾ ಕೇಂದ್ರದಿಂದ ಪಶ್ಚಿಮಕ್ಕೆ ೭೧ ಕಿ.ಮೀ. ದೂರದಲ್ಲಿದೆ. ಬೆಂಗಳೂರು–ಹೊನ್ನಾವರ ರಾಷ್ಟ್ರೀಯ ಹೆದ್ದಾರಿ-೨೦೬ ಹಾಗೂ ಬೆಂಗಳೂರು–ಮುಂಬೈ ರೈಲ್ವೇ ಮಾರ್ಗಗಳು ತಿಪಟೂರನ್ನು ಹಾದು ಹೋಗುತ್ತವೆ. ಮೊದಲು, ಹೊನ್ನವಳ್ಳಿ ತಾಲೂಕು ಕೇಂದ್ರವಾಗಿದ್ದು, ೧೮೮೬ರಲ್ಲಿ ತಾಲೂಕು ಕೇಂದ್ರವು ತಿಪಟೂರಿಗೆ ವರ್ಗಾವಣೆಗೊಂಡಿತು. ಇದು ಕೊಬ್ಬರಿ ವ್ಯಾಪಾರದ ಪ್ರಮುಖ ಕೇಂದ್ರವಾಗಿ, ವಾಣಿಜ್ಯೋದ್ಯಮ ನಕ್ಷೆಯಲ್ಲಿ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ತನ್ನದೇ ಆದ ಸ್ಥಾನವನ್ನು ಹೊಂದಿದೆ.

**ತಿಪಟೂರು ಮೂಲತಃ** 'ತ್ರಿಪಟ್ಟ' ಊರು ಆಗಿದ್ದು, ಮೂರು ಪಟ್ಟಗಳಿರುವ ಊರು ಎನ್ನಲಾಗುತ್ತದೆ. ಆದರೆ ಶಾಸನಗಳು 'ತಿಬ್ಬಟೂರು' 'ತಿಪ್ಪಟೂರು' ಎಂದು ಉಲ್ಲೇಖಿಸಿವೆ. ಇಲ್ಲಿನ ಹೊಯ್ಸಳ ಶಾಸನ 'ತಿಪ್ಪಟೂರು' ಎಂದು ಹೇಳಿದೆ. 'ತಿಪಟೂರು' ಗಂಗ, ನೊಳಂಬ, ಹೊಯ್ಸಳ, ವಿಜಯನಗರ, ಹಾಗೂ ಹಾಗಲವಾಡಿ ಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದ ವಿವರವನ್ನು ಶಾಸನ, ವೀರಗಲ್ಲು ಹಾಗೂ ಇನ್ನಿತರ ದಾಖಲೆಗಳು ಸೂಚಿಸುತ್ತವೆ. ನಗರದಲ್ಲಿ ಕಲ್ಲೇಶ್ವರಸ್ವಾಮಿ,

ಮಲ್ಲಿಕಾರ್ಜುನ, ಕಾಶಿವಿಶ್ವೇಶ್ವರ, ಕನ್ನಿಕಾಪರಮೇಶ್ವರಿ, ಸುಬ್ರಮಣ್ಯಸ್ವಾಮಿ, ಕೆಂಪಮ್ಮ, ತಿಪಟೂರಮ್ಮ ಹಾಗೂ ಆಂಜನೇಯ ದೇವಾಲಯಗಳು ಪ್ರಾಮುಖ್ಯ ಪಡೆದಿವೆ. ಇಲ್ಲಿನ ಕಲ್ಲೇಶ್ವರ ದೇವಾಲಯ ಪ್ರಾಚೀನದ್ದಾಗಿದ್ದು ನೊಳಂಬರ ಕಾಲದ್ದೆಂದು ತಿಳಿಯುತ್ತದೆ. ದೇವಾಲಯದಲ್ಲಿ ಮೂರು ಲಿಂಗಗಳು ಸ್ಥಾಪನೆಯಾಗಿವೆ. ಕಾಶಿವಿಶ್ವೇಶ್ವರ ದೇವಾಲಯವು ವಿಜಯನಗರ ಶೈಲಿಯಲ್ಲಿದೆ. ಕನ್ನಿಕಾ ಪರಮೇಶ್ವರಿ ದೇವಾಲಯವು ಇತ್ತೀಚಿನ ರಚನೆಯಾಗಿದೆ.

**ತೀರ್ಥಪುರ (ಜನಸಂಖ್ಯೆ. ೧,೧೦೯)**: ಚಿಕ್ಕನಾಯಕನಹಳ್ಳಿ ತಾಲೂಕಿನ ಪಶ್ಚಿಮಕ್ಕೆ, ೨೪ ಕಿ.ಮೀ. ದೂರದಲ್ಲಿ, ಕಣಿವೆ ಪ್ರದೇಶದಲ್ಲಿದೆ. ಇಲ್ಲಿನ ಚಳಿರಾಮೇಶ್ವರ ಗುಡಿಯಲ್ಲಿ, ತೀರ್ಥವು ಸದಾ ಸುರಿಯುತ್ತಿದ್ದುದರಿಂದ ಈ ಗ್ರಾಮಕ್ಕೆ ತೀರ್ಥಪುರ ಎಂಬ ಹೆಸರು ಬಂದಿದೆ. ರಾಮೇಶ್ವರ ದೇವಸ್ಥಾನದ ಸಮೀಪ ನೀರಿನ ಬುಗ್ಗೆಯೊಂದು ಸ್ವಲ್ಪದೂರ ಹರಿದು ಮರಳಿನಲ್ಲಿ ಮರೆಯಾಗಿ ನಂತರ ನದಿಯಾಗಿ ಹರಿಯುತ್ತದೆ. ಇದರಿಂದ ಈ ಊರು ಪುಣ್ಯಕ್ಷೇತ್ರವಾಗಿದ್ದು, ಇಲ್ಲಿಯ ರಾಮೇಶ್ವರ ದೇವರು ಹಾಗಲವಾಡಿ ಪಾಳೆಯಗಾರರ ಮನೆದೇವರಾಗಿದ್ದು, ಅವರ ಹೆಚ್ಚಿನ ಶಾಸನಗಳು 'ತೀರ್ಥರಾಮೇಶ್ವರ' ಎಂಬ ಉಲ್ಲೇಖದೊಂದಿಗೆ ಅಂತ್ಯಗೊಳ್ಳುತ್ತವೆ. ಇದು, ಸಾರಸತ್ವ ಲೋಕದ ದಿಗ್ಗಜ, ಆಚಾರ್ಯ ತೀ. ನಂ.ಶ್ರೀಕಂಠಯ್ಯ (ತೀ.ನಂ.ಶ್ರೀ.) ನವರ ಜನ್ಮಸ್ಥಳವಾಗಿದೆ.

**ತುಮಕೂರು (ಜನಸಂಖ್ಯೆ. ೨,೪೮,೯೨೯)**: ಜಿಲ್ಲಾ ಕೇಂದ್ರ ತುಮಕೂರು ತನ್ನದೇ ಆದ ಭವ್ಯ ಪರಂಪರೆಯನ್ನು ಹೊಂದಿದೆ. ರಾಜ್ಯದ ರಾಜಧಾನಿಯಿಂದ ೭೦ ಕಿ.ಮೀ. ಪಶ್ಚಿಮಕ್ಕಿದ್ದು, ಇತ್ತೀಚಿನ ದಿನಗಳಲ್ಲಿ ಬೆಳವಣಿಗೆಯ ತೀವ್ರತೆಯಿಂದಾಗಿ ಹೆಚ್ಚಿಸಿಕೊಂಡು ಮಹಾನ್ ನಗರವಾಗುತ್ತಿದೆ. ವಿಪುಲ ಇತಿಹಾಸವನ್ನು ಹೊಂದಿರುವ ಈ ನಗರ ಧಾರ್ಮಿಕ, ಸಾಂಸ್ಕೃತಿಕ ಜಾನಪದ, ಶೈಕ್ಷಣಿಕ ಹಾಗೂ ಕೈಗಾರಿಕಾ ವೈಶಿಷ್ಟ್ಯಗಳಿಂದಾಗಿ ಮಹತ್ವ ಪಡೆದಿದೆ.

ತುಮಕೂರು ನಗರವು ಸುಮಾರು ೧೫–೧೬ನೇ ಶತಮಾನದಲ್ಲಿ ಪ್ರಮುಖ ಕೇಂದ್ರವಾಗಿದ್ದು, 'ತುಮಕೂರು' ನಾಮನಿಷ್ಪತ್ತಿಗೆ ಸಂಬಂಧಿಸಿದಂತೆ ವಿಭಿನ್ನ ಅಭಿಪ್ರಾಯಗಳಿವೆ. ಒಂದು ಐತಿಹ್ಯದಂತೆ ಈಗಿನ ಕೆರೆಕೋಡಿಯ ಸಮೀಪ ಗಡಿ ರಕ್ಷಣೆಗಾಗಿ ಟುಮಕಿ(ದೊಡನಗಾರಿ)ಯೊಂದನ್ನಿಟ್ಟು, ಶತ್ರುಗಳ ಚಲನವಲನವನ್ನನುಸರಿಸಿ ಈ ಟುಮಕಿಯನ್ನು ಬಾರಿಸಲಾಗುತ್ತಿತ್ತು. ಟುಮಕಿಯನ್ನಿಟ್ಟ ಗ್ರಾಮ 'ಟುಮಕಿಹಳ್ಳಿ', ಕಾಲಾಂತರದಲ್ಲಿ ತುಮಕೂರು ಎಂದಾಯಿತು ಎಂದು ಹೇಳಲಾಗುತ್ತದೆ. ಜನಪದರ ನಂಬಿಕೆಯಂತೆ 'ತುಂಬೆಊರು' ತುಂಬೆಗಿಡಗಳ ಊರಾಗಿದ್ದು ಕ್ರಮೇಣ 'ತುಮ್ಮೆಗೂರ' 'ತುಮಕೂರು' ಎಂದಾಯಿತೆಂದು ತಿಳಿಯುತ್ತದೆ.

ಸೋಮೆಕಟ್ಟೆ ದೇವಾಲಯದಲ್ಲಿ ದೊರೆತಿರುವ ಗಂಗರ ಶಿಲಾಶಾಸನದಲ್ಲಿ (ಕ್ರಿ.ಶ. ೯೫೫) ಇದು 'ತುಮ್ಮೆಗೂರು' ಎಂದು ಉಲ್ಲೇಖಿತವಾಗಿದೆ. ಅದೇ ರೂಢಿಮೂಲವಾಗಿ ತುಮಕೂರು ಎಂಬುದಾಗಿ ಪರಿವರ್ತಿತವಾಗಿದೆ. ನಗರದ ಇತಿಹಾಸ ಮತ್ತು ಧಾರ್ಮಿಕ ಹಿನ್ನೆಲೆಯ ಅರಿವಿಗೆ ಇಲ್ಲಿನ ದೇವಾಲಯಗಳು ನೆರವಾಗುತ್ತವೆ. ಇಲ್ಲಿ ಹಿಂದೂ, ಕ್ರೈಸ್ತ, ಇಸ್ಲಾಂ, ಜೈನ, ವೀರಶೈವ, ವೈಷ್ಣವ, ಶಕ್ತಿ ಅಥವಾ ದೇವಿ, ಆಂಜನೇಯ, ಗಣಪತಿ, ಬಸವಣ್ಣ, ಸುಬ್ರಮ್ಮಣ್ಯ, ನಾಗೇಶ್ವರ, ಪಾಂಡುರಂಗ ಮುಂತಾದ ವಿವಿಧ ಮತ ಮತ್ತು ಪಂಗಡಗಳ ದೇವಾಲಯಗಳನ್ನು ನೋಡಬಹುದಾಗಿದೆ. ಇಲ್ಲಿ ಸರ್ವಧರ್ಮಿಯರೂ ನೆಲೆಸಿದ್ದು ವಿವಿಧ ಕಾಲಕ್ಕೆ ಸೇರುವ ೭೦ಕ್ಕೂ ಹೆಚ್ಚು ದೇವಾಲಯಗಳನ್ನು ಗುರುತಿಸಬಹುದು. ಪ್ರಾಚೀನವೆನ್ನುವ ಕೆಲವು ಮಾತ್ರವಿದ್ದು, ಉಳಿದಂತೆ ನವೀನ ಅಥವಾ ನವೀಕೃತಗೊಂಡವುಗಳೇ ಆಗಿವೆ. ಇವುಗಳ ಕಾಲಘಟ್ಟವು ಇಲ್ಲಿನ ಇತಿಹಾಸ ಹಾಗೂ ಧಾರ್ಮಿಕ ಪರಂಪರೆಯ ಅವಲೋಕನಕ್ಕೆ ಒದಗಿಬರುತ್ತವೆ.

ತುಮಕೂರಿನ ಶಿರಾಗೇಟ್ ಸಮೀಪದಲ್ಲಿ ನಿಂತಿರುವ ಗಂಗರ ಕಾಲದ ಮಹಿಷಮರ್ಧಿನಿ ಅಥವಾ ದುರ್ಗಾಶಿಲ್ಪ; ಸೋಮೇಶ್ವರ ದೇವಾಲಯದಲ್ಲಿ ದೊರೆತಿರುವ ಶಿಲಾಶಾಸನ. ಈ ಶಾಸನಕ್ಕೂ ದೇವಾಲಯಕ್ಕೂ ಯಾವುದೇ ಸಂಬಂಧವಿಲ್ಲದಿದ್ದು ದೇವಾಲಯವು ಸುಮಾರು ೧೫–೧೬ನೇ ಶತಮಾನದ್ದೆನ್ನಬಹುದು. ಹೊಯ್ಸಳ ಕಾಲದ ಕೋಡಿ ಬಸವೇಶ್ವರ ದೇವಾಲಯದ ಗಣಪತಿ ಮತ್ತು ಬಸವನ ಪೀಠ, ಗರ್ಭಗೃಹದಲ್ಲಿರುವ ಶಿವಲಿಂಗ, ನಂದಿಗಳು ಸುಮಾರು ೧೨–೧೩ನೇ ಶತಮಾನದ್ದೆಂದು ಹೇಳಬಹುದಾಗಿದೆ.

ಲಕ್ಷ್ಮೀಕಾಂತ ಮತ್ತು ವೀರಭದ್ರ ದೇವಾಲಯಗಳು ವಿಜಯನಗರ ಕಾಲದ ವಾಸ್ತುಗಳಾಗಿವೆ. ಕೋಡಿ ಬಸವೇಶ್ವರ ದೇವಾಲಯದ ಗರುಡಗಂಬ ಶಾಸನವು ಕ್ರಿ.ಶ. ೧೫೧೬ರದ್ದಾಗಿದೆ. ಅನಂತರದ ಕಾಲದ ದೇವಾಲಯಗಳೆಂದರೆ ಪ್ರಸನ್ನ

ಗಂಗಾಧರೇಶ್ವರ, ಸಿದ್ಧಲಿಂಗೇಶ್ವರ, ಕಾಶಿವಿಶ್ವನಾಥ, ಮೊದಲಾದವು. ಮಾರಿಯಮ್ಮನ ದೇವಾಲಯದಲ್ಲಿ ಕ್ರಿ.ಶ. ೧೬೧೦ರ ಶಾಸನವೊಂದಿದೆ. ಹೆಚ್ಚಿನ ಎಲ್ಲಾ ದೇವಾಲಯಗಳು ಜೀರ್ಣೋದ್ಧಾರಗೊಂಡಿದ್ದು ಮೂಲ ರೂಪದಲ್ಲಿ ಉಳಿದಿಲ್ಲ. ಇವುಗಳ ಜೊತೆಗೆ ಹರಳೆಪೇಟೆ ಬಸವ, ಸುಂಕದ ಬಸವ ದೇವಾಲಯಗಳು ಪ್ರಾಚೀನದ್ದಾಗಿವೆ. ತುಮಕೂರು, ಹಿಂದೆ ಕ್ರೀಡಾಪುರದ ಒಂದು ಭಾಗವಾಗಿದ್ದು, ಪಟ್ಟಣವಾಗಿ, ಪ್ರತ್ಯೇಕ ಪ್ರದೇಶದ ಅಸ್ತಿತ್ವ ಪಡೆದು ಸ್ವತಂತ್ರ ನಗರವಾಗಿ ವಿಜಯನಗರ ಹಾಗೂ ಮೈಸೂರು ಅರಸರ ಕಾಲದಲ್ಲಿ ಬೆಳೆದ ಈ ನಗರವಿಂದು ಎಲ್ಲಾ ದಿಕ್ಕುಗಳೆಡೆಗೂ ವ್ಯಾಪಿಸುತ್ತಿದೆ.

ನಗರದ ಬಹು ಹಳೆಯ ಹಾಗೂ ವಿಶಾಲ ಲಕ್ಷ್ಮೀಕಾಂತ ದೇವಾಲಯವು ಪೂರ್ವಾಭಿಮುಖವಾಗಿದ್ದು ವಿಜಯನಗರ ಶೈಲಿಯಲ್ಲಿದೆ. ಈ ದೇವಾಲಯದಲ್ಲಿ ಅಧಿಷ್ಠಾನ, ಭಿತ್ತಿ ಮೊದಲಾದ ಹೊರಭಾಗಗಳು ಪುನರ್‌ನಿರ್ಮಾಣವಾಗಿವೆ. ಇದರ ಶಿಖರವು ವೃತ್ತಾಕಾರದಲ್ಲಿದ್ದು ಮೇಲ್ಭಾಗದಲ್ಲಿ ಕಲಶವಿದ್ದು ಮುಖ ಮೈಸೂರು ಅರಸರ ಕಾಲದ ಶೈಲಿಯನ್ನು ಹೋಲುತ್ತದೆ. ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮಂಟಪಗಳನ್ನು ಹೊಂದಿದ್ದು, ಇವುಗಳ ದ್ವಾರಬಂಧವು ಸರಳವಾಗಿದೆ. ಗರ್ಭಗೃಹದಲ್ಲಿ ಗರುಡ ಪೀಠದ ಮೇಲೆ ನಾಲ್ಕುವರೆ ಅಡಿ ಎತ್ತರದ ಆಸೀನ, ಲಕ್ಷ್ಮೀನರಸಿಂಹನ ವಿಗ್ರಹ ಸುಮಾರು ೧೪-೧೫ನೇ ಶತಮಾನದ್ದಾಗಿದೆ. ಲಕ್ಷ್ಮಿಯು ಸ್ವಾಮಿಯ ತೊಡೆಯ ಮೇಲೆ ಆಸೀನಳಾಗಿದ್ದು, ನಾರಾಯಣನು ಕಿರೀಟಮುಕುಟ ಧರಿಸಿ, ಮಕರ ಕುಂಡಲಧಾರಿಯಾಗಿ, ಕತ್ತಿನಲ್ಲಿ ಅಡ್ಡಿಕೆ, ಪದಕಹಾರ ಹಾಗೂ ಉರಗಹಾರ ಯಜ್ಞೋಪವೀತ ಧರಿಸಿದ್ದು, ಚತುರ್ಭುಜಗಳಲ್ಲಿ ಚಿನ್ಮುದ್ರೆ, ಪದ್ಮ, ಚಕ್ರ, ಶಂಖಗಳನ್ನು ಧರಿಸಿದ್ದು ಎಡಗೈ ದೇವಿಯ ಕಟಿಯನ್ನು ಆವರಿಸಿದೆ. ದೇವಿಯು ಕರಂಡಮುಕುಟ ಕಂಠಿಕೆ, ಉರಗಹಾರ, ಸ್ತನಬಂಧ, ಒಡ್ಯಾಣಗಳನ್ನೊಳಗೊಂಡಿದೆ. ಕಾಲಂದಿಗೆ, ಕಿರುಗೆಜ್ಜೆ ಹಾಗೂ ಸರಗಳು ಕಾಲುಗಳಲ್ಲಿವೆ. ದೇವಿಯ ಎಡಗೈಯಲ್ಲಿ ಪದ್ಮವಿದ್ದರೆ ಬಲಗೈ ದೇವನನ್ನು ಬಳಸಿದೆ. ಅಂತರಾಳದಲ್ಲಿ ಆಳ್ವಾರರು, ವಿಶ್ವಕ್ಸೇನ ಮತ್ತು ಲಕ್ಷ್ಮಿಯರ ಶಿಲ್ಪಗಳಿವೆ. ದ್ವಾರದ ಮುಂದಿನ ಗೂಡುಗಳಲ್ಲಿ ವಿಷ್ಣು ಮತ್ತು ಕಾಳಿಂಗಮರ್ಧನ ಕೃಷ್ಣನ ಬಿಂಬಗಳನ್ನಿಡಲಾಗಿದೆ. ನವರಂಗ ಭಾಗ ಹೊಯ್ಸಳ ರಚನೆಯಂತಿದ್ದು ಚೌಕಾಕಾರದ ಕಂಬಗಳು ಸರಳವಾಗಿವೆ. ನವರಂಗಕ್ಕೆ ಪೂರ್ವ ಮತ್ತು ಉತ್ತರ ದಿಕ್ಕುಗಳಿಂದ ಪ್ರವೇಶವಿದ್ದು ಎರಡೂ ಕಡೆ ದ್ವಾರಪಾಲಕ ಶಿಲ್ಪಗಳಿವೆ. ಈ ಶಿಲ್ಪಗಳು ಸುಮಾರು ೧೬-೧೭ನೇ ಶತಮಾನದ್ದೆಂದು ತಿಳಿಯುತ್ತದೆ. ಮುಖಮಂಟಪವು ವಿಶಾಲವಾಗಿದ್ದು, ಹಲವು ಅಲಂಕರಣಗಳನ್ನೊಳಗೊಂಡಿದೆ. ದೇವಾಲಯದ ಮುಂದೆ ಧ್ವಜಸ್ತಂಭ, ಗರುಡಸ್ತಂಭಗಳಿದ್ದು, ಸುತ್ತ ಪ್ರಾಕಾರವಿದೆ.

ದಕ್ಷಿಣಾಭಿಮುಖಿ ಕೋಟೆ ಆಂಜನೇಯ ದೇವಾಲಯವು ಭವ್ಯವಾಗಿದ್ದು ಇದನ್ನು ೧೯೮೪ರಲ್ಲಿ ನವೀಕರಿಸಲಾಗಿದೆ. ಆದರೂ ಹಲವಾರು ಭಾಗಗಳಲ್ಲಿ ಪ್ರಾಚೀನತೆಯನ್ನು ಗುರುತಿಸಬಹುದಾಗಿದೆ. ಒಳಾಂಗಣವನ್ನು ಗಮನಿಸಿದರೆ ಬಿಂಬಕ್ಕೆ ತಕ್ಕಂತೆ ಎತ್ತರವಾದ ಗರ್ಭಗೃಹ ಹಾಗೂ ವಿಶಾಲವಾದ ಹಜಾರವಿದೆ. ಗರ್ಭಗೃಹದ ದ್ವಾರವು ಚಿತ್ತಾರವನ್ನೊಳಗೊಂಡಿದ್ದು, ಭಿತ್ತಿಯ ಜಾಲಾಂದ್ರ, ಪ್ರದಕ್ಷಣಾಪಥಗಳು ಅಪರೂಪದ ರಚನೆಗಳಾಗಿವೆ. ಗರ್ಭಗೃಹದಲ್ಲಿ ನಾಲ್ಕು ಅಡಿ ಎತ್ತರದ ಆಂಜನೇಯ ಶಿಲ್ಪವಿದೆ. ಗರ್ಭಗೃಹದ ಮುಂದೆ ವಿಶಾಲವಾದ ಹಜಾರವಿದ್ದು, ದ್ವಾರದ ಪಕ್ಕದಲ್ಲಿ ಒಳ ಭಿತ್ತಿಗಳಲ್ಲಿ ಕೋಷ್ಟಕವನ್ನು ರಚಿಸಿ, ಆಂಜನೇಯನ ಲೀಲಾರೂಪಗಳಾದ, ರಾಮನಿಗೆ ಎದೆ ಬಗೆದು ತನ್ನ ಭಕ್ತಿ ತೋರಿಸುವ ಆಂಜನೇಯ, ಗಂಧಮಾಧವ ಪರ್ವತವನ್ನೇರುವ, ಪಟ್ಟಾಭಿರಾಮ ಮೊದಲಾದವುಗಳನ್ನು ರೂಪಿಸಲಾಗಿದೆ. ನವರಂಗದ ಮುಂದೆ ಎತ್ತರವಾದ ಗೋಪುರವಿದೆ. ಈ ಗೋಪುರವು ಹಳೆಯ ರಚನೆಗಿಂತ ಭಿನ್ನವಾಗಿದ್ದು ಬೃಹದಾಕಾರದ ಆಂಜನೇಯ ದೂರದಿಂದಲೇ ಗಮನ ಸೆಳೆಯುವಂತಿದ್ದು, ಸಮೀಪದಲ್ಲಿಯೇ ದೀಪಸ್ತಂಭವಿದೆ. ದೇವಾಲಯದ ಸುತ್ತಲೂ ಕೈಪಿಡಿಗೋಡೆಯಿದ್ದು, ಪ್ರಭಾವಳಿಯ ಗೋಪುರಗಳಲ್ಲಿ ಆಂಜನೇಯನ ವಿವಿಧ ಲೀಲೆಗಳನ್ನು ತೋರಿಸಲಾಗಿದೆ.

ತುಮಕೂರು ನಗರದ ಕೆರೆಕೋಡಿಯ ಎದುರಿನ ಲಕ್ಷ್ಮೀನರಸಿಂಹ ದೇವಾಲಯದ ಪಕ್ಕದಲ್ಲಿರುವ ಬಿಡಾರವೊಂದರಲ್ಲಿ ಭಿತ್ತಿಚಿತ್ರಗಳು ದೊರೆತಿವೆ. ಈ ಮನೆಯು ಹಿಂದೆ ಕಛೇರಿ ಕೃಷ್ಣಪ್ಪನವರ ವಾಸದ ಮನೆಯಾಗಿತ್ತು. ಇವರ ಮಗನಾದ ನಲ್ಲಪ್ಪನು ಹೈದರನ ಕಾಲದಲ್ಲಿ ಫೌಜುದಾರರಾಗಿದ್ದು 'ಹೈದರ್‌ನಾಮಾ' ಎಂಬ ಕೃತಿಯ ಕರ್ತೃ. ಹಜಾರ ಮತ್ತು ಹಲವಾರು ಕೋಣೆಗಳನ್ನು ಹೊಂದಿರುವ ಈ ಮನೆಯ ತುಂಬೆಲ್ಲಾ ಹಿಂದೆ ಭಿತ್ತಿ ವರ್ಣಚಿತ್ರಗಳಿದ್ದವು. ಮನೆಯ ಮೇಲ್ಛಾವಣಿ ಮತ್ತು ಗೋಡೆಯನ್ನು ಹಲವಾರು ಅಂಕಣಗಳನ್ನಾಗಿ ವಿಭಾಗಿಸಿ ಚಿತ್ರಗಳನ್ನು ಬಿಡಿಸಲಾಗಿದ್ದಿತು. ಆದರೆ ಈಗ ಶೃಂಗೇರಿ ಶಾರದೆ, ಋಷಿಗಳ ಹಲವು ತಪೋಭಂಗಿಗಳು, ನದಿಯೊಳಗಿನ ಜಲಚರಗಳು, ಕಾಮಧೇನು, ಗಿಡಮರ, ನವಗ್ರಹ, ಗಣೇಶ, ಶಿವ ಮತ್ತು ವಿಷ್ಣುವಿನ ವಿವಿಧ ಅವತಾರಗಳು, ದೇವಾನುದೇವತೆಗಳು, ರಥಾರೂಢರಾಗಿ ಯುದ್ಧಕ್ಕೆ ಹೊರಟ

ರಾಜರ ಚಿತ್ರಗಳನ್ನು ನೋಡಬಹುದಾಗಿದೆ. ನಲ್ಲಪ್ಪನ ಶಯನಗೃಹದಲ್ಲಿನ ರತಿಲಾಸ್ಯ ಚಿತ್ರಗಳು ಅತ್ಯಂತ ಅಪರೂಪದವು ಎನ್ನಲಾಗಿದೆ. ಸ್ತ್ರೀಪುರುಷರಿಬ್ಬರೂ ವಸ್ತ್ರಧಾರಿಗಳಾಗಿಯೇ ರತಿಕ್ರೀಡೆ ನಡೆಸುವ ಹಲವಾರು ಮೋಹಕ ಚಿತ್ರಗಳಿದ್ದು, ಹೂಬಳ್ಳಿಯ ವಿನ್ಯಾಸವನ್ನು ಒಳಗೊಂಡಿವೆ. ಬಳಸಲಾಗಿರುವ ವರ್ಣವು ವೈವಿಧ್ಯವಾಗಿದ್ದು ಹಳದಿ, ಕೆಂಪು, ರಕ್ತನೀಲ, ನೀಲಿ, ಹಸಿರು ಹಾಗೂ ಶ್ವೇತವರ್ಣಗಳಾಗಿವೆ. ಮೈಸೂರು ಶೈಲಿಯಲ್ಲಿದ್ದರೂ ಕುಶಲತೆಗೆ ಮಹತ್ವ ನೀಡಿಲ್ಲ. ಇವು ೧೭೮೦ರ ರಚನೆ ಎಂದು ಹೇಳಲಾಗಿದೆ. ಆದರಿಂದು ಶಿಥಿಲಗೊಂಡು ಹಾಳಾಗಿವೆ.

ಇದೇ ಸ್ಥಳದಲ್ಲಿ ಶಾಸನೋಕ್ತ ವೀರಗಲ್ಲೊಂದು ದೊರೆತಿದ್ದು ಹೊಯ್ಸಳ ಮುಮ್ಮಡಿ ನರಸಿಂಹನ ಕಾಲದ್ದಾಗಿದೆ, ಆನೆಬಿದ್ದಸರಿ ರಾಜ್ಯದ ಮಹಾಪ್ರಧಾನ ವೀರಚಿಕ್ಕಕೇತಯ್ಯ ದಂಡನಾಯಕನು ಆಳ್ವಿಕೆ ನಡೆಸುತ್ತಿದ್ದ ಸಮಯದಲ್ಲಿ ನಿಡುಗಲ್ಲು ಚೋಳ ಇರುಂಗೋಳದೇವನ ದಳಪತಿ ಗೂಳಯ್ಯನಾಯಕನು ದಂಡೆತ್ತಿ ಬಂದು ಗೋವುಗಳನ್ನು ಕೊಂಡೊಯ್ಯುವಾಗ ಅಪ್ಪಯ್ಯನಾಯಕನು, ಸೈನಿಕರನ್ನು ಬೆನ್ನಟ್ಟಿಹೋಗಿ, ಗೋವುಗಳನ್ನು ಬಿಡಿಸಿಕೊಂಡು ಬರಲು ಹೋರಾಡಿ ರಣರಂಗದಲ್ಲಿ ಮರಣಹೊಂದಿದ ಅಂಶವನ್ನು ಈ ವೀರಗಲ್ಲು ಶಾಸನ ದಾಖಲಿಸಿದೆ.

ತುಮಕೂರು ನಗರದಲ್ಲಿ ಹಲವಾರು ಮಠಗಳಿವೆ. ಹಿರೇಮಠ, ಶ್ರೀಕರಿಬಸವಸ್ವಾಮಿಗಳ ಮಠ, ಸೋಮೇಕಟ್ಟೆಮಠ. ಘಟೇದೇವರ ಮಠ, ಮುತ್ತಿನ ಕಂತೆಮಠ, ಗುರುಶಾಂತಪ್ಪನಮಠ, ಮುರುಘಾಮಠ ಅಥವಾ ವಿರಕ್ತಮಠ, ಸಂಪಾದನೆಮಠ, ಪುತ್ರವರ್ಗದಮಠ, ಓದಿಸೋಮಠ, ಬಸೆಟ್ಟಿಮಠ, ಕೌದೀಮಠ, ಓದುವಮಠ, ಜಡೇದೇವರಸ್ವಾಮಿಮಠ, ಶ್ರೀರಾಮಕೃಷ್ಣ ವಿವೇಕಾನಂದಾಶ್ರಮ ಹಾಗೂ ಹಿರೇಮಠದ ಶರಣರ ಗದ್ದುಗೆಗಳೂ ಇಲ್ಲಿವೆ.

ತುಮಕೂರು, ವಿಶ್ವವಿದ್ಯಾನಿಲಯವನ್ನು ಹೊಂದಿದ್ದು ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗಿ, ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿ ನಿಲಯಗಳು, ಶೈಕ್ಷಣಿಕ ಸಂಸ್ಥೆಗಳು, ಶ್ರಮಿಸುತ್ತಿವೆ. ಕೈಗಾರಿಕಾ ಬೆಳವಣಿಗೆಯೊಂದಿಗೆ ಅಭಿವೃದ್ಧಿಯತ್ತ ಮುನ್ನಡೆಯುತ್ತಿದೆ.

**ತುರುವೇಕೆರೆ (ಜನಸಂಖ್ಯೆ. ೧೩,೨೮೧)**: ಜಿಲ್ಲೆಯ ತಾಲೂಕುಗಳಲ್ಲಿ ಒಂದಾಗಿದ್ದು, ಬೆಂಗಳೂರು–ಪುಣೆ ರೈಲು ಮಾರ್ಗದಲ್ಲಿರುವ ಬಾಣಸಂದ್ರ ರೈಲು ನಿಲ್ದಾಣದಿಂದ ದಕ್ಷಿಣಕ್ಕೆ ಸುಮಾರು ೧೩ ಕಿ.ಮೀ. ದೂರದಲ್ಲಿದೆ. ಊರಿನ ಉತ್ತರಕ್ಕೆ ಕೆರೆ ಇದ್ದು, ಇದರಿಂದಾಗಿ ತುರುವೇಕೆರೆ ಎಂಬುದಾಗಿ ಕರೆಯಲಾಯಿತೆಂದು ತಿಳಿಯುತ್ತದೆ. ಇದು ಒಂದು ಕಾಲದಲ್ಲಿ ದೊಡ್ಡ ವ್ಯಾಪಾರಿ ಕೇಂದ್ರವಾಗಿದ್ದು, ಹೊಯ್ಸಳ ಮೂರನೇ ನರಸಿಂಹನ ದಂಡನಾಯಕ ಸೋಮಣ್ಣನು, ಈ ಊರಿಗೆ ಕ್ರಿ.ಶ. ೧೨೬೮ ರಲ್ಲಿ 'ಸರ್ವಜ್ಞ ಶ್ರೀವಿಜಯನರಸಿಂಹಪುರ' ಎಂಬ ಹೆಸರನ್ನಿಟ್ಟು, ಬ್ರಾಹ್ಮಣರಿಗೆ ಅಗ್ರಹಾರವಾಗಿ ದಾನ ನೀಡಿದನೆಂದು ಶಾಸನ ತಿಳಿಸುತ್ತದೆ. ಹದಿನಾರನೇ ಶತಮಾನದಲ್ಲಿ ಹಾಗಲವಾಡಿಯ ಸಾಲಿನಾಯಕನು ಈ ಊರನ್ನು ವಶಪಡಿಸಿಕೊಂಡು, ಸೋದರರಾದ ಚಿಕ್ಕನಾಯಕ ಮತ್ತು ಅಣ್ಣಿನಾಯಕರಿಗೆ ವಹಿಸಿದನೆಂದೂ, ಅವರು ಇಲ್ಲಿನ ಹೊರಕೋಟೆಯನ್ನು ನಿರ್ಮಿಸಿ, ಊರಿನ ಕೆರೆಯನ್ನು ವಿಸ್ತರಿಸಿದರೆಂದೂ ತಿಳಿದು ಬರುತ್ತದೆ. ಅನಂತರ ಚಿಕ್ಕದೇವರಾಜ ಒಡೆಯರ ಪ್ರಾಬಲ್ಯವು ೧೬೭೬ರಿಂದ ಆರಂಭವಾಗಿರುವುದಾಗಿ ತಿಳಿಯುತ್ತದೆ.

ತುರುವೇಕೆರೆಯಲ್ಲಿ ಹಲವು ಪ್ರಾಚೀನ ಸ್ಮಾರಕಗಳಿದ್ದು, ಹೊಯ್ಸಳ ಸೋಮಣ್ಣ ದಂಡನಾಯಕನು ಚನ್ನಕೇಶವ ಮತ್ತು ಮೂಲೆಶಂಕರೇಶ್ವರ ದೇವಾಲಯಗಳನ್ನು ನಿರ್ಮಿಸಿದ್ದೆಂದು ತಿಳಿದುಬರುತ್ತದೆ. ಇವುಗಳ ಜೊತೆಗೆ ಗಂಗಾಧರೇಶ್ವರ ಮತ್ತು ಬೇಟೆರಾಯನ ಗುಡಿಗಳೂ ಇಲ್ಲಿವೆ.

ಹೊಯ್ಸಳ ಶೈಲಿಯಲ್ಲಿರುವ ಚನ್ನಕೇಶವ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಸುಖನಾಸಿ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದ ಮೇಲಿರುವ ಶಿಖರವು ಹೆಚ್ಚು ಕೆತ್ತನೆಗಳನ್ನೊಳಗೊಂಡಿಲ್ಲದೆ ಹೊರಭಿತ್ತಿಯಲ್ಲಿ ಅಲಂಕೃತ ಅರೆಗಂಬಗಳಿದ್ದು ಯಾವುದೇ ಶಿಲ್ಪಗಳಿಲ್ಲ. ನವರಂಗ ಮತ್ತು ಸುಖನಾಸಿಗಳಲ್ಲಿನ ಭುವನೇಶ್ವರಿಗಳು ಸುಂದರ ಕೆತ್ತನೆಗಳನ್ನೊಳಗೊಂಡಿವೆ. ಆಕರ್ಷಕ ಜಾಲಾಂದ್ರ ಕೆತ್ತನೆಯನ್ನು ಸುಖನಾಸಿಯ ಬಾಗಿಲ ಇಕ್ಕೆಲಗಳಲ್ಲೂ ನೋಡಬಹುದಾಗಿದೆ.

ಮೂಲೆಶಂಕರೇಶ್ವರ ದೇಗುಲವು ಚನ್ನಕೇಶವ ದೇಗುಲದ ಮಾದರಿಯಲ್ಲಿಯೇ ಇದ್ದು, ಪ್ರವೇಶದ್ವಾರ ಮತ್ತು ಮುಖಮಂಟಪ ದಕ್ಷಿಣಾಭಿಮುಖವಾಗಿದ್ದು ಮೂಲಲಿಂಗವು ಪೂರ್ವಾಭಿಮುಖವಾಗಿದೆ. ಶಂಕರೇಶ್ವರ ದೇವಾಲಯದ ಅಂತರಾಳದಲ್ಲಿ ಉಮಾಮಹೇಶ್ವರ ಶಿಲ್ಪವಿದೆ. ನವರಂಗದಲ್ಲಿ ಭೈರವ, ವೀರಭದ್ರ, ಸುಬ್ರಹ್ಮಣ್ಯ ಶಿಲ್ಪಗಳಿವೆ. ಹೊರಗಿನ

ಅಡ್ಡಪಟ್ಟಿಕೆಗಳಲ್ಲಿ ಸರೋಜ, ಜಕ್ಕಣ್ಣ, ಈಶ್ವರ ಎಂಬ ಹೆಸರುಗಳನ್ನು ಶಿಲ್ಪಗಳಲ್ಲಿ ಬರೆಯಲಾಗಿದೆ. ಇವುಗಳಲ್ಲಿ ಜಕ್ಕಣ್ಣ ಎಂಬ ಹೆಸರು ಕುತೂಹಲದ್ದಾಗಿದ್ದು, ಈತನಿಗೂ ಐತಿಹಾಸಿಕ ಪ್ರಸಿದ್ಧ ಜಕ್ಕಣಾಚಾರಿಗೂ ಸಂಬಂಧವಿದೆಯೇ ಎಂಬುದು ಕುತೂಹಲಕರ ಅಂಶವಾಗಿದೆ. ಇದರ ಭೂಮಿಜ ಶೈಲಿಯ ವಿಮಾನವು ವಿಶಿಷ್ಟವಾಗಿದೆ.

ಗಂಗಾಧರೇಶ್ವರ ಗುಡಿ ದ್ರಾವಿಡ ಶೈಲಿಯಲ್ಲಿದ್ದು ಉತ್ತರಾಭಿಮುಖವಾಗಿದೆ. ಇದು ಬೃಹತ್ ಪ್ರಾಕಾರವನ್ನು ಹೊಂದಿದ್ದು ಶಿವ ಮತ್ತು ಪಾರ್ವತಿಯ ಗುಡಿಗಳಿವೆ. ದೇವಾಲಯದ ಮುಂಭಾಗದ ಶಿಲಾದೀಪಸ್ತಂಭದಲ್ಲಿರುವ ದಂಪತಿಗಳ ಶಿಲ್ಪವು ಈ ದೇವಾಲಯದ ನಿರ್ಮಾತೃಗಳಾದ ಪಾಳೆಯಗಾರ ಅಯ್ಯಣನಾಯಕ ಹಾಗೂ ಆತನ ಪತ್ನಿಯದ್ದೆಂದು ಹೇಳಲಾಗುತ್ತದೆ. ಪಾತಾಳಾಂಕಣದ ಮಂಟಪದಲ್ಲಿರುವ ಬೃಹತ್ ನಂದಿಯು ಬಹು ನಾಜೂಕಾಗಿದ್ದು, ನಯಗೊಳಿಸಿರುವ ಈ ಶಿಲ್ಪ ಈಗಲೂ ಅದೇ ಹೊಳಪನ್ನೊಳಗೊಂಡಿದೆ. ಇಲ್ಲಿನ ಉತ್ಸವಮೂರ್ತಿಗಳಾದ ಶಿವ, ಪಾರ್ವತಿ ಮತ್ತು ದಾಕ್ಷಾಯಿಣಿ ವಿಗ್ರಹಗಳು ಉಲ್ಲೇಖಾರ್ಹ.

ಪೂರ್ವಾಭಿಮುಖವಾಗಿರುವ ಬೇಟೆರಾಯನ ದೇವಾಲಯಕ್ಕೆ ಗರ್ಭಗುಡಿ, ಸುಖನಾಸಿ, ನವರಂಗ ಮತ್ತು ಮಂಟಪಗಳಿವೆ. ಸುತ್ತ ಪ್ರಾಕಾರವಿದ್ದು, ಪೂರ್ವದೆಡೆ ಎತ್ತರವಾದ ಮಹಾದ್ವಾರವಿದೆ. ಇಲ್ಲಿನ ಒಳಕಂಬದಲ್ಲಿ ಭಕ್ತವಿಗ್ರಹಗಳಿದ್ದು, ಇದನ್ನು ದೇವಾಲಯವನ್ನು ನಿರ್ಮಿಸಿದ ಚೌಡಪ್ಪಯ್ಯ (ವರದ ಬೇಟೆರಾಯ) ಎಂದು ತೋರಿಸಲಾಗುತ್ತದೆ. ಈ ದೇವಾಲಯದ ವಾರ್ಷಿಕ ಉತ್ಸವವು ಫಾಲ್ಗುಣ ಮಾಸದಲ್ಲಿ ನಡೆಯುತ್ತದೆ.

ಇಲ್ಲಿನ ಕೆಲವು ದೇವಾಲಯಗಳಲ್ಲಿ ಪಂಚಲೋಹದ ಪ್ರತಿಮೆಗಳಿದ್ದು, ಬೇಟೆರಾಯಸ್ವಾಮಿ ದೇವಾಲಯದಲ್ಲಿ ಎರಡೂವರೆ ಅಡಿ ಎತ್ತರದ ಗರುಡ ಹಾಗೂ ವಿಷ್ಣುವಿನ ಉತ್ಸವ ಮೂರ್ತಿಗಳಿವೆ. ಇಲ್ಲಿರುವ ಆಂಜನೇಯ, ರಾಮ, ಕಾಳಿಂಗಮರ್ಧನ, ಕೃಷ್ಣ, ನಟರಾಜ, ದೇವಿಶಿಲ್ಪ ಮೊದಲಾದವು ಗಮನಾರ್ಹವಾಗಿವೆ.

**ತ್ಯಾಗಟೂರು (ಜನಸಂಖ್ಯೆ. ೨,೧೪೦)**: ತಾಲೂಕು ಕೇಂದ್ರ ಗುಬ್ಬಿಯಿಂದ ೧೨ ಕಿ.ಮೀ. ಅಂತರದಲ್ಲಿದೆ. ಇದೊಂದು ಐತಿಹಾಸಿಕ ಕೇಂದ್ರವಾಗಿತ್ತು. ಇದೊಂದು ಆಡಳಿತ ಕೇಂದ್ರವಾಗಿದ್ದು ಗಂಗರ ಶಾಸನದಲ್ಲಿ 'ತೇಗಟ್ಟೂರ್ ವಿಶಯ' ಎಂದೂ, ಒಂಬತ್ತನೇ ಶತಮಾನದಲ್ಲಿ 'ತೇಗಟ್ಟೂರ್ಸಪ್ತತಿ' ಎಂಬುದಾಗಿಯೂ, ಹೊಯ್ಸಳರ ಶಾಸನದಲ್ಲಿ 'ತ್ಯಾಗಟೂರು ಹನ್ನೆರಡು' ಎಂದೂ ಉಲ್ಲೇಖವಿದೆ. ಜೈನರ ಪ್ರಸಿದ್ಧ ಕೇಂದ್ರವಾಗಿದ್ದು, ಜೈನ ಮತವಿದ್ದುದಾಗಿಯೂ ತಿಳಿದುಬರುತ್ತದೆ. ಇದಕ್ಕೆ ಪೂರಕವಾಗಿ ಗ್ರಾಮದ ಪೂರ್ವದಲ್ಲಿ ಈಗಾಗಲೇ ಬೂದಿಮಣ್ಣಿನ ಜಾಗಗಳಿದ್ದು (ಕೋಡಿನಾಗೇನಹಳ್ಳಿ ಪ್ರದೇಶ), ಅಲ್ಲಿ ಪುರಾತತ್ವ ಅವಶೇಷಗಳು ದೊರೆತಿವೆ. ಇಲ್ಲಿಯೇ ಒಂದು ಪ್ರದೇಶದಲ್ಲಿ ಭೂಮಿಯೊಳಗೆ ಹುದುಗಿಹೋಗಿದ್ದ ಸುಟ್ಟ ಇಟ್ಟಿಗೆಯ ಗೋಡೆಯ ಅವಶೇಷಗಳು ಕಂಡುಬಂದಿದ್ದು, ಇಟ್ಟಿಗೆಯ ಅಳತೆ ಪ್ರಮಾಣದಿಂದ ಅವು ಸುಮಾರು ೧೦ ನೇ ಶತಮಾನಕ್ಕೆ ಸೇರಿದ್ದೆಂದು ತಿಳಿದುಬರುತ್ತದೆ.

ಬೂದಿಮಣ್ಣು ದೊರೆತಿರುವ ಸ್ಥಳದಲ್ಲಿ ಮೂರು ತಾಮ್ರಶಾಸನಗಳು ದೊರೆತಿದ್ದು, ಅವುಗಳು ಬಾದಾಮಿ ಚಾಲುಕ್ಯ ದೊರೆ ಒಂದನೇ ವಿಕ್ರಮಾದಿತ್ಯನ ಕ್ರಿ.ಶ. ೬೬೮, ತಲಕಾಡು ಗಂಗ ಮನೆತನದ ಒಂದನೇ ಶಿವಮಾರನ ಕ್ರಿ.ಶ. ೭೦೭ ಹಾಗೂ ನಂತರದ ಕದಂಬ ಮನೆತನದ ಕೃಷ್ಣವರ್ಮನ ಕಾಲಕ್ಕೆ ಸೇರಿದ್ದಾಗಿವೆ. ಇವುಗಳ ಅಧ್ಯಯನದಿಂದ ಜೈನಧರ್ಮಕ್ಕೆ ಸಂಬಂಧಿಸಿದಂತೆ ವಿವರಗಳು ದೊರಕುತ್ತವೆ. ಇದೇ ಗ್ರಾಮದಲ್ಲಿ ಶಿಲಾಶಾಸನ ಹಾಗೂ ಶಿಲ್ಪಗಳು ದೊರೆತಿವೆ. ಅಲ್ಲದೇ, ಗ್ರಾಮದೇವತೆಯ ದೇವಾಲಯವೂ ಇದೆ.

**ದಬ್ಬೆಗಟ್ಟ (ಜನಸಂಖ್ಯೆ. ೧,೮೦೨)**: ಇದು ತಾಲೂಕು ಕೇಂದ್ರ ತುರುವೇಕೆರೆಗೆ ೧೫ ಕಿ.ಮೀ. ದೂರದಲ್ಲಿದೆ. ಇಲ್ಲಿನ ಮಹಲಿಂಗೇಶ್ವರ ದೇವಾಲಯವು ತ್ರಿಕೂಟಾಚಲವಾಗಿದ್ದು, ಹೊಯ್ಸಳ ಶೈಲಿಯಲ್ಲಿದೆ. ಮೂಲಮೂರ್ತಿಗಳನ್ನು ಹೊಯ್ಸಳೇಶ್ವರ, ಬ್ರಹ್ಮೇಶ್ವರ ಮತ್ತು ಮಾಚೇಶ್ವರ ಲಿಂಗಗಳೆಂದು ಕರೆಯಲಾಗುತ್ತದೆ. ಇಲ್ಲಿರುವ ಕ್ರಿ.ಶ. ೧೨೫೨ ಶಾಸನವು ಈ ದೇವಾಲಯವನ್ನು ಉಲ್ಲೇಖಿಸುತ್ತದೆ. ಇಲ್ಲಿನ ಕಂಬ ಹಾಗೂ ಶಿಲ್ಪಗಳ ಕೆತ್ತನೆ ಸಾಧಾರಣವಾಗಿದೆ. ಇಲ್ಲಿನ ಮರುಳಸಿದ್ದೇಶ್ವರ ದೇವಾಲಯದ ಅಂಕಣದಲ್ಲಿ ಮರುಳಸಿದ್ಧ, ರೇವಣಸಿದ್ಧರ ಸುಂದರ ಶಿಲ್ಪಗಳಿದ್ದು, ಅವು ಅಲ್ಲಮರದ್ದಾಗಿವೆ. ಈ ದೇವಾಲಯದ ಉತ್ಸವಮೂರ್ತಿ ನಂದಿಯನ್ನು ವಾರ್ಷಿಕ ಜಾತ್ರೆಯಲ್ಲಿ ಮೆರೆಸುತ್ತಾರೆ. ದೇವಾಲಯದ ಸಮೀಪ ಹಲವು ಸಮಾಧಿಗಳಿವೆ. ಸುವರ್ಣಮುಖಿ ನದಿ ಇಲ್ಲಿ ಹುಟ್ಟಿ ರಾಂಪುರದ ಬಳಿ ಜಯಮಂಗಲಿ ನದಿಯನ್ನು ಸೇರುತ್ತದೆ. ಈ ನದಿಗೆ ಬೋರನಕಣಿವೆ ಬಳಿ ಜಲಾಶಯ ನಿರ್ಮಿಸಲಾಗಿದೆ.

**ದುಮ್ಮನಹಳ್ಳಿ (ಜನಸಂಖ್ಯೆ. ೪೩೨)**: ತುರುವೇಕೆರೆ ತಾಲೂಕಿನ ಒಂದು ಗ್ರಾಮ. ದುಮ್ಮ ಒಡೆಯ ಎನ್ನುವ ಮುಖ್ಯಸ್ಥನ ರಾಜಧಾನಿಯಾಗಿದ್ದಿತೆಂದು, ಗ್ರಾಮದ ಪಶ್ಚಿಮದ ಹೊಲವೊಂದರಲ್ಲಿ ಆಗಾಗ ಚಿನ್ನದ ನಾಣ್ಯ ದೊರತಿರುವುದೆಂದೂ ಹೇಳಲಾಗುತ್ತದೆ.

**ದೇವರಾಯನ ದುರ್ಗ (ಜನಸಂಖ್ಯೆ. ೨೩೩)**: ಇದು ತುಮಕೂರು ನಗರದಿಂದ ಈಶಾನ್ಯಕ್ಕೆ ೧೫ ಕಿ.ಮೀ. ದೂರದಲ್ಲಿದೆ. ಭೌಗೋಳಿಕ ಲಕ್ಷಣಗಳಿಗೆ ಬೆಸೆದುಕೊಂಡಿರುವ ಮಾನವನ ಇತಿಹಾಸವು, ತನ್ನದೇ ಆದ ವಿಶಿಷ್ಟತೆಯನ್ನು ಹೊಂದಲು ಬೆಟ್ಟಗಳು ಬಹುಪ್ರಮುಖ ಪಾತ್ರವಹಿಸಿರುವುದನ್ನು ಕಾಣಬಹುದು. ಇಂತಹ ಬೆಟ್ಟಗಳ ಒಂದು ಗುಂಪು ತುಮಕೂರು ತಾಲೂಕಿನಲ್ಲಿದ್ದು, ಅವುಗಳಲ್ಲಿ ಪ್ರಸಿದ್ಧವೆನಿಸಿರುವುದೇ ದೇವರಾಯನದುರ್ಗ. ತಳವಾರಬೆಟ್ಟ, ಶೀಗೇಕೊಪ್ಪಳಬೆಟ್ಟ, ಚಿನ್ನರಬೆಟ್ಟ, ಈಶಾನಾಯಕನಬೆಟ್ಟ ಮತ್ತು ದೊಡ್ಡವಾಡಿಬೆಟ್ಟಗಳ ಮಧ್ಯದಲ್ಲಿರುವ ಬೆಟ್ಟವೇ ದೇವರಾಯನದುರ್ಗ. ಇದು ೧೨೬೪ಮೀ. ಎತ್ತರವಿದ್ದು, ಈ ಗುಂಪಿನಲ್ಲಿ ಅತ್ಯಂತ ಎತ್ತರದ್ದಾಗಿದೆ. ಇಲ್ಲಿ ನೈಸರ್ಗಿಕ ನೀರಿನ ಚಿಲುಮೆಗಳನ್ನು ಬೆಟ್ಟದ ಹಲವು ಭಾಗದಲ್ಲಿ ಕಾಣಬಹುದು. ಇವುಗಳನ್ನು ತೀರ್ಥಗಳೆಂದು ಹೆಸರಿಸಿದ್ದು, ಇಲ್ಲಿನ ನರಸಿಂಹತೀರ್ಥ, ವೃಷಭತೀರ್ಥ, ಪರಾಶರತೀರ್ಥ, ಕಾಶಿತೀರ್ಥ, ಚಕ್ರತೀರ್ಥ, ಗಜೇಂದ್ರತೀರ್ಥ, ರಾಮತೀರ್ಥ, ಧನುಷ್ತೀರ್ಥ ಮತ್ತು ನಾಮದಚಿಲುಮೆ ಮೊದಲಾದ ನೀರಿನಾಸರೆಗಳು, ಶಿಂಷಾ ಹಾಗೂ ಜಯಾ–ಮಂಗಲಾ ನದಿಗಳ ಉಗಮಕ್ಕೆ ಕಾರಣವಾಗಿವೆ.

ಭೌಗೋಳಿಕ ಹಿನ್ನೆಲೆ, ನೀರಿನಾಸರೆ, ನೈಸರ್ಗಿಕ ಸಂಪತ್ತುಗಳನ್ನೊಳಗೊಂಡ ಈ ದೇವರಾಯನದುರ್ಗ ಐತಿಹಾಸಿಕ ಪ್ರಮುಖತೆ ಜೊತೆಗೆ ಪ್ರಾಗಿತಿಹಾಸ ಕಾಲದ ಕುರುಹುಗಳನ್ನೊಂದಿರುವುದೂ ಗಮನಾರ್ಹ. ಬೆಟ್ಟದ ಸುತ್ತಮುತ್ತಲೂ ಹಲವು ಪ್ರಾಗಿತಿಹಾಸದ ನೆಲೆಗಳನ್ನು ಗುರುತಿಸಲಾಗಿದ್ದು, ಇಲ್ಲಿನ ಸೀಗೆಹಳ್ಳ ಗ್ರಾಮದ ಸಮೀಪ ಆದಿಹಳೆಶಿಲಾಯುಗ ಸಂಸ್ಕೃತಿಯ ನೆಲೆಯೊಂದಿದ್ದು ಕೈಗೊಡಲಿ ಉಪಕರಣ ದೊರೆತಿದೆ. ಇನ್ನಿತರ ಆಸುಪಾಸಿನ ಗ್ರಾಮಗಳಾದ ಅಗ್ರಹಾರ, ಚಿನಗ, ಚಿನವಾರ, ಬೆಳ್ಳಿಬಟ್ಟಲಹಳ್ಳಿ, ಮಂಚಕಲ್‌ಕುಪ್ಪೆ, ಹಿರೇಹಳ್ಳಿ, ರಾಮದೇವರಬೆಟ್ಟ, ಬಂಡೇನಹಳ್ಳಿ, ಮಾರನಾಯಕನಪಾಳ್ಯ ಮೊದಲಾದೆಡೆಗಳಲ್ಲಿ ಆದಿ, ಮಧ್ಯ, ಅಂತ್ಯ ಹಾಗೂ ಸೂಕ್ಷ್ಮ ಶಿಲಾಯುಗಕಾಲದಲ್ಲಿ ಉಪಕರಣವನ್ನು ಸಿದ್ಧಗೊಳಿಸುತ್ತಿದ್ದ ನೆಲೆಗಳು ದೊರೆತಿವೆ. ಅಲ್ಲದೆ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ಮತ್ತು ನಿಲಸುಗಲ್ಲುಗಳು ಕಂಡುಬಂದಿದ್ದು, ಈ ಪ್ರದೇಶ ಪ್ರಾಗಿತಿಹಾಸ ಮಾನವನ ನೆಲಸುವಿಕೆಗೆ ಸರ್ವಋತುಗಳಿಗೂ ಪ್ರಶಸ್ತ್ಯ ಸ್ಥಳವಾಗಿದ್ದಿತೆಂಬ ಅಂಶ ತಿಳಿದು ಬರುತ್ತದೆ.

ದೇವರಾಯನದುರ್ಗವು ‘ಕರಿಗಿರಿ’ (ಕರಿಗಿರಿಕ್ಷೇತ್ರ), ‘ಆನೆಬಿದ್ದಸರಿ’ ಮತ್ತು ‘ಜಡಕನದುರ್ಗ’ ಎಂದು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ. ಸ್ಥಳೀಯವಾಗಿ ದೊರೆಯುವ ಕತೆ ಹಾಗೂ ಐತಿಹ್ಯಗಳು ತಿಳಿಸುವಂತೆ ಇದೊಂದು ಶ್ರೀವೈಷ್ಣವ ಧಾರ್ಮಿಕ ಕ್ಷೇತ್ರವಾಗಿದೆ.

ತಮ್ಮ ಸಾಮ್ರಾಜ್ಯದ ಗಡಿಯನ್ನು ಸೂಚಿಸುವ ಸಂದರ್ಭದಲ್ಲಿ ಹೊಯ್ಸಳರು ‘ಆನೆಬಿದ್ದಸರಿ’ ಎಂಬ ಈ ಸ್ಥಳವನ್ನು ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ವಿಜಯನಗರ ಹಾಗೂ ವಿಜಯನಗರೋತ್ತರಕಾಲದ ದೇವರಾಯನದುರ್ಗದ ಇತಿಹಾಸ ಸುಸ್ಪಷ್ಟವಾಗಿದ್ದು, ಪೌರಾಣಿಕ ಹಿನ್ನೆಲೆಗೆ ಪುಷ್ಟಿ ದೊರೆತು ವೈಷ್ಣವ ಧಾರ್ಮಿಕ ಕೇಂದ್ರವಾಗಿ ಬೆಳೆದಿರುವುದನ್ನು ನೋಡಬಹುದು. ವಿಜಯನಗರ ಶಾಸನಗಳಲ್ಲಿ ಇದನ್ನು ‘ಆನೆಬಿದ್ದಸರಿ’ ಅಥವಾ ‘ಆನೆಗೊಂದಿ’ ಎಂದು ಕರೆಯಲಾಗಿದೆ. ಶಿಲಾಶಾಸನ ಹಾಗೂ ತಾಮ್ರಶಾಸನಗಳು ಸೂಚಿಸುವಂತೆ ವಿಜಯನಗರ ಸಾಮ್ರಾಜ್ಯದ ಪ್ರದೇಶವಾದ ದೇವರಾಯನದುರ್ಗಕ್ಕೆ ಕೋಟೆಯನ್ನು ನಿರ್ಮಿಸಿ, ಸುಸಜ್ಜಿತ ಸೈನ್ಯವನ್ನು ಇಲ್ಲಿ ಇಡಲಾಗಿತ್ತು. ಅನಂತರದಲ್ಲಿ ಮೈಸೂರು ಒಡೆಯರ ಆಳ್ವಿಕೆಯಲ್ಲಿ ಕೇವಲ ಇದು ರಕ್ಷಣಾ ಕೇಂದ್ರವಷ್ಟೇ ಆಗಿರದೆ, ಧಾರ್ಮಿಕ ಪ್ರಾಮುಖ್ಯತೆ ಹೊಂದಿ ನರಸಿಂಹದೇವರ ಆರಾಧನಾ ಕೇಂದ್ರವಾಗಿ ಹಿರಿಮೆಯನ್ನು ಪಡೆಯಿತು. ಮೈಸೂರು ಒಡೆಯರ ಆಳ್ವಿಕೆ ಧಾರ್ಮಿಕ ಭವ್ಯತೆಗೆ ಆದ್ಯತೆ ನೀಡಿ ಇಲ್ಲಿನ ದೇವಾಲಯ ಹಾಗೂ ಕೋಟೆಗಳಿಗೆ ಪುನರುಜ್ಜೀವನ ನೀಡಿತು.

ದೇವರಾಯನದುರ್ಗದಲ್ಲಿ ನರಸಿಂಹಸ್ವಾಮಿಯನ್ನು ಆರಾಧಿಸುತ್ತಿದ್ದು ಇಲ್ಲಿನ ದೇವಾಲಯಗಳ ಪೈಕಿ ಊರಿನ ಒಳಗಿರುವ ಭೋಗಾಲಕ್ಷ್ಮೀನರಸಿಂಹಸ್ವಾಮಿ ಮತ್ತು ಬೆಟ್ಟದ ಮೆಲ್ಭಾಗದಲ್ಲಿರುವ ಯೋಗಾಲಕ್ಷ್ಮೀನರಸಿಂಹಸ್ವಾಮಿ ದೇವಾಲಯಗಳು ಪ್ರಸಿದ್ಧವಾದವು. ಜೊತೆಗೆ ಊರಿನಲ್ಲಿ ಕಾಳಿಕಾದೇವಾಲಯ, ವೈದ್ಯನಾಥದೇವಾಲಯ ಹಾಗೂ ಕೆಲವು ಮಠಗಳಿವೆ.

ಪಟ್ಟಣದ ಮಧ್ಯಭಾಗದಲ್ಲಿರುವ ಭೋಗಾಲಕ್ಷ್ಮೀನರಸಿಂಹನ ಬೃಹತ್ ದೇವಾಲಯದ ವಾಸ್ತುಶೈಲಿಯು ವಿಶಿಷ್ಟವಾಗಿದ್ದು, ಗರ್ಭಗುಡಿ, ಅಂತರಾಳ, ನವರಂಗ, ಮಂಟಪ, ಎರಡು ಮುಖಮಂಟಪಗಳು, ಧ್ವಜಸ್ತಂಭ ಹಾಗೂ ಬಲಿಪೀಠಗಳನ್ನೊಳಗೊಂಡಿದೆ. ಗರ್ಭಗುಡಿಯಲ್ಲಿ ಲಕ್ಷ್ಮೀಯನ್ನು ತೊಡೆಯ ಮೇಲೆ ಕೂಡಿಸಿಕೊಂಡಿರುವ ಆಸೀನ ನರಸಿಂಹನ ಕಪ್ಪುಶಿಲಾಮೂರ್ತಿಯು ಆಕರ್ಷಕವಾಗಿದೆ. ಇದು ಸುಮಾರು ೧೭-೧೮ ನೇ ಶತಮಾನದ್ದೆಂದು ತಿಳಿಯುತ್ತದೆ. ಕಿರು ಸುಕನಾಸಿಯ ದ್ವಾರದ ಮೇಲೆ ಶ್ರೀವೈಷ್ಣವ ಮುದ್ರೆಗಳಿರುವ ದ್ವಾರಪಾಲಕರ ಶಿಲ್ಪಗಳಿವೆ. ನವರಂಗವನ್ನು ಹಿಗ್ಗಿಸಿ ಎರಡು ದ್ವಾರಗಳನ್ನಿಡಲಾಗಿದ್ದು, ಹಳೆಯ ದ್ವಾರದಲ್ಲಿ ವೈಷ್ಣವ ದ್ವಾರಪಾಲಕರ ಶಿಲ್ಪಗಳಿವೆ. ನವರಂಗಕ್ಕೆ ಮುಖ ಮಂಟಪವಿದೆ. ದೇವಾಲಯದ ಭಿತ್ತಿಯು ನಿರಾಕಂಬರವಾಗಿದ್ದು ಮೇಲ್ಭಾಗದಲ್ಲಿ ಇಟ್ಟಿಗೆ ಗಾರೆಯಿಂದ ನಿರ್ಮಿಸಿದ ಕೋಷ್ಠಗಳಿವೆ. ಇಲ್ಲಿ ವಿಷ್ಣುವಿನ ದ್ವಾದಶ ಅವತಾರ ಶಿಲ್ಪಗಳನ್ನು ನೋಡಬಹುದು. ಶಿಖರವನ್ನು ಗಾರೆಯಲ್ಲಿ ರೂಪಿಸಲಾಗಿದ್ದು ದ್ರಾವಿಡ ಶೈಲಿಯಲ್ಲಿದೆ. ಇದು ಮೈಸೂರು ಒಡೆಯರ ಕಾಲದ ವಾಸ್ತುಶಿಲ್ಪವನ್ನು ಹೋಲುತ್ತದೆ.

ಮುಖ್ಯ ದೇವಾಲಯದ ಎಡಭಾಗದಲ್ಲಿರುವ ವರಲಕ್ಷ್ಮಿ ಅಮ್ಮನವರ ದೇವಾಲಯವನ್ನು ಅಮ್ಮನವರದ್ದೆ ಗುಡಿ ನಿರ್ಮಿಸುವ ವಿಜಯನಗರ ಕಾಲದ ಸಂಪ್ರದಾಯದಂತೆ ಕಟ್ಟಲಾಗಿದೆ. ಈ ದೇವಾಲಯಕ್ಕೆ ಗರ್ಭಗುಡಿ, ಸುಕನಾಸಿ, ಮಂಟಪ ಹಾಗೂ ಮಹಾಮಂಟಪಗಳಿದ್ದು, ಗರ್ಭಗುಡಿಯಲ್ಲಿ ಲಕ್ಷ್ಮಿಯ ಮೂರ್ತಿ ಇದ್ದು, ಆಯತಾಕಾರದ ಸುಕನಾಸಿ, ನಾಲ್ಕು ಕಂಬಗಳ ಕಿರುಮಂಟಪವಿದೆ. ೧೨ ಕಂಬಗಳಿರುವ ಮಹಾಮಂಟಪವು ಆಕರ್ಷಕವಾಗಿದೆ. ದೇವಾಲಯದ ಶಿಖರದ ಗಾತ್ರವು ಚಿಕ್ಕದಾಗಿದ್ದು, ಮುಖ್ಯದೇವಾಲಯದ ಶಿಖರದ ಪ್ರತಿರೂಪದಂತಿದ್ದು, ದ್ವಾರಗೋಪುರವನ್ನೂ ಹೊಂದಿದೆ. ಇಲ್ಲಿಯೇ ಜಗಲಿಯಲ್ಲಿರುವ ಕ್ರಿ.ಶ. ೧೮೫೮ರ ಶಾಸನವು ಮುಮ್ಮಡಿ ಕೃಷ್ಣರಾಜರು ಈ ದೇವಾಲಯದ ಜೀರ್ಣೋದ್ಧಾರ ಮಾಡಿಸಿದರೆಂದು ತಿಳಿಸುತ್ತದೆ. ಗೋಪುರವು ಉನ್ನತವಾಗಿದ್ದು ಐದು ಅಂತಸ್ತುಗಳನ್ನು ಹೊಂದಿದೆ. ಒಂದೊಂದರಲ್ಲಿಯೂ ಕಿರುದ್ವಾರವಿದ್ದು ಇಕ್ಕೆಲಗಳಲ್ಲಿ ವೈಷ್ಣವ ದ್ವಾರಪಾಲಕರನ್ನು ಗಾರೆಯಲ್ಲಿ ನಿರ್ಮಿಸಿ ಪ್ರತಿಷ್ಠಾಪಿಸಲಾಗಿದೆ. ಮಹಾದ್ವಾರದ ಎದುರಲ್ಲಿ ಗರುಡಸ್ತಂಭ ಹಾಗೂ ಚಿಕ್ಕಮಂಟಪಗಳಿವೆ.

ಕೋಟೆಯ ಮೇಲ್ಭಾಗದ ಯೋಗಾಲಕ್ಷ್ಮೀನರಸಿಂಹ ದೇವಾಲಯವನ್ನು ಕುಂಬಿನರಸಿಂಹ ದೇವಾಲಯವೆಂದೂ ಕರೆಯುತ್ತಾರೆ. ದೇವಾಲಯವು ಗರ್ಭಗುಡಿ, ಅಂತರಾಳ, ನವರಂಗ, ಮುಖಮಂಟಪ, ಧವನಮಂಟಪ, ಧ್ವಜಸ್ತಂಭ, ಬಲಿಪೀಠ, ವರಲಕ್ಷ್ಮೀಗುಡಿ, ಮಹಾದ್ವಾರ, ಗರಡಗುಡಿ ಮತ್ತು ಪುಷ್ಕರಣಿ ಮುಂತಾದ ಭಾಗಗಳನ್ನು ಹೊಂದಿದೆ. ಲಕ್ಷ್ಮೀನರಸಿಂಹನ ಮೂಲಮೂರ್ತಿ ಕಪ್ಪುಶಿಲೆಯದ್ದಾಗಿದೆ. ಅಂತರಾಳದ ದ್ವಾರದಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ನವರಂಗವು ಹಲವು ಉಬ್ಬು ಶಿಲ್ಪಗಳನ್ನೊಳಗೊಂಡಿದೆ. ಆಂಗಳದ ಎಡಕ್ಕೆ ವರಲಕ್ಷ್ಮೀ ದೇವಾಲಯವಿದೆ. ಮಹಾದ್ವಾರವು ಮೂರು ಅಂತಸ್ತುಗಳ ಗೋಪುರವನ್ನು ಹೊಂದಿದೆ. ಕೆಳಅಂತಸ್ತಿನಲ್ಲಿ ಗಂಡಬೇರುಂಡ ಶಿಲ್ಪಗಳಿವೆ. ದ್ವಾರದ ಮುಂದೆ ಗರುಡಗುಡಿ, ಪುಷ್ಕರಣಿಗಳಿವೆ. ಪುಷ್ಕರಣಿಯಲ್ಲಿ ನಾಲ್ಕು ಕಂಬಗಳ ಮಂಟಪವಿದೆ. ಈ ಎರಡೂ ದೇವಾಲಯಗಳಿಗೂ ಮೈಸೂರು ಅರಸರು ದಾನದತ್ತಿಗಳನ್ನು ನೀಡಿರುವರು. ಶ್ರೀ ವೈಷ್ಣವ ಶಿಲ್ಪಗಳನ್ನು ಈ ದೇವಾಲಯದ ಭಿತ್ತಿ, ಕಂಬ, ಗೋಪುರಗಳ ಮೇಲೆ ಕಾಣಬಹುದಾಗಿದೆ. ಈ ಶಿಲ್ಪಗಳು ವಿಜಯನಗರಪೂರ್ವ, ವಿಜಯನಗರ ಹಾಗೂ ಒಡೆಯರ್ ಕಾಲಕ್ಕೆ ಸೇರಿದ್ದಾಗಿವೆ.

ಇಲ್ಲಿನ ಕೋಟೆಯು ಮೂರು ಬೆಟ್ಟಗಳನ್ನೊಳಗೊಂಡಿದ್ದು ಅವುಗಳೆಂದರೆ, ಕುಂಬಿನರಸಿಂಹ ಅಥವಾ ದುರ್ಗದಬೆಟ್ಟ, ಬಂಗ್ಲೆಬೆಟ್ಟ ಹಾಗೂ ಊರಿನ ಬೆಟ್ಟಗಳಾಗಿವೆ. ಜೊತೆಗೆ ಒಂದು ಕಣಿವೆ ಪ್ರದೇಶವನ್ನೂ ಒಳಗೊಂಡಿದೆ. ಕೋಟೆಯು ವಿಜಯನಗರ ಶೈಲಿಯಲ್ಲಿದ್ದು, ನಂತರದಲ್ಲಿ ಹಲವಾರು ಸೇರ್ಪಡೆಗಳಾಗಿವೆ. ಕಣಿವೆ ಭಾಗದ ಕೋಟೆಗೋಡೆ ದಪ್ಪವಾಗಿದ್ದು, ಅಲ್ಲಲ್ಲಿ ಆಯತಾಕಾರದ ಎತ್ತರದ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಫಿರಂಗಿಯ ಬಳಕೆ ಬಂದ ನಂತರ ಆಯತಾಕಾರದ ಕೊತ್ತಲಗಳು ವೃತ್ತಕಾರದಲ್ಲಿ ನಿರ್ಮಾಣಗೊಂಡಿರುವುದು ಗಮನಾರ್ಹ. ಅದೇ ರೀತಿ ಕುಂಬಿನರಸಿಂಹ ಕೋಟೆಭಾಗವೂ ವೃತ್ತಕಾರದ ಕೊತ್ತಲಗಳನ್ನೊಳಗೊಂಡಿದೆ. ಕೋಟೆಗೆ ಮುಖ್ಯವಾಗಿ ಮೂರು ದ್ವಾರಬಾಗಿಲುಗಳಿದ್ದು, ಮದ್ದಿನ ಬಾಗಿಲು, ಜಯಮಂಗಲಿ ಬಾಗಿಲು ಹಾಗೂ ಪೆನಗೊಂಡೆ ಬಾಗಿಲು ಎಂದು ಕರೆಯಲಾಗುತ್ತಿದೆ. ಇವುಗಳಲ್ಲದೆ ಊರುಬಾಗಿಲು, ಕೋಟೆಬಾಗಿಲು ಹಾಗೂ ಕತ್ತಲ ಬಾಗಿಲುಗಳೂ ಇವೆ.

ದೇವರಾಯನದುರ್ಗದ ಪೂರ್ವಭಾಗದಲ್ಲಿ **ಬೆಳ್ಳಿಬಟ್ಟಲು** (೫೪೯) ಗ್ರಾಮವಿದ್ದು, ಈ ಹೆಸರು ಬರಲು ಕಾರಣ, ಸ್ಥಳೀಯ ಹೇಳಿಕೆಯಂತೆ ಪ್ರತಿದಿನವೂ ದುರ್ಗಕ್ಕೆ ದೇವರ ಪೂಜೆಗಾಗಿ ಹಾಲನ್ನು ಬೆಳ್ಳಿಯಬಟ್ಟಲಿನಲ್ಲಿ ಕೊಂಡೊಯ್ಯುತ್ತಿದ್ದುದರಿಂದ ಈ ಗ್ರಾಮಕ್ಕೆ 'ಬೆಳ್ಳಿಬಟ್ಟಲು' ಎಂದು ಹೆಸರು ಬಂದಿತು. ಈ ಗ್ರಾಮದ ಸುತ್ತಮುತ್ತಲ ಪ್ರದೇಶದಲ್ಲಿ ಬೃಹತ್ ಶಿಲಾಯುಗಕಾಲದ ಗೋರಿಗಳಿವೆ. ಶಾಸನತಜ್ಞ ಬಿ.ಎಲ್. ರೈಸ್ ಇಲ್ಲಿಯ ಪುರಾತತ್ವ ನೆಲೆಗಳನ್ನು ಶೋಧಿಸಿ ವರದಿ ಮಾಡಿರುವರು. ಇದು ಜಿಲ್ಲೆಯ ಮೊಟ್ಟಮೊದಲ ಶೋಧನೆಯಾಗಿದೆ. ಇವು ಕಲ್ಮನೆ ಗೋರಿಗಳಾಗಿದ್ದು, ಹಾಳುಮಾಡಲಾಗಿದ್ದ ಒಂದು ಗೋರಿಯಲ್ಲಿ ಕಪ್ಪು, ಕೆಂಪು ಹಾಗೂ ಕಪ್ಪು–ಕೆಂಪು ವರ್ಣದ ಮಡಕೆಚೂರುಗಳು ದೊರೆತಿದ್ದು, ಅವುಗಳಲ್ಲೊಂದರಲ್ಲಿ ಬಿಳಿಯಗೆರೆಗಳುಳ್ಳ ಮಡಕೆಚೂರು ದೊರೆತಿರುವುದು ವಿಶೇಷ ಅಂಶವಾಗಿದೆ. ಒಟ್ಟಾರೆ ದೇವರಾಯನದುರ್ಗವು ನೈಸರ್ಗಿಕವಾಗಿ ಪ್ರಾಗೈತಿಹಾಸಿಕವಾಗಿ ಮತ್ತು ಐತಿಹಾಸಿಕವಾಗಿ ಮಹತ್ವ ಪಡೆದಿದ್ದು, ಪ್ರಮುಖ ಪ್ರವಾಸಿ ತಾಣವಾಗಿ ರೂಪುಗೊಳ್ಳುತ್ತಿದೆ.

**ದೇವರಾಯಪಟ್ಟಣ (ಜನಸಂಖ್ಯೆ. ೧೧೯): ಇದು** ತುಮಕೂರು ನಗರದ ಪೂರ್ವಕ್ಕೆ ನಾಲ್ಕು ಕಿ.ಮೀ. ದೂರ ಸಿದ್ದಗಂಗಾ ಬೆಟ್ಟದ ಸಮೀಪದಲ್ಲಿಯೇ ಇದ್ದು, ಅಲ್ಲಿನ ಗುಡ್ಡದ ಮೇಲೆ ಕೆರೆಯ ಸಮೀಪದಲ್ಲಿ ಹರಿ–ಹರೇಶ್ವರ ವೀರಾಂಜನೇಯ, ವೀರಮಾಸ್ತಮ್ಮ, ರುದ್ರೇಶ್ವರ, ಲಕ್ಷೀ, ದುರ್ಗಮ್ಮ, ಗ್ರಾಮದೇವತೆ ಮಾರಮ್ಮ, ಮುಂತಾದ ದೇವಾಲಯಗಳಿವೆ. ಹರಿಹರೇಶ್ವರ ದೇವಾಲಯದಲ್ಲಿ, ಹರನ ದೇವಾಲಯ ಅಪೂರ್ಣ ಸ್ಥಿತಿಯಲ್ಲಿದ್ದು, ಹರನ ವಿಗ್ರಹವನ್ನು ವಿಷ್ಣುವಿನ ದೇವಾಲಯದಲ್ಲಿಡಲಾಗಿದೆ. ಈ ದೇವಾಲಯ ಕದಂಬನಾಗರ ಶೈಲಿಯ ಗೋಪುರವನ್ನೂ ಚೌಕಭಾಗಗಳಿಂದಾದ ಕಂಬಗಳನ್ನು ಹೊಂದಿದೆ. ಸಮೀಪದಲ್ಲಿ **'ಕನ್ಯೆಕೆರೆ'** ಎಂಬ ಹೆಸರಿನ ವಿಶಾಲ ಕೆರೆ ಇದೆ. ಇಲ್ಲಿಯೇ ವೀರಗಾರರ ಗುಡಿಗಳು, ವೀರಗಲ್ಲುಗಳು, ಶಾಂತವೀರಸ್ವಾಮಿ ಗದ್ದುಗೆ, ಕಾವಲುಗೋಪುರ, ಮೊದಲಾದ ಚಾರಿತ್ರಿಕ ಅವಶೇಷಗಳಿವೆ.

**ದೊಡ್ಡಗುಣಿ (ಜನಸಂಖ್ಯೆ. ೩೨೨)**: ತಾಲೂಕು ಕೇಂದ್ರ ಗುಬ್ಬಿಯಿಂದ ಪಶ್ಚಿಮಕ್ಕೆ ೨೧ ಕಿ.ಮೀ. ದೂರದಲ್ಲಿದ್ದು, ಗ್ರಾಮದ ಸುತ್ತಮುತ್ತಲ ಪ್ರದೇಶವು ಶಿಲಾಯುಗದ ಮಾನವನ ವಸತಿ ನೆಲೆಯಾಗಿದ್ದು, ಇಲ್ಲಿ ಆದಿ, ಮಧ್ಯ, ಅಂತ್ಯಹಳೆಶಿಲಾಯುಗ ಹಾಗೂ ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ಅವಶೇಷಗಳು ಲಭಿಸಿವೆ. ಇಲ್ಲಿ ಹಳೆಶಿಲಾಯುಗದ ಹೆರೆಗತ್ತಿ, ಮಚ್ಚುಗತ್ತಿ, ನೀಳಚಕ್ಕೆ, ಮೊನೆ, ಹೆರೆಚಕ್ಕೆ, ಬಾಣದಮೊನೆ, ಮೊದಲಾದ ಉಪಕರಣಗಳು ದೊರೆತಿದ್ದು, ಸೂಕ್ಷ್ಮಶಿಲಾಯುಗದ ನೀಳಚಕ್ಕೆ, ಮೊನೆ, ಹೆರೆಚಕ್ಕೆ, ಕೊರೆಯುಳಿ, ಬಾಣದ ಮೊನೆ ಮೊದಲಾದ ಉಪಕರಣಗಳನ್ನು ಜಾಸ್ಪರ್ ಹಾಗೂ ಬೆಣಚುಕಲ್ಲುಗಳಿಂದ ತಯಾರಿಸಲಾಗಿದೆ. ದೊಡ್ಡಗುಣಿಯಲ್ಲಿ ಒಂದು ವೀರಶೈವ ಮಠವಿದ್ದು ಸಮೀಪದ ಹಿಂಡಗಾನಹಳ್ಳಿಯು ನಿರ್ವಸತಿ ಪ್ರದೇಶವಾಗಿದ್ದು, ಅಲ್ಲಿ ದೊರೆತಿರುವ ಶಿಲಾಶಾಸನವು ಸುಮಾರು ೧೬–೧೭ ನೇ ಶತಮಾನಕ್ಕೆ ಸೇರಿದ ದಾನ ಶಾಸನವಾಗಿದೆ.

**ದೊಡ್ಡದಾಳವಟ್ಟ (ಜನಸಂಖ್ಯೆ. ೧,೦೯೯)**: ಮಧುಗಿರಿ ತಾಲೂಕಿನಲ್ಲಿ, ಮಧುಗಿರಿ ಪಟ್ಟಣದಿಂದ ೩೮ ಕಿ.ಮೀ. ದೂರದಲ್ಲಿದೆ. ಇಲ್ಲಿ ಮಹಾನಾಡ ಪ್ರಭು ಚಿಕ್ಕಪ್ಪಗೌಡರು ತನ್ನ ಸೇನಾದಳವನ್ನು ಇರಿಸಿದ್ದನು. ಹಾಗಾಗಿ ಇದನ್ನು 'ದಳವಟ್ಟ' ಎಂದೂ ನಂತರ 'ದಾಳವಟ' ಎಂದೂ ಕರೆಯಲಾಯಿತು. ಇದೇ ಹೆಸರಿನ ಎರಡು ಹಳ್ಳಿಗಳಿದ್ದುದರಿಂದ ಒಂದು ಚಿಕ್ಕದಾಳವಟ ಮತ್ತೊಂದು ದೊಡ್ಡದಾಳವಟ್ಟ ಎಂಬುದಾಗಿ ಹೇಳಲಾಯಿತು. ಇಲ್ಲಿನ ಲಕ್ಷ್ಮೀನರಸಿಂಹ ದೇವಾಲಯ ದ್ರಾವಿಡ ಶೈಲಿಯಲ್ಲಿದ್ದು, ವಿಜಯನಗರ ಹಾಗೂ ಪಾಳೆಯಗಾರರ ಕಾಲದ ವಾಸ್ತುಶೈಲಿಯಲ್ಲಿದೆ. ಕಿರು ಪ್ರಮಾಣದಲ್ಲಿದ್ದ ಈ ದೇವಾಲಯನ್ನು ಮಹಾನಾಡಪ್ರಭು ಚಿಕ್ಕಪ್ಪಗೌಡ ಬೃಹತ್ ಪ್ರಮಾಣದಲ್ಲಿ ನಿರ್ಮಿಸಿದ್ದಾರೆ. ಇದು ದೊಡ್ಡ ಪ್ರವೇಶದ್ವಾರ ಹಾಗೂ ವಿಸ್ತಾರವಾದ ಪ್ರಾಕಾರವನ್ನು ಹೊಂದಿದೆ. ಮಹಾದ್ವಾರದ ಮೇಲಿರುವ ಗೋಪುರ ಸುಂದರವಾಗಿದೆ. ದೇವಾಲಯವು ವಿಶಾಲವಾದ ಪ್ರಾಂಗಣವನ್ನು ಹೊಂದಿದ್ದು, ಕಲ್ಲುಕಂಬಗಳಲ್ಲಿ ವಿವಿಧ ಉಬ್ಬುಶಿಲ್ಪಗಳಿವೆ. ನಾರಸಿಂಹ ಮತ್ತು ಅಭಯಹಸ್ತ ನೀಡುತ್ತಿರುವ ಲಕ್ಷ್ಮೀದೇವಿಯರ ಮೂರ್ತಿಗಳು ಆಕರ್ಷಣೀಯ. ಹೊರಬಾಗಿಲ ಸಮೀಪ ಪುಷ್ಕರಣಿ ಇದೆ. ಮೂಲ ವಿಗ್ರಹವು ಉದ್ಭವ ಮೂರ್ತಿ ಎಂಬ ಐತಿಹ್ಯವಿದೆ. ಇಲ್ಲಿ ವೈಷ್ಣವ ಸಂಪ್ರದಾಯದಲ್ಲಿ ಪೂಜಾ ಕೈಂಕರ್ಯಗಳು ನಡೆಯುತ್ತಿದು. ಆಷಾಡಮಾಸದ ದ್ವಾದಶಿಯಂದು ಜಾತ್ರೆ ವೈಭವದಿಂದ ನಡೆಯುತ್ತದೆ.

**ದೊಡ್ಡಬಾಣಗೆರೆ (ಜನಸಂಖ್ಯೆ. ೨,೮೦೪)**: ಶಿರಾ ತಾಲೂಕಿನಲ್ಲಿ ೩೫ ಕಿ.ಮೀ. ದೂರದಲ್ಲಿ, ಶಿರಾ–ಅಮರಾಪುರ ಮಾರ್ಗದಲ್ಲಿ ಗುಂಡಿಹಳ್ಳಿ ಗೇಟ್‌ನಿಂದ ಎಡಕ್ಕೆ ಮೂರು ಕಿ.ಮೀ. ದೂರದಲ್ಲಿದೆ. ಇಲ್ಲಿನ ಈಶ್ವರ ದೇವಾಲಯದ ಗರ್ಭಗುಡಿಯನ್ನು ಮಣ್ಣಿನಿಂದ ನಿರ್ಮಿಸಲಾಗಿದ್ದು, ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ನೊಳಂಬರ ಕಾಲದ

ಸುಂದರ ಶಿವಲಿಂಗವಿದೆ. ಮುಂದಿನ ಮಂಟಪದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗುಡಿಯ ಎಡಭಾಗದಲ್ಲಿ ಎರಡು ವಿಘ್ನೇಶ್ವರ ಮೂರ್ತಿಗಳಿದ್ದು. ದೇವಾಲಯವು ಶಿಥಿಲಾವಸ್ಥೆಯಲ್ಲಿದೆ. ವಿಜಯನಗರ ಕಾಲದ ಆಂಜನೇಯ ಗುಡಿ ಈ ದೇವಾಲಯದ ದಕ್ಷಿಣಕ್ಕಿದ್ದು, ಗರ್ಭಗೃಹ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಮುಖಮಂಟಪದಲ್ಲಿ ನಾಗಶಿಲ್ಪಗಳಿದ್ದು, ಮುಕ್ಕಾದ ವೀರಗಲ್ಲುಗಳಿವೆ.

**ದೊರೆಗುಡ್ಡ**: ಗುಬ್ಬಿ ತಾಲೂಕಿನಲ್ಲಿರುವ ಈ ಗುಡ್ಡ ಪ್ರದೇಶವು ಮೊದಲು ಕಬ್ಬಿಣದ ಅದಿರನ್ನು ಹೊಂದಿದ್ದ ದೊಡ್ಡ ಗಣಿಯಾಗಿದ್ದಿತು. ಈ ಹಿಂದೆ ಇಲ್ಲಿ ಕಬ್ಬಿಣದ ಅದಿರನ್ನು ಪರಿವರ್ತಿಸಿ ನಾಡು ಕಬ್ಬಿಣ ಹಾಗೂ ಹಲವಾರು ಕೃಷಿ ಉಪಕರಣಗಳನ್ನು ಸಿದ್ಧಗೊಳಿಸಿ ಸುತ್ತಮುತ್ತಲ ಊರು ಹಾಗೂ ನಗರಗಳಿಗೆ ಒದಗಿಸಲಾಗುತ್ತಿತ್ತೆಂದು ತಿಳಿದುಬರುತ್ತದೆ.

**ನಾಗಲಮಡಿಕೆ (ಜನಸಂಖ್ಯೆ ೧,೧೩೮)**: ಪಾವಗಡ ತಾಲೂಕಿನಲ್ಲಿ ಪೂರ್ವಕ್ಕೆ ೧೫ ಕಿ.ಮೀ. ದೂರದಲ್ಲಿದೆ. ಐತಿಹ್ಯವನ್ನು ಹೊಂದಿರುವ ಸುಬ್ರಹ್ಮಣ್ಯೇಶ್ವರ ದೇವಾಲಯವಿದೆ. ಇದು ಉತ್ತರ ಪಿನಾಕಿನಿ ನದಿಯ ಪೂರ್ವದಲ್ಲಿದೆ. ಪ್ರತೀವರ್ಷ ಪುಷ್ಯ ಮಾಸದಲ್ಲಿ ವಾರ್ಷಿಕ ಜಾತ್ರೆಯೊಂದಿಗೆ ದನಗಳ ಜಾತ್ರೆಯೂ ನಡೆಯುತ್ತದೆ.

**ನಾಗಲಾಪುರ (ಜನಸಂಖ್ಯೆ ೧,೦೮೪)**:ತುರುವೇಕೆರೆ ತಾಲೂಕಿನಲ್ಲಿ ಮಾಯಸಂದ್ರದಿಂದ ಎಂಟು ಕಿ.ಮೀ. ದೂರದಲ್ಲಿದೆ. ಊರಿನ ಮಧ್ಯದಲ್ಲಿರುವ ಚನ್ನಕೇಶವ ಮತ್ತು ಕೇದಾರೇಶ್ವರ ದೇವಾಲಯಗಳು ಅಪೂರ್ವ ಹೊಯ್ಸಳ ಶೈಲಿಯಲ್ಲಿವೆ. ಈಗ ಇವು ಶಿಥಿಲವಾಗಿದ್ದು, ಎರಡೂ ದೇವಾಲಯಗಳೂ ಏಕರೀತಿಯ ನಕ್ಷತ್ರಾಕಾರದ ತಳವಿನ್ಯಾಸದ ಜಗತಿಯ ಮೇಲಿವೆ. ದೇವಾಲಯದ ಭಿತ್ತಿಯಲ್ಲಿ ಆರು ಪಟ್ಟಿಕೆಗಳಿದ್ದು ಆನೆ, ಕುದುರೆ ಸವಾರರು, ಲತೆ, ಪೌರಾಣಿಕ ಕಥೆಗಳಿಗಾಗಿ ಮಾಡಿದ ಖಾಲಿಪಟ್ಟಿಕೆ, ಮಕರ ಮತ್ತು ಹಂಸಗಳ ಸಾಲು ಗೋಡೆಯ ಮೇಲೆ ಆಕರ್ಷಕ ಕೆತ್ತನೆಗಳಿದ್ದು, ನವರಂಗದ ಆಗ್ನೇಯ ಮೂಲೆಯಲ್ಲಿ ನೃತ್ಯಗಣೇಶ, ಅಮರನಾರಾಯಣ, ವಿಷ್ಣು, ಗೋವರ್ಧನಧಾರಿ, ಯೋಗನಾರಾಯಣ, ಇಂದ್ರ, ಕೃಷ್ಣ, ನೃತ್ಯಸರಸ್ವತಿ, ಬ್ರಹ್ಮ, ಮೋಹಿನಿ, ಹಯಗ್ರೀವ, ದುರ್ಗಾ, ಉಗ್ರನರಸಿಂಹ, ಲಕ್ಷ್ಮೀನಾರಾಯಣ, ವೇಣುಗೋಪಾಲ, ನೃತ್ಯಮೋಹಿನಿ, ದ್ವಿಭುಜವಿಷ್ಣು, ವಿಠಲ ಮತ್ತು ದೇವಿಯರು, ದಕ್ಷಿಣಾಮೂರ್ತಿ ಮತ್ತಿತರೆ ಮೂರ್ತಿಗಳು ಪ್ರಮುಖವಾದವು. ಚನ್ನಕೇಶವ ದೇವಾಲಯದ ಗರ್ಭಗೃಹದಲ್ಲಿ ಮೊದಲು ಚನ್ನಕೇಶವನಮೂರ್ತಿ ಇತ್ತಾದರೂ ಇಂದು ವಿಜಯನಗರ ಕಾಲಕ್ಕೆ ಸೇರಿದ ವೆಂಕಟೇಶ್ವರನ ಮೂರ್ತಿ ಇದೆ.

ಕೇದಾರೇಶ್ವರ ದೇವಾಲಯದ ಭಿತ್ತಿಯ ಮೇಲೆ ಗಜಾಸುರಮರ್ಧನ, ತಾಂಡವೇಶ್ವರ, ದಕ್ಷಿಣಾಮೂರ್ತಿ, ಉಮಾಮಹೇಶ್ವರ, ವೃಷಭಾರೂಢ ಮೊದಲಾದ ಶಿವನರೂಪಗಳಲ್ಲದೇ ಬ್ರಹ್ಮ, ವಿಷ್ಣು, ಭೈರವ, ಅರ್ಜುನ, ಮನ್ಮಥ, ಸರಸ್ವತಿ, ಮೋಹಿನಿ ಮೊದಲಾದ ಮೂರ್ತಿಗಳಿವೆ. ಈ ಶಿಲ್ಪಗಳನ್ನು 'ಸಿಗೋಜ'ನ ಮಗ 'ಬೈಚೋಜ' ಕಡೆದಿದ್ದೆಂದು ತಿಳಿಯುತ್ತದೆ. ಕೇದಾರೇಶ್ವರದ ಗರ್ಭಗೃಹದಲ್ಲಿ ದೊಡ್ಡ ಪೀಠದ ಮೇಲೆ ಶಿವಲಿಂಗವಿದೆ. ಇವು ಹೊಯ್ಸಳ ಶೈಲಿಯ ವಿಶಿಷ್ಟ ದೇವಾಲಯಗಳಾಗಿವೆ. ನಾಗಲಾಪುರವು ಹೊಯ್ಸಳರ ಕಾಲದಲ್ಲಿ ಅಗ್ರಹಾರವಾಗಿದ್ದು, ಅಗ್ರಹಾರ ಮಾದರಿಯಲ್ಲಿಯೇ ಇದೆ. ದೇವಾಲಯದ ಮೂರ್ತಿಗಳ ಮೇಲಿರುವ ರೂವಾರಿಗಳ ಹೆಸರುಗಳನ್ನಾಧರಿಸಿ ಈ ದೇವಾಲಯವು ಸುಮಾರು ೧೩ನೇ ಶತಮಾನದ್ದೆಂದು ನಿರ್ಧರಿಸಬಹುದಾಗಿದೆ.

**ನಾದೂರು (ಜನಸಂಖ್ಯೆ ೬,೪೭೭)**: ಶಿರಾ ತಾಲೂಕಿನಲ್ಲಿ ೧೭ ಕಿ.ಮೀ. ದೂರದಲ್ಲಿದ್ದು ಇಲ್ಲಿಯ ರಾಮಲಿಂಗೇಶ್ವರ ದೇವಾಲಯವು ಗರ್ಭಗುಡಿ ಹಾಗೂ ಮುಖಮಂಟಪಗಳನ್ನು ಹೊಂದಿದ್ದು ಜೀರ್ಣೋದ್ಧಾರಗೊಂಡಿದೆ. ಗರ್ಭಗುಡಿಯಲ್ಲಿ ಉದ್ಭವ ರಾಮಲಿಂಗೇಶ್ವರ, ಲಕ್ಷಣ, ಸೀತೆಯರ ಅಸ್ಪಷ್ಟ ಮೂರ್ತಿಗಳಿವೆ. ದೇವಾಲಯವು ಪೂರ್ವಾಭಿಮುಖವಾಗಿದ್ದು. ಪ್ರತೀವರ್ಷ ವಿಜಯದಶಮಿಯಲ್ಲಿ ಉತ್ಸವ ಹಾಗೂ ಆರಾಧನೆ ನಡೆಯುತ್ತದೆ. ಇಲ್ಲಿ ವಿಜಯನಗರ ಕಾಲದ ಮಹಾಸತಿ ಕಲ್ಲುಗಳಿವೆ. ಕಲ್ಲೇಶ್ವರ ದೇವಾಲಯವು ಕೆರೆಯ ಹಿಂಭಾಗದಲ್ಲಿದ್ದು, ಗರ್ಭಗುಡಿಯಲ್ಲಿ ನೊಳಂಬರ ಕಾಲದ ಒಂದುವರೆ ಅಡಿ ಎತ್ತರದ ಪಾಣಿಪೀಠದ ಮೇಲೆ ಒಂದೂವರೆ ಅಡಿ ಎತ್ತರದ ಶಿವಲಿಂಗ, ಅಂತರಾಳದಲ್ಲಿ ನಂದಿ ಇದ್ದು, ಮುಂದಿನ ಭಾಗ ಮುಖಮಂಟಪವಾಗಿದೆ. ಅಂತರಾಳದ ಬಾಗಿಲುವಾಡದ ಕೆಳಭಾಗದಲ್ಲಿ ದ್ವಾರಪಾಲಕರಿದ್ದು, ಲಲಾಟದಲ್ಲಿ ಗಣಪತಿಯ ಚಿತ್ರವನ್ನು ಬಿಡಿಸಲಾಗಿದೆ. ಅಂತರಾಳದಲ್ಲಿ ಎರಡು ನೂತನ ಚಿಕ್ಕ ಕೋಷ್ಠಗಳನ್ನು ಮಾಡಿ ಇತ್ತೀಚಿನ ಶಿಲ್ಪಗಳೆರಡನ್ನು ಇಡಲಾಗಿದೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿದ್ದು, ನಂದಿಯನ್ನು ಪ್ರತಿಷ್ಠಾಪಿಸಿದ್ದಾರೆ. ಅರ್ಧಮಂಟಪದ ಮುಂದೆ

ಹದಿನೈದು ಅಡಿಯ ದೀಪಸ್ತಂಭವಿದೆ. ಪ್ರವೇಶದ್ವಾರದ ಬಲಭಾಗದಲ್ಲಿ ನವಗ್ರಹ ಶಿಲ್ಪಗಳಿವೆ. ಇಲ್ಲಿಯೇ ವಿಜಯನಗರಕಾಲದ ಶಾಸನಕಲ್ಲನ್ನು ನಿಲ್ಲಿಸಿದ್ದಾರೆ. ದೇವಾಲಯದ ಮುಂದೆ ಮಜ್ಜನದಬಾವಿ ಇದೆ.

**ನಿಟ್ಟೂರು (ಜನಸಂಖ್ಯೆ. ೩,೭೦೨)**: ತಾಲೂಕು ಕೇಂದ್ರ ಗುಬ್ಬಿಗೆ ೧೦ ಕಿ.ಮೀ. ಪಶ್ಚಿಮಕ್ಕಿದೆ. 'ದಕ್ಷಿಣ ಐಹೊಳೆ' ಎಂದೇ ಶಾಸನೋಕ್ತವಾಗಿರುವ ಈಗಿನ ನಿಟ್ಟೂರು ಒಂದು ಕಾಲದಲ್ಲಿ ಧರ್ಮದ ಬೀಡು ಹಾಗೂ ವಾಣಿಜ್ಯ ಕೇಂದ್ರವಾಗಿದ್ದಿತು. ಇದು ಹಿಂದೆ ಗಂಗವಾಡಿಯ ನಾಭಿ, ಹರುತೆ ನಾಡಿನ ಶಿರೋಮಣಿ ಎನಿಸಿಕೊಂಡಿತ್ತೆಂದು ಶಾಸನ ತಿಳಿಸುತ್ತದೆ. ಇಲ್ಲಿರುವ ಶಾಂತಿನಾಥ ಬಸದಿ ಜಿಲ್ಲೆಯಲ್ಲಿರುವ ಹೊಯ್ಸಳ ಶೈಲಿಯ ಜಿನಾಲಯಗಳಲ್ಲಿ ಪ್ರಮುಖವಾದುದಾಗಿದೆ. ಬಸದಿಯ ಮುಖಮಂಟಪದ ಮೇಲಿರುವ ಶಾಸನದ ಪ್ರಕಾರ ಕ್ರಿ.ಶ. ೧೧೭೮ರಲ್ಲಿ ಹೊಯ್ಸಳ ವೀರನಾರಸಿಂಹನ ದಂಡನಾಯಕ ಸೋಮಯ್ಯನು ಈ ಬಸದಿಯನ್ನು ಕಟ್ಟಿಸಿ ದೇವರ ಅಷ್ಟವಿಧಾರ್ಚನೆಗೆ ನೆರವಾಗಲೆಂದು, ಕೆರೆಯ ಕೆಳಗೆ ಜಮೀನನ್ನು ದಾನವಾಗಿ ನೀಡಿರುವ ದಾಖಲೆ ದೊರೆಯುತ್ತದೆ. ಮುಖಮಂಟಪದಲ್ಲಿ ವಿಭಿನ್ನ ಕೆತ್ತನೆ ಇದ್ದು, ನವರಂಗ ಸರ್ವಾಲಂಕೃತವಾಗಿದ್ದು, ತೊಲೆಗಂಭಗಳು ಭಿನ್ನ ಕೆತ್ತನೆಗಳನ್ನು ಹೊಂದಿವೆ. ಎಡಭಾಗದ ತೊಲೆಯಲ್ಲಿ ಜ್ವಾಲಾಮಾಲಿನಿ ಮೂರ್ತಿ ಇದೆ. ಮೇಲ್ಚಾವಣಿಯನ್ನು ಒಂಬತ್ತು ಅಂಕಣವಾಗಿ ವಿಭಾಗಿಸಿ ಪ್ರತಿಯೊಂದು ಭಾಗದಲ್ಲೂ ವಿಭಿನ್ನ ಕೆತ್ತನೆಯನ್ನು ಮಾಡಲಾಗಿದೆ. ನವರಂಗ ದ್ವಾರದ ಪಂಚಶಾಖಾಲಂಕೃತ ಪಟ್ಟಿಕೆಯ ಕೆತ್ತನೆ ವೈವಿಧ್ಯವಾಗಿದೆ. ಇದನ್ನು ರಚಿಸಿದ ಶಿಲ್ಪಿ 'ಮೊಳಪಿಯ ಮಲ್ಲಯ್ಯ' ಎಂದು ದ್ವಾರಬಂಧದಲ್ಲಿ ಬರೆಯಲಾಗಿದೆ. ಗರ್ಭಗೃಹದ ಮೂಲಮೂರ್ತಿ ಹಾಳಾಗಿದ್ದು, ಹೊಸಮೂರ್ತಿಯನ್ನಿಟ್ಟು ಪೂಜಿಸಲಾಗುತ್ತಿದ್ದು, ಎಡಭಾಗದಲ್ಲಿ ಪದ್ಮಾವತಿ, ಬಲಭಾಗದಲ್ಲಿ ಬ್ರಹ್ಮದೇವನ ಮೂರ್ತಿಗಳನ್ನಿಡಲಾಗಿದೆ. ಹೊರಭಿತ್ತಿಯ ಕೆತ್ತನೆ ಭಿನ್ನವಾಗಿದ್ದು, ಅಲ್ಲಲ್ಲಿ ಅರೆಗೋಪುರಗಳಿದ್ದು, ಉತ್ತರ ಹಾಗೂ ದಕ್ಷಿಣ ಭಾಗದ ಗೋಡೆಗಳಲ್ಲಿ ಗೂಡುಗಳಿದ್ದರೂ ಯಾವುದೇ ಶಿಲ್ಪಗಳಿಲ್ಲ. ಗೋಪುರದ ಇಕ್ಕೆಲಗಳಲ್ಲಿ ಚಾಮರಧಾರಿಣಿಯರಿದ್ದಾರೆ. ಬಸದಿಯ ಹೊರಭಾಗದಲ್ಲಿ ಒಂದೇ ಕುಟುಂಬದ ಎರಡು ನಿಶಿ(ಸಿ)ಧಿಗೆಗಳಿದ್ದು, ಮಾಳವ್ವೆ ಮತ್ತು ಇವಳ ಮಗ ಮಲ್ಲಿಶೆಟ್ಟಿ, ಸೊಸೆಯಂದಿರಾದ ಚೌಡಿಯಕ್ಕ ಮತ್ತು ಬೂಚವ್ವೆಯರು, ಮೊಮ್ಮಗನಾದ ಮಾಳಯ್ಯ ಹೀಗೆ ಒಂದೇ ಕುಟುಂಬದ ಐದು ಜನರು ನಿಶಿ(ಸಿ)ಧಿ ಹೊಂದಿದ ವಿಷಯವನ್ನು ತಿಳಿಸುತ್ತವೆ. ನಿಟ್ಟೂರು ಸಾಹಿತ್ಯ ಕ್ಷೇತ್ರದಲ್ಲೂ ಕೀರ್ತಿ ಪಡೆದಿದ್ದಿತು. ಕೇಶಿರಾಜ ವಿರಚಿತ ಶಬ್ದಮಣಿದರ್ಪಣಕ್ಕೆ ಟೀಕೆ ಬರೆದವರು ನಿಟ್ಟೂರು ನಂಜಯ್ಯ. ನಿಟ್ಟೂರು ದೊಡ್ಡಣಾಂಕ ಒಬ್ಬ ಪ್ರಸಿದ್ಧ ಜೈನಕವಿ. ಹಿರಿಯ ಚೇತನ ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರು ಇದೇ ಊರಿನವರು.

**ನಿಡುಗಲ್ಲು (ಜನಸಂಖ್ಯೆ. ೩೫೭)**: ತಾಲೂಕು ಕೇಂದ್ರ ಪಾವಗಡದಿಂದ ೨೩ ಕಿ.ಮೀ. ಪಶ್ಚಿಮಕ್ಕೆ ನಿಡಿದಾದ ಬೆಟ್ಟವನ್ನು ಹೊಂದಿರುವ ಹೋಬಳಿ ಕೇಂದ್ರ ನಿಡುಗಲ್ಲು, ಸುಮಾರು (೩೭೨೨ಅಡಿ) ೧೨೪೧ ಮೀಟರ್ ಎತ್ತರದ ನಿಡಿದಾದ ಬೆಟ್ಟದಿಂದಾಗಿ ಈ ಊರನ್ನು 'ನಿಡುಗಲ್ಲು' ಎಂದು ಕರೆಯುತ್ತಾರೆ. ಇದು ಜಿಲ್ಲೆಯ ಅತ್ಯಂತ ಪ್ರಮುಖ ಪ್ರೇಕ್ಷಣೀಯ ಸ್ಥಳವಾಗಿದ್ದು, ಚಾರಣ ಪ್ರಿಯರಿಗೆ ಯೋಗ್ಯ ಸ್ಥಳವೆಂದೇ ಕರೆಯಲ್ಪಡುತ್ತಿದೆ. ಇದು ಹಿಂದೆ ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದು, ವಣಿಕರು ಇಲ್ಲಿ ಹಿಂದೆ ಹಲವು ಶೈವ, ವೈಷ್ಣವ ಹಾಗೂ ಜೈನ ಮಂದಿರಗಳನ್ನು ನಿರ್ಮಿಸಿರುವರು.

ಇಲ್ಲಿರುವ ಕೋಟೆಯ ಅವಶೇಷ ಹಾಗೂ ವಿವಿಧ ಕಾಲಮಾನದ ದೇವಾಲಯಗಳು, ವಿವಿಧ ರಾಜಮನೆತನಗಳಾದ ನಿಡುಗಲ್ಲು ಚೋಳರು ಹಾಗೂ ಹರತಿ–ನಿಡುಗಲ್ಲು ಪಾಳೇಯಗಾರರು, ನಿಡುಗಲ್ಲನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿರುವ ಅಂಶವನ್ನು ಶಾಸನಗಳು ತಿಳಿಸುತ್ತವೆ.

ನಿಡುಗಲ್ಲು ಬೆಟ್ಟವು ಆರು ಸುತ್ತಿನ ಕೋಟೆಯನ್ನು ಹೊಂದಿದ್ದು, ಮೊದಲ ಸುತ್ತನ್ನು 'ಕಾಲಾಂಜನಗಿರಿ' ಮತ್ತು 'ಕಾಳಹಸ್ತಿಕೋಟೆ', ಎರಡನೆ ಸುತ್ತನ್ನು ಭೈರವನಕೋಟೆ, ಮೂರನೆಯದನ್ನು ಬಸವನಕೋಟೆ, ನಾಲ್ಕನೆಯದನ್ನು 'ಚೆನ್ನರಾಯನಕೋಟೆ', ಐದನೆಯದನ್ನು 'ಅಲ್ಲಮದೇವರಕೋಟೆ' ಮತ್ತು 'ಬೆಸ್ತರಕೋಟೆ' ಹಾಗೂ ಆರನೆಯದನ್ನು ವೀರಭದ್ರಕೋಟೆ ಎಂದು ಕರೆಯಲಾಗಿದೆ. ಇವುಗಳಲ್ಲಿ ನಾಲ್ಕನೆಯ ಹಾಗೂ ಆರನೆಯ ಸುತ್ತಿನಲ್ಲಿ ಶಿಥಿಲಗೊಂಡಿರುವ ಹಲವಾರು ದೇವಾಲಯಗಳಿವೆ.

ಇಲ್ಲಿ ಪ್ರಾಗಿತಿಹಾಸ ಕಾಲದ ಅವಶೇಷಗಳು ಪತ್ತೆಯಾಗಿದ್ದು, ಅವು ಮಧ್ಯ ಹಾಗೂ ಅಂತ್ಯ ಹಳೆ ಶಿಲಾಯುಗ, ನೂತನ ಶಿಲಾಯುಗ, ನೂತನ–ತಾಮ್ರ ಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದವುಗಳೆಂದು ವೇದ್ಯವಾಗುತ್ತದೆ.

ಇದರಿಂದಾಗಿ ಪ್ರಾಗಿತಿಹಾಸಕಾಲದ ಪ್ರತಿಯೊಂದು ಹಂತದಲ್ಲಿಯೂ ಈ ಕೇಂದ್ರ ಪ್ರಾಮುಖ್ಯತೆ ಹೊಂದಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ. ಇಲ್ಲಿ ಪ್ರಮುಖವಾಗಿ ನೂತನ–ತಾಮ್ರ ಶಿಲಾಯುಗದ ಮಡಕೆಚೂರುಗಳು ದೊರೆತಿದ್ದು, ಅವು ನೆರೆಯ ಮಹಾರಾಷ್ಟ್ರದ ಜೋರ್ವೆ ಮಾದರಿಯಲ್ಲಿರುವುದು ವಿಶೇಷ.

ಇದು ಪಾವಗಡ ತಾಲೂಕಿನ ಗಡಿಪ್ರದೇಶದಲ್ಲಿ ಅಭೇದ್ಯಕೋಟೆಯನ್ನು ಹೊಂದಿರುವ ಸ್ಥಳ. ಇಲ್ಲಿನ ಶಿಲೆ ಗ್ರಾನೈಟ್ ಜಾತಿಗೆ ಸೇರಿದೆ. ಇದು ಸುಮಾರು ೯–೧೦ನೇ ಶತಮಾನದಲ್ಲಿ ಹೆಂಜೇರಿನಲ್ಲಿ ಆಳ್ವಿಕೆ ನಡೆಸುತ್ತಿದ್ದ ನೊಳಂಬ–ಪಲ್ಲವರ ಅಧೀನದಲ್ಲಿತ್ತು. ನಂತರ ಸ್ಥಳೀಯ ಚೋಳರ ಆಳ್ವಿಕೆಗೆ ಒಳಪಟ್ಟಾಗ, ಅವರು ನಿಡುಗಲ್ಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದರು. ಆ ನಂತರ ಹೊಯ್ಸಳ ಬಲ್ಲಾಳನ ನಿಯಂತ್ರಣಕ್ಕೆ ಬಂದು ಅವರು ಅಧಿಪತ್ಯ ಸ್ಥಾಪಿಸಿದರು. ಕ್ರಮೇಣ, ನಿಡುಗಲ್ಲು ನಾಯಕರು, ಹರತಿ ವಂಶಸ್ಥರು ವಿಜಯನಗರ ಸಾಮ್ರಾಜ್ಯದ ಅಮರನಾಯಕರಾಗಿ ಆಳ್ವಿಕೆ ನಡೆಸಿದರು. ಮುಂದೆ ಕ್ರಿ.ಶ. ೧೭೬೧ರ ವೇಳೆಗೆ ಹೈದರ್‌ಆಲಿ ಮತ್ತು ಟಿಪ್ಪುಸುಲ್ತಾನನ ಅಧೀನಕ್ಕೊಳಪಟ್ಟಿತು. ೧೭೯೯ರ ನಂತರ ಮೈಸೂರು ಅರಸರ ಆಳ್ವಿಕೆಗೆ ಸೇರಿಕೊಂಡಿತು.

ನಿಡುಗಲ್ಲಿನ ಅಭೇಧ್ಯ ಕೋಟೆಯು ವಿಸ್ತಾರವಾಗಿದ್ದು, ಇಲ್ಲಿನ ಪ್ರಮುಖ ಸ್ಮಾರಕಗಳೆಂದರೆ, ಸರ್ವಾಂಡೇಶ್ವರ, ಕಾಳಮ್ಮ, ಹನುಮಂತ, ನಗರೇಶ್ವರ, ಶ್ರೀರಾಮ, ಹನುಮಾನ್, ಈಶ್ವರ, ತಿಪ್ಪೆರುದ್ರ ದೇವಾಲಯಗಳು, ಹಾಳಾದ ಮಂಟಪ, ಕೋಟೆಯ ಬಾಗಿಲುಗಳು, ವೀರಭದ್ರ ವಿಗ್ರಹ, ವೀರಮ್ಮನ ಬಾವಿ, ದುರ್ಗಾವಿಗ್ರಹ, ತಿರುಮಲದೇವರಕಟ್ಟೆ, ನಗರೇಶ್ವರದೇವಾಲಯ, ಬಾಬಯ್ಯ ಮಸೀದಿ, ಅರಮನೆಯ ಅವಶೇಷ, ನಾಶವಾದ ಕಟ್ಟಡಗಳ ತಳಪಾಯ, ಅರ್ಧ ಚಂದ್ರಾಕೃತಿ ಬಾವಿ, ಕುದುರೆಗುಹೆ, ಮದ್ದುಗುಂಡಿನ ಉಗ್ರಾಣ, ದೊಡ್ಡದಯ್ಯನ ಮಠ, ಕಾಶಿವಿಶ್ವೇಶ್ವರ ದೇವಾಲಯ, ಮಿರ್ಜಾ ಹುಸೇನ್ ವಾಲಿದರ್ಗಾ, ಕೊಟ್ಟೂರಪ್ಪನ ಮಠ, ಶೂಲದ ವೀರಮ್ಮನಗುಡಿ, ಬಸವಣ್ಣನ ವಿಗ್ರಹ, ಪಾರ್ಶ್ವನಾಥ ಬಸದಿ, ಆದಿನಾರಾಯಣ ವಿಗ್ರಹ, ಲಕ್ಷ್ಮೀನರಸಿಂಹಬಾಗಿಲು, ಸೋಮೇಶ್ವರ ದೇವಾಲಯ, ಮಹಿಷಾಸುರಮರ್ಧಿನಿ, ಚನ್ನಕೇಶವ ದೇವಾಲಯ, ದರ್ಬಾರ್ ಸಭಾಂಗಣ, ಗುಲಗಂಜಮ್ಮ, ಕಾಳಹಸ್ತಿ ದೇವಾಲಯ, ಬೆಟ್ಟದ ಮೇಲಿನ ಗುಹೆ, ನಂದಿ ದೇವಾಲಯ ಮೊದಲಾದವು. ಜೊತೆಗೆ ನಿಡುಗಲ್ ದುರ್ಗದ ಅಷ್ಟದಿಕ್ಕುಗಳ ಅಷ್ಟ ದುರ್ಗಿಯರು, ಅಷ್ಟ ಭೈರವ ಹಾಗೂ ಅಷ್ಟ ಗಣಪತಿಗಳು ಕಂಡುಬರುತ್ತವೆ.

**ನೊಣವಿನಕೆರೆ (ಜನಸಂಖ್ಯೆ. ೪,೬೫೮)**: ತಾಲೂಕು ಕೇಂದ್ರ ತಿಪಟೂರಿನಿಂದ ೧೩ ಕಿ.ಮೀ. ದಕ್ಷಿಣಕ್ಕಿದೆ. ಇಲ್ಲಿ ಪ್ರಾಚೀನ ಕಲ್ಲೇಶ್ವರ, ಚೋಳೇಶ್ವರ, ಗಂಗೇಶ್ವರ, ಶಾಂತೇಶ್ವರ ಹಾಗೂ ನೊಣಬೇಶ್ವರ ದೇವಾಲಯಗಳಿದ್ದು, ಹೊಯ್ಸಳರ ಕಾಲದ ವೇಣುಗೋಪಾಲ, ವಿಜಯನಗರ ಕಾಲದ ಬ್ಯಾಟರಾಯ ದೇವಾಲಯ ಮುಂತಾದವು ಪ್ರಮುಖವಾಗಿವೆ. ನೊಣಬೇಶ್ವರ ಮತ್ತು ಗಂಗೇಶ್ವರ ದೇವಾಲಯಗಳು ತುರುವೇಕೆರೆಗೆ ಹೋಗುವ ಮಾರ್ಗದಲ್ಲಿ ದಿಬ್ಬದ ಮೇಲಿರುವ ಚಿಕ್ಕ ದೇವಾಲಯಗಳಾಗಿವೆ. ಮೂಲತಃ ಶಿಲೆಯಲ್ಲಿ ನಿರ್ಮಿತವಾಗಿದ್ದ ಈ ದೇಗುಲಗಳನ್ನು ಜೀರ್ಣೋದ್ಧಾರ ಮಾಡಲಾಗಿದೆ. ಈಗ ಇಟ್ಟಿಗೆ ಬಳಸಲಾಗಿದ್ದು, ಗರ್ಭಗೃಹ, ತೆರೆದ ಸುಕನಾಸಿ ಮತ್ತು ನವರಂಗಗಳನ್ನೊಳಗೊಂಡಿದೆ. ಸುಕನಾಸಿ ಮತ್ತು ನವರಂಗದ ಕಂಬಗಳು ಚತುರಸ್ರ ಮತ್ತು ಅಷ್ಟಕೋನಗಳನ್ನು ಹೊಂದಿವೆ. ನವರಂಗದ ಭುವನೇಶ್ವರಿಯನ್ನು ಒಂಬತ್ತು ಅಂಕಣವಾಗಿ ವಿಭಾಗಿಸಿ ಪದ್ಮಗಳನ್ನು ಬಿಡಿಸಲಾಗಿದೆ. ಬಾಗಿಲುವಾಡದ ಎರಡೂ ಪಾರ್ಶ್ವಗಳಲ್ಲಿ ಅಷ್ಟಕೋನದ ಆರೆಗಂಬ, ಲಾಳಾಕೃತಿಯ ಕೀರ್ತಿಮುಖ ಹಾಗೂ ಲತಾಪಟ್ಟಿಕೆಗಳಿವೆ. ಗರ್ಭಗೃಹದಲ್ಲಿ ಮಧ್ಯಮಗಾತ್ರದ ಶಿವಲಿಂಗವಿದ್ದು ಮೇಲ್ಭಾಗ ಚಪ್ಪಟೆಯಾಗಿದೆ.

ಶಾಂತೇಶ್ವರ ದೇವಾಲಯವು ನೊಣಬೇಶ್ವರ ಮತ್ತು ಗರಿಗೇಶ್ವರ ದೇವಾಲಯಗಳ ಮಾದರಿಯಲ್ಲಿಯೇ ಇದ್ದು, ಕಂಬಗಳು ಅಲಂಕೃತವಾಗಿವೆ. ನಂದಿಯನ್ನು ಸುಂದರವಾಗಿ ಕೆತ್ತಲಾಗಿದೆ. ಕಲ್ಲೇಶ್ವರ ದೇವಾಲಯವು ಕೆರೆಯ ಉತ್ತರ ತೂಬಿನ ಸಮೀಪವಿದ್ದು, ಇದೂ ಸಹ ಮೇಲಿನ ಮಾದರಿಯನ್ನೇ ಹೋಲುತ್ತದೆ. ಇದು ಸ್ವಲ್ಪ ನಂತರದ ಕಾಲದ್ದೆಂದು ಹೇಳಬಹುದು. ಚೋಳೇಶ್ವರ, ನೊಣಬೇಶ್ವರ ಹಾಗೂ ಗರಿಗೇಶ್ವರ ದೇಗುಲಗಳ ಸಮೀಪವಿದ್ದ ಸಪ್ತಮಾತೃಕೆಯರ ವಿಗ್ರಹಗಳನ್ನು ಈಗ ಬೆಂಗಳೂರಿನ ವಸ್ತುಸಂಗ್ರಹಾಲಯದಲ್ಲಿಡಲಾಗಿದೆ. ವೇಣುಗೋಪಾಲ ಅಥವಾ ಗೋಪಾಲಸ್ವಾಮಿಯ ತ್ರಿಕೂಟಾಚಲ ದೇಗುಲವು ಹೊಯ್ಸಳರ ಕಾಲದ್ದಾಗಿದೆ. ಒಳಗಿನ ನವರಂಗ ಪಶ್ಚಿಮದ ಸುಕನಾಸಿ, ಮೂರು ಗರ್ಭಗೃಹ

ಹಾಗೂ ಗೋಪುರವಿಲ್ಲದ ಮಹಾದ್ವಾರಗಳು ಹೊಯ್ಸಳರ ಕಾಲಕ್ಕೂ, ಹೊರನವರಂಗ ಆನಂತರದ ಕಾಲಕ್ಕೂ ಅಂದರೆ ವಿಜಯನಗರ ಕಾಲದ್ದೆಂದು ತಿಳಿಯುತ್ತದೆ, ದಕ್ಷಿಣ ಗರ್ಭಗೃಹದಲ್ಲಿ ವೇಣುಗೋಪಾಲ, ಉತ್ತರದಲ್ಲಿ ಯೋಗನರಸಿಂಹ ಮತ್ತು ಪಶ್ಚಿಮದಲ್ಲಿ ಜನಾರ್ಧನಮೂರ್ತಿಗಳಿವೆ. ಲೋಹದ ಜನಾರ್ಧನಮೂರ್ತಿಯು ವಿಜಯನಗರ ಕಾಲದ್ದಾಗಿದೆ.

ಇಲ್ಲಿಯ ಬೇಟೆರಾಯಸ್ವಾಮಿ ದೇವಾಲಯ ಸುಮಾರು ೧೬ನೇ ಶತಮಾನದ ರಚನೆಯಾಗಿದ್ದು, ವಿಜಯನಗರ ಶೈಲಿಯಲ್ಲಿದೆ. ಮಹಾದ್ವಾರ, ನವರಂಗ, ಸುಕನಾಸಿ ಮತ್ತು ಗರ್ಭಗೃಹಗಳನ್ನು ಹೊಂದಿದೆ. ಇಲ್ಲಿನ ಕಂಬಗಳ ಮೇಲೆ ಗಣೇಶ, ವೆಂಕಟೇಶ್ವರಮೂರ್ತಿ ಮತ್ತು ಆಳ್ವಾರರ ಉಬ್ಬುಶಿಲ್ಪಗಳಿವೆ. ಗರ್ಭಗೃಹದಲ್ಲಿನ ಬೇಟೆರಾಯಸ್ವಾಮಿ ಮೂರ್ತಿಯು ಹೊಯ್ಸಳ ಹಾಗೂ ವಿಜಯನಗರ ಸಮ್ಮಿಶ್ರ ಶೈಲಿಯಲ್ಲಿದೆ. ಪ್ರತೀವರ್ಷ ಮೇ ತಿಂಗಳಿನಲ್ಲಿ ಬೇಟೆರಾಯಸ್ವಾಮಿ ರಥೋತ್ಸವ ಜರುಗುತ್ತದೆ. ಇವುಗಳ ಜೊತೆಗೆ ಗ್ರಾಮ ದೇವತೆ ಉಡಸಲಮ್ಮ ದೇವಸ್ಥಾನವಿದೆ. ಕೆರೆಯ ಏರಿಯ ಮೇಲೆ 'ಗೊಲ್ಲಮ್ಮ' ಎಂದು ಹೇಳಲಾಗುವ ಸುಮಾರು ಮೂರು ಅಡಿ ಎತ್ತರದ ವಿಗ್ರಹವಿದ್ದು, ನಾಲ್ಕು ಕೈಗಳನ್ನು ಹೊಂದಿದೆ. ಮೇಲಿನ ಎರಡು ಕೈಗಳಲ್ಲಿ ತಾವರೆಹೂವಿದ್ದು, ಕೆಳ ಬಲಗೈ ಅಭಯಮುದ್ರೆಯಲ್ಲಿದ್ದರೆ ಮತ್ತೊಂದು ಕೈ ಸೊಂಟದ ಮೇಲಿದೆ.

**ಪಂಕಜನಹಳ್ಳಿ (ಜನಸಂಖ್ಯೆ. ೩೫೬):** ಪಂಕಜನಹಳ್ಳಿಯು ಮನಗೊಂಡನಹಳ್ಳಿಯ ಸಮೀಪವಿದ್ದು, ಇದನ್ನು ಕಂಗಸನಹಳ್ಳಿ ಎಂಬುದಾಗಿಯೂ ಕರೆಯುತ್ತಾರೆ. ಇದು ತಾಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಿಂದ ೧೩ ಕಿ.ಮೀ. ದಕ್ಷಿಣದಲ್ಲಿದೆ. ವಿಜಯನಗರ ಕಾಲದ ಭವ್ಯ ಮಲ್ಲಿಕಾರ್ಜುನ ದೇವಾಲಯವಿಲ್ಲಿದೆ. ಇದು ಗರ್ಭಗೃಹ, ಸುಖನಾಸಿ, ಪ್ರದಕ್ಷಣಾಪಥ, ನವರಂಗ, ಅರ್ಧಮಂಟಪ, ಪಾತಾಳಾಂಕಣ, ನಂದಿಮಂಟಪ, ಗೋಪುರವಿರುವ ಮಹಾದ್ವಾರ ಮತ್ತು ಪ್ರಾಕಾರಗಳನ್ನೊಳಗೊಂಡಿದೆ. ದೇವಾಲಯವು ಪೂರ್ವಾಭಿಮುಖವಾಗಿದ್ದು. ನೂರೊಂದು ಲಿಂಗಗಳನ್ನು ಪ್ರತಿನಿಧಿಸುವ ಶಿವಲಿಂಗವಿದೆ. ಪ್ರದಕ್ಷಿಣಾಪಥದಲ್ಲಿ ವಿಷ್ಣು, ಭೈರವ, ಗಣಪತಿ ಹಾಗೂ ನಗ್ನ ಭೈರವನ ಮೂರ್ತಿಗಳಿವೆ. ಮಹಾದ್ವಾರ, ಕಂಬ, ಬಾಗಿಲುವಾಡಗಳೆಲ್ಲವೂ ಉತ್ತಮ ರಚನೆಯಾಗಿದ್ದು, ಕಂಬಗಳ ಮೇಲೆ ಗಣಪತಿ, ಭೈರವ, ಶಕ್ತಿ ಮೊದಲಾದ ಉಬ್ಬುಶಿಲ್ಪಗಳಿವೆ. ಎರಡೂ ದ್ವಾರಗಳ ಬದಿಯಲ್ಲಿ ಆನೆಗಳನ್ನು ಬಿಡಿಸಲಾಗಿದೆ. ಉತ್ತರ ಹಾಗೂ ದಕ್ಷಿಣದ ಗೋಡೆಗಳ ಮೇಲೂ ತಲಾ ನಾಲ್ಕು ಆನೆಗಳನ್ನು ಬಿಡಿಸಲಾಗಿದೆ. ದ್ವಾರದ ಕಂಬಗಳ ಮೇಲಿನ ಪ್ರಮುಖ ಶಿಲ್ಪಗಳೆಂದರೆ ಬಿಲ್ಲನ್ನು ಹಿಡಿದಿರುವ ಕಣ್ಣಪ್ಪ, ಶಕ್ತಿಗಣಪತಿ, ಲಿಂಗೋದ್ಭವಮೂರ್ತಿ ಮೊದಲಾದವು. ಎಡಗಡೆಯ ದೇವಾಲಯದಲ್ಲಿರುವ ಪಾರ್ವತಿಯ ಮೂರ್ತಿಯು ನಾಲ್ಕು ಅಡಿ ಎತ್ತರವಿದೆ. ದಕ್ಷಿಣದಲ್ಲಿ ವೀರಭದ್ರನ ಗುಡಿ ಇದ್ದು, ಆರು ಅಡಿ ಎತ್ತರದ ಮೂಲಮೂರ್ತಿಯು ಆರು ಕೈಗಳನ್ನು ಹೊಂದಿದ್ದು, ಕತ್ತಿ, ಗುರಾಣಿ, ತ್ರಿಶೂಲ, ಡಮರು, ಬಿಲ್ಲು ಮತ್ತು ಬಾಣಗಳಿವೆ. ದೀಪಸ್ತಂಭ ೧೩ಮೀ. ಎತ್ತರವಿದ್ದು, ಶಿಲ್ಪಿಯ ನೈಪುಣ್ಯತೆಗೆ ಸಾಕ್ಷಿಯಾಗಿದೆ. ಪಾರ್ವತಿ ದೇವಾಲಯದಲ್ಲಿರುವ ಕೃಷ್ಣದೇವರಾಯನ ಶಿಲಾಶಾಸನದಲ್ಲಿ ಮಲ್ಲಿಕಾರ್ಜುನ ದೇವರಿಗೆ ದತ್ತಿ ನೀಡಿರುವ ವಿವರವಿದೆ. ಕ್ರಿ.ಶ ೧೫೨೯ ರಂದು ಬಾಣಸವಾಡಿಯ ಚೆನ್ನಿಸೆಟ್ಟಿಯು ಪಂಪಾಕ್ಷೇತ್ರದ ವಿರೂಪಾಕ್ಷದೇವರ ಸನ್ನಿಧಿಯಲ್ಲಿ ಕೃಷ್ಣದೇವರಾಯರಿಗೆ ಒಳಿತಾಗಲೀ ಎಂದು ಶಿವರಾತ್ರಿಯ ದಿನದಂದು ಪಂಕಜನಹಳ್ಳಿಯ ಮಲ್ಲಿಕಾರ್ಜನ ದೇವರ ಪೂಜೆ ಪುರಸ್ಕಾರಗಳಿಗೆಂದು ದತ್ತಿ ಕೊಟ್ಟ ವಿವರವಿದೆ. ಇದೇ ದೇವಾಲಯದ ಹತ್ತಿರ ಯಲಬುರ್ಗಿಯ ಮಲಪ್ಪಣನ ಆಳಾದ ಚಿಕಣನು ಕಟ್ಟೆ ಅಥವಾ ಕಲ್ಯಾಣಿಯನ್ನು ನಿರ್ಮಿಸಿದನೆಂದು ತಿಳಿದುಬರುತ್ತದೆ. ಕಲ್ಯಾಣಿಯ ಮಧ್ಯದಲ್ಲಿ ಮಂಟಪವಿದೆ. ಮಲ್ಲಿಕಾರ್ಜುನಸ್ವಾಮಿ ದೇವಾಲಯವು ಹಿಂದೆ ಗುರುಕುಲ ಮಾದರಿಯ ಶಿಕ್ಷಣ ಕೇಂದ್ರವೂ ಆಗಿದ್ದಿತೆಂದು ತಿಳಿದು ಬರುತ್ತದೆ.

**ಪಂಜಿಗಾನಹಳ್ಳಿ (ಜನಸಂಖ್ಯೆ. ೧,೮೧೮):** ಶಿರಾ–ಹಿರಿಯೂರು ಹೆದ್ದಾರಿಯಲ್ಲಿ ಪಂಜಿಗಾನಹಳ್ಳಿ ಗೇಟಿನಿಂದ ಎರಡು ಕಿ.ಮೀ. ಎಡಕ್ಕಿದ್ದು, ಶಿರಾದಿಂದ ಎಂಟು ಕಿ.ಮೀ. ದೂರದಲ್ಲಿದೆ. ಇಲ್ಲಿ ಚಂದ್ರಮೌಳೀಶ್ವರ ದೇವಾಲಯವಿದ್ದು, ಗರ್ಭಗುಡಿಯಲ್ಲಿ ಕಲ್ಯಾಣದ ಚಾಳುಕ್ಯರ ಕಾಲದ ಶಿವಲಿಂಗವು ಆಯಬದ್ಧವಾಗಿದೆ. ನವರಂಗದ ಪಾಣಿಪೀಠದಲ್ಲಿ ನಂದಿಯ ವಿಗ್ರಹವಿದೆ. ಅಂತರಾಳ ಮತ್ತು ಮುಖಮಂಟಪದ ಕಂಬಗಳು ಬೋದಿಗೆಗಳನ್ನು ಹೊಂದಿದ್ದು ಸರಳವಾಗಿವೆ.

**ಪಟ್ಟನಾಯಕನಹಳ್ಳಿ (ಜನಸಂಖ್ಯೆ. ೬,೪೭೭):** ತಾಲೂಕು ಕೇಂದ್ರ ಶಿರಾದಿಂದ ೧೯ ಕಿ.ಮೀ. ದೂರದಲ್ಲಿದ್ದು, ಶಿರಾ–ಅಮರಾಪುರ ರಸ್ತೆಯಲ್ಲಿ ಪಟ್ಟನಾಯಕನಹಳ್ಳಿ ಕ್ರಾಸ್‌ನಿಂದ ಎಡಕ್ಕೆ ಮೂರು ಕಿ.ಮೀ. ದೂರದಲ್ಲಿದ್ದು, ನಾದೂರು ಹಾಗೂ ಪಟ್ಟನಾಯಕನಹಳ್ಳಿಗಳು, ಜೋಡಿ ಗ್ರಾಮಗಳಾಗಿವೆ. ರಾಜ್ಯದಲ್ಲಿಯೇ ಪ್ರಸಿದ್ಧಿ ಪಡೆದಿರುವ ಇಲ್ಲಿಯ ಗುರುಗುಂಟೆ ಬ್ರಹ್ಮೇಶ್ವರ ದೇವಾಲಯವು ದಕ್ಷಿಣಾಭಿಮುಖವಾಗಿದೆ. ಗರ್ಭಗೃಹದಲ್ಲಿರುವ ಬೃಹತ್ ಶಿವಲಿಂಗವು ಬ್ರಹ್ಮಸೂತ್ರವನ್ನು ಹೊಂದಿದ್ದು,

ಸುಮಾರು ೧೨-೧೩ನೆಯ ಶತಮಾನದ್ದೆಂದು ತಿಳಿಯುತ್ತದೆ. ಎದುರುಗಡೆ ಇರುವ ನಂದಿಯೂ ಇದೇ ಕಾಲದ್ದಾಗಿದೆ. ನವರಂಗದ ಮಂಟಪದಲ್ಲಿ ಬೇರೆ ಬೇರೆ ಕಾಲಕ್ಕೆ ಸೇರಿದ ಕಿರುಲಿಂಗ, ನಂದಿ, ಗಣಪತಿ, ಸೂರ್ಯ, ವಿಷ್ಣು, ಆಂಜನೇಯ, ಕಾಲಭೈರವ ಮೊದಲಾದ ಶಿಲ್ಪಗಳಿವೆ. ನವರಂಗದ ಭುವನೇಶ್ವರಿಯು ಸುಂದರ ಕೆತ್ತನೆಯನ್ನೊಳಗೊಂಡಿದೆ. ದೇವಸ್ಥಾನದ ಹೊರಭಿತ್ತಿಯಲ್ಲಿ ಸುತ್ತಲೂ ವಿಷ್ಣುವಿನ ದಶಾವತಾರ ಶಿಲ್ಪಗಳನ್ನು ಬಿಡಿಸಲಾಗಿದೆ. ದೇವಾಲಯದ ಮುಂದೆ ಕಲಾತ್ಮಕ ದೀಪಸ್ತಂಭವಿದೆ. ದೇವಾಲಯದ ಎಡಕ್ಕೆ ಬಾವಿಯೊಂದಿದ್ದು, ಅದರ ಕಂಬಗಳು ಹಾಗೂ ಮೇಲ್ಭಾಗದ ತೊಲೆಗಳು ಕಲಾತ್ಮಕವಾಗಿವೆ. ಇಲ್ಲಿಯೇ ನಾಗಸರ್ಪದ ಮಧ್ಯೆ ಕಾಳಿಂಗಮರ್ಧನ ಕೃಷ್ಣ ಮತ್ತು ಧನುರ್ಧಾರಿ ರಾಮ ಮೊದಲಾದ ಉಬ್ಬುಶಿಲ್ಪಗಳನ್ನು ಬಿಡಿಸಲಾಗಿದೆ. ದೇವಾಲಯದ ಬಾವಿಯ ಪಕ್ಕದಲ್ಲಿ ದತ್ತಾತ್ರೇಯ ಮಂದಿರವಿದೆ. ಇದು ಅವಧೂತ ಮಠದ ನೆಲೆಯಾಗಿದ್ದು ಅವರ ಪ್ರಿಯದೈವವಾದ ದತ್ತಾತ್ರೇಯ ಮೂರ್ತಿಯ ಸಣ್ಣ ದೇವಾಲಯವನ್ನು ನಿರ್ಮಿಸಿದ್ದಾರೆ. ಇದೇ ಭಾಗದಲ್ಲಿ ನಾಲ್ಕು ಶಿವಲಿಂಗ, ಆಸೀನ ಕುಬೇರ, ಗಣಪತಿ, ವಿಷ್ಣು, ಸೂರ್ಯ, ನಗ್ನಭೈರವ ಮೊದಲಾದ ಶಿಲ್ಪಗಳಿವೆ. ಇವುಗಳಲ್ಲದೆ ಶಿಲಾಮಂಟಪ, ನೀಲಕಂಠೇಶ್ವರಾಲಯ, ಪಾರ್ವತಿಮಂದಿರ, ಸಮಾಧಿ, ಮಠ, ಮುಂತಾದವುಗಳಿವೆ.

**ಪಾವಗಡ (ಜನಸಂಖ್ಯೆ. ೨೮,೦೬೮):** ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಒಂದಾಗಿದ್ದು, ಜಿಲ್ಲಾ ಕೇಂದ್ರದಿಂದ ೧೦೦ ಕಿ.ಮೀ. ಉತ್ತರಕ್ಕಿದೆ. ಪ್ರಾಕೃತಿಕವಾಗಿ ಈ ತಾಲೂಕಿನ ಭೂಭಾಗ ಜಿಲ್ಲೆಗೆ ಹೊಂದಿಕೊಂಡೇ ಇಲ್ಲ. ಪಶ್ಚಿಮದಲ್ಲಿ ಚಿತ್ರದುರ್ಗಕ್ಕೂ, ಉಳಿದ ಸುತ್ತಲಿನ ಭಾಗ ಆಂಧ್ರಪ್ರದೇಶಕ್ಕೂ ಹೊಂದಿಕೊಂಡಿದೆ. ಗುಡ್ಡಬೆಟ್ಟಗಳಿಂದ ಆವೃತವಾಗಿದ್ದು, ಪ್ರಾಕೃತಿಕವಾಗಿ ಶಿಲಾಯುಗದ ಕಾಲದಲ್ಲಿ ವಾಸಯೋಗ್ಯ ಸ್ಥಳವಾಗಿದ್ದಿತೆಂದು, ತಿಳಿಯುತ್ತದೆ. ಈ ಪ್ರದೇಶವು ಕೋಟೆಯನ್ನು ಹೊಂದಿದ್ದು, ಸಾಮಂತ ಮನೆತನ ಹುಟ್ಟಿ, ಬೆಳೆದ ಚಾರಿತ್ರಿಕ ಮಹತ್ವದ ಕೇಂದ್ರವಾಗಿದೆ.

'ಪಾವಗಡ' ಎಂಬ ಹೆಸರು ವಿವಿಧ ರೂಪಗಳಲ್ಲಿ ಲಭಿಸುತ್ತದೆ. ಬೆಟ್ಟದ ಬುಡದಲ್ಲಿರುವ ಈಶ್ವರ ದೇವಾಲಯದ ಶಾಸನ 'ಪಾಗೊಂಡೆ' ಎಂದಿದ್ದರೆ, ಕಮ್ಮಾರಗುಂಡಿನ ಶಾಸನವು 'ಪಾವಗೊಂಡ' ಎಂದು, ಹುಲಿಬೆಟ್ಟದ ಶಾಸನ 'ಪಾವುಗೊಂಡ' ಎಂದೂ ದಾಖಲಿಸಿವೆ. ಆದರೆ ಈ ಹೆಸರಿನ ನಿಷ್ಪತ್ತಿ ಏನೆಂದು ತಿಳಿಯುವುದಿಲ್ಲ. ಮುಂದೆ ವೆಂಕಟಪತಿರಾಯನ ಶಾಸನದಲ್ಲಿ 'ಪಾಮುಕೊಂಡ' ಎಂದು ಸ್ಪಷ್ಟವಾಗಿ ದಾಖಲಿಸಲಾಗಿದೆ. ಶಾಸನತಜ್ಞ ಬೆಂಜಮಿನ್ ಲೂಯಿಸ್ ರೈಸ್ ತಿಳಿಸುವಂತೆ ಇಲ್ಲಿರುವ ಹಾವಿನ ಕಲ್ಲಿಂದಾಗಿ ಈ ಹೆಸರು ಬಂದಿತೆಂದು ಅಭಿಪ್ರಾಯಪಡುತ್ತಾರೆ. ಕ್ರಿ.ಶ. ೧೬೬೭ರ ವೇಳೆಗೆ ಮರಾಠರು ಮಧುಗಿರಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಏಳು ವರ್ಷಗಳ ಕಾಲ ತಮ್ಮ ಅಧಿಕಾರದಲ್ಲಿಟ್ಟುಕೊಂಡ ಸಮಯದಲ್ಲಿ 'ಪಾಗೊಂಡ', 'ಪಾಮುಕೊಂಡ'ವನ್ನು ಪಾವಗಡ ಎಂಬುದಾಗಿ ಪರಿವರ್ತಿಸಿದರೆಂದು ತಿಳಿಯುತ್ತದೆ.

ಇಲ್ಲಿನ ಇತಿಹಾಸವು ಪ್ರಾಗಿತಿಹಾಸ ಕಾಲದಿಂದ ಆರಂಭವಾಗುತ್ತದೆ. ಇಲ್ಲಿ ನೂತನ ಶಿಲಾಯುಗ ಸಂಸ್ಕೃತಿಯ ಮಡಕೆಚೂರು ಹಾಗೂ ಶಿಲಾ ಉಪಕರಣಗಳು ದೊರೆತಿದ್ದು, ಮಾನವನು ಒಂದು ಕಡೆ ನೆಲೆ ನಿಂತು ಕೃಷಿಜೀವನ ಆರಂಭಿಸಿದಕ್ಕೆ ಕುರುಹುಗಳು ದೊರೆಯುತ್ತವೆ. ಜೊತೆಗೆ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ, ನಿಲಸುಗಲ್ಲುಗಳು ಕಪ್ಪು, ಕೆಂಪು ಮತ್ತು ಕಪ್ಪು-ಕೆಂಪು ದ್ವಿವರ್ಣದ ಮಡಕೆಚೂರುಗಳೂ ದೊರೆತಿರುವುದು ಇದರ ಪ್ರಾಗೈತಿಹಾಸಿಕ ಮಹತ್ವವನ್ನು ಸೂಚಿಸುತ್ತದೆ.

ಪಾವಗಡದ ಇತಿಹಾಸವು ಗಂಗರ ಆಳ್ವಿಕೆಯಿಂದ ಆರಂಭವಾಗಿ, ನೊಳಂಬರು, ನಿಡುಗಲ್ಲು ಚೋಳರು, ಕಲ್ಯಾಣದ ಚಾಳುಕ್ಯರು, ಹೊಯ್ಸಳರು, ವಿಜಯನಗರ ಮನೆತನದ ಅರಸರ ಆಳ್ವಿಕೆಯ ಜೊತೆಗೆ ಹಲವು ಸ್ಥಳೀಯ ಸಾಮಂತ ಮನೆತನಗಳು ಹೈದರ್, ಟಿಪ್ಪು ಹಾಗೂ ಮೈಸೂರು ಒಡೆಯರು ಆಳ್ವಿಕೆ ನಡೆಸಿರುವುದು ಗೊತ್ತಾಗುತ್ತದೆ. ಇದು ಸಾಮಂತ ಮನೆತನದ ೨೦೦ ವರ್ಷಗಳ ಆಳ್ವಿಕೆಯನ್ನು ಕಂಡಿದ್ದು, ಬಲ್ಲಪ್ಪನಾಯಕನು ಈ ಪಾಳೆಯಪಟ್ಟಿನ ಮೂಲಪುರುಷನಾಗಿದ್ದು, ತಿಮ್ಮಪ್ಪನಾಯಕ ಕೊನೆಯ ದೊರೆಯಾಗಿದ್ದು, ಈ ಮನೆತನದ ನಾಯಕರು ಕೋಟೆ, ಕೊತ್ತಲ ದೇವಾಲಯ, ಮೊದಲಾದವುಗಳನ್ನು ಸ್ಥಾಪಿಸಿದ್ದಾರೆ.

ಇಲ್ಲಿನ ಶನೇಶ್ವರ ದೇವಸ್ಥಾನ ಪಟ್ಟಣದ ಪ್ರಮುಖ ಧಾರ್ಮಿಕ ಕೇಂದ್ರ. ಈ ದೇವಾಲಯವು ೧೯೫೫ರಲ್ಲಿ ನಿರ್ಮಾಣಗೊಂಡಿದ್ದು, ಅನೇಕ ಕಲಾತ್ಮಕ ಚಿತ್ರಗಳನ್ನೊಳಗೊಂಡಿದೆ. ದೇವಾಲಯದ ಹೆಬ್ಬಾಗಿಲಿನ ಮೇಲೆ ಸಪ್ತಾಶ್ವರೂಢನಾದ ಸೂರ್ಯನ ಚಿತ್ರವಿದೆ. ಒಳಗೋಡೆಗಳಲ್ಲಿ ದೊಡ್ಡ ದೊಡ್ಡ ಗೂಡುಗಳನ್ನು ನಿರ್ಮಿಸಿ ದೇವಾನುದೇವತೆಗಳನ್ನು ಇಡಲಾಗಿದೆ. ಕಂಬಗಳಿಗೂ ಅಲಂಕರಣನೀಡಿ ಶಿಲಾಬಾಲಿಕೆಯರನ್ನು ಕೆತ್ತಲಾಗಿದೆ. ಹೀಗೆ ದೇವಾಲಯದ ಒಳಗೂ ಕಲಾವಂತಿಕೆಯು ಶೋಭಿಸುತ್ತಿದೆ. ಗರ್ಭಗೃಹದ ವೇದಿಕೆಯಲ್ಲಿ ನವಗ್ರಹಗಳನ್ನು ಸ್ಥಾಪಿಸಿದ್ದು, ಮುಂಭಾಗದಲ್ಲಿ ಶನೇಶ್ವರನ ವಿಗ್ರಹವಿದೆ.

ಕನ್ನಿಕಾ ಪರಮೇಶ್ವರಿ ದೇವಸ್ಥಾನ ಸಂಕೀರ್ಣವು ನಾಗರಕಟ್ಟೆ ವೃತ್ತದ ಸಮೀಪವಿದೆ. ಇಲ್ಲಿಂದ ಮುಂದಕ್ಕೆ ದೇವಾಲಯಗಳ ಸಾಲೇ ಇದ್ದು, ಮೊದಲು ತಿರುಪತಿ ತಿಮ್ಮಪ್ಪ, ಅನಂತರದಲ್ಲಿ ಕೋದಂಡಸ್ವಾಮಿ, ಮಹಾಗಣಪತಿ, ನೀಲಕಂಠೇಶ್ವರ ಮೊದಲಾದ ದೇವಾಲಯಗಳಿವೆ. ವೇಣುಗೋಪಾಲಸ್ವಾಮಿ ದೇವಾಲಯವು ಸ್ಥಳೀಯ ಸಾಮಂತ ಮನೆತನದ ಆರಾಧ್ಯ ದೈವವಾಗಿತ್ತೆಂದು ತಿಳಿದು ಬರುತ್ತದೆ. ಇವುಗಳೇ ಅಲ್ಲದೆ ಶ್ರೀ ಸಿದ್ಧೇಶ್ವರ ದೇವಾಲಯ, ನವಗ್ರಹವನ, ಶ್ರೀರಾಘವೇಂದ್ರಸ್ವಾಮಿ ದೇವಾಲಯ, ಶ್ರೀ ರಾಮಕೃಷ್ಣ ಸೇವಾಶ್ರಮದ ಧ್ಯಾನಮಂದಿರ, ಬನಶಂಕರಿ ದೇವಾಲಯ, ಚೌಡೇಶ್ವರಿ ದೇವಾಲಯ ಮೊದಲಾದವುಗಳನ್ನೊಳಗೊಂಡಿದೆ.

ಪಾವಗಡ ಕೋಟೆಯ ನಿರ್ಮಾಣಕ್ಕೆ ವಿಜಯನಗರ ಸಾಮ್ರಾಜ್ಯದ ಒಂದನೇ ದೇವರಾಯನ ಸಾಮಂತ ಗೋಪಣ್ಣನು ಕ್ರಿ.ಶ. ೧೪೦೫ರಲ್ಲಿ ಅಡಿಗಲ್ಲನ್ನಿರಿಸಿದ್ದು, ಅದು ಇಂದಿಗೂ ಭದ್ರಕೋಟೆಯಾಗಿದ್ದು, ಗೋಡೆಗಳು ಸುಸ್ಥಿತಿಯಲ್ಲಿವೆ. ಕೋಟೆಗೆ ಹತ್ತು ದ್ವಾರಗಳಿದ್ದು, ದಪ್ಪಕಲ್ಲು, ಗಾರೆ ಹಾಗೂ ಸುಣ್ಣದಗಚ್ಚನ್ನು ಬಳಸಿ ಕಟ್ಟಲಾಗಿದೆ. ಕೋಟೆಗೋಡೆಯ ಮೇಲ್ಭಾಗದಲ್ಲಿ ಸೈನಿಕರ ಓಡಾಟಕ್ಕೆ ಹಾಗೂ ಕಾವಲುಗಾರರು ಉಳಿಯಲು ಅನುಕೂಲವಾಗುವಂತೆ ಅವಕಾಶ ಕಲ್ಪಿಸಲಾಗಿದ್ದು, ಬುರುಜು ಮತ್ತು ಬತೇರಿಗಳನ್ನು ನಿರ್ಮಿಸಲಾಗಿದೆ. ಕೋಟೆಯ ಸುತ್ತಲೂ ನೀರಿನ ಕಂದಕವಿವೆ. ಕೋಟೆಯ ದ್ವಾರಗಳಿಗೆ ಪೆನುಗೊಂಡೆ, ಮಧುಗಿರಿ, ನಿಡುಗಲ್ಲು ಬಾಗಿಲುಗಳು ಎಂದು ಹೆಸರಿಸಿದ್ದು, ಸುಂದರ ಕೆತ್ತನೆಗಳನ್ನು ಹೊಂದಿವೆ. ಬೆಟ್ಟದ ಮೇಲೆ ಕೊನೇರಿಗಳು, ಬಾಬಯ್ಯನಕೆರೆ, ಅಕ್ಕಮ್ಮನದೊಣೆ, ಭೀಮನದೊಣೆ ಹಾಗೂ ಹಲವು ಚಿಲುಮೆಗಳು ನೀರನ್ನೊದಗಿಸುತ್ತವೆ. ಇನ್ನಿತರ ನಿರ್ಮಿತಿಗಳೆಂದರೆ ಈಶ್ವರ ದೇವಾಲಯ, ಕಾವಲುಗಾರರ ವಸತಿ, ಆಂಜನೇಯಗುಡಿ, ಮಂಟಪ, ಕಲ್ಯಾಣಿ, ಮದ್ದಿನಮನೆ, ತುಪ್ಪದಕಣಜ, ನಾಗಶಿಲ್ಪಗಳು, ಫಿರಂಗಿ, ಮಸೀದಿ, ಸುಲ್ತಾನ್ ಬತೇರಿ, ಚಿಕ್ಕ ಬತೇರಿ, ದೇವಾಲಯದ್ವಾರ, ಉಗ್ರಾಣ ಹಾಗೂ ಇನ್ನಿತರ ಸ್ಮಾರಕಗಳನ್ನು ನೋಡಬಹುದು.

**ಬಂಗಾರನಾಯಕನ ಬೆಟ್ಟ:** ಇದು ಪಾವಗಡ ತಾಲೂಕಿನಲ್ಲಿದ್ದು, ಇಲ್ಲಿ ಕೋಟೆ ಮತ್ತು ಪುರಾತನ ಕಟ್ಟಡದ ಅವಶೇಷಗಳು ಕಂಡುಬಂದಿವೆ.ಇಲ್ಲಿ ಕಂಬದರಾಯನ ದೇವಾಲಯವಿದ್ದು, ಹದಿಮೂರು ಅಡಿ ಎತ್ತರದ ಕಲ್ಲಿನ ಕಂಬವೇ ಪೂಜಾ ವಿಗ್ರಹವಾಗಿದೆ. ಈ ಪೂಜಾಕಂಬದ ಇಕ್ಕೆಲಗಳಲ್ಲಿ ಶಂಖ ಮತ್ತು ಗುರಾಣಿಗಳನ್ನು ಇಡಲಾಗಿದ್ದು, ಮೇಲ್ಭಾಗದಲ್ಲಿ ಲೋಹದ ದೀಪವಿದೆ. ಈ ದೀಪವನ್ನು ಆಗಾಗ ಹಳ್ಳಿಗರು ಹಚ್ಚುತ್ತಾರೆ. ಮೇಲೇರಲು ಯಾವುದೇ ಅಟ್ಟಣಿಗೆಯನ್ನು ನಿರ್ಮಿಸದೆ, ಭಕ್ತರು ಉಪವಾಸವಿದ್ದು, ಶುಚಿರ್ಭೂತರಾಗಿ ಬಂದು, ಒಬ್ಬರಮೇಲೊಬ್ಬರು ಏರಿ ದೀಪವನ್ನು ಹಚ್ಚುವುದು ಇಲ್ಲಿನ ಸಂಪ್ರದಾಯವಾಗಿದೆ.

**ಬರಗೂರು (ಜನಸಂಖ್ಯೆ. ೨೭೮೩):** ಶಿರಾದಿಂದ ೨೫ ಕಿ.ಮೀ. ದೂರದಲ್ಲಿದ್ದು, ಶಿರಾ–ಅಮರಾಪುರ ರಸ್ತೆಯಲ್ಲಿ ಬರಗೂರು ಕ್ರಾಸ್‌ನಿಂದ ಬಲಕ್ಕೆ ಏಳು ಕಿ.ಮೀ. ಅಂತರದಲ್ಲಿದೆ. ಹಿಂದೆ ಇದೊಂದು ಪ್ರಾಚೀನ ವಿದ್ಯಾ ಕೇಂದ್ರವಾಗಿತ್ತು. ಇಲ್ಲಿ ಈಶ್ವರ, ಭೈರಾಗಿ, ಆಂಜನೇಯ ಮತ್ತು ವೀರಮ್ಮನ ದೇವಾಲಯಗಳಿವೆ.

ಇಲ್ಲಿನ ಈಶ್ವರ ದೇವಾಲಯವನ್ನು ನೊಳಂಬ ಅರಸ ಮಹೇಂದ್ರನು ಬಾಣರಸರ ಮೇಲಿನ ವಿಜಯದ ಕುರುಹಾಗಿ ನಿರ್ಮಿಸಿರುವನು. ಚೌಕಾಕಾರದಲ್ಲಿರುವ ಈ ದೇವಾಲಯ ಹಾಗೂ ಕರಿಕಲ್ಲಿನಲ್ಲಿ ರೂಪಿಸಿರುವ ಸೂಕ್ಷ್ಮತೆಯಿಂದ ಕೂಡಿರುವ ನಯನ ಮನೋಹರವಾದ ಶಿವಲಿಂಗವಿದೆ. ಆಕರ್ಷಣೀಯ ಗರ್ಭಗೃಹದ ಬಾಗಿಲುವಾಡವು ತ್ರಿಪತ್ರಶಾಖೆಯನ್ನೊಳಗೊಂಡಿದೆ. ಲಲಾಟ ಪಟ್ಟಿಯಲ್ಲಿ ಓಂಕಾರವಿದೆ. ಪ್ರವೇಶದ್ವಾರದ ಎಡಕ್ಕೆ ಮಹಿಷಮರ್ಧಿನಿ ಹಾಗೂ ಬಲಕ್ಕೆ ವೀರಭದ್ರನ ಪ್ರತಿಮೆಗಳಿದ್ದು, ದ್ವಾರಪಾಲಕಮೂರ್ತಿಗಳು ಕಣ್ಮರೆಯಾಗಿವೆ. ನವರಂಗವು ನಾಲ್ಕು ಕಂಬಗಳನ್ನು ಹೊಂದಿದ್ದು, ಕಂಬಗಳ ಮಧ್ಯದಲ್ಲಿ ನಾಟ್ಯಮಂಟಪಕ್ಕೆ ಅನುಗುಣವಾಗಿ ಸೋಪಾನವಿದ್ದು ಪ್ರದಕ್ಷಿಣಾಪಥವನ್ನೊಳಗೊಂಡಿದೆ. ಮೇಲ್ಚಾವಣಿಯನ್ನು ನಾಲ್ಕು ಅಂಕಣಗಳಾಗಿ ವಿಭಾಗಿಸಿ ಕಮಲಗಳನ್ನು ಊರ್ಧ್ವ (ಮೇಲುಭಾಗ) ಮತ್ತು ಅಧೋಪದ್ಮಗಳನ್ನು ಕೆತ್ತಲಾಗಿದೆ. ಕಂಬಗಳಲ್ಲಿ ಯಾವುದೇ ವಿಗ್ರಹವಿಲ್ಲ. ನವರಂಗಮಂಟಪದ ಎಡಭಾಗಕ್ಕೆ ನಿಂತ ವಿಷ್ಣುವಿನ ವಿಗ್ರಹವಿದೆ. ವಿಷ್ಣು ವಿಗ್ರಹಕ್ಕೆ ಕಿರೀಟ, ಕರ್ಣಕುಂಡಲ, ಹಾರ, ಕೇಯೂರ, ಚೆನ್ನವೀರ ಹಾಗೂ ವೈಜಯಂತಿಗಳಿಂದ ಅಲಂಕರಿಸಲ್ಪಟ್ಟಿವೆ. ವಿಷ್ಣುವಿನ ಕೈಗಳಲ್ಲಿ ಶಂಖ, ಚಕ್ರ, ಪದ್ಮ ಹಾಗೂ ಗದೆಗಳಿವೆ. ನವರಂಗದ ಬಲದಲ್ಲಿ ಪಾರ್ವತಿಮೂರ್ತಿ ಇದ್ದು, ಅರ್ಧಪದ್ಮಾಸನಾರೂಢವಾಗಿರುವಂತೆ ಕೆತ್ತಲಾಗಿದೆ. ಬಲಗೈ ಅಭಯಹಸ್ತ ಹೊಂದಿದ್ದು, ಎಡಗೈ ತೊಡೆಯ ಮೇಲಿದ್ದು

ಅಮೃತ ಫಲವನ್ನು ಹೊಂದಿದೆ. ಬಲ ಹಿಂಬದಿ ಕೈಯಲ್ಲಿ ಪಾಶ, ಎಡಗೈಯಲ್ಲಿ ಅಂಕುಶಗಳಿವೆ. ದೇವಿ ವಿಗ್ರಹವು ಕಿರೀಟ, ಪ್ರಭಾಮಂಡಲ, ಕರ್ಣಕುಂಡಲ, ಹಾರ, ತೋಳಬಂದಿ, ಕೈಬಂದಿ, ಕಾಲಬಂದಿಗಳನ್ನು ಒಳಗೊಂಡಿದ್ದು, ಎತ್ತರದ ವೃತ್ತಾಕಾರದ ಪಾಣಿಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಅಂತರಾಳದಲ್ಲಿ ನೊಳಂಬ-ಪಲ್ಲವ ಶೈಲಿಯ ಕಂಬಗಳ ಮೇಲೆ ಲೀಲಾವಿನೋದದ ಸ್ತ್ರೀವಿಗ್ರಹಗಳನ್ನು ಬಿಡಿಸಲಾಗಿದೆ. ದೇವಾಲಯದ ನವರಂಗದ್ವಾರಕ್ಕೆ ತ್ರಿಶಾಖಾಲಂಕಾರವಿದ್ದು, ಲಲಾಟವು ನಿರಾಡಂಬರವಾಗಿದೆ. ಮುಂಭಾಗದಲ್ಲಿ ನಂದಿ ಮಂಟಪವು, ಹದಿನಾರು ಕಂಬಗಳನ್ನೊಳಗೊಂಡಿದೆ. ದೇವಾಲಯದ ಗೋಪುರವನ್ನು ಗಾರೆಗಚ್ಚಿನಲ್ಲಿ ಮಾಡಲಾಗಿದೆ. ಇದು ದ್ರಾವಿಡ ವಿಮಾನವಾಗಿದ್ದು, ಶಾಸ್ತ್ರೀಯವಾಗಿ ನಿರ್ಮಿಸಲಾಗಿದೆ. ದೇವಾಲಯದ ಮುಂದೆ ಮಂಟಪ ಹಾಗೂ ಇಪ್ಪತ್ತು ಅಡಿ ಎತ್ತರದ ನಂದಿಧ್ವಜಗಳಿವೆ.

ವೀರಮ್ಮ ದೇವಾಲಯವು ಮಹಾಸತಿ ಪರಂಪರೆಯದ್ದಾಗಿದ್ದು, ಇಂದು ಕುಂಚಿಟಿಗರ ಕುಲದೇವರಾಗಿದೆ. ಈ ವೀರಮಾಸ್ತಿ ಗುಡಿಯನ್ನು ಜೀರ್ಣೋದ್ಧಾರ ಮಾಡಲಾಗಿದೆ. ದೇವಾಲಯದ ಆದಿಷ್ಠಾನ ಹಾಗೂ ತೆರೆದ ಮೂರು ಗರ್ಭಗುಡಿಗಳು ಪೂರ್ವಾಭಿಮುಖವಾಗಿದ್ದು, ಗರ್ಭಗುಡಿಯಲ್ಲಿ ಐದು ವೀರಗಲ್ಲುಗಳಿವೆ. ಮಧ್ಯದ ಗರ್ಭಗುಡಿಯಲ್ಲಿ ಚಿಕ್ಕಕಲ್ಲಿನ ಒಂದು ಬಂಡೆ ಹಾಗೂ ಕಾಮರಾಯನೆಂದು ಕರೆಯುವ ವೀರಗಲ್ಲು ಇದೆ. ಮೂರನೇ ಗರ್ಭಗುಡಿಯಲ್ಲಿ ಹಿಂದೆ ವೀರಮ್ಮನ ಸಮಾಧಿ ಹಾಗೂ ಆಕಾರವಿಲ್ಲದ ನಾಲ್ಕು ಮೂರ್ತಿಗಳಿದ್ದವು. ಇತ್ತೀಚೆಗೆ ವೀರಮ್ಮನ ವಿಗ್ರಹ ಮತ್ತು ಪ್ರಭಾವಳಿಗಳನ್ನು ಇಡಲಾಗಿದೆ. ದೇವಾಲಯದ ಸುತ್ತಮುತ್ತ ಹಲವು ವೀರಗಲ್ಲು ಹಾಗೂ ಶಿಲ್ಪಗಳನ್ನು ನೋಡಬಹುದಾಗಿದೆ.

ಭೈರಾಗಿ ದೇವಾಲಯವು ಗ್ರಾಮದ ಹೊರಭಾಗದಲ್ಲಿದೆ. ದೇವಾಲಯವು ಚೌಕಾಕಾರದಲ್ಲಿದ್ದು ಮುಂಭಾಗ ಮೂರು ಅಂಕಣದ ಅರ್ಧಮಂಟಪವನ್ನು ಹೊಂದಿದೆ. ದೇವಾಲಯದ ಕಂಬಗಳ ವಿನ್ಯಾಸ ವಿಜಯನಗರ ಶೈಲಿಯನ್ನು ಹೋಲುತ್ತದೆ. ಈ ದೇವಾಲಯಕ್ಕೆ ಭೈರಂಗಿಮಠವೆಂದೂ ಕರೆಯುತ್ತಾರೆ. ಆಂಜನೇಯ ದೇವಸ್ಥಾನದ ಗರ್ಭಗುಡಿಯಲ್ಲಿ ವೀರಾಂಜನೇಯನ ವಿಗ್ರಹವಿದ್ದು, ವಿಜಯನಗರ ಕಾಲದ್ದೆಂದು ತಿಳಿಯುತ್ತದೆ. ಗರ್ಭಗೃಹದ ಮುಂಭಾಗದಲ್ಲಿ ನವರಂಗ ಮಂಟಪವಿದೆ. ದೇವಾಲಯ ಪಶ್ಚಿಮಾಭಿಮುಖವಾಗಿದ್ದು, ದಕ್ಷಿಣ ಗೋಡೆಯ ಮೇಲ್ಭಾಗದಲ್ಲಿ ಎರಡುಲಿಂಗ, ಬಸವ ಹಾಗೂ ಅಂಜಲಿಬದ್ಧ ಭಕ್ತಶಿಲ್ಪವಿದೆ. ಧ್ವಜಸ್ತಂಭವು ಇಪ್ಪತ್ತು ಅಡಿ ಎತ್ತರವಿದೆ. ದೇವಾಲಯದ ಪ್ರಾಕಾರದ ಸುತ್ತಲೂ ಇರುವ ಕೈಸಾಲೆ ಮಂಟಪ ಭಗ್ನಾವಸ್ಥೆಯಲ್ಲಿದೆ. ಇಲ್ಲಿ ನಾಲ್ಕು ಅಡಿ ಎತ್ತರದ ರಂಗನಾಥನ ವಿಗ್ರಹವಿದೆ. ಬರಗೂರಿನ ಉಮಾಮಹೇಶ್ವರ, ಶಿವ ಪಾರ್ವತಿ, ದಕ್ಷಿಣಾಮೂರ್ತಿ, ಸೂರ್ಯ, ಕಾಳಿ, ನಟರಾಜ, ರಾಮ, ಸೀತೆ, ಹಾಗೂ ಅಷ್ಟದಿಕ್ಪಾಲಕರ ಮೂರ್ತಿಗಳನ್ನು ಹೇಮಾವತಿ ಹಾಗೂ ಚನ್ನೈನ ಕೇಂದ್ರ ಪ್ರಾಚ್ಯವಸ್ತು ಸಂಗ್ರಹಾಲಯಗಳಲ್ಲಿಡಲಾಗಿದೆ.

**ಬಸವನಹಳ್ಳಿ (ಜನಸಂಖ್ಯೆ.೧೬೪):** ತಾಲೂಕು ಕೇಂದ್ರ ಶಿರಾದಿಂದ ೧೬ ಕಿ.ಮೀ. ದೂರಕ್ಕಾದಂತೆ, ಶಿರಾ-ಮೈಸೂರು ರಸ್ತೆಯಲ್ಲಿ ಬೆಂಚ್‌ಗೇಟಿನ ಬಲಭಾಗಕ್ಕೆ ಒಂದು ಕಿ.ಮೀ. ದೂರದಲ್ಲಿದೆ. ಇಲ್ಲಿಯ ನೊಳಂಬರ ಕಾಲದ ಮರುಡು ಬಸವೇಶ್ವರ ದೇವಾಲಯವು ಉತ್ತರಾಭಿಮುಖವಾಗಿದೆ. ಗರ್ಭಗೃಹದಲ್ಲಿನ ಶಿವಲಿಂಗವು ನೊಳಂಬರ ಕಾಲದ್ದಾಗಿದ್ದು, ಶಿವಲಿಂಗಕ್ಕೆ ಅಭಿಮುಖವಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಅಂತರಾಳದ, ಬಾಗಿಲುವಾಡದ ತಳಭಾಗದಲ್ಲಿ ಜಯ-ವಿಜಯರ ಶಿಲ್ಪವಿದೆ. ಅಂತರಾಳದ ಮುಂದಿರುವ ಅರ್ಧಮಂಟಪಕ್ಕೆ, ಚೌಕಾಕಾರದ ಎರಡು ಕಂಬಗಳಿವೆ. ಈ ದೇವಸ್ಥಾನವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ.

**ಬಿಜ್ಜಾವರ (ಜನಸಂಖ್ಯೆ. ೧,೭೭೧):** ಇದು ಮಧುಗಿರಿಗೆ ಮೂರು ಕಿ.ಮೀ. ದೂರದಲ್ಲಿರುವ ಸಾಮಾನ್ಯ ಗ್ರಾಮ. ಇದು ಬಹು ಪ್ರಾಚೀನ ಕಾಲದಿಂದಲೂ ರಾಜಕೀಯವಾಗಿ, ಧಾರ್ಮಿಕವಾಗಿ ಮಹತ್ವ ಪಡೆದಿತ್ತು. ನೊಳಂಬರಾಜ ಮಹೇಂದ್ರನ ಎರಡನೆಯ ಅರಸಿ ಬಿಜ್ಜಳದೇವಿಯ ಹೆಸರಿನಲ್ಲಿ ಬಿಜ್ಜಾವರ ಪಟ್ಟಣವು ೧೧ನೆಯ ಶತಮಾನದಲ್ಲೇ ಸ್ಥಾಪಿಸಲ್ಪಟ್ಟಿತು. ಆದರೆ, ಇದನ್ನು ಪ್ರಮುಖ ರಾಜಧಾನಿಯನ್ನಾಗಿ ರೂಪಿಸಿ, ಅಲ್ಲಿಯ ಪ್ರಮುಖ ದೇವಾಲಯಗಳನ್ನು ನಿರ್ಮಿಸಿದವನು ಆಹೋಬಲ ಒಡೆಯನೆಂಬ ಅಂಶವನ್ನು ಕೆಲವು ಶಾಸನಗಳು ದಾಖಲಿಸಿವೆ. ಆದರೆ ಬಿಜ್ಜಾವರದ ಅರಸರು ಹಾಗೂ ಬಿಜ್ಜಾವರ ಪಟ್ಟಣದ ಸ್ಥಾಪನೆಯ ಬಗ್ಗೆ ವಿದ್ವಾಂಸರಲ್ಲಿ ಅಸ್ಪಷ್ಟತೆ ಇದೆ. ಆದರೂ ಈ ಸಂತತಿಯ ಪ್ರಭುಗಳು ಕಲೆ, ಸಾಹಿತ್ಯ ಹಾಗೂ ಧರ್ಮರಕ್ಷಣೆಗೆ ಕೊಡುಗೆ ನೀಡಿದ್ದಾರೆ.

ಬಿಜ್ಜಾವರದಲ್ಲಿ ವೀರಭದ್ರ, ಭೈರವ, ಬಸವೇಶ್ವರ, ಆಂಜನೇಯ ಮೊದಲಾದ ದೇವಾಲಯಗಳಿವೆ. ಇಲ್ಲಿ ಬಿಜ್ಜಮಹಾದೇವಿ ಅಥವಾ ಅಮ್ಮವ್ವೆಯ ದೇವಾಲಯ ಇತಿಹಾಸ ಪ್ರಸಿದ್ಧವಾದುದು. ಅಮ್ಮವ್ವೆ ಬಸವ ಪುರಾಣದಲ್ಲಿ ಬರುವ ಮುಗ್ಧ ಭಕ್ತೆ. ಈಕೆ ಬಸವಯುಗಕ್ಕೂ ಪೂರ್ವದವಳೆಂದು ತಿಳಿಯುತ್ತದೆ. ಅಮ್ಮವ್ವೆಯು ಬಿಜ್ಜಾವರದವಳಾಗಿದ್ದು, ಈಕೆಯನ್ನು ಬಿಜ್ಜಮಹಾದೇವಿ ಎಂದೂ ಕರೆಯಲಾಗಿದೆ. ಈಕೆಯ ನೆನಪಿನಿಂದ ಊರಿಗೆ 'ಬಿಜ್ಜಾವರ' ಎಂಬ ಹೆಸರು ಬಂದಿದೆ. ಹಂಪೆಯ ಹರಿಹರನು 'ಬಿಜಮಹಾದೇವಿ ರಗಳೆ' ಎಂಬ ಕಾವ್ಯವನ್ನು ರಚಿಸಿದ್ದಾನೆ.

**ಬಿದರೆ (ಜನಸಂಖ್ಯೆ. ೨,೨೬೫):** ಗುಬ್ಬಿ ತಾಲೂಕಿನ ಒಂದು ಪುಟ್ಟ ಗ್ರಾಮವಾಗಿದ್ದು, ತಾಲೂಕು ಕೇಂದ್ರದಿಂದ ಎಂಟು ಕಿ.ಮೀ. ದೂರದಲ್ಲಿದೆ. ಇಲ್ಲಿರುವ ಕಲ್ಲೇಶ್ವರ ಅಥವಾ ಕಲ್ಲಿನಾಥ ದೇವಾಲಯವನ್ನು ಹದಿನಾರನೇ ಶತಮಾನದ ಆದಿಭಾಗದಲ್ಲಿ ನಿರ್ಮಿಸಲಾಗಿದೆ. ಇಲ್ಲಿರುವ ವಿಜಯನಗರ ಕಾಲದ ಶಾಸನವು ತಿಳಿಸುವಂತೆ ಎರಡನೇ ದೇವರಾಯನ ರಾಣಿ ಕಮಲಾದೇವಿಯ ಆಜ್ಞೆಯಂತೆ ಅಧಿಕಾರಿ ಲಕುಮಣ್ಣನಾಯಕನು ಇದಕ್ಕೆ ದಾನದತ್ತಿಗಳನ್ನು ನೀಡಿರುವುದು ಗೊತ್ತಾಗುತ್ತದೆ. ಇಲ್ಲಿ ಸುಪಾರ್ಶ್ವನಾಥನ ಬಸದಿಯಿದ್ದು, ಬಹಳಷ್ಟು ಶಿಥಿಲವಾಗಿದ್ದರಿಂದ ಇತ್ತೀಚೆಗೆ ನವೀಕರಿಸಲಾಗಿದೆ. ಹಿಂದೆ, ಇದು ಪಂಡಿತರು ಹಾಗೂ ಕವಿಗಳು ನೆಲೆಸಿದ್ದ ಸ್ಥಳವಾಗಿದ್ದಿತು. ಸಮೀಪದ ಜೈನರಹಳ್ಳಿಯು ಜೈನರ ನೆಲೆವೀಡಾಗಿತ್ತೆಂದು ತಿಳಿದು ಬರುತ್ತದೆ.

**ಬುಕ್ಕಾಪಟ್ಣ (ಜನಸಂಖ್ಯೆ. ೬,೧೦೮):** ಶಿರಾ ತಾಲೂಕಿನಲ್ಲಿರುವ ಹೋಬಳಿ ಕೇಂದ್ರವಾಗಿದ್ದು, ಶಿರಾದಿಂದ ಪಶ್ಚಿಮಕ್ಕೆ ೨೧ ಕಿ.ಮೀ. ದೂರದಲ್ಲಿದೆ. ಇಲ್ಲಿನ ಕಾಲುವೆ ರಂಗನಾಥಸ್ವಾಮಿ ದೇವಾಲಯ ಮೂರು ಗರ್ಭಗುಡಿಗಳನ್ನು ಒಳಗೊಂಡಿದ್ದು, ಎಡ ಗರ್ಭಗುಡಿಯಲ್ಲಿ ರಾಮಾನುಚಾರ್ಯರ ವಿಗ್ರಹ, ಮಧ್ಯದರಲ್ಲಿ ರಂಗನಾಥನ ವಿಗ್ರಹ ಹಾಗೂ ಬಲಭಾಗದರಲ್ಲಿ ಲಕ್ಷ್ಮೀ ವಿಗ್ರಹಗಳಿವೆ. ನವರಂಗದ ಮೇಲ್ಛಾವಣಿ ಹಾಗೂ ಕಂಬಗಳಲ್ಲಿ ಶಾಸನಗಳಿವೆ. ಅಂತರಾಳದಲ್ಲಿ ಶ್ರೀದೇವಿ, ರಂಗನಾಥಸ್ವಾಮಿ ಹಾಗೂ ಭೂದೇವಿಯರ ಉತ್ಸವ ಮೂರ್ತಿಗಳನ್ನಿಡಲಾಗಿದೆ. ಇಲ್ಲಿ ನೂತನ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳ ಜೊತೆಗೆ ಇತಿಹಾಸ ಆರಂಭಕಾಲದ ಮಡಕೆಚೂರುಗಳೂ ದೊರೆತಿವೆ. ಸಮೀಪದ ಬೂದಿಗುಡ್ಡದಲ್ಲಿ ಆದಿ, ಮಧ್ಯ ಹಾಗೂ ನೂತನ ಶಿಲಾಯುಗದ ಉಪಕರಣಗಳು ಕಂಡುಬಂದಿವೆ.

**ಬೂದಿಬೆಟ್ಟ (ಜನಸಂಖ್ಯೆ. ೧,೧೧೧):** ತಾಲೂಕು ಕೇಂದ್ರ ಪಾವಗಡದಿಂದ ೧೮ ಕಿ.ಮೀ. ಉತ್ತರಕ್ಕಿದೆ. ಬೆಟ್ಟಗುಡ್ಡಗಳಿಂದ ಆವೃತವಾಗಿರುವ ಈ ಗ್ರಾಮ, ಪ್ರಾಕೃತಿಕವಾಗಿ ನೀರಿನ ಹರಿವುಗಳನ್ನು ಹೊಂದಿರುವ ಕಣಿವೆ ಪ್ರದೇಶವಾಗಿದೆ. ಗ್ರಾಮದ ದಕ್ಷಿಣ ಹಾಗೂ ಪಶ್ಚಿಮ ಭಾಗಗಳಲ್ಲಿ ಬೆಟ್ಟದ ಸಾಲುಗಳಿದ್ದು, ಅಲ್ಲಲ್ಲಿ ಗುಹೆಗಳು ಕಂಡುಬರುತ್ತವೆ. ಈ ಪ್ರದೇಶದ ಪ್ರಾಗಿತಿಹಾಸ ಸರ್ವೇಕ್ಷಣೆಯಿಂದಾಗಿ ಇಲ್ಲಿ ನೂತನ, ಬೃಹತ್ ಹಾಗೂ ಇತಿಹಾಸ ಆರಂಭಕಾಲದ ಅವಶೇಷಗಳು ದೊರೆತಿವೆ. ನೂತನ ಶಿಲಾಯುಗಕ್ಕೆ ಸೇರಿದ, ಉಜ್ಜಿ ನಯಗೊಳಿಸಿದ ಕಲ್ಲಿನ ಕೊಡಲಿಗಳು ದೊರೆತಿದ್ದು ಇವುಗಳನ್ನು ಡೊಲರೈಟ್ ಶಿಲೆ ಬಳಸಿ ಸಿದ್ಧಗೊಳಿಸಲಾಗಿದೆ. ಇದೇ ಕಾಲಮಾನದ ಕಂದು ಹಾಗೂ ಕೆಂಪು ವರ್ಣವನ್ನುಳ್ಳ ಮಡಕೆಚೂರುಗಳು ದೊರೆತಿವೆ. ಗ್ರಾಮದ ಪೂರ್ವಭಾಗದಲ್ಲಿ ಬೃಹತ್ ಶಿಲಾಯುಗಕಾಲದ ಕಲ್ಮನೆಯು ಸುಮಾರು ೧೦ ಅಡಿ ಎತ್ತರವಿದ್ದು, ಸ್ವಸ್ತಿಕಾಕಾರದಲ್ಲಿ ನಿಲ್ಲಿಸಿರುವ ನಾಲ್ಕು ಶಿಲಾ ಫಲಕಗಳಲ್ಲಿ ಎರಡು ಮಾತ್ರ ಉಳಿದಿವೆ. ಗ್ರಾಮದ ಕೆಲವೆಡೆ ಕಬ್ಬಿಣದ ಕಿಟ್ಟದ ಅವಶೇಷಗಳನ್ನು ಗುರುತಿಸಲಾಗಿದೆ. ಅಲ್ಲದೆ, ಇತಿಹಾಸ ಆರಂಭಕಾಲದ ಮಡಕೆ ಮಾದರಿಗಳು ದೊರತಿವೆ.

**ಬೆಟ್ಟದಹಳ್ಳಿ (ಜನಸಂಖ್ಯೆ. ೭೬೨):** ಗುಬ್ಬಿ ತಾಲೂಕಿನ ಒಂದು ಗ್ರಾಮವಾಗಿದ್ದು, ೧೯ ಕಿ.ಮೀ. ವಾಯವ್ಯಕ್ಕಿದೆ. ಈ ಹೆಸರು ಬರಲು ಕಾರಣ ಸಮೀಪದಲ್ಲೇ ಇರುವ ಚಿಕ್ಕ ಒಂಟಿಬೆಟ್ಟ, ಚಿಕ್ಕದಾದರೂ ಮಹಾಲಿಂಗ ರೂಪದಂತೆ ಕಾಣುವ ಈ ಬೆಟ್ಟ ಅನೇಕ ತಪಸ್ವಿಗಳ ನೆಲೆವೀಡಾಗಿತ್ತಂತೆ. ಬೆಟ್ಟದಹಳ್ಳಿ ಪ್ರಾಗೈತಿಹಾಸಿಕ ಕೇಂದ್ರವಾಗಿದ್ದು, ಸೂಕ್ಷ್ಮಶಿಲಾಯುಗ ಸಂಸ್ಕೃತಿಯ ವಿವಿಧ ಶಿಲಾಉಪಕರಣಗಳು, ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷವಾದ ಕಪ್ಪು, ಕೆಂಪು ಮತ್ತು ಕಪ್ಪು–ಕೆಂಪು ದ್ವಿವರ್ಣದ ಮಡಕೆಚೂರು ಮತ್ತು ಇತಿಹಾಸ ಆರಂಭಕಾಲದ ಮಡಕೆ ಅವಶೇಷಗಳು ದೊರೆತಿವೆ. ಬೆಟ್ಟದಲ್ಲಿ ಗವಿ ಇದ್ದು, ಮಲ್ಲಿಕಾರ್ಜುನ ಸ್ವಾಮಿಯ ಗದ್ದುಗೆ ಇರುವುದರಿಂದ 'ಗವಿಮಠ'ವೆಂಬುದಾಗಿ ಪ್ರಸಿದ್ಧಿ ಹೊಂದಿದೆ. ಬೆಟ್ಟದ ಮೇಲೆ ಮಲ್ಲಿಕಾರ್ಜುನಸ್ವಾಮಿ, ವೀರಭದ್ರ ದೇವಾಲಯ ಮತ್ತು ಬಿಸಿಲು ಮಲ್ಲಪ್ಪನ ಬಯಲು ಆಲಯವಿದೆ. ವರ್ಷಕ್ಕೊಮ್ಮೆ ವೀರಭದ್ರನ ಜಾತ್ರಾ ಉತ್ಸವವು ಯುಗಾದಿಯಾದ ವಾರದನಂತರ ಐದು ದಿನಗಳ ಕಾಲ ನಡೆಯುತ್ತದೆ. ಮಠದಲ್ಲಿ ಪ್ರತಿ ಹುಣ್ಣಿಮೆಯಂದು ವಿಶೇಷಪೂಜೆ, ರಾತ್ರಿ ಇಡೀ ಭಜನೆ ನಡೆಯುತ್ತದೆ. ಊರಿನ ಉತ್ತರಕ್ಕಿದ್ದ ಗಂಗಾಧರೇಶ್ವರ

ದೇವಾಲಯವನ್ನು ನವೀಕರಿಸಲಾಗಿದೆ. ಊರಿನ ಒಳಗೆ ಆಂಜನೇಯ ಹಾಗೂ ಉತ್ಸವ ಮೂರ್ತಿಗಳ ಆಲಯಗಳೂ ಇವೆ. ಗವಿಮಠದ ಆಶ್ರಯದಲ್ಲಿ ಮಲ್ಲಿಕಾರ್ಜುನ ವಿದ್ಯಾಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಉಚಿತ ಪ್ರಸಾದ ನಿಲಯವನ್ನು ನಡೆಸಲಾಗುತ್ತಿದೆ.

**ಬೆಳಗುಂಬ (ಜನಸಂಖ್ಯೆ. ೨,೮೧೯):** ತುಮಕೂರಿನಿಂದ ಪೂರ್ವಕ್ಕೆ ದೇವರಾಯನದುರ್ಗ ಮಾರ್ಗದಲ್ಲಿ ಐದು ಕಿ.ಮೀ. ದೂರದಲ್ಲಿದ್ದು, ಸುತ್ತಲೂ ಬೆಟ್ಟಗುಡ್ಡಗಳಿಂದ ಸುತ್ತುವರಿದಿದೆ. ಇದು ಶರಣಧರ್ಮವನ್ನು ಸಾರುತ್ತಿರುವ ಧರ್ಮಕ್ಷೇತ್ರವಾಗಿದ್ದು, ಶ್ರೀ ಸಿದ್ಧರಾಮೇಶ್ವರರ ಗದ್ದುಗೆ ಇದೆ. ಪ್ರತೀ ವರ್ಷ ಮಕರ ಸಂಕ್ರಾಂತಿಯಂದು ವಿಜೃಂಭಣೆಯಿಂದ ಶ್ರೀ ಸಿದ್ಧರಾಮೇಶ್ವರ ಜಯಂತಿ ನಡೆಯತ್ತದೆ. ದೇವಾಲಯದ ಆವರಣದಲ್ಲಿ ದಾಸೋಹ ವ್ಯವಸ್ಥೆಯೂ ಇದೆ.

**ಬೆಳ್ಳಾರ (ಜನಸಂಖ್ಯೆ. ೨,೧೬೬)**: ಇದು ಚಿಕ್ಕನಾಯಕನಹಳ್ಳಿ ತಾಲೂಕು ಕೇಂದ್ರದಿಂದ ಪಶ್ಚಿಮಕ್ಕಿದ್ದು ಚಿನ್ನದ ನಿಕ್ಷೇಪವನ್ನು ಹೊಂದಿರುವ ಕೇಂದ್ರವಾಗಿದೆ. ಇದು ಒಂದು ಪುರಾತನ ಗಣಿ ಕೇಂದ್ರವೆಂದೂ, ಕೋಲಾರ ಹಾಗೂ ಹಟ್ಟಿ ಚಿನ್ನದ ಗಣಿಗಳಂತೆಯೇ ಸಾವಿರಾರು ವರ್ಷಗಳಷ್ಟು ಹಳೆಯದೆಂದು ತಿಳಿದುಬರುತ್ತದೆ. ಈ ಪ್ರದೇಶದಲ್ಲಿ ಹಲವು ಖಾಸಗಿ ಸಂಸ್ಥೆಗಳು ೧೯೦೨ ರಿಂದ ೧೯೦೫ರವರೆಗೆ ಗಣಿಗಾರಿಕೆಯನ್ನು ನಿರ್ವಹಿಸಿದವು. ಆ ನಂತರ ೧೯೪೩ರಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ವಿಸ್ತೃತ ಸಮೀಕ್ಷಾಕಾರ್ಯ ಕೈಗೊಂಡು ಗಣಿಕಾರ್ಯ ಆರಂಭಿಸಿತು. ಆದರೆ ಬರುವ ಆದಾಯಕ್ಕಿಂತ ಉತ್ಪಾದನಾ ವೆಚ್ಚ ಹೆಚ್ಚಾದುದರಿಂದ ೧೯೫೪ರಲ್ಲಿ ಕೈಬಿಡಲಾಯಿತು. ಬೆಳ್ಳಾರದ ಸಮೀಪದಲ್ಲಿ 'ಧರ್ಮವೀರ ಫಾರಂ' ಇದ್ದು ಈ ನರ್ಸರಿಯಲ್ಲಿ ತೆಂಗಿನ ಸಸಿಗಳನ್ನು ಅಭಿವೃದ್ಧಿ ಪಡಿಸಿ, ರೈತರಿಗೆ ರಿಯಾಯತಿ ದರದಲ್ಲಿ ಹಂಚಲಾಗುತ್ತಿದೆ. ಬೆಳ್ಳಾರ ಗ್ರಾಮದ ಉತ್ತರಕ್ಕೆ ೧೩ ಕಿ.ಮೀ. ದೂರದಲ್ಲಿರುವ **ಅಜ್ಜನಹಳ್ಳಿ (ಜನಸಂಖ್ಯೆ. ೧,೨೨೩)**ಯ ಸುತ್ತಮುತ್ತ ಚಿನ್ನದ ನಿಕ್ಷೇಪ ಇರುವ ಮಾಹಿತಿ ದೊರೆತಿದ್ದು, ಭಾರತೀಯ ಭೂವೈಜ್ಞಾನಿಕ ಸರ್ವೇಕ್ಷಣಾ ಸಂಸ್ಥೆ ಹಾಗೂ ಭಾರತೀಯ ಖನಿಜ ಸರ್ವೇಕ್ಷಣಾ ಸಂಸ್ಥೆಗಳು ಈ ಪ್ರದೇಶದಲ್ಲಿ ಜಂಟಿಯಾಗಿ ಸರ್ವೇಕ್ಷಣ ಕಾರ್ಯವನ್ನು ಕೈಗೊಂಡಿವೆ. ಚಿಕ್ಕನಾಯಕನಹಳ್ಳಿಯ ಪೂರ್ವಕ್ಕೆ ಮೂರು ಕಿ.ಮೀ. ದೂರದಲ್ಲಿರುವ **ಹೊನ್ನೇಬಾಗಿ (ಜನಸಂಖ್ಯೆ. ೧,೦೯೯)** ಗ್ರಾಮದಲ್ಲಿಯೂ ಚಿನ್ನದ ನಿಕ್ಷೇಪವು ಇದ್ದುದರಿಂದ ಹಲವು ವರ್ಷಗಳ ಹಿಂದೆಯೇ ಇಲ್ಲಿ ಗಣಿಕಾರ್ಯ ನಡೆಯುತ್ತಿತ್ತು. ಹೊನ್ನೇಬಾಗಿ ಬೆಟ್ಟದಲ್ಲಿ ರಂಗನಾಥ ದೇವಾಲಯವಿದ್ದು, ಪ್ರತೀವರ್ಷ ರಥೋತ್ಸವ ನಡೆಯುತ್ತದೆ.

**ಬೆಳ್ಳಾವೆ (ಜನಸಂಖ್ಯೆ. ೩,೪೩೩)**: ಇದು ತುಮಕೂರು–ಚೇಳೂರು ಮಾರ್ಗದಲ್ಲಿ ತುಮಕೂರಿಗೆ ೧೩ ಕಿ.ಮೀ. ದೂರದಲ್ಲಿದೆ. ಇದನ್ನು 'ಶ್ವೇತಕಮಠಾಪುರಿ' ಎಂದೂ ಕರೆಯಲಾಗುತ್ತಿತ್ತು. ಈ ಊರು ಹಿಂದೊಂದು ಧಾರ್ಮಿಕ ಕೇಂದ್ರವಾಗಿತ್ತು. ಸಾಹಿತಿಗಳ ನೆಲೆವೀಡು ಹಾಗೂ ಧನ್ವಂತರೀ ಕ್ಷೇತ್ರವೆಂದೂ ಪ್ರಸಿದ್ಧವಾಗಿತ್ತು. ಪ್ರತೀ ಸೋಮವಾರ ದೊಡ್ಡ ಪ್ರಮಾಣದಲ್ಲಿ ಸಂತೆ ನಡೆಯುತ್ತದೆ. ಇಲ್ಲಿನ ಸೋಮೇಶ್ವರ ದೇವಾಲಯ ಪುರಾತನವಾದುದು. ಬೆಳ್ಳಾವೆಯು ಸಾಹಿತ್ಯ ಕ್ಷೇತ್ರದಲ್ಲಿಯೂ ಪ್ರಸಿದ್ಧವಾಗಿದ್ದು, ಅಮೂಲ್ಯ ನಾಟಕಗಳನ್ನು ರಚಿಸಿದ ಬೆಳ್ಳಾವೆ ಸೋಮನಾಥಯ್ಯ, ಬೆಳ್ಳಾವೆ ನರಹರಿಶಾಸ್ತ್ರಿ, ಹೆಸರಾಂತ ಸಾಹಿತಿ ವೆಂಕಟನಾರಾಯಣಪ್ಪ, ಹನುಮಾನ್ ವೆಂಕಟರಾಯಕವಿ ಹಾಗೂ ಆಯುರ್ವೇದ ವೈದ್ಯರಾದ ವೆಂಕಟನಾರಾಯಣಪ್ಪ, ಸಾಹಿತಿಗಳಾದ ಜಿ.ಎಸ್.ಸಿದ್ಧಲಿಂಗಯ್ಯ, ಗಣಿತಜ್ಞ ಎನ್. ರುದ್ರಯ್ಯ ಮೊದಲಾದವರ ಜನ್ಮಸ್ಥಳವೂ ಇದಾಗಿದೆ.

**ಬೋರನಕಣಿವೆ (ಜನಸಂಖ್ಯೆ. ೩೨೦)**: ಚಿಕ್ಕನಾಯಕನಹಳ್ಳಿ ತಾಲೂಕಿನ ಹುಳಿಯಾರು ಹೋಬಳಿಯಲ್ಲಿರುವ ಗ್ರಾಮ. ಇಲ್ಲಿನ ಹಲವು ನೀರಿನ ಹರಿವು ಹಾಗೂ ಸುವರ್ಣಮುಖಿ ನದಿಗಾಗಿ ಬೋರನ ಕಣಿವೆಯಲ್ಲಿ ಜಲಾಶಯವನ್ನು ನಿರ್ಮಿಸಲಾಗಿದೆ. ಸುವರ್ಣಮುಖಿ ನದಿಯು ಕೃಷ್ಣಾ ಜಲಾನಯನ ಪ್ರದೇಶಕ್ಕೆ ಸೇರಿದೆ. ೧೮೮೮ರ ಮೇ ತಿಂಗಳಿನಲ್ಲಿ ಈ ಜಲಾಶಯವು ಪೂರ್ಣಗೊಳ್ಳುವಲ್ಲಿ ಮೈಸೂರು ದೊರೆಗಳಾದ ಚಾಮರಾಜೇಂದ್ರ ಒಡೆಯರು ಮತ್ತು ದಿವಾನ್ ಶೇಷಾದ್ರಿ ಐಯ್ಯರ್ ಅವರ ಪಾತ್ರ ಹಿರಿದಾದುದು. ಎಂಬತ್ತು ಅಡಿ ಎತ್ತರದ ಈ ಜಲಾಶಯವು ಇದುವರೆಗೂ ಕೆಲವೇ ಬಾರಿ ಮಾತ್ರ ಪೂರ್ಣ ತುಂಬಿರುವುದು. ೧೫ ಕಿ.ಮೀ. ಉದ್ದದ ಎಡನಾಲೆ ಇದೆ. ೮೩೦ ಹೆಕ್ಟೇರ್ ಭೂಮಿಗೆ ಸಾಗುವಳಿಗಾಗಿ ನೀರನ್ನೊದಗಿಸುತ್ತಿದೆ. ಇದು ತಾಲೂಕಿನಲ್ಲಿರುವ ಏಕಮಾತ್ರ ಜಲಾಶಯವಾಗಿದೆ.

**ಭಸ್ಮಾಂಗಿಬೆಟ್ಟ (ಜನಸಂಖ್ಯೆ. ೪೦೯):** ಇದು ತಾಲೂಕು ಕೇಂದ್ರ ಮಧುಗಿರಿಯಿಂದ ೨೬ ಕಿ.ಮೀ. ದೂರದಲ್ಲಿದೆ. ಈ ಬೆಟ್ಟದಲ್ಲಿರುವ ಕೋಟೆಯನ್ನು, ಅಲ್ಲೆ ಆಳ್ವಿಕೆ ನಡೆಸಿದ ಬೂದಿಬಸಪ್ಪನಾಯಕನು ತನ್ನ ಪ್ರಜೆಗಳಿಗೆ ರಕ್ಷಣೆ ಒದಗಿಸುವುದರ ಜೊತೆಗೆ ಕಾವಲುಗಾರರಿಗೂ ಅನುಕೂಲವಾಗುವ ರೀತಿಯಲ್ಲಿ ಸಾಮಾನ್ಯ ಕಲ್ಲು ಹಾಗೂ ಮಣ್ಣನ್ನು ಬಳಸಿ ನಿರ್ಮಾಣ ಮಾಡಿದನೆಂದು ತಿಳಿದು ಬರುತ್ತದೆ. ಆದರೆ ೧೭೬೮ ರಲ್ಲಿ ನಡೆದ ಹೈದರಾಲಿಯ ದಾಳಿಗೆ ಈ ಕೋಟೆಯು ಬಲಿಯಾಯಿತು. ಇಲ್ಲಿ ಅಕ್ಕ–ತಂಗಿಯರ ದೊಣೆಗಳಿವೆ. ಕೋಟೆ ಸಮೀಪದಲ್ಲಿಯೇ ರಾಗಿ ಬೀಸುವ ಬೃಹತ್ ರಾಗಿಕಲ್ಲಿದೆ. ಹಿಂದೆ ಇದಕ್ಕೆ ಕೋಣಗಳನ್ನು ಕಟ್ಟಿ ಎಳೆಯುತ್ತಿದ್ದರಂತೆ. ಇಲ್ಲಿ ಬಸವಣ್ಣನ ಗುಡಿ ಇದೆ. ಅಲ್ಲದೆ, ಕುದುರೆಲಾಯ ಹಾಗೂ ಉಗ್ರಾಣದ ಭಗ್ನಾವಶೇಷಗಳು ಇಲ್ಲಿವೆ.

ಭಸ್ಮಾಂಗಿಬೆಟ್ಟದಲ್ಲಿ ಭಸ್ಮಾಂಗೀಶ್ವರ ದೇವಾಲಯವಿದೆ. ಅಲ್ಲಿಯೇ ಕೋಲು ಶಾಂತವೀರ ಸ್ವಾಮಿಗಳ ಗದ್ದುಗೆ ಇದೆ. ಇವರ ವರಪ್ರಸಾದ ಹಾಗೂ ಪವಾಡಗಳಿಂದಾಗಿ ಇಲ್ಲಿ ಭಸ್ಮಾಂಗೀಶ್ವರ ದೇವಾಲಯವನ್ನು ನಿರ್ಮಿಸಲಾಯಿತೆಂದು ಹೇಳಲಾಗುತ್ತದೆ. ಇಲ್ಲಿರುವ ಇನ್ನಿತರ ಅವಶೇಷಗಳೆಂದರೆ ಕೋಟೆಯೊಳಗಿರುವ ಅರಮನೆ, ಮಸೀದಿ ಮೊದಲಾದವು. ಇವುಗಳನ್ನು ಕಲ್ಲು, ಇಟ್ಟಿಗೆ, ಗಚ್ಚುಗಾರೆ ಮೊದಲಾದವುಗಳನ್ನು ಬಳಸಿ ನಿರ್ಮಿಸಲಾಗಿದೆ. ಒಟ್ಟಾರೆ ಇಲ್ಲಿನ ಅವಶೇಷಗಳೆಲ್ಲವೂ ವಿಜಯನಗರೋತ್ತರ ಕಾಲದ್ದಾಗಿವೆ.

**ಭೂವನಹಳ್ಳಿ (ಜನಸಂಖ್ಯೆ. ೧,೫೬೮):** ತಾಲೂಕು ಕೇಂದ್ರ ಶಿರಾದಿಂದ, ಏಳು ಕಿ.ಮೀ. ದೂರದಲ್ಲಿದೆ. ಶಿರಾ–ಹಿರಿಯೂರು ಹೆದ್ದಾರಿಯಲ್ಲಿ ಭೂವನಹಳ್ಳಿ ಗೇಟ್‌ನಿಂದ ಒಂದು ಕಿ.ಮೀ. ಎಡಕ್ಕಾದಂತೆ ಇದೆ. ಚಂದ್ರಮೌಳೇಶ್ವರ ದೇವಾಲಯವು ಗ್ರಾಮದ ಹೊರಭಾಗದಲ್ಲಿದ್ದು, ಗರ್ಭಗೃಹದ ಶಿವಲಿಂಗವು ಆರು ಅಡಿ ಎತ್ತರವಿದೆ. ಲಿಂಗದ ಪಾಣಿಪೀಠದಲ್ಲಿ ಗೋಮುಖವಿಲ್ಲ. ಶಿವಲಿಂಗದ ಪೀಠದ ಮೇಲೆಯೇ ಗಣಪತಿ ಮತ್ತು ಪಾರ್ವತಿಯ ಮೂಲವಿಗ್ರಹಗಳಿವೆ. ಮುಂಭಾಗದ ಸುಖನಾಸಿಯಲ್ಲಿ ಶಿವಲಿಂಗಕ್ಕೆ ಅಭಿಮುಖನಾಗಿ ನಂದಿಕೇಶ್ವರ ವಿಗ್ರಹವನ್ನು ಸ್ಥಾಪಿಸಲಾಗಿದೆ. ನಂದಿಕೇಶ್ವರ ಪವಿತ್ರ ಬಂಧವನ್ನು ಹೊಂದಿದ್ದು, ಕಟಿಸೂತ್ರ, ಕಾಮಬಂಧಿ ಮತ್ತು ಶೃಂಗಶಿಲ್ಪಗಳು ಕುಸುರಿ ಕೆಲಸದಿಂದ ಕೂಡಿವೆ. ಅಂತರಾಳದ ಮುಂದೆ ಮುಖಮಂಟಪವಿದೆ. ಮುಂಭಾಗದಲ್ಲಿ ಸುಮಾರು ಎಂಟು ಅಡಿ ಎತ್ತರದ ಧ್ವಜಸ್ತಂಭವಿದೆ. ದೇವಾಲಯಕ್ಕೆ ಯಾವುದೇ ಗೋಪುರವಿಲ್ಲ. ಈ ದೇವಾಲಯವು ಸುಮಾರು ೧೨ನೇ ಶತಮಾನದ ಕಲಾಕೃತಿಯಾಗಿದೆ. ಇಲ್ಲಿನ ಈಶ್ವರ ದೇವಾಲಯವು ಗರ್ಭಗೃಹ ಹಾಗೂ ಮುಖಮಂಟಪಗಳನ್ನು ಹೊಂದಿದ್ದು, ಶಿವಲಿಂಗ ಹಾಗೂ ನಂದಿಯ ಶಿಲ್ಪವನ್ನು ಹೊಂದಿದೆ. ಮೂಲ ವಿಗ್ರಹ ವಿಜಯನಗರ ಶೈಲಿಯಲ್ಲಿದೆ.

**ಮಂಗಳ(ಜನಸಂಖ್ಯೆ. ೮೭೪):** ಇದೊಂದು ಜಲಾಶಯವಾಗಿದ್ದು ಕುಣಿಗಲ್ ತಾಲೂಕಿನಲ್ಲಿದೆ. ನಾಗಿನಿ ನದಿಗೆ ಅಡ್ಡಲಾಗಿ ಈ ಜಲಾಶಯದ ನಿರ್ಮಾಣವನ್ನು ೧೯೬೦ರಲ್ಲಿ ಆರಂಭಿಸಲಾಯಿತು. ಇದರ ಒಟ್ಟು ಅಚ್ಚುಕಟ್ಟು ಪ್ರದೇಶ ೧೩೦೦ ಎಕರೆಗಳಾಗಿವೆ. ಮಣ್ಣಿನ ಸವಕಳಿಯಿಂದಾಗಿ ನೀರಿನ ಸಂಗ್ರಹ ಕಡಿಮೆಯಾಗಿದೆ.

**ಮಂದರಗಿರಿ (ಜನಸಂಖ್ಯೆ. ೯೬೭):** ಇದು ತುಮಕೂರು ತಾಲೂಕಿನಲ್ಲಿದ್ದು ತುಮಕೂರಿನಿಂದ ಪೂರ್ವಕ್ಕೆ ೧೦ ಕಿ.ಮೀ. ಅಂತರದಲ್ಲಿದೆ. ಇದನ್ನು ಪಂಡಿತರಹಳ್ಳಿ ಹಾಗೂ ಬಸ್ತಿಬೆಟ್ಟವೆಂದೂ ಕರೆಯುತ್ತಾರೆ. ಇಲ್ಲಿ ಇತ್ತೀಚೆಗೆ ಗೊಮ್ಮಟಮೂರ್ತಿಯೊಂದನ್ನು ನಿಲ್ಲಿಸಲಾಗಿದೆ. ಇದು ಗಂಗರ ಕಾಲದಷ್ಟು ಪ್ರಾಚೀನ ಜೈನಕ್ಷೇತ್ರವಾಗಿದ್ದು, ಏಕಶಿಲಾಬೆಟ್ಟದ ಮೇಲ್ಭಾಗದ ವಿಶಾಲ ಸಮತಟ್ಟು ಪ್ರದೇಶದಲ್ಲಿ ಜಿನಾಲಯಗಳು, ಮಾನಸ್ತಂಭ, ಶಿಲಾಶಾಸನ ಹಾಗೂ ಜೈನಶಿಲ್ಪಗಳಿವೆ. ಇದರ ಉತ್ತರ ಭಾಗದಲ್ಲಿ ಮೈದಾಳಕೆರೆ ಇದೆ. ಬೆಟ್ಟದ ಮೇಲೆ ನಾಲ್ಕು ಜಿನಾಲಯಗಳಿದ್ದು, ಅವುಗಳಲ್ಲಿ ಎರಡು ಚಂದ್ರನಾಥ ಬಸದಿ ಹಾಗೂ ಉಳಿದೆರಡು ಸುಪಾರ್ಶ್ವನಾಥ ಮತ್ತು ಪಾರ್ಶ್ವನಾಥ ತೀರ್ಥಂಕರರ ಬಸದಿಗಳಾಗಿವೆ. ಚಂದ್ರನಾಥ ಬಸದಿಯು ಪ್ರಮುಖವಾದುದು. ಪಾರ್ಶ್ವನಾಥ ಬಸದಿಯಲ್ಲಿ ಹೊಯ್ಸಳ ನರಸಿಂಹನ ಕ್ರಿ.ಶ. ೧೧೬೦ರ ಶಿಲಾಶಾಸನವಿದೆ. ಇದು ಮೂಲತಃ ಗಂಗರ ಕಾಲದ್ದಾಗಿದ್ದು, ಹೊಯ್ಸಳರ ಕಾಲದಲ್ಲಿ ಸೇರ್ಪಡೆಗಳೊಂದಿಗೆ ವಿಸ್ತಾರಗೊಂಡಿದೆ. ಹೊಯ್ಸಳ ನರಸಿಂಹನ ಪ್ರಧಾನಿ ಎರೆಯಂಗಯ್ಯನ ಪತ್ನಿ ಮಾಚಿಯಕ್ಕನು ಜಿನಮಂದಿರ ಹಾಗೂ ಮಂದರಗಿರಿಯ ಬಳಿಯ ಪದ್ಮಾವತಿ ಕೆರೆಯನ್ನು ಕಟ್ಟಿಸಿ, ಭೂಮಿಯನ್ನು ದಾನಕೊಟ್ಟ ಬಗ್ಗೆ ಹೇಳಿದೆ. ಮಾಚಿಯಕ್ಕನು ಕೊಂಡಕುಂದಾನ್ವಯದ ಮೂಲಸಂಘಕ್ಕೆ ಸೇರಿದ ಜೈನಮುನಿ ಗಂಡವಿಮುಕ್ತದೇವನ ಶಿಷ್ಯೆಯಾಗಿದ್ದಳೆಂದು ತಿಳಿದುಬರುತ್ತದೆ.

ಚಂದ್ರನಾಥ ತೀರ್ಥಂಕರ ಬಸದಿಯ ನವರಂಗದ ಛಾವಣಿ ಅಥವಾ ಭುವನೇಶ್ವರಿಯಲ್ಲಿ ದಿಕ್ಪಾಲಕರ ಮೂರ್ತಿ ಹಾಗೂ ಮಧ್ಯದಲ್ಲಿರುವ ಸರ್ಪದಶಿಲ್ಪ ಬಹುಸುಂದರ ಕೆತ್ತನೆಯಾಗಿದೆ. ಜಿನಾಲಯಗಳ ಹಿಂಭಾಗದ ಇಳಿಜಾರಿನ ಬಂಡೆಗಳ ಮೇಲೆ ಇದ್ದ ಬರಹಗಳಿಂದು ಹಾಳಾಗಿದ್ದು, ಕೆಲವು ಅಕ್ಷರಗಳು ಮಾತ್ರ ಉಳಿದಿದ್ದು, ಅವು ೧೦ನೇ ಶತಮಾನದ ಲಿಪಿಲಕ್ಷಣವನ್ನು ಹೊಂದಿವೆ. ಸಮೀಪದ ಬಂಡೇನಹಳ್ಳಿ (ಬೆಟ್ಟದ ಪಶ್ಚಿಮದಲ್ಲಿ)ಯಲ್ಲಿ ಬೃಹತ್ ಶಿಲಾಯುಗಕ್ಕೆ ಸೇರಿದ ೧೦ ಸಮಾಧಿಗಳು ಹಾಗೂ ಎರಡು ಶಾಸನರಹಿತ ವೀರಗಲ್ಲುಗಳು ಕಂಡುಬಂದಿವೆ. ಮತ್ತೊಂದು ಕಡೆ ೨೦ ಗೋರಿಗಳಿದ್ದು, ಆ ಸ್ಥಳವನ್ನು 'ಪಾಂಡವರದಿಬ್ಬ' ಎಂದು ಕರೆಯುತ್ತಾರೆ.

**ಮೈದಾಳ (ಜನಸಂಖ್ಯೆ. ೧,೧೦೪):** ತುಮಕೂರಿನಿಂದ ಪೂರ್ವಕ್ಕೆ ೧೨ ಕಿ.ಮೀ. ದೂರದಲ್ಲಿರುವ ಈ ಗ್ರಾಮದ ಸಮೀಪದಲ್ಲಿಯೇ ಬೃಹತ್‌ಕೆರೆ ಇದ್ದು, ಮಂದರಗಿರಿಯ ಶಿಲಾಶಾಸನವು ತಿಳಿಸುವಂತೆ ಪ್ರಧಾನಿ ಎರೆಯಂಗಯ್ಯನ ಪತ್ನಿ ಮಾಚಿಯಕ್ಕನು ಪದ್ಮಾವತಿ ಕೆರೆಯನ್ನು ನಿರ್ಮಿಸಿ, ಭೂದಾನ ನೀಡಿರುವ ವಿವರ ದೊರಕುತ್ತದೆ. ಈ ಶಾಸನ ಗ್ರಾಮದ ಹೆಸರನ್ನು 'ಮಯ್ದವೊಳಲು' ಎಂದು ಉಲ್ಲೇಖಿಸಿದೆ. ಇಲ್ಲಿಯ ಕೆರೆಗಳು ತುಮಕೂರು ನಗರಕ್ಕೆ ಕುಡಿಯುವ ನೀರಿಗೆ ಆಸರೆಯಾಗಿದೆ.

**ಮಂಚಕಲ್‌ಕುಪ್ಪೆ (ಜನಸಂಖ್ಯೆ. ೧,೨೨೫)**ಯಲ್ಲಿ ಮಧ್ಯಹಳೆ ಶಿಲಾಯುಗ, ಅಂತ್ಯಹಳೆ ಶಿಲಾಯುಗ, ಸೂಕ್ಷ್ಮಶಿಲಾಯುಗದ ವೈವಿಧ್ಯ ಉಪಕರಣ ಹಾಗೂ ಬೃಹತ್ ಶಿಲಾಯುಗದ ವಾಸ್ತವ್ಯದ ನೆಲೆಗಳು ಕಂಡುಬಂದಿವೆ. ಹಳೆಶಿಲಾಯುಗದ ಕೈಗೊಡಲಿ, ಚಕ್ರಾಕಾರದ ಉಪಕರಣ, ಹೆರೆಚಕ್ಕೆ, ನೀಳಚಕ್ಕೆ, ಮೊನೆ ಹಾಗೂ ಇನ್ನಿತರ ಉಪಕರಣಗಳು ಹಾಗೂ ಬೃಹತ್‌ಶಿಲಾಯುಗ ಸಂಸ್ಕೃತಿಯ ಕಪ್ಪು, ಕೆಂಪು ವರ್ಣದ ಹಾಗೂ ಕಪ್ಪು–ಕೆಂಪು ದ್ವಿವರ್ಣದ ಮಡಕೆಚೂರುಗಳು ದೊರೆತಿವೆ. ಈ ಗ್ರಾಮದಲ್ಲಿ ಸುಮಾರು ೧೭ನೇ ಶತಮಾನಕ್ಕೆ ಸೇರಿದ ಸರಸಿಂಹನ ದೇವಾಲಯವಿದೆ.

**ಹಿರೇಹಳ್ಳಿ (ಜನಸಂಖ್ಯೆ. ೨,೧೨೯)** ರೈಲ್ವೇಸ್ಟೇಷನ್ ಎದುರು ಭಾಗದ ಬೆಟ್ಟದಲ್ಲಿ ಅಂತ್ಯ ಹಳೆಶಿಲಾಯುಗ ಮತ್ತು ಸೂಕ್ಷ್ಮ ಶಿಲಾಯುಗಕಾಲದ ಹಲವು ಮಾದರಿಯ ಉಪಕರಣಗಳು ದೊರೆತಿದ್ದು ತನ್ಮೂಲಕ ಇದೊಂದು ಶಿಲಾಯುಗದ ವಸತಿ ನೆಲೆ ಎಂದು ಖಾತ್ರಿಯಾಗುತ್ತದೆ. ಇಲ್ಲಿ ಅಡಕೆ ಸಂಶೋಧನಾ ಕೇಂದ್ರವೊಂದಿದ್ದು, ಉತ್ತಮ ತಳಿಯ ಅಡಕೆ ಸಸಿಗಳನ್ನು ಬೆಳೆಸಿ ಅಡಕೆ ಬೆಳೆಗಾರರಿಗೆ ಒದಗಿಸಲಾಗುತ್ತಿದೆ. ಖ್ಯಾತ ಇತಿಹಾಸತಜ್ಞ ಡಾ. ಎಂ ವಿ ಶ್ರೀನಿವಾಸ್ ಈ ಗ್ರಾಮದವರು.

**ಮದಲೂರು (ಜನಸಂಖ್ಯೆ. ೬,೧೯೩):** ಇದು ತಾಲೂಕು ಕೇಂದ್ರ ಶಿರಾದಿಂದ ೧೦ ಕಿ.ಮೀ ದೂರದಲ್ಲಿದೆ. ಇಲ್ಲಿನ ಕಲ್ಲೇಶ್ವರ ದೇವಾಲಯವು ಸುಮಾರು ೧೨ನೇ ಶತಮಾನದ ನಿರ್ಮಾಣ. ನೊಳಂಬ ವಾಸ್ತುಶೈಲಿಯ ಇದರ ಗರ್ಭಗುಡಿಯಲ್ಲಿ ಶಿವಲಿಂಗವಿದ್ದರೆ, ಅಂತರಾಳದಲ್ಲಿ ನಂದಿ ಇದೆ. ಅಂತರಾಳದ ಬಾಗಿಲುವಾಡ ಪಂಚಶಾಖೆಗಳಿಂದ ಕೂಡಿದ್ದು, ದ್ವಾರಪಾಲಕರಿದ್ದು ಲಲಾಟದಲ್ಲಿ ಗಜಲಕ್ಷ್ಮೀಯನ್ನು ಚಿತ್ರಿಸಲಾಗಿದೆ. ಪ್ರದಕ್ಷಿಣಾ ಪಥವಿದೆ. ಅಂತರಾಳದ ಎಡಬಲಗಳಲ್ಲಿ ನಂದಿ ಮತ್ತು ಪಾರ್ವತಿಯರ ಕಿರುಮೂರ್ತಿಗಳಿವೆ. ನವರಂಗದಲ್ಲಿ ಗಣಪತಿಯ ವಿಗ್ರಹವಿದ್ದು, ಬಲಭಾಗದಲ್ಲಿ ಉತ್ತರಾಭಿಮುಖವಾಗಿ ಸಪ್ತಮಾತೃಕೆಯರ ಪೀಠಗಳಿವೆ. ನವರಂಗದ ಕಂಬಗಳು ಅಲಂಕೃತವಾಗಿವೆ. ನವರಂಗದ ದ್ವಾರಮಂಟಪವು ಚಾಳುಕ್ಯ ಹಾಗೂ ಹೊಯ್ಸಳರ ಶಿಲ್ಪ ಲಕ್ಷಣವನ್ನು ಹೊಂದಿದೆ. ದ್ವಾರಬಂಧದಲ್ಲಿ ಸಪ್ತಶಾಖೆಗಳಿದ್ದು, ನಯನಮನೋಹರ ಕುಸರಿಯನ್ನು ಹೊಂದಿದೆ. ಮುಂಭಾಗದಲ್ಲಿ ಇಪ್ಪತ್ತೈದು ಅಡಿ ಎತ್ತರದ ಧ್ವಜಸ್ತಂಭವಿದೆ.

ಇಲ್ಲಿನ ವೀರಾಂಜನೇಯ ದೇವಸ್ಥಾನ ವಿಜಯನಗರ ಕಾಲದ್ದಾಗಿದೆ. ಬೃಹತ್ತಾದ ವೀರಾಂಜನೇಯಮೂರ್ತಿಯು ಬಲಗೈಯನ್ನು ಎತ್ತಿ ಹಿಡಿದಿದ್ದು, ಎಡಗೈ ಕಠಾರಿಯನ್ನು ಹೊಂದಿದೆ. ಕಂಠಾಭರಣ, ನಡುಪಟ್ಟಿ, ಹಾರ, ಭುಜಕೀರ್ತಿ, ತೋಳ್ಬಂದಿ, ಕೈಬಂದಿ ಉತ್ತರೀಯಗಳಿಂದ ಅಲಂಕೃತವಾಗಿದೆ. ಇಲ್ಲಿ ವೀರಾಂಜನೇಯನ ವಿವಿಧ ದೃಶ್ಯಾವಳಿಗಳನ್ನು ಕೆತ್ತಲಾಗಿದೆ. ಗರ್ಭಗೃಹದ ಮುಂಭಾಗದಲ್ಲಿ ನವರಂಗಮಂಟಪವಿದೆ. ದೇವಾಲಯದ ಮುಂಭಾಗದಲ್ಲಿ ಸುಮಾರು ೩೦ ಅಡಿ ಎತ್ತರದ ದೀಪಸ್ತಂಭವಿದೆ.

**ಮದ್ದಕ್ಕನಹಳ್ಳಿ ಜನಸಂಖ್ಯೆ. ೧,೫೭೩):** ಇದು ಶಿರಾ ತಾಲೂಕಿನಲ್ಲಿ, ಶಿರಾ–ಗೌಡಗೆರೆ–ತಾವರೆಕೆರೆ ಮಾರ್ಗದಲ್ಲಿ ೧೪ ಕಿ.ಮೀ. ದೂರದಲ್ಲಿದೆ. ಗ್ರಾಮದ ಹೊರಗೆ ಒಳಕಲ್ಲು ರಂಗನಾಥಸ್ವಾಮಿ ದೇವಸ್ಥಾನ ಹಾಗೂ ಸಮೀಪದಲ್ಲಿ ಮದ್ದಮ್ಮನ ನೆಲೆ ಇದೆ. ದೇವಸ್ಥಾನವು ಗರ್ಭಗುಡಿ, ಅರ್ಧಮಂಟಪಗಳನ್ನು ಹೊಂದಿದೆ. ದೇವಾಲಯದ ಪ್ರವೇಶದ್ವಾರವು

ಪೂರ್ವಾಭಿಮುಖವಾಗಿದ್ದು, ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದೆ. ಮೂಲಮೂರ್ತಿ ಹಳೆಯದಾದರೂ, ದೇವಾಲಯ ಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ದೇವಾಲಯದ ಮುಂದೆ ಧ್ವಜಸ್ತಂಭ ಮತ್ತು ದೀಪಸ್ತಂಭಗಳಿವೆ. ದೇವಾಲಯದ ಉತ್ತರಕ್ಕೆ ವಿಜಯನಗರ ಕಾಲದ ಆಂಜನೇಯ ಗುಡಿ ಇದೆ. ಇದಕ್ಕೆ ಗರ್ಭಗುಡಿ ಮಾತ್ರವಿದ್ದು, ದಕ್ಷಿಣಾಭಿಮುಖವಾಗಿದೆ. ದೇವಾಲಯದ ಪಕ್ಕದಲ್ಲಿ ಕೈಸಾಲೆಮಂಟಪವಿದೆ.

ಮದ್ದಮ್ಮ ದೇವಸ್ಥಾನವು ಗರ್ಭಗುಡಿ, ಮುಖಮಂಟಪ ಹಾಗೂ ಪ್ರಾಕಾರಗಳನ್ನು ಹೊಂದಿದೆ. ಮೂಲಮೂರ್ತಿಯ ಆಸೀನ ಭಂಗಿಯಲ್ಲಿದ್ದು ಮುಂಗೈಗಳು ವರದ–ಅಭಯ ಹಸ್ತಭೂಷಿತವಾಗಿದ್ದು, ಹಿಂಗೈಗಳು ಪಾಶಾಂಕುಶವನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಮುಖಮಂಟಪವು ಹನ್ನೆರಡು ಕಂಬಗಳನ್ನು ಹೊಂದಿದ್ದು, ಎದುರುಗಡೆ ಹತ್ತು ಅಡಿಯ ಧ್ವಜಸ್ತಂಭವಿದೆ. ಸಮೀಪದಲ್ಲಿಯೇ ತೂಗುಯ್ಯಾಲೆಯನ್ನು ಕಲ್ಲಿನಲ್ಲಿ ನಿರ್ಮಿಸಲಾಗಿದೆ. ರಥಸಪ್ತಮಿಯ ದಿನದಂದು ದೇವರನ್ನು ಉಯ್ಯಾಲೆಯಲ್ಲಿ ಕೂರಿಸಿ ಜಾತ್ರೆ ನಡೆಸುವರು. ಮದ್ದಮ್ಮನ ಉತ್ಸವಮೂರ್ತಿಯನ್ನಿಡಲು ಬೃಹತ್ ಮಂಟಪವನ್ನು ನಿರ್ಮಿಸಲಾಗಿದೆ.

**ಮಧುಗಿರಿ (ಜನಸಂಖ್ಯೆ. ೨೬,೩೦೪):** ತುಮಕೂರು ಜಿಲ್ಲೆಯ ತಾಲೂಕುಗಳಲ್ಲಿ ಒಂದಾದ ಮಧುಗಿರಿ ಐತಿಹಾಸಿಕ ಮಹತ್ವದ ತಾಲೂಕು ಕೇಂದ್ರ. ಇಲ್ಲಿಯ ಬೃಹತ್ ಏಕಶಿಲಾ ಬೆಟ್ಟ ಏಷ್ಯಾ ಖಂಡದಲ್ಲಿಯೇ ಅತಿದೊಡ್ಡ ಗಿರಿಯಾಗಿದೆ. ಇದು 'ಮದ್ದಗಿರಿಹಳ್ಳಿ' ಎಂದು ವಿಜಯನಗರದರಸ ಹರಿಹರನ ಶಾಸನದಲ್ಲಿ ಉಲ್ಲೇಖಿತಗೊಂಡಿದ್ದು ಇದೇ ಹೆಸರು ೨೦ನೆಯ ಶತಮಾನದ ಉತ್ತರಾರ್ಧ ಭಾಗದಲ್ಲೂ ರೂಢಿಯಲ್ಲಿತ್ತು. ಆದರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಉಪವಿಭಾಗಾಧಿಕಾರಿಗಳಾಗಿದ್ದಾಗ ಈ ಊರಿನ ಹೆಸರನ್ನು ಮಧುಗಿರಿ ಎಂದು ಮಾರ್ಪಡಿಸಲಾಯಿತು. ಇಲ್ಲಿನ ದಂಡಿನ ಮಾರಮ್ಮ, ಮಲ್ಲಿನಾಥ ಬಸದಿ, ವೆಂಕಟರಮಣಸ್ವಾಮಿ, ಮಲ್ಲೇಶ್ವರಸ್ವಾಮಿ, ಶನಿಮಹಾತ್ಮ, ಶ್ರೀಕಾಳಿಕಾ–ಕಮತೇಶ್ವರಸ್ವಾಮಿ ಮೊದಲಾದ ದೇವಾಲಯಗಳು ಪ್ರಮುಖವಾಗಿವೆ.

ಮಧುಗಿರಿ ನಗರದ ಪ್ರವೇಶ ಭಾಗದಲ್ಲಿರುವ ಪಾರ್ವತಿಯ ಅವತಾರದ ದಂಡಿನಮಾರಮ್ಮನ ದೇವಾಲಯ ಕ್ರಿ.ಶ. ೧೫೩೦ರಲ್ಲಿ ಮಹಾನಾಡಪ್ರಭು ಹಿರೇಚಿಕ್ಕಪ್ಪಗೌಡರು ಈ ದೇವಾಲಯ ನಿರ್ಮಾಣಮಾಡಿ ನಂತರ ಬಿಜ್ಜಮಹಾದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ಇಲ್ಲಿ ವರ್ಷಕ್ಕೊಮ್ಮೆ ಯುಗಾದಿಗೆ ಮೊದಲು ಜಾತ್ರೆ ಹಾಗೂ ಪೂಜಾ ಕೈಂಕರ್ಯಗಳು ಒಂದು ವಾರ ನಡೆಯುತ್ತದೆ.

ಬೆಟ್ಟದ ಬುಡದಲ್ಲಿ ೧೯ನೇ ತೀರ್ಥಂಕರ ಮಲ್ಲಿನಾಥಸ್ವಾಮಿಯ ಬಸದಿ ಇದೆ. ಇದರ ಮುಂಭಾಗದಲ್ಲಿ ೧೫ ಅಡಿ ಎತ್ತರದ ಮಾನಸ್ತಂಭವಿದ್ದು, ದೇವಾಲಯದಲ್ಲಿ ಮಲ್ಲಿನಾಥ ತೀರ್ಥಂಕರನ ಪಂಚಲೋಹದ ಪ್ರಾಚೀನ ಪ್ರತಿಮೆಯಿದೆ. ಶಾರದಾದೇವಿ, ಜ್ವಾಲನಮ್ಮ ಮತ್ತು ಪದ್ಮಾವತಿ ಅಮ್ಮನವರ ವಿಗ್ರಹಗಳೂ ಇಲ್ಲಿವೆ. ನವರಾತ್ರಿಯಲ್ಲಿ ವಿಶೇಷ ಪೂಜೆ ಹಾಗೂ ಮಹಾವೀರ ಜಯಂತಿ ಆಚರಣೆಗಳು ನಡೆಯುತ್ತವೆ. ಈ ಬಸದಿಯ ಒಳಗೆ ಎರಡು ಶಾಸನಗಳಿವೆ. ಬಸದಿಯ ಪೂಜಾಕಾರ್ಯಕ್ಕೆ ದಾನ ನೀಡಿರುವ ವಿಷಯವನ್ನು ಈ ಶಾಸನ ಒಳಗೊಂಡಿದ್ದು, ಇಲ್ಲಿ ೧೫೬೮ರಲ್ಲಿ ಭಟ್ಟಾಚಾರ್ಯರೆಂಬ ಜೈನಗುರುಗಳು ಇದ್ದರೆಂದು ತಿಳಿಸುತ್ತದೆ.

ಮಧುಗಿರಿಯ ಉತ್ತರಕ್ಕೆ ಕಾರುಮರಡಿ ಬೆಟ್ಟದಬುಡದಲ್ಲಿ ಬೃಹತ್ ಬಂಡೆಗಳ ಮಧ್ಯದಲ್ಲಿರುವ ಒಂದು ಚಿಕ್ಕದೇವಾಲಯದಲ್ಲಿ ಶನಿಮಹಾತ್ಮನ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ಇಲ್ಲಿ ಶ್ರಾವಣ ಶನಿವಾರ ವಿಶೇಷ ಪೂಜಾಕಾರ್ಯ ನಡೆಯುತ್ತದೆ. ಮಧುಗಿರಿಯ ಬಸ್ ನಿಲ್ದಾಣದ ಸಮೀಪ ಶ್ರೀ ಕಾಳಿಕಾ ಕಮತೇಶ್ವರಸ್ವಾಮಿ ದೇವಸ್ಥಾನವಿದೆ. ಪೂರ್ವಕ್ಕೆ ಪ್ರವೇಶದ್ವಾರವಿದ್ದು, ದೇವಾಲಯದೊಳಗೆ ಶಿವಲಿಂಗ, ಎದುರಿಗೆ ಬಸವಣ್ಣ, ಬಲಕ್ಕೆ ಗಣಪತಿ, ಎಡಕ್ಕೆ ಕಾಳಿಕಾಂಬ ವಿಗ್ರಹಗಳಿವೆ. ಇದು ವಿಶಾಲವಾದ ಪಡಸಾಲೆಯನ್ನು ಹೊಂದಿದ್ದು, ಎಡಭಾಗದ ಕಂಬದಲ್ಲಿರುವ ಶಾಸನ ಅಸ್ಪಷ್ಟವಾಗಿದೆ.

ನಗರದ ಅತ್ಯಂತ ಪ್ರಮುಖ ಗುಡಿಯೇ ವೆಂಕಟರಮಣ ದೇವಸ್ಥಾನ. ಇದೊಂದು ಬೃಹತ್ ದೇಗುಲವಾಗಿದ್ದು ಮಹಾದ್ವಾರ, ವಿಶಾಲ ಒಳಾಂಗಣ, ಗರ್ಭಗೃಹವನ್ನು ಹೊಂದಿರುವ ದ್ರಾವಿಡ ಶೈಲಿಯ ರಚನೆಯಾಗಿದೆ. ಗರ್ಭಗುಡಿಯ ಒಳಾಂಗಣದ ಸನಿಹದಲ್ಲಿ ವಿವಿಧ ದೇವತಾಮೂರ್ತಿ ಹಾಗೂ ದೇಗುಲದ ಪ್ರಧಾನ ಆರಾಧ್ಯದೈವ ವೆಂಕಟರಮಣಸ್ವಾಮಿಯ ಮೂರ್ತಿಯನ್ನು ಕಪ್ಪುಶಿಲೆಯಲ್ಲಿ ರೂಪಿಸಲಾಗಿದ್ದು, ಇದು ಪಾಳೆಯಗಾರರ ಕಾಲದ ಬೃಹತ್ ಸ್ಮಾರಕವಾಗಿದೆ.

ಮಹಾನಾಡಪ್ರಭು ಮುಮ್ಮಡಿ ಚಿಕ್ಕಪ್ಪಗೌಡನು ದ್ರಾವಿಡ ಶೈಲಿಯಲ್ಲಿರುವ ಇಲ್ಲಿನ ಮಲ್ಲೇಶ್ವರ ದೇವಾಲಯ ಹಾಗೂ ಹಜಾರವನ್ನು ನಿರ್ಮಾಣ ಮಾಡಿದ್ದು, ಮೂಲಮೂರ್ತಿ ಮಲ್ಲೇಶ್ವರನ ಎಡಕ್ಕೆ, ಕಾಶಿ ವಿಶ್ವನಾಥನ ವಿಗ್ರಹವಿದೆ. ದೇವಾಲಯದ ಪ್ರಾಕಾರದಲ್ಲಿ ಶಿವನ ಪರಿವಾರ ಮತ್ತು ಶಿವ–ಪಾರ್ವತಿಯರ ಮೂರ್ತಿಗಳಿವೆ. ದೇವಾಲಯದ ಎದುರು ೨೦ ಅಡಿ ಎತ್ತರದ ಸ್ತಂಭವಿದೆ. ಈ ದೇವಾಲಯದ ಪಕ್ಕದಲ್ಲಿರುವ ವೆಂಕಟರಮಣಸ್ವಾಮಿ ಹಾಗೂ ಮಲ್ಲೇಶ್ವರ ದೇವಾಲಯಗಳೆರಡೂ, ಬೃಹತ್ ಶಿಖರಗಳನ್ನು ಹೊಂದಿವೆ.

ಮಧುಗಿರಿಯ ಕೋಟೆಯನ್ನು ಮಹಾನಾಡಪ್ರಭು ಇಮ್ಮಡಿ ಚಿಕ್ಕಪ್ಪಗೌಡನು ಕ್ರಿ.ಶ. ೧೬೭೧ರಲ್ಲಿ ಸ್ಥಾಪಿಸಿದನು. ನಂತರ ಈ ಕೋಟೆಗೆ ಹೈದರ್, ಟಿಪ್ಪು, ಮರಾಠ ಹಾಗೂ ಬ್ರಿಟಿಷರ ಕಾಲದಲ್ಲಿ ಹಲವು ಸೇರ್ಪಡೆಗಳಾಗಿವೆ. ಬೆಟ್ಟದಲ್ಲಿ ಹಲವು ನೀರಿನಾಸರೆಗಳಿದ್ದು, ಮಾನವನ ವಾಸ್ತವ್ಯಕ್ಕೆ ಯೋಗ್ಯ ಸ್ಥಳವೆನಿಸಿದೆ. ಬೆಟ್ಟವನ್ನೇರಲು ಉತ್ತರದ ಕಾಲುದಾರಿಯಲ್ಲಿ ಹೋಗಿ ದಕ್ಷಿಣಕ್ಕೆ ಸಾಗಿ ಮುಂದೆ ನೈಋತ್ಯ ದಿಕ್ಕಿಗೆ ತಿರುಗಿ ಮೇಲೇರಿದರೆ, ಬೆಟ್ಟದ ತುದಿಯನ್ನು ತಲುಪಬಹುದು. ಈ ಕಡಿದಾದ ಬಂಡೆಯ ಕೊರೆದ ಮೆಟ್ಟಿಲುಗಳ ಸಹಾಯದಿಂದ ಮೇಲಕ್ಕೇರಬಹುದಾಗಿದೆ. ಬೆಟ್ಟದ ತುದಿಯ ಭಾಗಕ್ಕೆ ಹೋಗಲು ೧೫ ಬಾಗಿಲುಗಳನ್ನು ದಾಟಬೇಕಾಗಿದ್ದು, ಅವುಗಳಲ್ಲಿ ಅಂತರಾಳದ ಬಾಗಿಲು, ದಿಡ್ಡಿ ಬಾಗಿಲು, ಮೈಸೂರು ಬಾಗಿಲು ಪ್ರಮುಖವಾದವುಗಳು. ಬೆಟ್ಟದ ತುದಿಯಲ್ಲಿ ಗೋಪಾಲಕೃಷ್ಣನ ದೇವಾಲಯವಿದ್ದು, ಈಗ ಯಾವುದೇ ಮೂರ್ತಿ ಇಲ್ಲ. ಪಕ್ಕದಲ್ಲಿ ದವಸ–ಧಾನ್ಯ ಸಂಗ್ರಹಿಸಲು ಕಣಜಗಳಿದ್ದು, ತುಪ್ಪ ಹಾಗೂ ಎಣ್ಣೆಯ ಸಂಗ್ರಹಣಾಗಾರಗಳನ್ನೂ ಕಾಣಬಹುದು. ಕೆಳಭಾಗದಲ್ಲಿಯೂ ಹಲವೆಡೆ ದವಸ ಹಾಗೂ ಎಣ್ಣೆಯ ಸಂಗ್ರಹ ತಾಣಗಳು ಕಂಡುಬರುತ್ತವೆ. ಬಹಳ ಸುಸ್ಥಿತಿಯಲ್ಲಿರುವ ಕೋಟೆ ಇದಾಗಿದ್ದು, ಇಂದು ರಾಷ್ಟ್ರೀಯ ಸಂರಕ್ಷಿತ ಸ್ಮಾರಕವಾಗಿದೆ.

**ಮರಳೂರು (ಜನಸಂಖ್ಯೆ. ೩೨):** ಜಿಲ್ಲಾ ಕೇಂದ್ರ ತುಮಕೂರು ನಗರದಿಂದ ಮೂರು ಕಿ.ಮೀ. ದಕ್ಷಿಣಕ್ಕೆ ಕುಣಿಗಲ್ ರಸ್ತೆಯಲ್ಲಿದ್ದು, ಇಂದು ನಗರದ ಭಾಗವೇ ಆಗಿದೆ. ಇಲ್ಲಿ ರಾಮೇದೇವರ ದೇವಾಲಯವಿದ್ದು, ಎರಡು ಅಡಿ ಉದ್ದ ಹಾಗೂ ಒಂದೂವರೆ ಅಡಿ ಅಗಲವಿರುವ ಸಾಲುಶಿಲ್ಪಗಳಿಗೆ ಪೂಜಾವಿಧಿಗಳು ನಡೆಯುತ್ತವೆ. ಈ ಶಿಲ್ಪಗಳಲ್ಲಿ ಕುದುರೆ ಸವಾರ ಬಲಗೈನಲ್ಲಿ ಕತ್ತಿಯೊಂದನ್ನು ಹಿಡಿದಿದ್ದು, ಕೈಯನ್ನು ಎತ್ತಿರುವನು. ಈತನ ಮುಂದೆ ಐವರು ಸ್ತ್ರೀಯರ ಶಿಲ್ಪಗಳಿದ್ದು ಈತನ ಪತ್ನಿಯರದ್ದಾಗಿರಬಹುದು. ಹಿಂಭಾಗದಲ್ಲಿ ಪುರಷರ ಎರಡು ಶಿಲ್ಪವಿದ್ದು, ಇವರು ಸೇವಕರಿರಬೇಕು. ಇದರ ಮೇಲ್ಭಾವಣಿಯನ್ನು ಅರ್ಧವೃತ್ತಾಕಾರವಾಗಿ ನಿರ್ಮಿಸಿದ್ದು, ಅಲಂಕಾರವನ್ನೊಳಗೊಂಡಿದೆ.

**ಮಾರ್ಕೋನಹಳ್ಳಿ (ಜನಸಂಖ್ಯೆ. ೭೬೯):** ಕುಣಿಗಲ್ ತಾಲೂಕಿನಲ್ಲಿ ಅಮೃತೂರಿಗೆ ಸಮೀಪದಲ್ಲಿದೆ. ಇಲ್ಲಿ ಶಿಂಷಾ ನದಿಗೆ ಅಡ್ಡಲಾಗಿ ೧೩೯" ಎತ್ತರದ ಅಣೆಕಟ್ಟನ್ನು ೧೯೩೯ರಲ್ಲಿ ನಿರ್ಮಿಸಲಾಗಿದ್ದು, ಒಟ್ಟು ೬೦೭೦ ಹೆಕ್ಟೇರ್ ಭೂಮಿಗೆ ನೀರನ್ನೊದಗಿಸುತ್ತದೆ. ವಿಭಿನ್ನ ನಮೂನೆಯಲ್ಲಿ ಪ್ರತ್ಯೇಕ ಮಾದರಿಯಲ್ಲಿ ಯಶಸ್ವಿಯಾಗಿ ಕೆಲಸ ನಿರ್ವಹಿಸುವಂತೆ ನಿರ್ಮಾಣ ಮಾಡಲಾಗಿರುವ ಈ ವಿಶೇಷ ಜಲಾಶಯದ ನಿರ್ಮಾತೃ ಮೈಸೂರು ಎಂಜಿನಿಯರ್ ಶ್ರೀ ವಿ. ಗಣೇಶ್‌ಐಯ್ಯರ್. ಇದರ ಸಮೀಪದಲ್ಲಿಯೇ ಶ್ರೀಕ್ಷೇತ್ರ ಎಡೆಯೂರು ಇದೆ.

**ಮಾಯಸಂದ್ರ (ಜನಸಂಖ್ಯೆ. ೩,೯೪೫):** ತುರುವೇಕೆರೆ ತಾಲೂಕಿನ ಹೋಬಳಿ ಕೇಂದ್ರದಲ್ಲಿ ಒಂದಾಗಿದ್ದು, ತಾಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿರುವ ಶಿಂಷಾ ಮತ್ತು ನಾಗಿನಿ ನದಿಗಳ ಸಂಗಮ ಕ್ಷೇತ್ರ. ಈ ಗ್ರಾಮವು ಹೆಬ್ಬಾರ ವೈಷ್ಣವರು ವಾಸ್ತವ್ಯ ಮಾಡಿದ ಪಂಚಗ್ರಾಮಗಳಲ್ಲಿ ಒಂದಾಗಿದೆ. ಉಳಿದ ನಾಲ್ಕು ಗುಬ್ಬಿ ತಾಲೂಕಿನ ಕಡಬ, ಚನ್ನರಾಯಪಟ್ಟಣ ತಾಲೂಕಿನ ನುಗ್ಗೇಹಳ್ಳಿ, ನಾಗಮಂಗಲ ತಾಲೂಕಿನ ಬಿಂಡಿಗನವಿಲೆ ಹಾಗೂ ತಿಪಟೂರು ತಾಲೂಕಿನ ನೊಣವಿನಕೆರೆಗಳಾಗಿವೆ. ಗ್ರಾಮದ ಕೆರೆಯದಂಡೆಯಲ್ಲಿ ಗಂಗೆ ಮತಸ್ಥರ ಕುಲದೇವತೆ ಮಾರಿಯಮ್ಮನ ದೇವಾಲಯವಿದೆ. ಊರಿನಲ್ಲಿ ಶಕ್ತಿದೇವತೆ ಕೊಲ್ಲಾಪುರದಮ್ಮನ ದೇವಾಲಯವಿದ್ದು. ಗ್ರಾಮಕ್ಕೆ ಮೂರು ಕಿ.ಮೀ. ದೂರದಲ್ಲಿ ನೆಲ್ಲಿಗೆರೆ ಗ್ರಾಮಕ್ಕೆ ಹೋಗುವ ಮಾರ್ಗದಲ್ಲಿ ಒಂದು ಗುಡ್ಡದ ಮೇಲೆ ಮಹದೇಶ್ವರ ದೇವಾಲಯವಿದೆ. ಪ್ರತಿವರ್ಷ ಜಾನುವಾರು ಜಾತ್ರೆ ಮತ್ತು ಉತ್ಸವವು ಚೈತ್ರಮಾಸದಲ್ಲಿ ಹತ್ತುದಿನಗಳ ಕಾಲ ನಡೆಯುತ್ತದೆ. ಇತ್ತೀಚೆಗೆ ರಾಮ, ಲಕ್ಷ್ಮಣ, ಸೀತೆ, ಆಂಜನೇಯ ದೇವರುಗಳ ಅಮೃತಶಿಲೆಯ ಭವ್ಯಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದಾರೆ. ಶ್ರೀ ಆದಿಚುಂಚನಗಿರಿ ಮಠದ ಶಾಖಾಮಠ ಶ್ರೀ ಕಾಲಭೈರವೇಶ್ವರ ಕಲ್ಪತರು ಆಶ್ರಮವಿಲ್ಲಿದೆ. ಮಠದ ವತಿಯಿಂದ ವಿದ್ಯಾದಾನ, ಅನ್ನದಾನ ಹಾಗೂ ಸಾಮಾಜಿಕ ಕಾರ್ಯಗಳು ನಡೆಯುತ್ತಿವೆ.

ಇಲ್ಲಿನ ಪ್ರಾಚೀನ ಜೈನಬಸದಿಯಿಂದು ನವೀಕರಣಗೊಂಡಿದ್ದು, ಪಾರ್ಶ್ವನಾಥ ತೀರ್ಥಂಕರರ ಮೂರ್ತಿಯನ್ನು ಅಮೃತಶಿಲೆಯಲ್ಲಿ ರೂಪಿಸಲಾಗಿದೆ. ಇದು ನಾಡಿನ ಹೆಸರಾಂತ ಪಂಡಿತರು, ಸಾಹಿತಿಗಳು, ಕಲಾವಿದರುಗಳಿಗೆ ಜನ್ಮ ನೀಡಿದ ಸ್ಥಳವಾಗಿದೆ. ರಾಜ್ಯ ಪುರಾತತ್ವ ಇಲಾಖೆ ನಿರ್ದೇಶಕ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಮುಖ್ಯಸ್ಥರಾಗಿದ್ದ ಡಾ.ಎಂ.ಶೇಷಾದ್ರಿ ಈ ಊರಿನವರು.

**ಮಿಂಚುಕಲ್ಲು ಗೊಲ್ಲಹಳ್ಳಿ (ಜನಸಂಖ್ಯೆ.೬೩೭):** ತುಮಕೂರು–ಮಧುಗಿರಿ ರಸ್ತೆಯಲ್ಲಿರುವ ಗ್ರಾಮವಾಗಿದ್ದು, ತುಮಕೂರು ನಗರದ ಉತ್ತರಕ್ಕಿದೆ. ಇಲ್ಲಿಯ ಹನುಮಂತ ದೇವಾಲಯದಲ್ಲಿ ಸಾಕಷ್ಟು ಮಬ್ಬುಗಟ್ಟಿದ್ದ ಹಾಗೂ ಅದರ ಮೇಲೆ ಸುಣ್ಣ ಬಳಿದು ಸಂಪೂರ್ಣ ಮುಚ್ಚಿಹೋಗಿದ್ದ ಹಲವು ವರ್ಣಚಿತ್ರಗಳನ್ನು ಸಾಕಷ್ಟು ಕಾಣುವಂತೆ ಮಾಡಿ ಅಧ್ಯಯನ ಕೈಗೊಳ್ಳಲಾಗಿದೆ. ಇವು ದಶಾವತಾರಗಳಿಗೆ ಸಂಬಂಧಿಸಿದವುಗಳಾಗಿದ್ದು, ಇವುಗಳಲ್ಲಿ ಬುದ್ಧನ ಶಿಲ್ಪವಿರುವುದು ಅಪರೂಪವೆಂದು ತಿಳಿದುಬರುತ್ತದೆ. ಜೊತೆಗೆ ರಾಮಾಯಣ ಮತ್ತು ಮಹಾಭಾರತದ ಹಲವು ದೃಶ್ಯಾವಳಿಗಳಿದ್ದು ಸ್ಪಷ್ಟವಾಗಿ ಕಂಡುಬರುವುದಿಲ್ಲ.

**ಮಿಡಿಗೇಶಿ (ಜನಸಂಖ್ಯೆ. ೨,೬೮೫):** ಇದು ತಾಲೂಕು ಕೇಂದ್ರ ಮಧುಗಿರಿಗೆ ೧೯ ಕಿ.ಮೀ. ಉತ್ತರಕ್ಕಿರುವ ಹೋಬಳಿ ಕೇಂದ್ರ. ಇಲ್ಲಿನ ದುರ್ಗವನ್ನು ಸ್ಥಳೀಯ ಪಾಳೆಗಾರ ನಾಗಿರೆಡ್ಡಿ ನಿರ್ಮಾಣ ಮಾಡಿದ್ದೆಂದು ತಿಳಿಯುತ್ತದೆ. ಈತ ಸಂಪೂರ್ಣವಾಗಿ ದುರ್ಗವನ್ನು ನಿರ್ಮಿಸದಿದ್ದರೂ, ಇದ್ದ ಕೋಟೆಗೆ ದೃಢತೆ ನೀಡಿದ್ದು. ಇದೊಂದು ಏಳುಸುತ್ತಿನ ಕೋಟೆಯಾಗಿದೆ. ಬೆಟ್ಟದ ಬುಡದಲ್ಲಿ ಮಣ್ಣಿನ ಕೋಟೆಗೋಡೆ ಹಾಗೂ ನಶಿಸಿರುವ ಮನೆಗಳ ಅವಶೇಷಗಳು ಕಂಡುಬರುತ್ತವೆ. ಈಗಿರುವ ಕೋಟೆ ಹೈದರಾಲಿಯ ಕಾಲದಲ್ಲಿ ದುರಸ್ತಿ ಹೊಂದಿರುವುದಾಗಿ ತಿಳಿಯುತ್ತದೆ.

ಊರಿನ ಪಶ್ಚಿಮಕ್ಕೆ ಬೆಟ್ಟದ ಮೇಲಿರುವ ವೆಂಕಟರಮಣ ದೇವಾಲಯವು ದ್ರಾವಿಡ ಶೈಲಿಯಲ್ಲಿದೆ. ಗರ್ಭಗುಡಿಯು ಹೊಯ್ಸಳ ಶೈಲಿಯ ಕೊನೆಯ ಭಾಗಕ್ಕೆ ಸೇರಿದಂತೆ ಕಂಡುಬರುತ್ತದೆ. ಪೂರ್ವದ ಮಹಾದ್ವಾರದ ಮೇಲೆ ಇಟ್ಟಿಗೆ ಹಾಗೂ ಗಾರೆಯಿಂದ ನಿರ್ಮಿಸಿದ ಗೋಪುರವಿದೆ. ನವರಂಗದ ಬಾಗಿಲಿನ ಗೂಡಿನಲ್ಲಿ ಗಣಪತಿ ಮತ್ತು ವೀರಭದ್ರ ಶಿಲ್ಪಗಳಿವೆ. ಪ್ರಾಕಾರದ ದಕ್ಷಿಣದ ಬಾಗಿಲು ಆಗ ಅರಮನೆಗೆ ಹೋಗುವ ದಾರಿಯಾಗಿದ್ದಿತು. ಇದೊಂದು ಕಡಿದಾದ ಬೆಟ್ಟವಾಗಿದ್ದು, ಮೇಲೇರಿದಂತೆ ತುದಿಯಲ್ಲಿ ಹೈದರ್, ಟಿಪ್ಪುಕಾಲದ ಎತ್ತರವಾದ ಎರಡು ಮಿನಾರ್‌ಗಳುಳ್ಳ ಮಸೀದಿ ಕಂಡುಬರುತ್ತದೆ. ದವಸದ ಕಣಜ ಹಾಗೂ ಮದ್ದಿನ ಮನೆಯ ಸಮೀಪ ಹನುಮನ ಗುಡಿ ಹಾಗೂ ಪಾಳುಬಿದ್ದ ಅರಮನೆಯ ಅವಶೇಷಗಳಿವೆ. ಸಮೀಪದಲ್ಲಿಯೇ ಮಲ್ಲೇಶ್ವರ ಹಾಗೂ ಆಂಜನೇಯ ಗುಡಿಗಳಿದ್ದು, ಪಾಳೇಯಗಾರರಿಂದ ನಿರ್ಮಾಣಗೊಂಡಿದ್ದೆಂದು ತಿಳಿಯುತ್ತದೆ. ದೇವಾಲಯಗಳ ಸಮೀಪದಲ್ಲಿ ಹಲವು ವೀರಗಲ್ಲುಗಳಿದ್ದು, ಊರ ಸುತ್ತಮುತ್ತಲೂ ವೀರಗಾರರ ಗುಡಿಗಳು ಕಂಡುಬರುತ್ತವೆ.

**ಮೂಗನಾಯಕನಕೋಟೆ (ಜನಸಂಖ್ಯೆ. ೨,೨೬೨)**: ಗುಬ್ಬಿ ತಾಲೂಕಿನ ಒಂದು ಪ್ರಮುಖ ಹೋಬಳಿ ಕೇಂದ್ರವಾಗಿದ್ದು, ೨೧ ಕಿ.ಮೀ. ಪಶ್ಚಿಮಕ್ಕಿದೆ. ಹಿಂದೆ ಒಂದು ಪ್ರಮುಖ ವಾಣಿಜ್ಯ ಕೇಂದ್ರವಾಗಿದ್ದಿತು. ಮೂಗನಾಯಕನೆಂಬುವನು ಈ ಊರಿನ ಅಧಿಕಾರಿಯಾಗಿದ್ದನೆಂದೂ, ಅವನಿಂದಲೇ ಇಲ್ಲಿನ ಕೋಟೆ ನಿರ್ಮಾಣವಾಯಿತೆಂದೂ, ಇದರಿಂದಾಗಿ ಅವನ ಹೆಸರನ್ನೇ ಈ ಊರಿಗೂ ಇಡಲಾಗಿದ್ದು, ಇದನ್ನು ಎಂ.ಎನ್.ಕೋಟೆ ಎಂಬುದಾಗಿಯೂ ಕರೆಯಲಾಗುತ್ತದೆ. ಮೂಗನಾಯಕನಕೋಟೆಯು ಶಿಲಾಯುಗ ಸಂಸ್ಕೃತಿಯ ತವರೂರು. ಕಿಬ್ಬನಹಳ್ಳಿಯಂತೆಯೇ ಪ್ರಸಿದ್ಧತೆಯನ್ನು ಹೋಲುವ ಎಲ್ಲಾ ಅವಶೇಷಗಳನ್ನೊಳಗೊಂಡಿದೆ. ಇಲ್ಲಿನ ಬೆಟ್ಟದ ತಪ್ಪಲು ಆದಿಮಾನವನಿಗೆ ನೀರನ್ನೊದಗಿಸಿ, ಉಪಕರಣ ತಯಾರಿಕೆಗೆ ಕಚ್ಚಾಕಲ್ಲನ್ನು ದೊರಕಿಸಿಕೊಟ್ಟು, ಜೀವನ ಸಾಗಿಸಲು ಪ್ರೇರಿತವಾಗಿದ್ದಿತೆಂದು ತಿಳಿಯುತ್ತದೆ. ಗ್ರಾಮದಲ್ಲಿ ಭವ್ಯ ಕೋಟೆಯ ಕುರುಹುಗಳು ಕಂಡುಬರುತ್ತವೆ. ಈ ಕೋಟೆಯನ್ನು ಮರಾಠ ಪರಶುರಾಮಬಾಹು ದಾಳಿ ನಡೆಸಿ ಹಾಳುಗೆಡವಿದನೆಂದು ತಿಳಿಯುತ್ತದೆ. ಇಲ್ಲಿನ ರಂಗನಾಥ ಹಾಗೂ ರುದ್ರೇಶ್ವರ, ವಿಜಯನಗರೋತ್ತರ ಕಾಲದ ದೇವಾಲಯಗಳೆಂದು ತಿಳಿದುಬರುತ್ತದೆ. ಇಲ್ಲಿನ ದೇವಾಲಯದ ಕಂಬಗಳಲ್ಲಿ ಅಲಂಕಾರಿಕ ಉಬ್ಬುಶಿಲ್ಪಗಳಿವೆ. ಇಲ್ಲಿ ಎರಡು ಶಾಸನಗಳು ದೊರೆತಿವೆ. ಗ್ರಾಮ ದೇವತೆ ಕೊಲ್ಲಾಪುರದಮ್ಮನ ಜಾತ್ರೆಯು ಸಾಂಪ್ರದಾಯಕ ವಿಧಿ–ವಿಧಾನಗಳೊಂದಿಗೆ ನಡೆಯುತ್ತದೆ.

**ಯಲ್ಲಪ್ಪನಾಯಕನ ಹೊಸಕೋಟೆ (ಜನಸಂಖ್ಯೆ. ೧೨,೭೯೯):** ಪಾವಗಡ ತಾಲೂಕಿನ ಹೋಬಳಿ ಕೇಂದ್ರವಾಗಿದ್ದೂ ಪಾವಗಡಕ್ಕೆ ೨೭ ಕಿ.ಮೀ. ಉತ್ತರಕ್ಕಿದೆ. ಗೃಹ ಕೈಗಾರಿಕೆಗೆ ಪ್ರಸಿದ್ಧವಾಗಿದ್ದು, ಐತಿಹಾಸಿಕ ಹಾಗೂ ಧಾರ್ಮಿಕ ಮಹತ್ವದ

ಕೇಂದ್ರವಾಗಿದೆ. ಬೆಟ್ಟದ ಉತ್ತರ ಭಾಗದಲ್ಲಿ ಪ್ರಾಗೈತಿಹಾಸಿಕ ಅವಶೇಷಗಳು ಪತ್ತೆಯಾಗಿವೆ. ಇಲ್ಲಿಯೇ ಒಂದು ಪಾಳೆಯಪಟ್ಟು ಸ್ಥಾಪಿತವಾಗಿದ್ದುದಾಗಿ ತಿಳಿಯುತ್ತದೆ. ಗ್ರಾಮದ ಉತ್ತರಕ್ಕಿರುವ ಬೆಟ್ಟದ ಮೇಲ್ಭಾಗದಲ್ಲಿ ಹೊಯ್ಸಳ ಶೈಲಿಯ ಮುಕ್ಕಾದ ಚನ್ನಕೇಶವಮೂರ್ತಿಯ ಶಿಲ್ಪವನ್ನು ಪುಟ್ಟ ಗುಡಿಯೊಂದರಲ್ಲಿಂದು ನೋಡಬಹುದಾಗಿದೆ.

ಯಲ್ಲಪ್ಪನಾಯಕ ಎಂಬ ಸ್ಥಳೀಯ ಸಾಮಂತನ ಆಡಳಿತ ಕೇಂದ್ರವಿದಾಗಿದ್ದು, ಅವನ ಹೆಸರಿನಲ್ಲಿಯೇ ಈ ಊರನ್ನು ಇಂದಿಗೂ ಕರೆಯಲಾಗುತ್ತಿದೆ. ಈ ಮನೆತನವು ಸುಮಾರು ೧೬-೧೭ನೇ ಶತಮಾನದಲ್ಲಿ ಪ್ರಾಬಲ್ಯ ಹೊಂದಿದ್ದು, ವಿಜಯನಗರ ಸಾಮ್ರಾಜ್ಯದ ಅಧೀನ ರಾಜಮನೆತನಗಳಲ್ಲಿ ಒಂದಾಗಿದ್ದಿತೆಂದು ತಿಳಿದು ಬರುತ್ತದೆ. ಇದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಈ ಮನೆತನದ ಹಲವು ರಾಜರು ಆಳ್ವಿಕೆ ನಡೆಸಿದ್ದಾರೆ. ಗ್ರಾಮದ ಪಶ್ಚಿಮದಲ್ಲಿ ವೀರಗಾರರ ಹಲವು ಗುಡಿಗಳು ಕಂಡುಬಂದಿವೆ.

**ಯಳನಡು (ಜನಸಂಖ್ಯೆ. ೨೩೬೯):** ತಾಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಿಂದ ಉತ್ತರಕ್ಕೆ ೨೫ ಕಿ.ಮೀ. ದೂರದಲ್ಲಿರುವ ಸಿದ್ಧರಾಮೇಶ್ವರರ ಕ್ಷೇತ್ರವಾಗಿದೆ. ಶ್ರೀ ಸಿದ್ಧರಾಮೇಶ್ವರರ ದೇವಸ್ಥಾನ ದ್ರಾವಿಡ ಶೈಲಿಯಲ್ಲಿದೆ. ಈ ಕ್ಷೇತ್ರ ಸಿದ್ಧರಾಮೇಶ್ವರರು ತಪಸ್ಸು ಮಾಡಿದ ಸ್ಥಳವಿದಾಗಿದ್ದು, ದೇವಾಲಯದಲ್ಲಿ ಲಿಂಗಾಕಾರದ ಹುತ್ತವು ಪೂಜಾವಸ್ತುವಾಗಿದೆ. ಇಲ್ಲಿರುವ ಚಿನ್ನದಪಲ್ಲಕ್ಕಿ, ಬೆಳ್ಳಿಯಧ್ವಜ, ಬೆಳ್ಳಿಯಬಸವಣ್ಣ, ಬೆಳ್ಳಿಯಲಿಂಗ ಮೊದಲಾದವು ಉತ್ಸವಮೂರ್ತಿಗಳಾಗಿವೆ. ಇಲ್ಲಿಯೇ ರೇವಣಸಿದ್ದೇಶ್ವರ, ಲಕ್ಷ್ಮೀದೇವಿ, ಹರಿಯಪ್ಪ ಹಾಗೂ ಕರಿಯಮ್ಮದೇವಿಯ ದೇವಾಲಯಗಳೂ ಇವೆ. ಇದು ಪ್ರಾಚೀನ ಕಾಲದ ಗುರುಕುಲ ಪದ್ಧತಿಯ ಶಿಕ್ಷಣ ಕೇಂದ್ರವಾಗಿದ್ದಿತೆಂದು ತಿಳಿದು ಬರುತ್ತದೆ.

**ರಂಗನಾಥಪುರ (ಮರಡಿಗುಡ್ಡ)** ಇದು ತಾಲೂಕು ಕೇಂದ್ರ ಶಿರಾದಿಂದ ಎಂಟು ಕಿ.ಮೀ. ದೂರದಲ್ಲಿ, ಶಿರಾ-ಬುಕ್ಕಾಪಟ್ಟಣ ರಸ್ತೆಯಲ್ಲಿ ಕಂಬದಹಳ್ಳಿ ಗೇಟ್‌ನಿಂದ ನಾಲ್ಕು ಕಿ.ಮೀ. ದೂರದಲ್ಲಿದೆ. ಇದನ್ನು ಮರಡಿ ರಂಗನಾಥಗುಡ್ಡ ಅಥವಾ ಮರಡಿ ರಂಗನಾಥಪುರ ಎಂದು ಕರೆಯುತ್ತಾರೆ. ರಂಗನಾಥಪುರದ ಮರಡಿ ರಂಗನಾಥಸ್ವಾಮಿಯ ದೇವಾಲಯವು ಪೂರ್ವಾಭಿಮುಖವಾಗಿದ್ದು, ಸೂರ್ಯೋದಯದ ಸಮಯದಲ್ಲಿ ಸೂರ್ಯನ ಹೊಂಬೆಳಕು ರಂಗನಾಥಸ್ವಾಮಿಯ ಪಾದಕಮಲದ ಮೇಲೆ ಬೀಳುವಂತೆ ದೇವಾಲಯವನ್ನು ನಿರ್ಮಿಸಲಾಗಿದೆ. ದೇವಾಲಯದ ಗರ್ಭಗೃಹವನ್ನು ನಾಲ್ಕು ಅಡಿ ಎತ್ತರದ ಅಧಿಷ್ಠಾನದ ಮೇಲೆ ಸ್ಥಾಪಿಸಲಾಗಿದೆ. ಗರ್ಭಗೃಹದ ದಕ್ಷಿಣ ಭಿತ್ತಿಯಲ್ಲಿ ಗಜೇಂದ್ರಮೋಕ್ಷ, ಸಮುದ್ರಮಂಥನ, ಮುಂತಾದವು ಉತ್ತರದ ಭಿತ್ತಿಯಲ್ಲಿ ಪ್ರಹ್ಲಾದನು ವಿಷ್ಣುವನ್ನು ಕುರಿತು ತಪಸ್ಸು ಮಾಡುತ್ತಿರುವ ಚಿತ್ರಣಗಳಿವೆ. ಗರ್ಭಗುಡಿಯ ಮೇಲ್ಭಾಗ ದ್ವಿತಳ ಶಿಖರದಲ್ಲಿ ಹಲವು ಶಿಲ್ಪಗಳನ್ನು ಬಿಡಿಸಲಾಗಿದೆ. ಗರ್ಭಗೃಹದಲ್ಲಿ ಉದ್ಭವಮೂರ್ತಿಯ ಸಾಲಿಗ್ರಾಮವಿದೆ. ಹಿಂಬದಿಯಲ್ಲಿ ಐದು ಹೆಡೆಯ ಆದಿಶೇಷನ ಮೇಲೆ ತಲೆಇಟ್ಟು ಮಲಗಿರುವ ರಂಗನಾಥನ ಒಂದೂವರೆ ಅಡಿ ಎತ್ತರದ ವಿಗ್ರಹವಿದೆ. ಬಳಿಯಲ್ಲಿ ಶ್ರೀದೇವಿ-ಭೂದೇವಿಯರಿದ್ದು, ಮುಂಭಾಗದಲ್ಲಿ ಗರುಡ ವಾಹನವಿದೆ. ಅಂತರಾಳದ ಎಡಭಾಗದಲ್ಲಿ ಗಣಪತಿಯ ವಿಗ್ರಹವಿದೆ. ಅದರ ಕೆಳಗೆ, ಮೆಟ್ಟಿಲುಗಳ ಮೇಲೆ ದೇವಸ್ಥಾನವನ್ನು ನಿರ್ಮಿಸಿದ ಭಕ್ತ ದಂಪತಿಯನ್ನು ರೇಖಿಸಲಾಗಿದೆ. ಗರ್ಭಗುಡಿಯ ಬಾಗಿಲುವಾಡವನ್ನು ನವೀಕರಿಸಲಾಗಿದ್ದು, ಅಮೃತಶಿಲೆಯಲ್ಲಿ ನಿರ್ಮಿಸಲಾಗಿದೆ. ರಂಗನಾಥನ ಪಕ್ಕದಲ್ಲಿ ಪದ್ಮಾವತಿಯನ್ನೂ ಸ್ಥಾಪಿಸಲಾಗಿದೆ. ಮೂಲಮೂರ್ತಿಯು ಹದಿನಾಲ್ಕನೇ ಶತಮಾನಕ್ಕೆ ಸೇರಿದ್ದಾಗಿದ್ದರೂ ದೇವಾಲಯವು ಕಾಲಕಾಲಕ್ಕೆ ಜೀರ್ಣೋದ್ಧಾರಗೊಂಡಿದೆ. ವಿಜಯನಗರ ಕಾಲದಲ್ಲಿ ನವರಂಗವನ್ನು ಸೇರಿಸಲಾಗಿದ್ದು, ಕಂಬಗಳು ವಿಜಯನಗರದ ಮೂಲರೂಪದಲ್ಲಿಯೇ ಇವೆ. ನವರಂಗದ ಮುಂಬದಿಯಲ್ಲಿ ತೆರೆದ ಅರ್ಧಮಂಟಪವಿದೆ. ಮುಂಭಾಗದಲ್ಲಿ ಆಂಜನೇಯನ ಗುಡಿ ಇದ್ದು, ಅದರ ಹಿಂಭಾಗದಲ್ಲಿ ಇಪ್ಪತ್ತು ಅಡಿ ಎತ್ತರದ ಧ್ವಜಸ್ತಂಭವಿದೆ. ದೇವಾಲಯದ ಈಶಾನ್ಯಕ್ಕಿರುವ ಕಲ್ಯಾಣಿಯನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಇಲ್ಲಿ ಏಪ್ರಿಲ್ ತಿಂಗಳ ಚೈತ್ರ ಶುದ್ಧ ಹುಣ್ಣಿಮೆಯಲ್ಲಿ ವಿಶೇಷ ಜಾತ್ರೆ ನಡೆಯುತ್ತದೆ.

**ವಡೇರಹಳ್ಳಿ (ಜನಸಂಖ್ಯೆ. ೩೦೮):** ಚಿಕ್ಕನಾಯಕನಹಳ್ಳಿಯ ಒಂದು ಗ್ರಾಮ. ಇಲ್ಲಿರುವ ಶಾಂತಮಲ್ಲೇಶ ದೇವಾಲಯ ಪೂರ್ವಾಭಿಮುಖವಾಗಿದೆ. ಮೂಲಮೂರ್ತಿ ಶಿವಲಿಂಗವಾಗಿದ್ದು, ದಕ್ಷಿಣದಲ್ಲಿ ಮೂರು ಕಾಲುಗಳುಳ್ಳ ಭೃಂಗಿಯು ತಂಬೂರಿಯನ್ನು ಹಿಡಿದಿದ್ದು, ಉತ್ತರದಲ್ಲಿ ನಂದಿಯ ಮೂರ್ತಿ ಇದೆ. ದೇವಾಲಯದ ಸಮೀಪದಲ್ಲಿ ಹಲವು ಗದ್ದುಗೆಗಳಿದ್ದು, ಇವು ಸೆಟ್ಟಿಕೆರೆಯ ಕಲ್ಲುಮಠದ ಸ್ವಾಮಿಗಳ ಸಮಾಧಿಗಳೆಂದು ತಿಳಿದು ಬರುತ್ತದೆ. ದೇವಾಲಯದ ಮುಂಭಾಗದಲ್ಲಿ ಸುಮಾರು ೪೦ ಅಡಿ ಎತ್ತರದ ದೀಪಸ್ತಂಭವಿದ್ದು, ತಳಭಾಗದಲ್ಲಿ ಎರಡು ಅಡಿ ಎತ್ತರದ ಚೌಕಾಕಾರದ ಕಟ್ಟೆ ಇದೆ. ಮೇಲ್ಭಾಗದಲ್ಲಿ ದೀಪದ ಕಲ್ಬಟ್ಟಿಲುಗಳಿವೆ.

**ವಿಘ್ನಸಂತೆ (ಜನಸಂಖ್ಯೆ. ೧,೬೧೯):** ತಿಪಟೂರು ತಾಲೂಕಿನ ಆಗ್ನೇಯಕ್ಕೆ ೧೬ ಕಿ.ಮೀ. ದೂರದಲ್ಲಿದೆ. ಇದರ ಪ್ರಾಚೀನ ಹೆಸರು 'ಇಗನಸಂತೆ'. ಇಲ್ಲಿರುವ ನರಸಿಂಹ, ಬಾಲಲಿಂಗೇಶ್ವರ, ಭೈರವದೇವ ಹಾಗೂ ಬನಶಂಕರಿ ದೇವಾಲಯಗಳು ಹೊಯ್ಸಳ ಶೈಲಿಯಲ್ಲಿವೆ. ಇಲ್ಲಿಯ ಲಕ್ಷ್ಮೀನರಸಿಂಹ ದೇವಾಲಯವು ತ್ರಿಕೂಟಾಚಲವಾಗಿದ್ದು, ಹೊಯ್ಸಳ ಮುಮ್ಮಡಿ ನರಸಿಂಹನ ದಂಡನಾಯಕನಾದ ಮಲ್ಲಿದೇವ ಮತ್ತವನ ಮೂವರು ಮಕ್ಕಳಾದ ಅಪ್ಪಯ್ಯ, ಗೋಪಾಲ ಮತ್ತು ಮಾಧವರು ಕಟ್ಟಿಸಿದ್ದೆಂದು ಇಲ್ಲಿನ ಶಾಸನ ತಿಳಿಸುತ್ತದೆ. ದೇವಾಲಯವು ನಕ್ಷತ್ರಾಕಾರದ ಜಗತಿಯ ಮೇಲಿದೆ. ದೇವಾಲಯದ ಮುಖ್ಯ ಗರ್ಭಗೃಹದಲ್ಲಿ ಕೇಶವ, ಪಶ್ಚಿಮದರಲ್ಲಿ ಲಕ್ಷ್ಮೀನಾರಾಯಣ ಮತ್ತು ದಕ್ಷಿಣದರಲ್ಲಿ ವೇಣುಗೋಪಾಲನ ಮೂರ್ತಿಗಳಿವೆ. ಹೊರಗೋಡೆಯಲ್ಲಿ ಐದು ಪಟ್ಟಿಕೆಗಳಿದ್ದು, ಲತೆ, ಕುಂಭ, ಮಕರ, ಪುಷ್ಪಪಟ್ಟಿಕೆ ಹಾಗೂ ಮೇಲ್ಭಾಗದ ಛಾವಣಿಯಲ್ಲೂ ಪದ್ಮಗಳನ್ನು ಬಿಡಿಸಲಾಗಿದೆ. ದೇವಾಲಯದ ಶಿಖರ, ಸುಖನಾಸಿ ಮತ್ತು ಗರ್ಭಗೃಹದ ಬಾಗಿಲುವಾಡ, ಭುವನೇಶ್ವರಿಗಳು ಹೊಯ್ಸಳ ಶೈಲಿಯ ಸುಂದರ ಕೆತ್ತನೆಗಳಾಗಿವೆ. ಈ ದೇವಾಲಯದ ಆಗ್ನೇಯದಲ್ಲಿರುವ ಬಾಲಲಿಂಗೇಶ್ವರ ಗುಡಿ ತ್ರಿಕೂಟವಾಗಿದ್ದು ಸರಳ ಕೆತ್ತನೆಯಿಂದ ಕೂಡಿದೆ. ಗರ್ಭಗೃಹದಲ್ಲಿ ಸಣ್ಣ ಲಿಂಗವಿದೆ. ಉಳಿದೆರಡು ಗರ್ಭಗೃಹಗಳಲ್ಲಿ ಯಾವುದೇ ಮೂರ್ತಿಗಳಿಲ್ಲ. ಭೈರವ ಗುಡಿಯಲ್ಲಿ ಉಮಾಮಹೇಶ್ವರ ಮತ್ತು ಭೈರವನ ವಿಗ್ರಹಗಳಿವೆ. ಈ ದೇವಾಲಯದ ಮುಂದೆ ತಮ್ಮ ತಲೆಗಳನ್ನು ಬಲಿ ನೀಡುತ್ತಿರುವ ದೃಶ್ಯವುಳ್ಳ ಆತ್ಮಾಹುತಿ ಕಲ್ಲಿದೆ. ಬನಶಂಕರಿ ದೇವಾಲಯದಲ್ಲಿರುವ ದೇವಿವಿಗ್ರಹ ಹೊಯ್ಸಳ ಶೈಲಿಯಲ್ಲಿದೆ. ದೇವಿಯು ಸುಖಾಸೀನಳಾಗಿ ಶವದ ಮೇಲೆ ಕುಳಿತಿದ್ದು, ಇರುವ ಎಂಟು ಕೈಗಳಲ್ಲಿ ಕತ್ತಿ, ಅಕ್ಷರಮಾಲೆ, ಸರ್ಪ, ತ್ರಿಶೂಲ, ಖೇಟ, ಡಮರುಗಳಿದ್ದು, ಮೂರ್ತಿ ಭಗ್ನವಾಗಿದೆ.

**ಶಿಡ್ಲೆಹಳ್ಳಿ (ಜನಸಂಖ್ಯೆ. ೫೮೮):** ತಾಲೂಕು ಕೇಂದ್ರ ತಿಪಟೂರಿನಿಂದ ಪೂರ್ವಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಇಲ್ಲಿನ ಮಠವು ಹಾಗಲವಾಡಿ–ಚಿಕ್ಕನಾಯಕನಹಳ್ಳಿ ಪಾಳೆಯಗಾರರ ರಾಜಗುರುಗಳ ಪೀಠವೆಂದು ತಿಳಿದುಬರುತ್ತದೆ. ಹಾಗಲವಾಡಿ ಪಾಳೆಯಗಾರ ಇಮ್ಮಡಿ ಮುದಿಯಪ್ಪನಾಯಕ ಈ ಮಠವನ್ನು ಕಟ್ಟಿಸಿಕೊಟ್ಟುದಾಗಿ ಹೇಳಲಾಗುವ ವೀರಶೈವ ಮಠವಿಲ್ಲದೆ ಶ್ರೀ ವೀರಶಿವಾಚಾರ್ಯಸ್ವಾಮಿಗಳಿಂದ ಪ್ರಾರಂಭವಾಗಿ ಈಗಿನ ಶ್ರೀ ಇಮ್ಮುಡಿ ಕರಿಬಸವ ದೇಶಿಕೇಂದ್ರ ಸ್ವಾಮಿಗಳವರೆಗೆ ಐದು ಜನ ಪೀಠಾಧಿಪತಿಗಳಾಗಿದ್ದರೆಂದು ತಿಳಿಯುತ್ತದೆ. ಶ್ರೀಕರಿಬಸವ ದೇಶಿಕೇಂದ್ರ ಸ್ವಾಮಿಗಳು ದೊಡ್ಡ ವಿದ್ವಾಂಸರಾಗಿದ್ದರೆಂದೂ, ಕಾಶಿಯಲ್ಲಿ ತರ್ಕ, ನ್ಯಾಯ, ಸಂಸ್ಕೃತ, ವೇದಾಂತ, ವ್ಯಾಕರಣ ಮೊದಲಾದವುಗಳ ಅಧ್ಯಯನ ನಡೆಸಿ ಮರಳಿ ಶಿಡ್ಲೆಹಳ್ಳಿಗೆ ಬಂದು ನೆಲೆಸಿದ್ದರು. ಇವರ ವಿದ್ವತ್‌ಗೆ ಮೈಸೂರು ಮುಮ್ಮಡಿ ಕೃಷ್ಣರಾಜ ಒಡೆಯರು ಭಕ್ತಿ ಗೌರವಗಳನ್ನು ಸಮರ್ಪಿಸಿ, ಅನೇಕ ಬಿರುದಾವಳಿಗಳನ್ನು ನೀಡಿದರು. ಇವರು ತಮ್ಮ ಮಠವನ್ನು ತಿಪಟೂರಿಗೆ ವರ್ಗಾಯಿಸಿ ವಿದ್ಯಾರ್ಥಿಗಳ ಅಧ್ಯಯನಕ್ಕೆ ಹಾಗೂ ಪ್ರಸಾದ ವಿನಿಯೋಗಕ್ಕೆ ಅನುವು ಮಾಡಿಕೊಟ್ಟಿದ್ದರು. ಇವರು ಲಿಂಗೈಕ್ಯರಾದ ನಂತರ ಉತ್ತರಾಧಿಕಾರಿ ಯಾರೂ ಇಲ್ಲದ್ದರಿಂದ ಬಳ್ಳೆಕಟ್ಟೆ ಮಠದ ಶ್ರೀ ಚೆನ್ನಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳು ನಡೆಸಿಕೊಂಡು ಬರುತ್ತಿದ್ದು, ಈ ಎರಡೂ ಮಠಗಳು ಒಂದೇ ಸಂಪ್ರದಾಯಕ್ಕೆ ಸೇರಿದ್ದು, ಈಗ ವಿಲೀನಗೊಂಡಿವೆ. ಬಳ್ಳೇಕಟ್ಟೆಯ ಮಠವು ೧೯೧೦ರಲ್ಲಿ ಆರಂಭವಾಗಿದ್ದು, ಎರಡನೇ ಗುರುಗಳಾಗಿ ಶ್ರೀ ಚೆನ್ನಮಲ್ಲಿಕಾರ್ಜುನ ದೇಶಿಕೇಂದ್ರರು ಇದನ್ನು ಅಭಿವೃದ್ಧಿಗೊಳಿಸಿದ್ದಾರೆ.

**ಶ್ರಾವಂಡಹಳ್ಳಿ (ಶ್ರವಣಗುಡಿ) (ಜನಸಂಖ್ಯೆ. ೪೪೪):** ಇದು ಮಧುಗಿರಿ ತಾಲೂಕಿನಲ್ಲಿದ್ದು ಐತಿಹಾಸಿಕ ಅವಶೇಷಗಳನ್ನೊಳಗೊಂಡಿರುವ ಮಹತ್ವದ ಸ್ಥಳವಾಗಿದೆ. ಇಲ್ಲಿ ೧೦ ವೀರಗಲ್ಲುಗಳಿದ್ದು, ಚೋಳ ಮತ್ತು ಗಂಗ ಮನೆತನಗಳ ನಡುವೆ ನಡೆದ ಕದನದಲ್ಲಿ ಮಡಿದ ವೀರರ ನೆನಪಿನ ಸ್ಮಾರಕಗಳಾಗಿವೆ. ಇವು ಕ್ರಿ.ಶ. ೭೫೦ಕ್ಕೆ ಸೇರಿದ್ದು, ಅರಸರಾದ ಧನಂಜಯ ಮತ್ತು ಮುತ್ತರಸರ ಅವಧಿಯದ್ದಾಗಿವೆ. ಇವುಗಳಲ್ಲಿ ಪ್ರಮುಖವಾದ ಕೆಲವು ವೀರಗಲ್ಲುಗಳು ವಿಶೇಷತೆಯನ್ನು ಹೊಂದಿವೆ. ಒಂದು ವೀರಗಲ್ಲಿನಲ್ಲಿ ಆನೆಯನ್ನು ಮಣಿಸುತ್ತಿರುವ ಸಾಹಸದ ಚಿತ್ರಣವಿದೆ. ಆನೆ ಮತ್ತು ವೀರರುಗಳನ್ನು ಸಾಮಾನ್ಯವಾಗಿ ಇಲ್ಲಿ ಚಿತ್ರಿಸಲಾಗಿದೆ. ಮತ್ತೊಂದು ವೀರಗಲ್ಲಿನಲ್ಲಿ, ಯುದ್ಧ ದೃಶ್ಯದಲ್ಲಿ ಕಾಲಾಳುಗಳು ಕೆಳಸಾಲಿನಲ್ಲಿ ಕಾದಾಡುತ್ತಿದ್ದು, ಎರಡನೇ ಸಾಲಿನಲ್ಲಿ ಆನೆಸವಾರನ ವಿರುದ್ಧ ಕಾದಾಡುತ್ತಿರುವ ಮಹಿಳೆ, ಕುದುರೆ ಸವಾರಿ ಮಾಡುತ್ತಿರುವವಳು. ಮೂರನೇ ಭಾಗದಲ್ಲಿ ಪದ್ಮಾಸನಾರೂಢನಾದ ಜಿನ ಶಿಲ್ಪವಿದೆ. ಮತ್ತೊಂದು ವೀರಗಲ್ಲು ಹುಲಿಬೇಟೆ ದೃಶ್ಯವನ್ನು ಹೊಂದಿದೆ. ವೀರ ಹುಲಿಯನ್ನು ಕೊಂದಿರಬೇಕು. ಈ ವೀರಗಲ್ಲುಗಳಲ್ಲಿ ಯಾವುದರಲ್ಲಿಯೂ ಬರಹವಿಲ್ಲ.

**ಸಂಪಿಗೆ (ಜನಸಂಖ್ಯೆ. ೨೨೮೦):** ತಾಲೂಕು ಕೇಂದ್ರ ತುರುವೇಕೆರೆಯಿಂದ ಪೂರ್ವಕ್ಕೆ ೧೨ ಕಿ.ಮೀ ದೂರದಲ್ಲಿರುವ ಪುರಾಣ ಪ್ರಸಿದ್ಧ ಗ್ರಾಮವಾಗಿದ್ದು, ಇಲ್ಲಿ ಸೂಕ್ಷ್ಮಶಿಲಾಯುಗ, ನೂತನ ಶಿಲಾಯುಗ ಸಂಸ್ಕೃತಿಗೆ ಸೇರಿದ ವೈವಿಧ್ಯ ಉಪಕರಣಗಳು ದೊರೆತಿವೆ. ಹಿಂದೆ ಇದನ್ನು 'ಚಂಪಕಾಪುರಿ' ಎಂದು ಕರೆಯಲಾಗುತ್ತಿತ್ತು. ಸಂಪಿಗೆಯನ್ನು ಪುರಾಣ

ಪ್ರಸಿದ್ಧ ಹಂಸಧ್ವಜ ರಾಜನ ಮಗ ಸುಧನ್ವನು, ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನೆಂದು ಉಲ್ಲೇಖಿಸಲಾಗಿದೆ. ಇವನ ಸೈನ್ಯ(ದಂಡು) ಬೀಡುಬಿಟ್ಟಿದ ಸ್ಥಳವನ್ನು ದಂಡಿನಶಿಬಿರವೆಂದು ಕರೆಯಲಾಗುತ್ತಿತ್ತು. ಈಗ ಅದು ಒಂದು ಪ್ರಮುಖ ಗ್ರಾಮವಾಗಿದ್ದು **'ದಂಡಿನಶಿವರ' (ಜನಸಂಖ್ಯೆ. ೨೧೩೧)** ಎಂದು ಕರೆಯಲಾಗುತ್ತಿದೆ. ಇಲ್ಲಿ ಹೊನ್ನಾದೇವಿಯ ಪ್ರಸಿದ್ಧ ದೇವಾಲಯವಿದ್ದು, ವಾರ್ಷಿಕ ಉತ್ಸವವು ವಿಜೃಂಭಣೆಯಿಂದ ನಡೆಯುತ್ತದೆ. ಇದು ಜಾನಪದ ಕಲೆಗೂ ಪ್ರಸಿದ್ಧವಾಗಿದೆ. ಸಂಪಿಗೆಯಲ್ಲಿ ಶ್ರೀನಿವಾಸ ದೇವಾಲಯವಿದೆ. ಇಲ್ಲಿನ ಮಲ್ಲಿಕಾರ್ಜುನ ದೇವಾಲಯವು ಹಾಳಾಗಿದೆ. ವಿಜಯನಗರದ ಮಹಾಪ್ರಧಾನ ಸಿಂಗಪ್ಪ ದಂಡನಾಯಕನ ಪತ್ನಿ ಕಲ್ಲರಸಿಯಮ್ಮನು ಹಾಳಾಗಿದ್ದ ಈ ದೇವಾಲಯವನ್ನು ಕ್ರಿ.ಶ. ೧೪೭೦ರಲ್ಲಿ ಜೀರ್ಣೋದ್ಧಾರ ಮಾಡಿಸಿದಳೆಂದು ತಿಳಿಯುತ್ತದೆ. ಈ ಗ್ರಾಮ ಕನ್ನಡದ ಸುಪ್ರಸಿದ್ಧ ಸಾಹಿತಿ ಬಿ.ಎಂ. ಶ್ರೀಕಂಠಯ್ಯನವರ ಜನ್ಮಸ್ಥಳವೂ ಆಗಿದೆ.

**ಸಿದ್ಧಗಂಗೆ (ಜನಸಂಖ್ಯೆ. ೬,೩೩೫):** ಇದು, ಬೆಂಗಳೂರು-ಪೂನಾ ರಾಷ್ಟ್ರೀಯ ಹೆದ್ದಾರಿ ಹಾಗೂ ಬೆಂಗಳೂರು-ಅರಸೀಕೆರೆ ರೈಲು ಮಾರ್ಗದಲ್ಲಿ ಕ್ಯಾತ್ಸಂದ್ರಕ್ಕೆ ಸಮೀಪವಿದ್ದು, ತುಮಕೂರಿನಿಂದ ಆರು ಕಿ.ಮೀ. ಪೂರ್ವಕ್ಕಿದೆ. ಪ್ರಸಿದ್ಧ ಯಾತ್ರಾಸ್ಥಳ ಹಾಗೂ ಸುಪ್ರಸಿದ್ಧ ತ್ರಿವಿಧ ದಾಸೋಹದ ಪ್ರಾಚೀನ ಧಾರ್ಮಿಕ ಕೇಂದ್ರ. ಸಿದ್ಧಗಂಗಾ ವಿದ್ಯಾಸಂಸ್ಥೆಯು ಪೂರ್ವ ಪ್ರಾಥಮಿಕದಿಂದ ಸ್ನಾತಕೋತ್ತರದವರೆಗಿನ ವಿದ್ಯಾಕೇಂದ್ರಗಳನ್ನು, ತಾಂತ್ರಿಕ ವಿದ್ಯಾಲಯವನ್ನು ವಿವಿಧ ಜಿಲ್ಲೆಗಳಲ್ಲಿ ಶಾಲಾ ಕಾಲೇಜುಗಳನ್ನು ಹೊಂದಿ, ವಿದ್ಯಾದಾನ ನಡೆಸುತ್ತಿದೆ. ಶ್ರೀ ಕ್ಷೇತ್ರದಲ್ಲಿ ತಲೆಮಾರುಗಳಿಂದ ನಡೆದುಕೊಂಡು ಬರುತ್ತಿರುವ ನಿತ್ಯ ದಾಸೋಹ ಇಂದಿಗೂ ಮುಂದುವರಿದಿದೆ. ಶಿಕ್ಷಣಸೇವೆ, ಸಮಾಜಸೇವೆ, ಧರ್ಮಪ್ರಸಾರಗಳ ಮೂಲಕ ವಿಶ್ವವ್ಯಾಪ್ತಿಯಾಗಿದ್ದು, ಲಕ್ಷಾಂತರ ವಿದ್ಯಾರ್ಥಿ ಹಾಗೂ ಭಕ್ತಾದಿಗಳನ್ನೊಳಗೊಂಡು ಬೃಹತ್ತಾಗಿ ಬೆಳೆದಿದೆ. ಸಿದ್ಧಗಂಗಾ ಕ್ಷೇತ್ರವು ಪ್ರಾಕೃತಿಕ ಪರಿಸರದಲ್ಲಿದ್ದು, ಶ್ರೀಗಳವರ ಮಠ, ಸಂಸ್ಕೃತಶಾಲೆ, ಶ್ರೀಕ್ಷೇತ್ರದೇವತೆ, ಶ್ರೀ ಸಿದ್ಧಲಿಂಗೇಶ್ವರ, ಸಿದ್ಧಗಂಗಮ್ಮನ ದೇವಾಲಯಗಳು, ವಿಶಾಲವಾದ ಕಲ್ಯಾಣಿ, ಮೊದಲಾದವುಗಳನ್ನೊಳಗೊಂಡಿದೆ.

ಸಿದ್ಧಗಂಗಾ ಮಠವು ೧೪ನೇ ಶತಮಾನದ ಆರಂಭದಲ್ಲಿ ಗೋಸಲು ಸಿದ್ಧೇಶ್ವರರಿಂದ ಸ್ಥಾಪಿತವಾಗಿದ್ದು, ಇದರ ಗುರು ಪರಂಪರೆಯಲ್ಲಿ ಶಂಕರಸ್ವಾಮಿಗಳು, ದಿವ್ಯಲಿಂಗೇಶ್ವರರು, ಚೆನ್ನಬಸವಸ್ವಾಮಿಗಳು, ರಾಜೇಂದ್ರಸ್ವಾಮಿಗಳು, ತೋಂಟದ ಸಿದ್ಧಲಿಂಗೇಶ್ವರರು, ಉದ್ದಾನಶಿವಯೋಗಿಗಳು, ಡಾ. ಶಿವಕುಮಾರಸ್ವಾಮಿಗಳು, ಹಾಗೂ ಸಿದ್ಧಲಿಂಗಸ್ವಾಮಿಗಳು ಭವ್ಯ ಪರಂಪರೆ ನಡೆದು ಬಂದಿದೆ. ಇವರಲ್ಲಿ ಶತಾಯುಷಿ ಡಾ. ಶಿವಕುಮಾರಸ್ವಾಮಿಗಳು ಮಠದ ಉನ್ನತಿಗೆ ಕಾರಣಪುರುಷರಾಗಿದ್ದು ಅವರ ೧೦೮ ನೇ ಸಾಲಿನ ಹುಟ್ಟಿದ ಹಬ್ಬವನ್ನು ಭಕ್ತಾದಿಗಳು ವಿಜೃಂಭಣೆಯಿಂದ ಆಚರಿಸಿರುವರು.

ಸಿದ್ಧಗಂಗೆಯ ಜಾತ್ರೆ ವಿಶೇಷ ಮಹತ್ವ ಹೊಂದಿದ್ದು, ಪ್ರತೀವರ್ಷ ಮಾಘಮಾಸ(ಫೆಬ್ರವರಿ ಕೊನೆವಾರ)ದಲ್ಲಿ ಆರಂಭವಾಗಿ ಹನ್ನೊಂದು ದಿನಗಳವರೆಗೆ ನಡೆಯುತ್ತದೆ. ಮೊದಲ ದಿನ ಗೋಸಲ ಸಿದ್ಧೇಶ್ವರದೇವರ ಪಲ್ಲಕ್ಕಿಯೊಂದಿಗೆ ಆರಂಭವಾಗಿ ಪ್ರತಿದಿನವು ಬೇರೆಬೇರೆ ಉತ್ಸಾವಾದಿಗಳು ನಡೆದು ಕೊನೆಯ ದಿನ ರಥೋತ್ಸವ, ಬೆಳ್ಳಿ ಪಲ್ಲಕ್ಕಿಉತ್ಸವ, ತೆಪ್ಪೋತ್ಸವಗಳ ಜೊತೆಗೆ ಶಿವಾನುಭವ ಸಮ್ಮೇಳನಗಳು ನಡೆಯುತ್ತವೆ. ಜಾತ್ರೆಯ ವಿಶೇಷ ಆಕರ್ಷಣೆಯೆಂದರೆ ದನಗಳ ಜಾತ್ರೆ, ಕೃಷಿ ವಸ್ತುಪ್ರದರ್ಶನ, ನಂದಿಕುಣಿತ, ಲಿಂಗಬೀರರ ಕುಣಿತ, ಕರಡಿವಾಹನ, ಚಮ್ಮೇಳ ಮೊದಲಾದವು.

ಸಿದ್ಧಗಂಗೆಯ ಪೂರ್ವಕ್ಕಿರುವ ಬೆಟ್ಟದಲ್ಲಿ ಶಿಲಾಯುಗ ಸಂಸ್ಕೃತಿಯ ಮೂರು ಸಾಂಸ್ಕೃತಿಕ ಹಂತಗಳನ್ನು ಪ್ರತಿನಿಧಿಸುವ ಅವಶೇಷಗಳು ಪತ್ತೆಯಾಗಿರುವುದು ಉಲ್ಲೇಖಾರ್ಹವಾಗಿದೆ. ಸಮೀಪದ ರಾಮದೇವರ ಬೆಟ್ಟದಲ್ಲಿ ಇತ್ತೀಚೆಗೆ ಪ್ರಾಗೈತಿಹಾಸಿಕ ಕಾಲದ ಚಿತ್ರಗಳನ್ನು ಪತ್ತೆಯಾಗಿದೆ. ಅವು ಬಿಳಿವರ್ಣದ ನವಿಲು ಮತ್ತು ಗೋವಿನಮುಖ ಹಾಗೂ ಕಪ್ಪುವರ್ಣದ ಮತ್ಸ್ಯ ಚಿತ್ರಗಳಾಗಿವೆ. ಇಲ್ಲಿಯ ರುದ್ರಮ್ಮನ ಗವಿಯಲ್ಲಿ ಬೃಹತ್ ಶಿಲಾಯುಗದ ಸಮಾಧಿ ಅವಶೇಷಗಳು ಪತ್ತೆಯಾಗಿವೆ.

**ಸಿದ್ಧರಬೆಟ್ಟ (ಜನಸಂಖ್ಯೆ. ೪೪೧):** ಬೂದಗವಿ ಅಥವಾ ಸಿದ್ಧರಬೆಟ್ಟವು ತಾಲೂಕು ಕೇಂದ್ರ ಕೊರಟಗೆರೆಯಿಂದ ೧೫ ಕಿ.ಮೀ. ದೂರದಲ್ಲಿದೆ. ಈ ಬೆಟ್ಟವು ಪುರಾಣ ಪ್ರಸಿದ್ಧವಾಗಿದ್ದು, ರಾಮಾಯಣದ ಪ್ರಸಿದ್ಧ ಸಂಜೀವಿನಿ ಪರ್ವತದ ಭಾಗವೆಂದು ನಂಬಲಾಗಿದೆ. ಇಲ್ಲಿ ಈಗಲೂ ಹಲವು ಅಮೂಲ್ಯ ಆಯುರ್ವೇದ ಸಂಬಂಧಿ ಗಿಡಮೂಲಿಕೆಗಳು ದೊರೆಯುತ್ತವೆ. ಇಲ್ಲಿ ಆಯುರ್ವೇದ ಗಿಡಮೂಲಿಕೆಗಳ ಸಸ್ಯೋದ್ಯಾನವೊಂದನ್ನು ಸರ್ಕಾರವೇ ನಿರ್ಮಿಸಿದೆ. ಇಲ್ಲಿನ ಐತಿಹ್ಯದಂತೆ ಆನೆಗೆ ಕಟ್ಟಿದ್ದ ಕಬ್ಬಿಣದ ಸರಪಳಿಯು, ಅಮೂಲ್ಯ ಗಿಡದ ಸ್ಪರ್ಶದಿಂದ ಚಿನ್ನವಾದ್ದರಿಂದ **'ಸುವರ್ಣಗಿರಿ'** ಎಂದಾಯಿತಂತೆ, ಈ ಬೆಟ್ಟವು

ಅನೇಕ ಗವಿಗಳನ್ನು ಹೊಂದಿದ್ದು, ಇಲ್ಲಿ ಅನೇಕ ಯೋಗಿಗಳು ತಪಸ್ಸು ಮಾಡಿ ಸಿದ್ಧಿ ಪಡೆದಿದ್ದರಿಂದ 'ಸಿದ್ಧರಬೆಟ್ಟ'ವೆಂದೂ ಕರೆಯಲ್ಪಡುತ್ತಿದೆ. ಬೆಟ್ಟದಲ್ಲಿರುವ ಪ್ರಕೃತಿ ನಿರ್ಮಿತ ಗುಹಾದೇವಸ್ಥಾನ ಮತ್ತು ನೀರಿನ ದೊಣೆಗಳು ಪ್ರಸಿದ್ಧವಾಗಿವೆ. ಇತ್ತೀಚಿನ ದಿನಗಳಲ್ಲಿ ಶೀ ಸಿದ್ಧೇಶ್ವರ ಸೇವಾಸಮಿತಿಯು ಭಕ್ತಾದಿಗಳ ಅನುಕೂಲಕ್ಕಾಗಿ ಛತ್ರ, ತಂಗುದಾಣ, ನಿತ್ಯಾದಾಸೋಹಗಳನ್ನು ನಡೆಸುತ್ತಿದೆ.

**ಸಿದ್ಧಾಪುರ (ಜನಸಂಖ್ಯೆ. ೨,೯೩೮):** ತಾಲೂಕು ಕೇಂದ್ರ ಮಧುಗಿರಿಯಿಂದ ವಾಯವ್ಯಕ್ಕೆ ಎರಡು ಕಿ.ಮೀ. ದೂರದಲ್ಲಿದೆ. ವಿಜಯನಗರದರಸ ವೆಂಕಟಪತಿರಾಯನ ಆಳ್ವಿಕೆಯಲ್ಲಿ ಮಹಾನಾಡಪ್ರಭು ಇಮ್ಮಡಿ ಚಿಕ್ಕಪ್ಪಗೌಡ ಕ್ರಿ.ಶ. ೧೫೯೩ರಲ್ಲಿ ಕೋಟೆ, ಬಸವೇಶ್ವರ, ವಿಘ್ನೇಶ್ವರ, ವೀರಭದ್ರ ಮತ್ತು ಭೈರವ ದೇವಸ್ಥಾನಗಳನ್ನು ನಿರ್ಮಿಸಿದನೆಂದು ತಿಳಿದು ಬರುತ್ತದೆ. ಕೋಟೆಯು ಸಾಕಷ್ಟು ಶಿಥಿಲವಾಗಿದೆ. ಆಯಾಕಾರದ ಕೋಟೆಯ ಪಶ್ಚಿಮಭಾಗದಲ್ಲಿ ಚೌಕಾಕಾರದ ನಾಲ್ಕು ಕೊತ್ತಲಗಳಿದ್ದು, ಕೋಟೆಯ ಮೂರು ಭಾಗದ ಗೋಡೆಗಳು ಹಾಳಾಗಿವೆ. ಪೂರ್ವಭಾಗದ ಗೋಡೆಯ ಮಧ್ಯಭಾಗದಲ್ಲಿ ಬೃಹತ್ ದ್ವಾರವಿದ್ದು, ದಕ್ಷಿಣಕ್ಕೆ ಕೊತ್ತಲವಿದೆ. ಕೋಟೆಯ ಮೇಲ್ಭಾಗಕ್ಕೆ ಹೋಗಲು ಪಶ್ಚಿಮ ಗೋಡೆಯ ಒಳಭಾಗದಲ್ಲಿ ಮೆಟ್ಟಿಲುಗಳಿವೆ. ಕೋಟೆಯ ಸುತ್ತ ಅಗಲವೂ ಆಳವೂ ಆದ ಕಂದಕವಿದೆ. ಕೋಟೆಯೊಳಗೆ ಕಣಜ ಹಾಗೂ ಆಯಾಕಾರದ ಬಾವಿ ಇದೆ. ಕೋಟೆಯ ಬಾಗಿಲಲ್ಲಿ ವಿಘ್ನೇಶ್ವರ, ವೀರಭದ್ರ, ಬಸವೇಶ್ವರ, ಮಾರುತಿ ಮತ್ತು ಭೈರವ ದೇವಾಲಯಗಳಿವೆ. ಕೋಟೆಯೊಳಗೆ ಪಶ್ಚಿಮಭಾಗದಲ್ಲಿ ಮೆಟ್ಟಲಿನ ಹತ್ತಿರ ಬಾಳೇಶ್ವರ ದೇವಾಲಯವಿದೆ. ಹಿಂದೆ, ಇಲ್ಲಿದ್ದ ನಂಜಮ್ಮನಮಠ, ಪುಟ್ಟಯ್ಯಸ್ವಾಮಿಮಠ, ಬೋಳಾರಾಧ್ಯರಮಠ ಮೊದಲಾದ ವೀರಶೈವ ಮಠಗಳು ಶಿಥಿಲಗೊಂಡಿವೆ.

**ಶಿರಾ (ಜನಸಂಖ್ಯೆ. ೫೦,೦೮೮):** ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಒಂದಾಗಿದ್ದು, ಜಿಲ್ಲಾ ಕೇಂದ್ರದಿಂದ ವಾಯವ್ಯಕ್ಕೆ ೫೦ ಕಿ.ಮೀ. ದೂರದಲ್ಲಿದೆ. ರಾಷ್ಟ್ರೀಯ ಹೆದ್ದಾರಿ ನಾಲ್ಕರ ಬದಿಯಲ್ಲಿರುವ ಈ ನಗರ, ಸಾಂಸ್ಕೃತಿಕ ಹಾಗೂ ಐತಿಹಾಸಿಕ ಮಹತ್ವವನ್ನು ಹೊಂದಿದೆ. ಜಿಲ್ಲೆಯ ಮಹಮದೀಯ ಸಂಸ್ಕೃತಿಯ ವಾಸ್ತುಶಿಲ್ಪಗಳಾದ ಮಸೀದಿ, ಮಹಲ್‌ಗಳು ಇಲ್ಲಿವೆ. ಶಿರಾ, ಮೊಗಲರು, ಬಿಜಾಪುರ ಸುಲ್ತಾನರು, ಹೈದರ್–ಟಿಪ್ಪು, ಬ್ರಿಟಿಷ್ ಹಾಗೂ ಮೈಸೂರು ಅರಸರ ಆಧಿಪತ್ಯಕ್ಕೆ ಒಳಪಟ್ಟಿದ್ದಿತು. ಶಿರಾ ಪಟ್ಟಣಕ್ಕೆ ಈ ಹೆಸರು ಜಾನಪದೀಯ ಮೂಲದಿಂದ ಬಂದಿತೆಂದು ಹೇಳಲಾಗುತ್ತದೆ. ಆದರೆ ಶಾಸನೋಕ್ತವಾಗಿ ಒಂಬತ್ತನೇ ಶತಮಾನದಿಂದ ಕಂಡುಬರುತ್ತಿದ್ದು, ಆಗ 'ಸೀರೆನಾಡು' ಎಂದು ಕರೆಯಲಾಗಿದ್ದು, ನಂತರದಲ್ಲಿ 'ಸಿರೆ–ಮುನ್ನೂರು', 'ಸೀರೆ ಸೀಮೆ', ಮೊದಲಾದ ಉಲ್ಲೇಖಗಳಿರುವುದನ್ನು ನೋಡಬಹುದಾಗಿದೆ.

ಶಿರಾವನ್ನು ಮೊಗಲರು ತಮ್ಮ ಆಧಿಪತ್ಯಕ್ಕೆ ಪಡೆದು ರಣದುಲ್ಲಾಖಾನನನ್ನು ಅಧಿಕಾರಿಯನ್ನಾಗಿ ನೇಮಿಸಿದರು. ರತ್ನಗಿರಿಯ ರಂಗಪ್ಪನಾಯಕನು ಇಲ್ಲಿಯ ಕೋಟೆಯ ನಿರ್ಮಾಣವನ್ನು ಆರಂಭಿಸಿದನೆಂದೂ, ನಂತರ ಸುಭೇದಾರ್ ಮಲ್ಲಿಕ್ ಹುಸೇನನು ಪೂರ್ಣಗೊಳಿಸಿದನೆಂದು ತಿಳಿಯುತ್ತದೆ. ಔರಂಗಜೇಬನು ಕರ್ನಾಟಕದ ಆಧಿಪತ್ಯವನ್ನು ಬಿಜಾಪುರ ಸುಲ್ತಾನರಿಂದ ಪಡೆದು ಶಿರಾವನ್ನು ಆಕ್ರಮಿಸಿಕೊಂಡು ಅದನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡನು. ಇಲ್ಲಿದ್ದ ಅರಮನೆಯ ಅವಶೇಷ ಮಾತ್ರ ಉಳಿದಿದೆ. ಇಲ್ಲಿ ಖಾನ್‌ಬಾಗ್ ಎಂಬ ಉದ್ಯಾನ ನಿರ್ಮಿಸಲಾಗಿದ್ದು, ಅದು ಈಗಿನ ಬೆಂಗಳೂರು ಲಾಲ್‌ಬಾಗ್‌ನ ನಿರ್ಮಾಣಕ್ಕೆ ಮಾದರಿ ಎಂದೂ ಹೇಳಲಾಗುತ್ತದೆ. ಆನಂತರ ಇದು ಸ್ವಲ್ಪಕಾಲ ಮರಾಠರ ವಶದಲ್ಲಿದ್ದಿತು. ೧೭೬೧ರಲ್ಲಿ ಹೈದರ್ ಪ್ರಭಾವಕ್ಕೆ ಒಳಪಟ್ಟಿತು. ೧೭೭೪ರ ಬಳಿಕ ಟಿಪ್ಪು ಹಾಗೂ ಬ್ರಿಟಿಷರ ಆಳ್ವಿಕೆಯಲ್ಲಿದ್ದು, ಕೊನೆಗೆ ಮೈಸೂರು ರಾಜ್ಯದ ಭಾಗವಾಯಿತು.

ಜುಮ್ಮಾ ಮಸೀದಿ ಹಾಗೂ ಮಲ್ಲಿಕ್ ರೆಹಾನ್ ಗೋರಿ ಇಲ್ಲಿನ ಪ್ರಮುಖ ಸ್ಮಾರಕಗಳು. ಜುಮ್ಮಾ ಮಸೀದಿಯು ಶೇಖ್ ಫಾರಿದ್ ಸಾಹೇಬನಿಂದ ನಿರ್ಮಾಣವಾಯಿತೆಂದು ಗೊತ್ತಾಗುತ್ತದೆ. ಇವನು ಮತ್ತವನ ತಮ್ಮನಾದ ಶೇಖ್‌ಕಬೀರ್ ಸಾಹೇಬನ ಗೋರಿಗಳು ಮಸೀದಿಯೊಳಗಿವೆ. ಇಲ್ಲಿ ಎರಡು ಪರ್ಷಿಯನ್ ಶಾಸನಗಳು ದೊರೆತಿವೆ. ದರ್ಗಾ ಕಟ್ಟಡವು ಚೌಕಾಕಾರವಾಗಿದ್ದು, ಕರಿಕಲ್ಲನ್ನು ಬಳಸಲಾಗಿದ್ದು, ಎಂಟು ಅಡಿ ಎತ್ತರದ ನಾಲ್ಕು ಸ್ತಂಭ ಹಾಗೂ ದೊಡ್ಡಗೋಳವನ್ನು ಹೊಂದಿದೆ. ಒಳಗಡೆ ಮಲ್ಲಿಕ್ ರೆಹಾನನ ಗೋರಿಯೂ ಇದೆ. ಇದರ ಹಿಂಭಾಗದಲ್ಲಿ ಪ್ರಾರ್ಥನಾ ಮಂದಿರ, ವಾಯವ್ಯದಲ್ಲಿ ಅಧ್ಯಯನಕ್ಕೆ ಬಳಸುತ್ತಿದ್ದ ನಾಲ್ಕು ಸ್ತಂಭಗಳ ದಿಡ್ಡಿ ಎಂಬ ಕಟ್ಟಡವೂ ಇದೆ. ಆಗ್ನೇಯದಲ್ಲಿ ೭ನೇ ವರ್ಷದಲ್ಲಿ ಸಾವನ್ನಪ್ಪಿದ ಔರಂಗಜೇಬನ ಮಗಳ ಗೋರಿಯ ಮೇಲೆ 'ಅಲ್ಲಾ' ಮತ್ತು 'ಮಹಮದ್' ಎಂದು ಕೆತ್ತಲಾಗಿದೆ. ಸಮೀಪದಲ್ಲಿಯೇ

ಭಗ್ನಾವಸ್ಥೆಯ ಮಸೀದಿಯೊಂದಿದೆ. ಉತ್ತರದ ಭಾಗದಲ್ಲಿ ಗೋರಿಯೊಂದಿದ್ದು, ಅದರ ಕಳಸ ಚಿನ್ನದ್ದಾಗಿರುವುದರಿಂದ ಅದನ್ನು ಚಿನ್ನದ ಗೋರಿ ಎಂದು ಹೇಳಲಾಗುತ್ತದೆ. ಇದು ಫಕೀರನೊಬ್ಬನ ಗೋರಿ ಎಂದು ತಿಳಿದು ಬಂದಿದೆ. ಇವುಗಳ ಜೊತೆಗೆ ಇನ್ನು ಹಲವು ನಿರ್ಮಿತಿಗಳಿದ್ದು, ಒಂದು ಕಾಲದಲ್ಲಿ ೯೦ ಮಸೀದಿಗಳಿದ್ದವೆಂದು ಹೇಳಲಾಗುತ್ತದೆ.

ಶಿರಾದಲ್ಲಿ ಗೋಪಾಲಕೃಷ್ಣ, ಕನ್ನಿಕಾ ಪರಮೇಶ್ವರಿ, ಕಾಳಿಕಾಂಬ, ಕೆರೆಗೋಡಿ ಆಂಜನೇಯಸ್ವಾಮಿ, ಕೋಟೆಮಾರಮ್ಮ, ವೀರಾಂಜನೇಯ; ದೊಡ್ಡಕೆರೆ ಹಿಂದಿರುವ ಪಾಲೇಶ್ವರ ದೇವಸ್ಥಾನ, ಜ್ಯೋತಿಲಿಂಗೇಶ್ವರ, ಕೊಳದಪ್ಪಲೇಶ್ವರ, ಗಣೇಶ, ಉಮಾ ಮಹೇಶ್ವರ, ದುರ್ಗಮ್ಮ, ಪಾಂಡುರಂಗನಾಥಸ್ವಾಮಿ; ಅಗ್ರಹಾರ ಬೀದಿಯಲ್ಲಿರುವ ನಾರಾಯಣಸ್ವಾಮಿ, ಗವಿ ಆಂಜನೇಯಸ್ವಾಮಿ, ದುರ್ಗಮ್ಮ, ಶ್ರೀರಾಮ, ಸಾಕ್ಷಿ ಆಂಜನೇಯಸ್ವಾಮಿ; ಜ್ಯೋತಿನಗರದ ಕೊಲ್ಲಾಪುರದಮ್ಮ, ಅಂಬಾಭವಾನಿ, ರೇವಣಸಿದ್ಧೇಶ್ವರ ಮೊದಲಾದ ದೇವಾಲಯಗಳಿವೆ. ರೇವಣಸಿದ್ಧೇಶ್ವರ ದೇವಾಲಯದ ಗರ್ಭಗೃಹದ ದ್ವಾರದ ಇಕ್ಕೆಲಗಳಲ್ಲಿ, ಗೋಡೆ ಮತ್ತು ಹಜಾರಗಳಲ್ಲಿ ಕೃಷ್ಣ ಗೋಪಿಯರ ಜಲಕ್ರೀಡೆ, ವಸ್ತ್ರಾಪಹರಣ ಮೊದಲಾದ ಹಲವು ಚಿಕಣಿ ಚಿತ್ರಣಗಳಿದ್ದು, ಇವು ಮೈಸೂರು ಒಡೆಯರ ಕಾಲದವಾಗಿವೆ.

**ಶೀಬಿ (ಜನಸಂಖ್ಯೆ. ೧,೮೫೭):** ಇದು, ರಾಷ್ಟ್ರೀಯ ಹೆದ್ದಾರಿ ನಾಲ್ಕರ ಬದಿಯಲ್ಲಿ ತಾಲೂಕು ಕೇಂದ್ರ ಶಿರಾದಿಂದ ೨೦ ಕಿ.ಮೀ. ದೂರದಲ್ಲಿದೆ. ಹಿಂದೆ ಇದನ್ನು 'ಶಿಬಿಯೂರು', 'ಶೀಬಿಪುರ', 'ಹರಿಹರಪುರ'ವೆಂದೂ ಕರೆಯುತ್ತಿದ್ದರೆಂದು ತಿಳಿದು ಬರುತ್ತದೆ. ಇದು ಪುರಾಣ ಪ್ರಸಿದ್ಧ ಕ್ಷೇತ್ರವಾಗಿದ್ದು, ಇಲ್ಲಿ, ನರಸಿಂಹಸ್ವಾಮಿ ದೇವಾಲಯ, ಶಿಲಾಮಂಟಪ, ಕಲ್ಗಾಲಿಯ ಬೃಹತ್ ತೇರು, ಕಲ್ಯಾಣಿ ಮೊದಲಾದ ಸ್ಮಾರಕಗಳಿವೆ. ಪ್ರತೀವರ್ಷ ಮಾಘ ಮಾಸದಲ್ಲಿ ಉತ್ಸವ ನಡೆಯುತ್ತದೆ.

ನರಸಿಂಹಸ್ವಾಮಿ ದೇವಸ್ಥಾನದ ದ್ವಾರದಲ್ಲಿ ವಿಷ್ಣುವಿನ ದಶಾವತಾರ, ಶಿವಲೀಲಾ ದೃಶ್ಯ, ಮಹಾಭಾರತದ ಭಾಗವತ ಪುರಾಣದ ಕಥಾನಕ ದೃಶ್ಯಗಳನ್ನು ಚಿತ್ರಿಸಲಾಗಿದೆ. ಅವುಗಳಲ್ಲಿ ನರಸಿಂಹ ಚುಂಚಲಕ್ಷ್ಮೀಯರ ವಿವಾಹ, ಲಕ್ಷ್ಮೀನರಸಿಂಹ, ಕೃಷ್ಣ-ರುಕ್ಮಿಣಿ ಮತ್ತು ಬಲರಾಮ-ರೇವತಿಯರ ವಿವಾಹ, ಗೋಪಿಕಾ ವಸ್ತ್ರಾಪಹರಣ, ರಾಸಕ್ರೀಡೆ, ಕಾಳಿಂಗಮರ್ದನ, ಗಂಗೆ-ಗೌರಿಯರೊಂದಿಗೆ ಶಿವ, ರಾಮ-ರಾವಣರ ಯುದ್ಧ, ಹಾಗೂ ರಾವಣನನ್ನು ನಗ್ನವಾಗಿ ಚಿತ್ರಿಸಿರುವ ದೃಶ್ಯಗಳು ವಿಶಿಷ್ಟವಾಗಿವೆ.

ದೇವಾಲಯದ ಮಂಟಪದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಹಲವು ವರ್ಣಚಿತ್ರಗಳಿವೆ. ದೇವಾಲಯದ ಮಹಾದ್ವಾರವು ದೊಡ್ಡದಾಗಿದ್ದು ಮೇಲ್ಛಾವಣಿಯಲ್ಲಿ ರಾಮಾಯಣ ಮತ್ತು ಮಹಾಭಾರತದ ದೃಶ್ಯಗಳನ್ನು ಚಿತ್ರಿಸಲಾಗಿದೆ. ಉಮಾಮಹೇಶ್ವರ, ರುಕ್ಮಿಣಿ ಸ್ವಯಂವರ, ತ್ರಿವಿಕ್ರಮ, ಗೀತೋಪದೇಶ, ಗೋಪಿಯರಿಂದ ಸುತ್ತುವರಿದ ಕೃಷ್ಣ, ಗೋವರ್ಧನಧಾರಿ ಕೃಷ್ಣ, ಈಡಿಗರು ಹೆಂಡ ಇಳಿಸುತ್ತಿರುವುದು, ಕಲ್ಯಾಣಿ ಬಳಿ ಸ್ತ್ರೀಯರ ಹರಟೆ, ಕಾಡುಹಂದಿ ಬೇಟೆ, ಹುಲಿಯೊಡನೆ ಸೆಣಸಾಟ ಮುಖ್ಯವಾಗಿವೆ. ಇಲ್ಲಿಯೇ ೫೦ ಅಂಕಣಗಳಲ್ಲಿ ಕಾಮಕೇಳಿಯ ದೃಶ್ಯಗಳನ್ನು ಹೊಂದಿರುವ ಮಿಥುನ ಚಿತ್ರಣಗಳಿವೆ. ಈ ಎಲ್ಲಾ ಚಿತ್ರಗಳಿಗೂ ಗಾಢವಾದ ಕೆಂಬಣ್ಣದ ಹಿನ್ನೆಲೆ ನೀಡಲಾಗಿದೆ. ಕೆಲವು ಚಿತ್ರಗಳು ಕಾಲನ ವಶಕ್ಕೆ ಸಿಲುಕಿ ಕಳೆಗುಂದುತ್ತಿವೆ. ಇವುಗಳ ಜೊತೆಗೆ ವಿವಿಧ ಭಂಗಿಯ ಮಿಥುನ ಶಿಲ್ಪಗಳೂ ಸಾಕಷ್ಟು ಸಂಖ್ಯೆಯಲ್ಲಿವೆ. ಟಿಪ್ಪುವಿನ ಚಿತ್ರವೂ ಇಲ್ಲಿದೆ. ಇವುಗಳ ರೇಖಾ ನೈಪುಣ್ಯತೆ, ವರ್ಣ ವೈವಿಧ್ಯ ಗಣನೀಯವಾದುದು. ಇವು ಆಡಳಿತಾಧಿಕಾರಿ ಫೌಜುದಾರ್ ನಲ್ಲಪ್ಪನ ಅಭಿಲಾಷೆಯಂತೆ ೧೮ನೇ ಶತಮಾನದಲ್ಲಿ ರಚಿತವಾದವುಗಳೆಂದು ತಿಳಿಯುತ್ತದೆ. ಇಲ್ಲಿನ ವರ್ಣಚಿತ್ರಗಳ ಕಾಲವನ್ನು ವಿಜಯನಗರ ಕಾಲದಿಂದ ೧೯ನೇ ಶತಮಾನದವರೆಗೆ ಗುರುತಿಸಬಹುದಾಗಿದೆ.

**ಸೂಳೆಕೆರೆ (ಜನಸಂಖ್ಯೆ. ೭೦೯):** ಇದು, ತುರುವೇಕೆರೆ ತಾಲೂಕಿನಲ್ಲಿರುವ ಗ್ರಾಮವಾಗಿದ್ದು, ಇಲ್ಲಿರುವ ಕಿರಿದಾದ ಈಶ್ವರ ದೇವಾಲಯವನ್ನು ಹೊಯ್ಸಳ ಶೈಲಿಯಲ್ಲಿ ನಿರ್ಮಿಸಲಾಗಿದ್ದು, ಗರ್ಭಗೃಹ ಮತ್ತು ಸುಕನಾಸಿಗಳನ್ನು ಮಾತ್ರ ಹೊಂದಿದ್ದು, ಕಮಲದ ಮೊಗ್ಗುಗಳನ್ನು ಮೇಲ್ಛಾವಣಿಯಲ್ಲಿ ಚಿತ್ರಿಸಲಾಗಿದೆ. ಗರ್ಭಗೃಹದ ಮೇಲ್ಭಾಗವನ್ನು ಚೌಕಾಕಾರದಂತೆ ಮೇಲಕ್ಕೇರಿಸಲಾಗಿದೆ. ಸುಮಾರು ಎರಡು ಅಡಿ ಎತ್ತರದ ಭೈರವನ ಸುಂದರ ಮೂರ್ತಿಯು ಶಿವಲಿಂಗದ ಸಮೀಪದಲ್ಲಿದೆ. ಹೊರ ಗೋಡೆಯಲ್ಲಿ ಅಲಂಕಾರಿಕ ಸ್ತಂಭಗಳನ್ನು ಬಿಡಿಸಲಾಗಿದೆ. ಅಲ್ಲಿಯೇ ವರಾಂಡದಲ್ಲಿ ಮೂರು ಅಂಕಣಗಳ ವೀರಭದ್ರ ದೇವಾಲಯವು, ನಾಲ್ಕು ಅಲಂಕೃತ ಕಂಬಗಳ ಮೇಲೆ ನಿಂತಿದ್ದು, ಇಲ್ಲಿರುವ ಶಿಲ್ಪಗಳಲ್ಲಿ ಅರ್ಜುನನು ಶಿವನೊಡನೆ ಕುಸ್ತಿ ಮಾಡುವುದು, ಬೇಡರಕಣ್ಣಪ್ಪನು ಶಿವಲಿಂಗದ ಮುಂದೆ ನಿಂತಿರುವುದು ಪ್ರಮುಖವಾದವು. ಆನೆ ಮತ್ತು ಹೋರಿಗಳನ್ನು

ಒಂದೇ ಶಿಲ್ಪದಲ್ಲಿ ಬಿಡಿಸಿರುವುದು ಗಮನಾರ್ಹ. ಅಲ್ಲೇ ವಿರುದ್ಧ ದಿಕ್ಕಿನಲ್ಲಿ ಮುಖ ಮಾಡಿ ನಿಂತಿರುವ ಸ್ತ್ರೀಯರ ಎರಡು ಭಕ್ತ ಶಿಲ್ಪಗಳನ್ನು ಬಿಡಿಸಿದ್ದು, ಅವುಗಳ ಆಭರಣ ಹಾಗೂ ತುರುಬು ವಿಶಿಷ್ಟವಾಗಿವೆ.

**ಸೆಟ್ಟಿಕೆರೆ (ಜನಸಂಖ್ಯೆ. ೩,೪೦೫):** ತಾಲೂಕು ಕೇಂದ್ರ ಚಿಕ್ಕನಾಯಕನಹಳ್ಳಿಯಿಂದ ಎಂಟು ಕಿ.ಮೀ. ನೈಋತ್ಯಕ್ಕಾದಂತೆ ಇರುವ ಹೋಬಳಿ ಕೇಂದ್ರ. ಹೊಯ್ಸಳರ ಕಾಲದಲ್ಲಿ ಸೆಟ್ಟಕೆರೆ ಅಥವಾ ಸೆಟ್ಟೆಕೆರೆಯು 'ಸೆಟ್ಟಿ' ಜನವರ್ಗದಿಂದ ಕೂಡಿದ್ದು, ವಿಶಾಲವಾದ ಕೆರೆಯು ಊರಿನ ನೈರುತ್ಯಕ್ಕಿದ್ದು, ಇದರಿಂದ ಈ ಊರನ್ನು ಸೆಟ್ಟಿಕೆರೆ ಎಂದು ಕರೆಯಲಾಯಿತು. ಅಲ್ಲದೆ, ಇದು ಮಹಾಜನರಿಂದ ಕೂಡಿದ ಅಗ್ರಹಾರವೂ ಆಗಿದ್ದಿತು. ಸುಮಾರು ೧೩ನೇ ಶತಮಾನದಲ್ಲಿ ಈ ಹಳ್ಳಿಯ ಹೆಸರು 'ಸೆಟ್ಟಿಯಕೆಱೆ' ಎಂದಿದ್ದು 'ಶ್ರೀಭರಿತಪ್ರಕಾಶಪುರಿ' ಎಂಬ ಅಭಿದಾನವನ್ನೂ ಹೊಂದಿತ್ತು. ಸೆಟ್ಟಿಕೆರೆಯಲ್ಲಿ ಕುಮಾರವ್ಯಾಸನ ಕಾಲದ ತಾಳೆಗರಿ ಹಸ್ತಪ್ರತಿಗಳು ದೊರಕಿರುತ್ತದೆ.

ಊರಿನ ಪಶ್ಚಿಮದಲ್ಲಿರುವ ಯೋಗನಾಥ (ಯೋಗಾಮಾಧವ) ದೇವಾಲಯವು ಹೊಯ್ಸಳ ದೊರೆ ಭುಜಬಲ ಮುಮ್ಮಡಿ ನರಸಿಂಹನ ಕಾಲದ್ದಾಗಿದೆ, ಈತನ ಮಹಾಪ್ರಧಾನ ಗೋಪಾಲ ದಂಡನಾಯಕನು ಪ್ರಸನ್ನ ಯೋಗನಾಥ ದೇವರನ್ನು ಸ್ಥಾಪಿಸಿ ದೇಗುಲದ ಕಾರ್ಯ ನಿರ್ವಹಣೆಗೆ ದಾನ ದತ್ತಿಗಳನ್ನು ನೀಡಿರುವನು. ನಂತರದಲ್ಲಿ ವಿಜಯನಗರ ಮತ್ತು ಚಿಕ್ಕನಾಯಕನಹಳ್ಳಿ ಪಾಳೆಯಗಾರರ ಕಾಲದಲ್ಲಿ ಈ ದೇವಾಲಯ ಹಲವು ಸೇರ್ಪಡೆಗಳನ್ನೊಳಗೊಂಡಿದೆ. ಯೋಗನಾಥ ಗುಡಿಯು ಅಂತರಾಳ ಹಾಗೂ ಮೂರು ಗರ್ಭಾಂಕಣಗಳನ್ನು ಹೊಂದಿದೆ. ಪಶ್ಚಿಮದ ಸುಕನಾಸಿ, ಒಳಗಿನ ನವರಂಗ ಹಾಗೂ ಮುಖಮಂಟಪ ಹೊಯ್ಸಳರ ಕಾಲದ್ದಾಗಿದೆ. ನಂತರದ ಕಾಲದಲ್ಲಿ ಮುಖಮಂಟಪದ ಜಗತಿಯನ್ನು ತೆಗೆದು ಹೊರಗಿನ ನವರಂಗವನ್ನು ಸೇರಿಸಲಾಗಿದೆ. ಈ ನವರಂಗದ ದಕ್ಷಿಣದಲ್ಲಿ ಒಂದು ಸಣ್ಣ ಗರ್ಭಗುಡಿ, ಪೂರ್ವ ಮತ್ತು ಉತ್ತರದಲ್ಲಿ ಎರಡು ದ್ವಾರ ಹಾಗೂ ಮಹಾದ್ವಾರಗಳು ನಂತರದ ಸೇರ್ಪಡೆಯಂತೆ ಕಂಡು ಬರುತ್ತದೆ. ದೇವಾಲಯದ ಎದುರುಗಡೆ ಕಣಶಿಲೆಯಲ್ಲಿ ಮಾಡಿರುವ ೩೫ ಅಡಿ ಎತ್ತರದ ಗರುಡ ಸ್ತಂಭವಿದೆ.

ಯೋಗನಾಥ ದೇವಾಲಯವು ತ್ರಿಕೂಟವಾಗಿದ್ದು ಹೊಯ್ಸಳ ಶೈಲಿಯಲ್ಲಿದೆ. ನಕ್ಷತ್ರಾಕಾರದ ಜಗತಿಯ ಮೇಲೆ ಈ ದೇಗುಲ ನಿರ್ಮಿತವಾಗಿದ್ದು, ದೇವಾಲಯದ ಭಿತ್ತಿ ಐದು ಪಟ್ಟಿಕೆಗಳನ್ನು ಹೊಂದಿದೆ. ಒಳಭಾಗದ ಶಿಲ್ಪಾಲಂಕರಣವು ವಿಶಿಷ್ಟವಾಗಿದ್ದು, ಬಾಗಿಲುವಾಡದ ಪಟ್ಟಿಕೆಯಲ್ಲಿ ಶ್ರೀ ವೈಷ್ಣವ ಉಬ್ಬುಶಿಲ್ಪಗಳಿವೆ. ಗರ್ಭಾಂಕಣದಲ್ಲಿರುವ ಯೋಗನಾಥ, ವೇಣುಗೋಪಾಲ, ಲಕ್ಷ್ಮೀನಾರಾಯಣ ಹಾಗೂ ನವರಂಗದಲ್ಲಿರುವ ದ್ವಾರಪಾಲಕರ ಉಬ್ಬುಶಿಲ್ಪಗಳ, ಜೊತೆಗೆ ದೇವಕೋಷ್ಠಕದಲ್ಲಿರುವ ಗಣಪತಿ, ಮಹಿಷಮರ್ಧಿನಿ ಹಾಗೂ ಅಂತರಾಳದಲ್ಲಿರುವ ಚತುರ್ಭುಜದೇವಿ ಶಿಲ್ಪಗಳು ಹೊಯ್ಸಳ ಶೈಲಿಯಲ್ಲಿವೆ. ರಾಮಾನುಜಾಚಾರ್ಯ ಹಾಗೂ ನಮ್ಮಾಳ್ವಾರ್ ಶಿಲ್ಪಗಳು ವಿಜಯನಗರ ಹಾಗೂ ಪಾಳೆಯಗಾರರ ಕಾಲದ ಶಿಲ್ಪಗಳಂತಿವೆ. ಇಲ್ಲಿನ ಯೋಗನಾಥ ವಿಗ್ರಹವು ಪ್ರತಿಮಾ ಲಕ್ಷಣಶಾಸ್ತ್ರ ಹಾಗೂ ಧಾರ್ಮಿಕ ವಿಧಿ ವಿಧಾನದನ್ವಯ ಅಮೂಲ್ಯ ಬಿಂಬವೆಂದೇ ಹೇಳಬೇಕು.

ಇಲ್ಲಿಯ ಶಾಸನವೊಂದು ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವಿಚಾರಗಳನ್ನೊಳಗೊಂಡಿದ್ದು, ಮಹಾಜನ ಹಾಗೂ ನಂಬಿರು; ಪರಿಚಾರಕವರ್ಗದ ಸಿಂಗಾರಿ, ಪರಿಚಾರಕ, ಬಾಣಸಿಗ, ದವರಿಗ, ಅಂಘರಿಕ, ಮಾಲೆಗಾರ, ಬಾಹ್ಯ, ಗಾಣಿಗ, ಕುಂಬಾರ, ಅಗಸ, ತಳವಾರ ಮುಂತಾದವರು ದೇವಾಲಯದ ಕಾರ್ಯನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಅಂಶವನ್ನು ವಿವರವಾಗಿ ತಿಳಿಸುತ್ತದೆ. ಇಲ್ಲಿರುವ ರಂಗನಾಥ ಮತ್ತು ಹನುಮಂತ ದೇವಾಲಯಗಳು ಪಾಳೆಯಗಾರರ ಕಾಲದ ರಚನೆಗಳಾಗಿವೆ.

**ಹಂದನಕೆರೆ (ಜನಸಂಖ್ಯೆ. ೩,೯೦೩):** ಚಿಕ್ಕನಾಯಕನಹಳ್ಳಿ ತಾಲೂಕಿನ ಒಂದು ಹೋಬಳಿ ಕೇಂದ್ರವಾಗಿದ್ದು, ಊರಿನ ಈಶಾನ್ಯ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಕೆರೆಗಳಿವೆ. ದಕ್ಷಿಣದ ಕೆರೆಯ ನೀರನ್ನು ಕೋಟೆಯ ಕಂದಕಕ್ಕೆ ಬಿಟ್ಟು, ಶತ್ರುಗಳಿಂದ ರಕ್ಷಣೆ ಪಡೆಯುತ್ತಿದ್ದರೆಂದು ತಿಳಿಯುತ್ತದೆ. ಕೋಟೆಗೆ ಎರಡು ಬಾಗಿಲುಗಳಿದ್ದು, ಒಂದು ಪಶ್ಚಿಮದಲ್ಲಿ ಇನ್ನೊಂದು ದಕ್ಷಿಣದಲ್ಲಿ ಪಶ್ಚಿಮಾಭಿಮುಖವಾಗಿದೆ. ಹೆಬ್ಬಾಗಿಲಿಗೆ ನೇರವಾಗಿ ವಿಘ್ನೇಶ್ವರನ ದೇವಾಲಯ ಹಾಗೂ ಎರಡನೇ ಬಾಗಿಲಿನ ಎದುರುಗಡೆ ಹನುಮಂತನ ದೇವಾಲಯವಿದೆ. ಈ ದೇವಾಲಯಗಳು ಜೀರ್ಣೋದ್ಧಾರಗೊಂಡಿವೆ.

ಈ ಊರಿನಲ್ಲಿ ಇನ್ನೂ ಹಲವು ದೇವಾಲಯಗಳಿದ್ದು, ಅವುಗಳಲ್ಲಿ ಸಪ್ತಲಿಂಗಗಳ ದೇವಾಲಯಗಳು ವಿಶೇಷವಾಗಿವೆ. ಇಲ್ಲಿ ಗೌರೀಶ್ವರ, ಸಂಗಮೇಶ್ವರ, ಪ್ರಭುಲಿಂಗೇಶ್ವರ, ಗಂಗಾಧರೇಶ್ವರ, ಹರಿಹರೇಶ್ವರ, ಭೈರವೇಶ್ವರ ಮತ್ತು ಅರ್ಕೇಶ್ವರ ದೇವಾಲಯಗಳಿವೆ. ಗಂಗಾಧರೇಶ್ವರ ದೇವಾಲಯವು ಭವ್ಯವಾಗಿದ್ದು, ಇಲ್ಲಿ ಕೋಟೆ ಹಾಗೂ ಅರಮನೆ ಇದ್ದುದಾಗಿ ತಿಳಿಯುತ್ತದೆ. ಹಂದನಕೆರೆಯನ್ನು ಹೊಯ್ಸಳ ದೊರೆ ನರಸಿಂಹನು ಅಗ್ರಹಾರವನ್ನಾಗಿ ಮಾಡಿದ್ದನೆಂದು ತಿಳಿಯುತ್ತದೆ. ಇಲ್ಲಿನ ಕೋಟೆರಾಯ ದೇವಾಲಯದಲ್ಲಿ ಅನೇಕ ಶಿಲಾಮೂರ್ತಿಗಳಿವೆ. ಇವುಗಳ ಜೊತೆಗೆ ಕಾಳಿಕಾಂಬ, ಬನಶಂಕರಿ, ಕಣ್ಣಪ್ಪ, ದುರ್ಗಾಂಬ, ಆಂಜನೇಯ ಮೊದಲಾದ ಇನ್ನಿತರ ಮಂದಿರಗಳೂ ಇವೆ. ಬೇಸಿಗೆಯಲ್ಲಿ ಜಾತ್ರೆ, ಉತ್ಸವ ಮತ್ತು ನಾಟಕಗಳ ಪ್ರಯೋಗಗಳು ನಡೆದು ಎಲ್ಲಾ ಕೋಮಿನ ಜನರೂ ಒಟ್ಟುಗೂಡಿ ಎಲ್ಲಾ ಕಾರ್ಯಗಳಲ್ಲಿಯೂ ಭಾಗವಹಿಸುತ್ತಾರೆ. ಇಲ್ಲಿ ಸಿದ್ಧರಮಠ, ತರಳಬಾಳುಮಠ, ರೇವಣಸಿದ್ದೇಶ್ವರಸ್ವಾಮಿಮಠ ಮುಂತಾದ ಮಠಗಳಿವೆ.

**ಹಟ್ಣ (ಜನಸಂಖ್ಯೆ. ೧,೩೦೪):** ತಿಪಟೂರಿನಿಂದ ಪೂರ್ವಕ್ಕೆ ೧೮ ಕಿ.ಮೀ. ಹಾಗೂ ಕಿಬ್ಬನಹಳ್ಳಿ ಕ್ರಾಸ್‌ನಿಂದ ಒಂದು ಕಿ.ಮೀ. ಉತ್ತರಕ್ಕಾದಂತೆ, ಚಿಕ್ಕನಾಯನಹಳ್ಳಿ–ತುರುವೇಕೆರೆ ರಸ್ತೆಯಲ್ಲಿದೆ. ಇಲ್ಲಿ ಹೊಯ್ಸಳ ವಿನಯಾದಿತ್ಯನ ಕ್ರಿ.ಶ. ೧೦೭೮ರ ಶಿಲಾಶಾಸನ ದೊರೆತಿದೆ. ಇದು ಜಿಲ್ಲೆಯಲ್ಲಿ ದೊರೆತಿರುವ ಹೊಯ್ಸಳರ ಮೊದಲ ಶಾಸನವಾಗಿದ್ದು, ಜಿನಾಲಯವನ್ನು ನಿರ್ಮಿಸಲಾಯಿತೆಂದು ತಿಳಿದು ಬರುತ್ತದೆ. ಹಾಗಲವಾಡಿ ಪಾಳೆಯಗಾರ ಮುದಿಯಪ್ಪನಾಯಕನು ಶ್ರೀಮತ್ ಗುರುಬಸವರಾಜದೇವರಿಗೆ ಮಠವನ್ನು ನಿರ್ಮಿಸಿ, ಭೂಧಾನವಾಗಿ ಗದ್ದೆಯನ್ನು ನೀಡಿದ ವಿವರಣೆಯ ಮತ್ತೊಂದು ಶಾಸನ, ಬಸ್ತಿಯ ಹಿತ್ತಲಿನಲ್ಲಿ ದೊರೆತಿದೆ. ಗ್ರಾಮ ದೇವತೆ 'ಹಟ್ಣದಮ್ಮ'ನ ಜಾತ್ರೆಯು ಪ್ರತೀವರ್ಷ ವಿಜೃಂಭಣೆಯಿಂದ ನಡೆಯುತ್ತದೆ.

**ಹತ್ಯಾಳು:** ಇದು ತಿಪಟೂರು ತಾಲೂಕಿನಲ್ಲಿರುವ ಒಂದು ಬೆಟ್ಟವಾಗಿದೆ. ಹೊನ್ನಾವರ–ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ತುಮಕೂರು ಕಡೆಗೆ ಕಿಬ್ಬನಹಳ್ಳಿ ಕ್ರಾಸ್‌ನಿಂದ ಐದು ಕಿ.ಮೀ. ದೂರದಲ್ಲಿದೆ. ಇಲ್ಲಿನ ಬೆಟ್ಟದ ಮೇಲ್ಭಾಗದಲ್ಲಿ ದಶಭುಜದ ಉಗ್ರನರಸಿಂಹಸ್ವಾಮಿಯ ದೇವಾಲಯವಿದೆ. ಮೂಲಮೂರ್ತಿಯನ್ನು ಕಂಬದ ಉಗ್ರನರಸಿಂಹನೆಂದು ಕರೆಯುತ್ತಾರೆ. ವಿಗ್ರಹ ನಾಲ್ಕು ಅಡಿ ಎತ್ತರವಿದ್ದು, ಹತ್ತು ಕೈಗಳನ್ನೊಳಗೊಂಡಿದೆ. ಈ ದೇವಾಲಯದ ಜಾತ್ರೆಯು ಚೈತ್ರ ಮಾಸದಲ್ಲಿ ನಡೆಯುತ್ತದೆ. ಈ ಊರನ್ನು 'ರಜತಾದ್ರಿಪುರ'ವೆಂದೂ ಕರೆಯುತ್ತಾರೆ. ಬೆಟ್ಟದ ಸುತ್ತಮುತ್ತಲ ಪ್ರದೇಶದಲ್ಲಿ ಸೂಕ್ಷ್ಮ ಶಿಲಾಯುಗ ಮತ್ತು ನೂತನ ಶಿಲಾಯುಗ ಸಂಸ್ಕೃತಿಯ ಕುರುಹುಗಳು ಪತ್ತೆಯಾಗಿವೆ.

**ಹರಳೂರು (ಜನಸಂಖ್ಯೆ. ೯೨೦):** ತುಮಕೂರಿಗೆ ಆರು ಕಿ.ಮೀ ಅಂತರದಲ್ಲಿ ಕ್ಯಾತ್ಸಂದ್ರದಿಂದ ದಕ್ಷಿಣಕ್ಕಾದಂತಿದೆ. ಇಲ್ಲಿನ ಸ್ಥಳ ಪುರಾಣದಂತೆ ಈ ಊರನ್ನು **'ಕುಸುಮಪುರಿ'** ಎಂದು ಕರೆಯಲಾಗುತ್ತಿತ್ತು. ಹೂಗಳು ಹರಳುವ ಸ್ಥಳವಾದ್ದರಿಂದ **'ಹರಳೂರು'** ಎಂದಾಯಿತೆಂದು ಹೇಳಲಾಗುತ್ತದೆ. ಇಲ್ಲಿ ಚನ್ನಕೇಶವ, ಈಶ್ವರ ಹಾಗೂ ವೀರಭದ್ರನ ದೇವಾಲಯಗಳಿವೆ. ಪೂರ್ವಾಭಿಮುಖನಾಗಿ ನಿಂತಿರುವ ಈಶ್ವರ ದೇವಾಲಯವು ವಿಜಯನಗರ ಶೈಲಿಯಲ್ಲಿದ್ದು, ಕಲ್ಲುಚಪ್ಪಡಿಗಳನ್ನು ಬಳಸಿ ನಿರ್ಮಿಸಿರುವ ಬೃಹತ್ ದೇಗುಲವಾಗಿದ್ದು, ಶಿವಲಿಂಗ ಹಾಗೂ ನಂದಿಗಳಿವೆ ದೇವಾಲಯದಲ್ಲಿ ಎರಡು ಶಿಲಾಶಾಸನಗಳಿದ್ದು, ಹೊಯ್ಸಳ ರಾಮನಾಥನ ಆಳ್ವಿಕೆಯಲ್ಲಿ ಹೊಂನಸಿಗೆರೆಯ ಹೊಂನಮಾರಗವುಡನು ತಾಯಿ ಶ್ರೀಕಾಚಿಗವುಡಿಯ ಹೆಸರಿನಲ್ಲಿ ಕಾಚಿಸಮುದ್ರವೆಂಬ ಕೆರೆಯನ್ನು ಕಟ್ಟಿಸಿ, ಭೂಮಿಯನ್ನು ದಾನ ನೀಡಿರುವ ವಿವರವನ್ನೊಳಗೊಂಡಿದೆ. ವೀರಭದ್ರ ದೇವಾಲಯದ ಮೂಲ ವಿಗ್ರಹವು ಐದು ಅಡಿ ಎತ್ತರವಿದ್ದು, ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗಿದೆ. ವಿಜಯನಗರದ ಅಚ್ಯುತರಾಯನ ಆಳ್ವಿಕೆಯಲ್ಲಿ ಈ ದೇವಾಲಯಕ್ಕೆ ಪುದುವಟ್ಟನ್ನು ನೀಡಿರುವ ವಿವರ ದೊರಕುತ್ತದೆ. ಚನ್ನಕೇಶವಸ್ವಾಮಿ ದೇವಾಲಯದ ಮುಂಭಾಗದಲ್ಲಿರುವ ಗರುಡಗಂಬವು ಸುಮಾರು ೫೦ ಅಡಿ ಎತ್ತರವಿದೆ.

**ಹಾಗಲವಾಡಿ (ಜನಸಂಖ್ಯೆ. ೩,೭೮೫):** ತಾಲೂಕು ಕೇಂದ್ರ ಗುಬ್ಬಿಯಿಂದ ವಾಯವ್ಯಕ್ಕೆ ೨೫ ಕಿ.ಮೀ. ದೂರದಲ್ಲಿರುವ ಹೋಬಳಿ ಕೇಂದ್ರವಾಗಿ. ಹಿಂದೊಮ್ಮೆ ರಾಜಧಾನಿಯಾಗಿದ್ದ ಗ್ರಾಮ. ವೀರಶೈವ ಅನುಯಾಯಿಗಳಾಗಿದ್ದ ಹಾಗಲವಾಡಿ ಪಾಳೆಯಗಾರರು, ಇಲ್ಲಿ ತಮ್ಮ ಪಾಳೆಯಪಟ್ಟನ್ನು ಸ್ಥಾಪಿಸಿ, ೩೦೦ ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದರು. ಈ ಸ್ಥಳವು ಅದಕ್ಕೂ ಮೊದಲು ಪ್ರಮುಖತೆ ಹೊಂದಿದ್ದಿತೆಂಬುದಕ್ಕೆ ಸಾಕಷ್ಟು ಪುರಾವೆಗಳು ದೊರಕುತ್ತವೆ. ಆ ಕಾಲದ ಕೋಟೆ, ಪ್ರವೇಶದ್ವಾರ, ಬತೇರಿ, ದೇವಾಲಯ, ಮಂಟಪ, ಭಿತ್ತಿಚಿತ್ರ, ಗದ್ದುಗೆ, ಮಠ, ಮೊದಲಾದವುಗಳಿಲ್ಲಿವೆ.

ಮೊದಲನೆ ಮುದಿಯಪ್ಪನಾಯಕ ಹಾಗಲದಹಳ್ಳಿಯನ್ನು ಗೆದ್ದುಕೊಂಡು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಆನಂತರ ಹಾಗಲವಾಡಿಯಾಯಿತು. ಮುಂದೆ ರಣದುಲ್ಲಾಖಾನನ ದಾಳಿಯಿಂದಾಗಿ ಚಿಕ್ಕನಾಯಕನಹಳ್ಳಿಗೆ ತಮ್ಮ ಆಡಳಿತಕೇಂದ್ರವನ್ನು ಇವರು ವರ್ಗಾಯಿಸಬೇಕಾಗಿ ಬಂತೆಂದು ತಿಳಿದುಬರುತ್ತದೆ.

ಇಲ್ಲಿ ಸೋಮೇಶ್ವರ ದೇವಾಲಯ, ಚನ್ನಕೇಶವ ವಿಗ್ರಹ ಹಾಗೂ ವೀರಗಲ್ಲುಗಳಿವೆ. ಊರಿನ ಪೂರ್ವ ಹಾಗೂ ಪಶ್ಚಿಮ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿವೆ. ಪೂರ್ವದ ಬಾಗಿಲಿನ ಸಮೀಪ, ಸ್ವಲ್ಪ ಎತ್ತರದ ಗೋಡೆ ಹಾಗೂ ಚೌಕಾಕಾರದ ಬುರುಜು ಇದೆ. ಇದು ಮುಖ್ಯ ಪ್ರವೇಶವಾಗಿದ್ದು, ಹೆಚ್ಚು ಅಲಂಕರಣಗೊಳಿಸಿ ಗಾರೆಗಚ್ಚಿನಲ್ಲಿ ಶಿಲ್ಪಗಳನ್ನು ರೂಪಿಸಲಾಗಿದ್ದಿತು. ಆದರೆ ಈಗ ಅವು ನಶಿಸಿವೆ. ಬಾಗಿಲುವಾಡವು ಅಲಂಕೃತವಾಗಿದ್ದು, ದಿಡ್ಡಿಬಾಗಿಲನ್ನು ಹೊಂದಿದೆ. ಒಳಭಾಗದ ಮಂಟಪದ ಕಂಬಗಳಲ್ಲಿ ಗಣಪತಿ ಮತ್ತು ಹನುಮಂತನ ಶಿಲ್ಪಗಳನ್ನು ಬಿಡಿಸಲಾಗಿದೆ. ಮೇಲ್ಭಾಗದಲ್ಲಿ ಎತ್ತರವಾದ ಚೌಕಾಕಾರದ ಬುರು ಉಳಿದಿದೆ. ಅಲ್ಲಲ್ಲಿ ಅಳಿದುಳಿದ ಬತೇರಿ ಮತ್ತು ಆಳ್ವೇರಿಗಳು ಕಂಡುಬರುತ್ತವೆ. ಕೋಟೆಯನ್ನು ನಿರ್ಮಿಸಲು ಕಿರುಗಾತ್ರದ ಕಲ್ಲುಗಳನ್ನು ಬಳಸಲಾಗಿದೆ.

ಊರಿನಲ್ಲಿ ಪ್ರಮುಖವಾಗಿ ರುದ್ರೇಶ್ವರ ಮತ್ತು ಚೆನ್ನಕೇಶವ ದೇವಾಲಯ; ಊರಿನ ಹೊರಗೆ ಸೋಮೇಶ್ವರ, ಶಂಕರಲಿಂಗ, ಬಿಸಿಲಮಲ್ಲಪ್ಪ, ಕತ್ತಲೆಮಲ್ಲಪ್ಪ, ಕರಿಯಮ್ಮ, ಕೆಂಪಮ್ಮ ದೇವಾಲಯಗಳು; ಮತ್ತು ಕೆರೆಯ ಮೇಲೆ ಹನುಮಂತ ದೇವಾಲಯಗಳಿವೆ.

ಸೋಮೇಶ್ವರ ದೇವಾಲಯವು ಪ್ರಾಚೀನದಾಗಿದ್ದು, ದೇವಾಲಯದ ಎರಡು ಕಂಬ ಮತ್ತು ಬಾಗಿಲುವಾಡ ಮಾತ್ರವಿದೆ. ಈಗ ಇಲ್ಲಿ ಬಸವ ಮತ್ತು ವೀರಭದ್ರ ಶಿಲ್ಪಗಳಿವೆ. ದ್ವಾರಬಂಧದ ಲಲಾಟದಲ್ಲಿ ಶಿವಲಿಂಗವಿದೆ. ಇಲ್ಲಿನ ರಾಮೇಶ್ವರದೇವರು ಈಗ ಇಲ್ಲ, ರುದ್ರೇಶ್ವರ ದೇವಾಲಯವು ಗರ್ಭಗೃಹ, ಅಂತರಾಳಗಳನ್ನು ಹೊಂದಿದ್ದು, ಒಂದು ಅಂಕಣದಲ್ಲಿ ರುದ್ರೇಶ್ವರನ ಬಿಂಬವಿದೆ. ಚನ್ನಕೇಶವ ದೇವಾಲಯವನ್ನು ಪಾಳೆಯಗಾರರು ನಿರ್ಮಿಸಿರುವರು. ಸ್ವಲ್ಪ ಎತ್ತರದ ಜಗತಿಯ ಮೇಲೆ ನಿರ್ಮಾಣಗೊಂಡಿದ್ದು, ಗರ್ಭಗೃಹ ಮಾತ್ರವಿದ್ದು, ಉಳಿದ ಭಾಗ ನಿರ್ಮಾಣವಾಗಿಲ್ಲ. ಗರ್ಭಗೃಹವು ನಾಲ್ಕು ಗೋಡೆಕಂಬಗಳನ್ನು ಹೊಂದಿದ್ದು, ಛಾವಣಿಯನ್ನು ಎತ್ತಿ ಹಿಡಿದಿದೆ. ದ್ವಾರಬಂಧವು ಪೂರ್ಣಕುಂಬ ಕಲಶಗಳನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಗರ್ಭಗೃಹದಲ್ಲಿ ಹೊಯ್ಸಳ ಶೈಲಿಯ ಚನ್ನಕೇಶವನಮೂರ್ತಿಯನ್ನು ಸ್ಥಾಪಿಸಲಾಗಿದೆ. ಗರ್ಭಗೃಹದ ಮೇಲ್ಛಾವಣಿಯಲ್ಲಿ ನಕ್ಷತ್ರಾಕಾರದ ಶಿಲ್ಪವನ್ನು ಬಿಡಿಸಲಾಗಿದೆ ಯಾವುದೇ ಗೋಪುರವಿಲ್ಲ. ಕೆರೆಯ ಏರಿಯ ಹಿಂದಿರುವ ಗುರುಪಾದಸ್ವಾಮಿಗಳ ಗದ್ದುಗೆಯ ಸಮೀಪವೇ ಮಠವೂ ಇದೆ. ಇಲ್ಲಿ ವೇದಪಾಠಶಾಲೆ ಮತ್ತು ಪಾಕಶಾಲೆ ಎಂದು ಕರೆಯುವ ಎರಡು ನಿರ್ಮಿತಿಗಳಿವೆ. ಪಶ್ಚಿಮ ಪ್ರವೇಶವನ್ನು ಹೊಂದಿದ್ದು, ದ್ವಾರದ ಮೇಲ್ಭಾಗವು ನಂದಿ ಶಿಲ್ಪವನ್ನು ಹೊಂದಿದೆ. ವೇದಪಾಠಶಾಲೆ ಪ್ರಮುಖ ಕಟ್ಟಡವಾಗಿದ್ದು, ವಿಸ್ತೃತವಾಗಿದೆ. ಇಲ್ಲಿ ಕೈಸಾಲೆ, ಜಗತಿ ಮತ್ತು ಮುಚ್ಚಿದ ಮೂರು ಅಂಕಣಗಳಿವೆ. ಇಲ್ಲಿರುವ ಕಂಬಗಳಲ್ಲಿ ಉಬ್ಬು ಶಿಲ್ಪಗಳಿದ್ದು, ವೃಷಭ, ಸ್ತ್ರೀ, ಪುರುಷ, ಚಾಮರಧಾರಿಣಿ, ವ್ಯಾಳ, ಆನೆ, ನವಿಲು ಮತ್ತು ಬಳ್ಳಿಯ ಕೆತ್ತನೆಗಳಿವೆ. ಪಾಠಶಾಲೆಯೂ ಹಲವು ಕಂಬಗಳನ್ನು ಹೊಂದಿದ್ದು, ಮೇಲೆ ಉಬ್ಬುಶಿಲ್ಪಗಳಿವೆ.

ಹಾಗಲವಾಡಿ ನಾಯಕರ ಗುರುಗಳಾದ ಗುರುಪಾದಸ್ವಾಮಿಗಳ ಗದ್ದುಗೆ ಗುಡಿಯು ಉತ್ತರಾಭಿಮುಖವಾಗಿದೆ, ಇದರಲ್ಲಿ ಗರ್ಭಗೃಹ, ಅಂತರಾಳ, ರಂಗಮಂಟಪ ಮತ್ತು ಮುಖಮಂಟಪಗಳಿವೆ. ಇಲ್ಲಿರುವ ಎಲ್ಲಾ ಕಂಬಗಳೂ ಉಬ್ಬುಶಿಲ್ಪಗಳನ್ನು ಹೊಂದಿವೆ. ಗರ್ಭಗೃಹದಲ್ಲಿ ಗದ್ದುಗೆ ಇದ್ದು, ಗಾರೆಗಚ್ಚಿನ ಹಲವು ಶಿಲ್ಪಗಳನ್ನು ಹೊಂದಿದೆ. ಇಲ್ಲಿ ಹಿಂದೆ ಮಹತ್ತಿನಮಠ, ಕಂತೇಸ್ವಾಮಿಮಠ, ಒಪ್ಪತ್ತೈಯನಮಠ, ಕಣಗೀಲುಮಠ, ನಿರಂಜನಸ್ವಾಮಿಮಠ, ಲಿಂಗಪ್ಪನವರಮಠ, ಮುದ್ದುವೀರಸ್ವಾಮಿಮಠ, ವಿರಕ್ತಮಠ, ದಾಸೋಹಮಠ, ಸಿದ್ಧಪ್ಪನವರಮಠ ಮೊದಲಾದ ಮಠಗಳಿದ್ದವು.

ಇಲ್ಲಿರುವ ಅರಮನೆ ಆಯಾಕಾರವಾಗಿದ್ದು, ಐದು ಕೋಣೆಗಳನ್ನು ಹೊಂದಿದ್ದು, ತೆರೆದ ಮತ್ತು ತಗ್ಗಾದ ಪ್ರಾಂಗಣವಿದ್ದು ಎರಡು ಬದಿಯಲ್ಲೂ ತೆರೆದ ಪ್ರಾಂಗಣಕ್ಕೆ ಹತ್ತಲು ಮೆಟ್ಟಿಲುಗಳಿವೆ. ಕಲ್ಲಿನ ಪೀಠದಲ್ಲಿ ಕಂಬಗಳನ್ನು ನಿರ್ಮಿಸಿದ್ದು ಸರಳವಾಗಿವೆ. ತೆರೆದ ಪ್ರಾಂಗಣಕ್ಕೆ ಎಡ, ಬಲ ಮತ್ತು ಎದುರುಗಡೆಯಿಂದ ಪ್ರವೇಶದ್ವಾರವಿದೆ. ದ್ವಾರದ ಲಲಾಟವು ಲಿಂಗಮುದ್ರೆ ಹಾಗೂ ಗಣಪತಿಯ ಉಬ್ಬುಶಿಲ್ಪಗಳನ್ನು ಹೊಂದಿದೆ. ದ್ವಾರಕ್ಕೆ ಯಾವುದೇ ಅಲಂಕರಣವಿಲ್ಲ. ಅರಮನೆಗೆ ಸುತ್ತಲೂ ಭದ್ರಕೋಟೆ ಇದ್ದು, ನಾಲ್ಕು ಮೂಲೆಗಳಲ್ಲೂ ಬುರುಜುಗಳಿವೆ. ಇದೇ ಕಾಲದ, ಉಬ್ಬುಶಿಲ್ಪ ಹಾಗೂ ಲೋಹಶಿಲ್ಪಗಳು ಇಲ್ಲಿ ಕಂಡುಬಂದಿವೆ.

ಪಾಳೆಯಗಾರರು ಸಾಹಿತ್ಯಾಭಿವೃದ್ಧಿಗೂ ಪ್ರೋತ್ಸಾಹ ನೀಡಿದ್ದು, ವಚನ ಸಾಹಿತ್ಯ ರಚನೆಗೆ ಶ್ರಮಿಸಿರುವರು. ಇಮ್ಮಡಿ ಮುದ್ದುವೀರಸ್ವಾಮಿಯು ಸ್ವತಃ ಕವಿ, ಅನುಭಾವಿ ಹಾಗೂ ಆಧ್ಯಾತ್ಮಿಯೂ ಆಗಿದ್ದನು. ದೊರೆಯಾದ ದೊಡ್ಡಸಿದ್ಧರಾಮಪ್ಪನಾಯಕನು ಸಹ ಬರಹಗಾರನಾಗಿದ್ದನು. ಇದೇ ರೀತಿ ಬೆಂಗಳೂರು ಮುದ್ವೀರಸ್ವಾಮಿ ಹಾಗೂ ಸೋಸಲೆ ರೇವಣಾರಾಧ್ಯ ಮೊದಲಾದ ಕವಿಗಳು ಸಾಹಿತ್ಯ ಸೇವೆ ಸಲ್ಲಿಸಿರುವರು. ಇಲ್ಲಿನ ಭಗ್ನ ಆಲಯವೊಂದರಲ್ಲಿ ಭಿತ್ತಿಚಿತ್ರಗಳಿದ್ದುದಾಗಿ ತಿಳಿಯುತ್ತದೆ. ಹಾಗಲವಾಡಿಯು ಜಾನಪದ ವೃತ್ತಿ ಗಾಯಕರಿಗೂ ಪ್ರಸಿದ್ಧವಾಗಿದ್ದು, ಅವರನ್ನು ಜುಂಜಪ್ಪ ಎಂದು ಕರೆಯುವರು. ಇವರು 'ಹಾಗಲವಾಡಿ ಜುಂಜಪ್ಪ' ಎಂದು ಪ್ರಸಿದ್ಧಿ ಹೊಂದಿದ್ದು, ಧಾರ್ಮಿಕ ವೃತ್ತಿಗಾಯಕರಾಗಿ ಹಾಡುತ್ತಾ ಬಿಕ್ಷಾಟನೆ ನಡೆಸುವರು. ಇವರ ಕುಲದೈವ ಜುಂಜಪ್ಪ.

**ಹಿರೇಗುಂಡಗಲ್ಲು (ಜನಸಂಖ್ಯೆ ೧,೨೦೩):** ತುಮಕೂರು ತಾಲೂಕಿನ ಒಂದು ಗ್ರಾಮವಾಗಿದ್ದು, ತುಮಕೂರು-ಮಧುಗಿರಿ ರಸ್ತೆಯಲ್ಲಿ ಈಶಾನ್ಯಕ್ಕೆ ೧೦ ಕಿ.ಮೀ. ದೂರದಲ್ಲಿದೆ. ಗ್ರಾಮದಪ್ರವೇಶದಲ್ಲಿ ಹಿರಿದಾದ ಗುಂಡಿನ ಬೆಟ್ಟವೊಂದಿರುವುದರಿಂದ ಈ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಬೆಟ್ಟದ ತಪ್ಪಲಿನಲ್ಲಿ ಸೂಕ್ಷ್ಮ ಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ದೊರೆತಿದ್ದು, ಹಲವಾರು ಮಾದರಿಯ ಶಿಲೋಪಕರಣಗಳನ್ನು ಸಂಗ್ರಹಿಸಲಾಗಿದೆ. ಬೃಹತ್ ಶಿಲಾಯುಗದ ವಾಸ್ತವ್ಯದ ನೆಲೆ ಇಲ್ಲಿದ್ದು, ಕೆಂಪು, ಕಪ್ಪು ಹಾಗೂ ಕಪ್ಪು-ಕೆಂಪು ದ್ವಿವರ್ಣದ ವಿವಿಧ ಮಾದರಿಯ ಮಡಕೆಯ ಚೂರುಗಳು ದೊರೆತಿವೆ.

ಇಲ್ಲಿ ಇಪ್ಪತ್ತಕ್ಕೂ ಹೆಚ್ಚು ವೀರಗಲ್ಲುಗಳಿದ್ದು, ಇವು ಗಂಗ ಮನೆತನದ ಸ್ಮಾರಕಗಳಾಗಿದ್ದು, ಗಂಗರ ದೊರೆಗಳಾದ ಶ್ರೀಪುರಷ ಮತ್ತು ಶಿವಮಾರರು ರಾಷ್ಟ್ರಕೂಟರೊಂದಿಗೆ ಮಾಡಿದ ಭಾರಿ ಯುದ್ಧಗಳಲ್ಲಿ ಗತಿಸಿದ ವೀರರ ನೆನಪಿನ ಕಲ್ಲುಗಳಾಗಿವೆ. ಐತಿಹಾಸಿಕವಾಗಿ, ಸಾಮಾಜಿಕವಾಗಿ ಹಾಗೂ ಕಲಾವಂತಿಕೆಯಿಂದಲೂ ಬಹು ಮುಖ್ಯವಾಗಿವೆ. ಈ ವೀರಗಲ್ಲುಗಳು ವಿವಿಧ ಆಕಾರಗಳಲ್ಲಿದ್ದು, ಹಲವು ಮಾದರಿಯ ಯುದ್ಧೋಪಕರಣಗಳು, ಅಲಂಕಾರ ಸಾಮಗ್ರಿಗಳು, ಜೊತೆಗೆ ಆನೆ, ಕುದುರೆ ಮೊದಲಾದ ಪ್ರಾಣಿಗಳ ಬಳಕೆಯನ್ನು ಚಿತ್ರಿಸಲಾಗಿದೆ. ಯುದ್ಧದ ದೃಶ್ಯಗಳನ್ನು ಬಿಡಿಸಿಲಾಗಿದ್ದು, ದಪ್ಪ ಅಕ್ಷರಗಳನ್ನು ಆಳವಾಗಿ ಕೊರೆದ ಪೂರಕ ವಿವರಣೆಯನ್ನುಳ್ಳ ಶಾಸನಗಳಿಲ್ಲಿವೆ.

**ಹುತ್ರಿದುರ್ಗ (ಜನಸಂಖ್ಯೆ ೧,೯೯೦):** ಕುಣಿಗಲ್ ತಾಲೂಕಿನಲ್ಲಿ ಆಗ್ನೇಯಕ್ಕೆ ೧೯ ಕಿ.ಮೀ. ದೂರದಲ್ಲಿದೆ. ಇದು ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಸಮಾಧಿಗಳನ್ನೂ ಹೊಂದಿದೆ. ಹುತ್ತರಿ ಗ್ರಾಮದ ಸಮೀಪವಿರುವ ಕೋಟೆಯೇ ಹುತ್ತರಿದುರ್ಗ. ದೊಡ್ಡ ಬೆಟ್ಟದ ಮೇಲಿರುವ ಕೋಟೆಗೆ ಎಂಟು ಹೆಬ್ಬಾಗಿಲುಗಳಿದ್ದು, ಎಲೆಯೂರು, ಬ್ಯಾಲಿಕಟ್ಟೆ, ಮಾಗಡಿ ಬಾಗಿಲುಗಳು ಹೊರ ಬಾಗಿಲುಗಳಾಗಿವೆ. ಈ ಬಾಗಿಲುಗಳು ಆಯಾ ದಿಕ್ಕಿನಲ್ಲಿರುವ ಊರಿನ ಹೆಸರುಗಳಿಂದ ಕರೆಯಲ್ಪಡುತ್ತಿವೆ. ಇವುಗಳ ಜೊತೆಗೆ ಹೊರಬಾಗಿಲು, ದಿಡ್ಡೀಬಾಗಿಲು, ಕಳ್ಳಗಿಂಡೀ ಬಾಗಿಲುಗಳೂ ಇದೆ. ಈ ದುರ್ಗದ ಶಿಖರವನ್ನು 'ಶಂಕರಕುಂಭಿ' ಎಂದು ಕರೆಯುವರು. ಅಲ್ಲಿಯೇ ಶಂಕರೇಶ್ವರಗುಡಿ ಇದೆ. ಮುಂಭಾಗದಲ್ಲಿ ನೀರಿನ ದೋಣೆಯೊಂದಿದೆ. ಶಂಕರೇಶ್ವರ ಗುಡಿಯಲ್ಲಿ ಶಿವಲಿಂಗವಿದೆ. ಬೆಟ್ಟದ ಬುಡದಲ್ಲಿ ಆದಿನಾರಾಯಣ, ವೀರಭದ್ರ ಮತ್ತು ಆಂಜನೇಯ ದೇವಸ್ಥಾನಗಳಿವೆ.

ಬೆಟ್ಟದ ಸ್ವಲ್ಪ ಮೇಲ್ಭಾಗದಲ್ಲಿ, ಸಮತಟ್ಟು ಪ್ರದೇಶದಲ್ಲಿ ಗ್ರಾಮವಿದ್ದು ಸುತ್ತಲೂ ಕೋಟೆಯಿದೆ. ಮೊದಲ ಹೆಬ್ಬಾಗಿಲು ಎರಡು ಬಲವಾದ ಕೊತ್ತಳಗಳ ನಡುವೆ ಇದ್ದು ಹೊರಗಡೆಯಲ್ಲಿ ನಾಲ್ಕು ಕಂಬಗಳಿವೆ. ಒಂದು ಕಂಬದಲ್ಲಿ ಆಂಜನೇಯ ಶಿಲ್ಪವಿದೆ. ಒಳಬಾಗಿಲು ಹನ್ನೆರಡು ಕಂಬಗಳನ್ನೊಳಗೊಂಡಿದೆ. ಬಾಗಿಲು ಎತ್ತರವಾಗಿದ್ದು, ಚೌಕ ಮತ್ತು ಅಷ್ಟಕೋನಾಕೃತಿಯ ನಾಲ್ಕು ಕಂಬಗಳಮೇಲೆ ಗಣೇಶ, ಬೇಡರಕಣ್ಣಪ್ಪ, ಶಿವಲಿಂಗ, ಯೋಗಿಗಳು ಮತ್ತು ಹೂವಿನ ಶಿಲ್ಪಗಳಿವೆ. ಒಳ ಮಾಳಿಗೆಯ ಮಧ್ಯದಲ್ಲಿ ದೊಡ್ಡ ಕಮಲವನ್ನು ಚಿತ್ರಿಸಲಾಗಿದೆ. ಊರನ್ನು ದಾಟಿ ಉತ್ತರಾಭಿಮುಖವಾಗಿ. ಬೆಟ್ಟವನ್ನೇರುವಾಗ ಎರಡನೇ ಕೋಟೆಬಾಗಿಲು ಸಿಗುತ್ತದೆ. ಚೌಕಾಕಾರದ ಕೊತ್ತಲಗಳಿವೆ. ಒಂದು ಕೊತಲ್ತದ ಮೇಲೆ ಎರಡು ಸಾಲುಗಳಲ್ಲಿ ಏಳು ಕಂಬಗಳನ್ನು ನಿಲ್ಲಿಸಿದ್ದು, ಕಟ್ಟಡ ಹಾಳಾಗಿದೆ. ಅಲ್ಲಲ್ಲಿ ಬಂದೂಕುಕಿಂಡಿಗಳಿವೆ. ಇದೇ ಕೋಟೆಯಲ್ಲಿ ಮತ್ತೊಂದು ಬಾಗಿಲಿನ ಮುಂದೆ ಅಡ್ಡಗೋಡೆಯಿದೆ. ಮಧ್ಯಮ ಗಾತ್ರದ ಕಲ್ಲುಗಳನ್ನು ಮಾತ್ರ ಬಳಸಿ ಕಟ್ಟಿದ ಮೂರನೇ ಕೋಟೆಯಲ್ಲಿ ಕೊತ್ತಲಗಳು ವೃತ್ತಾಕಾರವಾಗಿವೆ. ಪ್ರವೇಶ ದ್ವಾರದ ಬಾಗಿಲಲ್ಲಿ ನಾಲ್ಕು ಕಂಬಗಳಿವೆ. ಮುಂಭಾಗದ ತೊಲೆಯ ಮೇಲೆ

ಹೂ ಮತ್ತು ಮೀನುಗಳ ಉಬ್ಬು ಕೆತ್ತನೆಯಿದೆ. ಕೋಟೆಯೊಳಗೆ ನಾಲ್ಕು ಕಂಬದ ಮಂಟಪವಿದೆ. ನಾಲ್ಕನೆಯ ಸುತ್ತಿನ ಕೋಟೆಯಿಂದ ಎಂಟನೆಯ ಬಾಗಿಲಿನವರೆವಿಗೂ ಮಂಟಪ, ದ್ವಾರಬಾಗಿಲು, ಕೊತ್ತಲು ಹಾಗೂ ಬಂದೂಕಿನ ಕಿಂಡಿಗಳನ್ನು ನೋಡಬಹುದಾಗಿದೆ.

ಎಂಟನೇಯ ದ್ವಾರಬಾಗಿಲನ್ನು ದಾಟಿದರೆ ಕೋಟೆಯ ತುತ್ತ ತುದಿಯನ್ನು ತಲುಪುತ್ತೇವೆ. ಮೇಲ್ಭಾಗದಲ್ಲಿರುವ ಶಂಕರೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದೆ. ದೇವಾಲಯದ ಮುಂದೆ ದೊಡ್ಡ ದೋಣೆಯೊಂದಿದೆ. ದೋಣೆಯ ಮುಂದೆ ದೀಪಸ್ತಂಭ ಮತ್ತು ಎಣ್ಣೆ ಕಣಜಗಳಿವೆ. ಉತ್ತರದಲ್ಲಿ ಮದ್ದಿನಮನೆ, ಪೂರ್ವಕ್ಕೆ ವೃತ್ತಾಕಾರದ ಕಣಜ, ದಕ್ಷಿಣಕ್ಕೆ ಸಾಲು ಕೊಠಡಿ. ಎಲ್ಲವೂ ಇಂದು ಪಾಳು ಬಿದ್ದಿವೆ. ಶಂಕರೇಶ್ವರ ದೇವಾಲಯದ ಸಮೀಪ ನಂದಿ ಮಂಟಪವಿದೆ. ಇಲ್ಲಿಂದ ಪೂರ್ವಕ್ಕೆ ಸ್ವಲ್ಪ ದೂರದಲ್ಲಿ ಬಂಡೆಯೊಂದರ ಮೇಲೆ ಗಣೇಶನ ಶಿಲ್ಪವಿದೆ. ಇದರ ಕೆಳಗೆ ಅಲಂಕಾರಿಕ ಕಲ್ಲುಗಳಿಂದ ಕಟ್ಟಿದ ವೇದಿಕೆ ಇದೆ. ಮುಂದೆ ಕೃಷ್ಣ ದೇವಾಲಯದ ಅವಶೇಷ, ದೊಡ್ಡ ಬೀಸುವಕಲ್ಲು, ಆಯಾಕಾರದ ಕಣಜದ ಅವಶೇಷಗಳಿವೆ. ಆಗ್ನೇಯದಲ್ಲಿ ಎರಡು ದೋಣೆಗಳಿವೆ. ಅತಿ ಎತ್ತರದ ಶಿಖರದ ಮೇಲೆ ಪಾಳೆಯಗಾರರು ತಮ್ಮ ಧ್ವಜವನ್ನು ಹಾರಿಸುತ್ತಿದ್ದುದರಿಂದ ನಿಶಾನಿ ಗುಂಡು ಎಂದು ಅದನ್ನು ಕರೆಯುತ್ತಾರೆ. ಹುತ್ರಿದುರ್ಗದ ಬೆಟ್ಟವನ್ನು ದೊಡ್ಡಬೆಟ್ಟವೆಂದೂ ಕರೆಯುತ್ತಾರೆ. ಇದರ ದಕ್ಷಿಣಕ್ಕೆ ಕೋಟೆಯಿಂದ ಸುತ್ತುವರಿದ ಬಸವನದುರ್ಗ ಹಾಗೂ ಪೂರ್ವಕ್ಕೆ ಓಲಗದರೆ ಮತ್ತು ತಿರುಮಲದೇವರ ಬೆಟ್ಟಗಳಿವೆ.

**ಹುಲಿಕಲ್ (ಜನಸಂಖ್ಯೆ. ೮೬೯):** ತುರುವೇಕೆರೆ ತಾಲೂಕಿನಲ್ಲಿದ್ದು, ತಂಡಗದಿಂದ ಮೂರು ಕಿ.ಮೀ. ದಕ್ಷಿಣಕ್ಕಿದೆ. ಇಲ್ಲಿ ಹೊಯ್ಸಳ ಶೈಲಿಯ ಶಿವದೇವಾಲಯವಿದ್ದು, ಸ್ಥಳೀಯವಾಗಿ ಮಲ್ಲೇಶ್ವರ ಅಥವಾ ಕಲ್ಲೇಶ್ವರ ದೇವಾಲಯವೆನ್ನುವರು. ಮಲ್ಲೇಶ್ವರ ದೇವಾಲಯವು ಗರ್ಭಗೃಹ, ತೆರೆದ ಸುಕನಾಸಿ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಬಾಗಿಲುವಾಡವು ಹೆಚ್ಚು ಅಲಂಕೃತವಾಗಿಲ್ಲ. ದೇವಾಲಯದ ಭಿತ್ತಿಯು ಮೂರು ಅಲಂಕಾರಿಕ ಪಟ್ಟಿಕೆಗಳನ್ನೊಳಗೊಂಡಿದೆ. ನವರಂಗದ ಕಂಬಗಳು ಸುಂದರವಾಗಿದ್ದು, ಇಕ್ಕೆಲದ ಗೂಡುಗಳಲ್ಲಿ ಇತ್ತೀಚಿನ ಗಣಪತಿ ಮತ್ತು ಭೈರವ ವಿಗ್ರಹಗಳಿವೆ. ನೈಋತ್ಯದ ಮೂಲೆಯಲ್ಲಿ ಷಣ್ಮುಖ, ಮಾಧವ, ನಾಗರಕಲ್ಲು ಮತ್ತು ನಂದಿಯ ವಿಗ್ರಹಗಳಿವೆ. ಈ ದೇವಾಲಯದ ಬಳಿ ಇರುವ ಕ್ರಿ.ಶ. ೧೧೭೩ರ ಶಾಸನ, ಈ ದೇವಾಲಯದ ಬಗ್ಗೆ ಮೌನವಾಗಿದೆ. ಈ ದೇವಾಲಯವು ಸುಮಾರು ೧೨೫೦ರ ನಿರ್ಮಾಣವೆನ್ನಬಹುದಾಗಿದೆ. ಸಂಗಮೇಶ್ವರ (ಹಂಸೇಶ್ವರ) ದೇವಾಲಯವನ್ನು ಮುಂಚೆ ಇದ್ದ ಕಮಠೇಶ್ವರ ದೇವಾಲಯದ ಕಲ್ಲುಗಳನ್ನು ಬಳಸಿ ಕಟ್ಟಲಾಗಿದೆ. ನವರಂಗದ ನಾಲ್ಕೂ ಕಂಬಗಳು ಹದಿನಾರು ಕೋನಗಳನ್ನು ಹೊಂದಿವೆ. ನವರಂಗದಲ್ಲಿ ಏಳು ಹೆಡೆಯ ನಾಗ, ಸಪ್ತಮಾತೃಕಾ, ಚಪ್ಪಟೆ ತಲೆಯುಳ್ಳ ಲಿಂಗ ಮತ್ತು ಪೀಠ, ವೇಣುಗೋಪಾಲ, ಸೂರ್ಯ, ಜನಾರ್ದನ ಮೊದಲಾದ ವಿಗ್ರಹಗಳಿವೆ.

**ಹುಲಿಯೂರು ದುರ್ಗ (ಜನಸಂಖ್ಯೆ. ೮,೩೯೯):** ಕುಣಿಗಲ್ ತಾಲೂಕಿನಲ್ಲಿ ದಕ್ಷಿಣಕ್ಕೆ ೨೪ ಕಿ.ಮೀ. ದೂರದಲ್ಲಿದೆ. ಈ ಪ್ರದೇಶವು ಒಂದು ಕಾಲದಲ್ಲಿ ಹುಲಿಗಳ ಬೀಡಾಗಿದ್ದುದರಿಂದ 'ಹುಲಿಯೂರು' ಎಂದಾಯಿತು. ಈ ಊರಿನ ಬೆಟ್ಟಕ್ಕೆ ಕೋಟೆಯನ್ನು ನಿರ್ಮಿಸಿದ್ದರಿಂದ ಹುಲಿಯೂರು ದುರ್ಗವೆಂದಾಯಿತು. ಈ ಕೋಟೆಯನ್ನು ಮಾಗಡಿ ಕೆಂಪೇಗೌಡ ನಿರ್ಮಿಸಿದ್ದೆಂದು ಹೇಳಲಾಗುತ್ತದೆ. ಮೈಸೂರು ರಾಜರಾದ ಕಂಠೀರವ ನರಸರಾಜ ಒಡೆಯರ ಸೈನ್ಯ ಹಾಗೂ ಬಿಜಾಪುರದ ರಣದುಲ್ಲಾಖಾನನ ನೇತೃತ್ವದ ಸೈನ್ಯಗಳ ನಡುವೆ ಕ್ರಿ.ಶ. ೧೬೪೦ರಲ್ಲಿ ಘೋರಯುದ್ಧವಾಗಿ ಬಿಜಾಪುರ ಸೈನ್ಯ ಹಿಂದೆ ಸರಿಯಿತು. ಮುಂದೆ, ಕ್ರಿ.ಶ. ೧೬೬೭ ರಲ್ಲಿ ದೇವರಾಜ ಒಡೆಯರ್, ಕ್ರಿ.ಶ. ೧೭೯೧ರಲ್ಲಿ ಕಾರ್ನ್‌ವಾಲ್ಲಿಸ್, ನಂತರ ಟಿಪ್ಪು ಈ ಕೋಟೆಯನ್ನು ವಶಪಡಿಸಿಕೊಂಡಿದ್ದ ಅಂಶ ತಿಳಿಯುತ್ತದೆ.

ಈ ಕೋಟೆ ಏಳು ಸುತ್ತನ್ನು ಹೊಂದಿದೆ. ಮೊದಲ ಪ್ರವೇಶದ್ವಾರ ಊರಿನ ಉತ್ತರದಲ್ಲಿದ್ದು, ದ್ವಾರಮಂಟಪವು ೧೬ ಕಂಬಗಳನ್ನು ಹೊಂದಿದೆ. ಭದ್ರತೆಗಾಗಿ ಇಲ್ಲಿಯೇ ಕಾವಲುಗಾರರ ವಾಸ್ತವ್ಯವನ್ನು ನಿರ್ಮಿಸಿದ್ದರು. ಇಲ್ಲಿಯೇ ಬಸವಣ್ಣ ಹಾಗೂ ಹನುಮನ ದೇವಾಲಯಗಳಿವೆ. ಪಶ್ಚಿಮ ಭಾಗದಲ್ಲಿ ಈದ್ಗಾ ಇದೆ. ದಕ್ಷಿಣಕ್ಕೆ ಎರಡನೇ ಕೋಟೆ ಇದೆ. ಎರಡನೇ ಕೋಟೆಯ ಗೋಡೆಯು ಪ್ರದೇಶದ್ವಾರ, ದಿಡ್ಡಿಬಾಗಿಲು, ಚೌಕಾಕಾರದ ಬತೇರಿ ಮೊದಲಾದವನ್ನು ಒಳಗೊಂಡಿದೆ. ಬುರುಜುಗಳ ಮೇಲೆ ಗಣೇಶ, ವಿಷ್ಣು, ಶಿವ, ಪಾರ್ವತಿಯರ ಮೂರ್ತಿಗಳನ್ನು ಬಿಡಿಸಲಾಗಿದೆ. ಮೂರನೇ

ಕೋಟೆಯಲ್ಲಿ ಗೋಪಾಲಕೃಷ್ಣನ ದೇವಾಲಯವಿದೆ, ನಾಲ್ಕನೇ ಕೋಟೆಬಾಗಿಲು ಹಾಳಾಗಿದೆ. ಐದನೇ ಕೋಟೆಗೆ ದಾರಿ ಬಹಳ ಕಡಿದಾಗಿದ್ದು, ಎದುರುಗಡೆ ಗಣೇಶನ ದೊಡ್ಡ ವಿಗ್ರಹವನ್ನು ಬಿಡಿಸಿಲಾಗಿದ್ದು, ಮುಂಭಾಗವು ಮಂಟಪವನ್ನು ಹೊಂದಿದೆ. ಆರನೇ ಕೋಟೆಯನ್ನು ಕಿರುಕಲ್ಲಿನಲ್ಲಿ ನಿರ್ಮಿಸಿದ್ದು, ಪ್ರವೇಶದ್ವಾರವೂ ಚಿಕ್ಕದಾಗಿದೆ. ಏಳನೇ ಕೋಟೆಯ ಪ್ರವೇಶ ಬಹಳ ದುಸ್ತರವಿದ್ದು ಮೇಲ್ಭಾಗದಲ್ಲಿ ಕಾವಲು ಗೋಪುರ, ಕಣಜ, ಮದ್ದಿನಮನೆ, ಹಾಗೂ ಹಲವಾರು ಕಟ್ಟಡಗಳ ಅವಶೇಷಗಳಿವೆ. ಏಳನೇ ಕೋಟೆ ಪ್ರಮುಖ ಆಡಳಿತ ಚಟುವಟಿಕೆಯ ಕೇಂದ್ರವೆಂದು ಇದರಿಂದ ಸ್ಪಷ್ಟವಾಗುತ್ತದೆ. ಈ ಕೋಟೆಯು ಒಂದು ಸುಭದ್ರವಾದ ಗಿರಿದುರ್ಗ ಕೋಟೆಯಾಗಿದ್ದಿತೆಂದು ತಿಳಿದು ಬರುತ್ತದೆ.

**ಹುಳಿಯಾರು (ಜನಸಂಖ್ಯೆ. ೧೨,೨೬೭):** ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿರುವ ಹೋಬಳಿ ಕೇಂದ್ರವಾಗಿದ್ದು, ತಾಲೂಕು ಕೇಂದ್ರದಿಂದ ೨೪ ಕಿ.ಮೀ. ಉತ್ತರಕ್ಕಿದೆ. ಮೊದಲು ಇದು ಬೂದಿಹಾಳು ತಾಲೂಕಿಗೆ ಸೇರಿದ್ದು, ಆದರ ಆಡಳಿತ ಕೇಂದ್ರವಾಗಿದ್ದಿತು.

ಹುಳಿಯಾರು ಒಂದು ಅಗ್ರಹಾರವಾಗಿದ್ದಿತೆಂದೂ, ಮೊದಲಿನ ಹೆಸರು 'ಹುಳಿಏರು' ಎಂದಿದ್ದಿತೆಂದು, ಕಲ್ಯಾಣ ಚಾಳುಕ್ಯರ ಶಾಸನ ಹಾಗೂ ಇನ್ನಿತರ ದಾಖಲೆಗಳು ತಿಳಿಸುತ್ತವೆ. ಇದು ಒಂದು ವಿದ್ಯಾಕೇಂದ್ರವಾಗಿ ಘಟಿಕಾಸ್ಥಾನವಾಗಿದ್ದಿತೆಂದು ತಿಳಿದುಬರುತ್ತದೆ. ಹೊಯ್ಸಳರ ಕಾಲದಲ್ಲಿ ಇಲ್ಲಿ ಒಂದು ಸಾಮಂತ ಜೈನ ಮನೆತನ ಆಳ್ವಿಕೆ ನಡೆಸುತ್ತಿತ್ತೆಂದು ತಿಳಿಯುತ್ತದೆ. ೧೬ನೇ ಶತಮಾನದಲ್ಲಿ ಹಾಗಲವಾಡಿ ನಾಯಕರ ಆಳ್ವಿಕೆಯಲ್ಲಿದ್ದು, ನಂತರ ಮುಸ್ಲಿಮರ ಆಧಿಪತ್ಯಕ್ಕೆ ಸೇರಿ, ಆನಂತರ ಹೈದರ್‌ಅಲಿಯ ಅಧೀನಕ್ಕೊಳಪಟ್ಟಿತ್ತು.

ಇಲ್ಲಿನ ಕೆರೆಯ ಅಂಗಳದಲ್ಲಿ ಹುಲಿ, ನಾಯಿ ಹಾಗೂ ರಾಜನ ಶಿಲ್ಪವಿರುವ ಕಲ್ಲೊಂದು ದೊರೆತಿದ್ದು, ನಾಯಿಯು ಹುಲಿಯ ಎದೆಯ ಮೇಲೆ ಎರಗಿದೆ. ಹುಲಿಯು ನಾಯಿಯ ಬಾಯನ್ನು ಕಚ್ಚಿದೆ. ರಾಜನು ಹುಲಿಯ ಬೆನ್ನಿನ ಮೇಲೆ ತನ್ನ ಎರಡೂ ಕೈಗಳನ್ನು ಒತ್ತಿಹಿಡಿದಿದ್ದಾನೆ. ಶಿಲಾಕ್ಷರಗಳು ಸವೆದು ಹೋಗಿದ್ದು, ಸ್ಥಳೀಯರು ಇದನ್ನು 'ನಾಯಿಕಲ್ಲು' ಎಂದು ಕರೆಯುತ್ತಾರೆ. ನಾಯಿಯು ಹುಲಿಯನ್ನು ಅಟ್ಟಿಸಿಕೊಂಡು ಹೋದಂತಹ ಪ್ರದೇಶದಲ್ಲಿ ಊರೊಂದನ್ನು ನಿರ್ಮಿಸಿದರು. ಹಾಗಾಗಿ ಈ ಊರಿಗೆ 'ಹುಲಿಏರು' ಎಂಬ ಹೆಸರು ಬಂದು, ನಂತರ ಅದೇ ಹುಳಿಯಾರು ಆಯಿತು ಎಂದು ಹೇಳಲಾಗುತ್ತದೆ.

ಹುಳಿಯಾರಿನಲ್ಲಿರುವ ರಂಗನಾಥ ದೇವಾಲಯವು ಹೊಯ್ಸಳ ಶೈಲಿಯದ್ದಾಗಿದೆ. ಗರ್ಭಗೃಹ ಬಿಟ್ಟು ಉಳಿದೆಲ್ಲಾ ಭಾಗವೂ ನವೀಕರಣಗೊಂಡಿದೆ. ಮೂಲಮೂರ್ತಿ ಸುಮಾರು ಐದು ಅಡಿ ಎತ್ತರವಿದ್ದು, ಅನಂತಶಯನದಲ್ಲಿ ಒರಗಿರುವ ಶ್ರೀರಂಗನಾಥನ ನಾಭಿಯಲ್ಲಿ ಬ್ರಹ್ಮ, ಶಿರದಲ್ಲಿ ಭೂದೇವಿ, ಪಾದದ ಬಳಿ ಭೂದೇವಿಯರ ಚಿತ್ರವಿರುವ ಸುಂದರಮೂರ್ತಿ ಇದಾಗಿದೆ. ಬದಿಯ ಗಣಪತಿ ಗುಡಿಯಲ್ಲಿ ಐದು ಅಡಿ ಎತ್ತರದ ಮೂರ್ತಿ ಇದೆ.

ಇಲ್ಲಿಯ ಮಲ್ಲೇಶ್ವರ ದೇವಾಲಯ ಮತ್ತೊಂದು ಪ್ರಮುಖ ದೇವಾಲಯವಾಗಿದ್ದು, ಚಾಳುಕ್ಯರ ಕೊನೆಯ ಕಾಲದ್ದಾಗಿದ್ದು. ದೇವಾಲಯವು ಚಿಕ್ಕದಾಗಿದ್ದರೂ ಸುಂದರವಾಗಿದೆ. ನವರಂಗದ ಮೇಲ್ಭಾವಣಿಯು ಪುಷ್ಪಗಳ ಕೆತ್ತನೆಯಿಂದ ಅಲಂಕೃತಗೊಂಡಿದೆ. ಭೀಮೇಶ್ವರ ದೇವಾಲಯದ ಉಲ್ಲೇಖ ಶಾಸನದಲ್ಲಿದ್ದರೂ ಈಗ ಆ ದೇವಾಲಯ ಉಳಿದಿಲ್ಲ. ವೀರಶೈವ ವಿರಕ್ತ ಮಠವೊಂದು ಈ ಊರಿನಲ್ಲಿದ್ದು ಅದನ್ನು ಶಾಸನದಲ್ಲಿ ಜಲತ್ಕಂಠ ಮಠವೆಂದು ಉಲ್ಲೇಖಿಸಲಾಗಿದ್ದು, ಇದು ಚಿತ್ರದುರ್ಗದ ಮುರುಘರಾಜೇಂದ್ರ ಮಠಕ್ಕೆ ಸೇರಿದ್ದಾಗಿದೆ.

**ಹೆಬ್ಬೂರು (ಜನಸಂಖ್ಯೆ. ೫,೯೫೧):** ತುಮಕೂರು ತಾಲೂಕಿನ ಒಂದು ಹೋಬಳಿಯಾಗಿದೆ. ತುಮಕೂರು–ಕುಣಿಗಲ್ ಮುಖ್ಯ ರಸ್ತೆಯಲ್ಲಿ ಜಿಲ್ಲಾ ಕೇಂದ್ರದಿಂದ ೨೪ ಕಿ.ಮೀ. ದೂರದಲ್ಲಿದೆ. ಇತ್ತೀಚೆಗೆ ನಿರ್ಮಾಣವಾದ ಶ್ರೀಚಕ್ರ ಮಾದರಿಯ ಕಾಮಾಕ್ಷಿ ದೇವಾಲಯದಿಂದ ಪ್ರಸಿದ್ಧಿ ಪಡೆದಿದೆ. ಹೆಬ್ಬೂರಿನ ಪ್ರಾಚೀನ ದೇವಾಲಯಗಳೆಂದರೆ ಬೆಣ್ಣೆ ವೀರಭದ್ರ, ಹೊಯ್ಸಳೇಶ್ವರ, ಕೋಡಿರಾಮೇಶ್ವರ (ಗಂಗರ ದೇವಾಲಯ). ವೀರಭದ್ರ (ಸು. ೧೦–೧೧ ನೆಯ ಶತಮಾನ) ಹುಡ್ಕೇಶ್ವರ, ಕೋಡಿ ಬಸವೇಶ್ವರ, ವೆಂಕಟೇಶ್ವರ, ಬೇಟೆರಾಯಸ್ವಾಮಿ (ಸು.೧೦–೧೧ನೇ ಶತಮಾನ) ಹಾಗೂ ವರದರಾಜಸ್ವಾಮಿ ದೇವಾಲಯ (ಸು. ೧೬ನೇ ಶತಮಾನ). ನಂತರದಲ್ಲಿ ಗೋಪಾಲಕೃಷ್ಣ ದೇವಾಲಯ, ಗಣಪತಿ ಗುಡಿ, ಆಂಜನೇಯ ಮತ್ತು ಎಲ್ಲಮ್ಮ ದೇವಾಲಯಗಳು ನಿರ್ಮಾಣವಾಗಿವೆ.

ಹೆಬ್ಬೂರಿನ ಸ್ಥಳನಾಮಕ್ಕೆ ಸಂಬಂಧಿಸಿದಂತೆ ಈ ಊರಿನ ದನಗಳು ಹುಲ್ಲನ್ನು ಮೇಯುತ್ತಿದ್ದಾಗ ಹೆಬ್ಬುಲಿಯೊಂದು ಮೇಲೆರಗಿದಾಗ ಅವುಗಳಲ್ಲೊಂದು ಹೋರಿ ಹುಲಿಯೊಡನೆ ಸೆಣಸಿ ಹುಲಿಯನ್ನು ಕೊಂದಿತಂತೆ. ಇಂತಹ ಸಾಹಸದ ಪ್ರದೇಶದಲ್ಲಿ ಕೋಟೆಯೊಂದನ್ನು ನಿರ್ಮಿಸಿ ಅದಕ್ಕೆ 'ಹೆಬ್ಬುಲಿನಾಡು' ಎಂದು ಕರೆದರು. ನಂತರದಲ್ಲಿ 'ಹೆಬ್ಬುಲಿಯೂರು', 'ಹೆಬ್ಬಲೂರು', 'ಹೆಬ್ಬೂರು' ಆಯಿತೆಂದು ಹೇಳಲಾಗುತ್ತದೆ. ಈ ಊರಿನಲ್ಲಿ ೧೦೮ ದೇವಾಲಯಗಳೂ, ೧೦೮ ಕಲ್ಯಾಣಿಗಳೂ ಇದ್ದಿತೆಂಬ ಐತಿಹ್ಯವಿದೆ. ಈಗ ೨೦ರಷ್ಟು ಮಾತ್ರ ಉಳಿದುಕೊಂಡಿವೆ. ಹೆಬ್ಬೂರು ಕ್ರಿ.ಶ. ೭–೮ನೇ ಶತಮಾನಕ್ಕಾಗಲೇ ಅಸ್ತಿತ್ವದಲ್ಲಿದ್ದು, ಇಲ್ಲಿ ದೊರೆತಿರುವ ಗಂಗ ವಂಶದ ದುರ್ವಿನೀತನ ತಾಮ್ರ ಶಾಸನವು ಪ್ರಾಚೀನ ದಾಖಲೆಯಾಗಿದೆ. ನಂತರದ ದಾಖಲೆಗಳಾಗಿ ವಿಜಯನಗರ ಮನೆತನದ ೪–೫ ಶಾಸನಗಳಿವೆ. ಕೆಂಪೇಗೌಡ, ಹಾಗಲವಾಡಿ–ಚಿಕ್ಕನಾಯಕನಹಳ್ಳಿ ನಾಯಕರು, ಮೈಸೂರು ಚಿಕ್ಕದೇವರಾಜ ಒಡೆಯರು, ಮೊಘಲರು ಮತ್ತು ಮರಾಠರು ಇಲ್ಲಿ ಆಳ್ವಿಕೆ ನಡೆಸಿದ್ದಾರೆ.

ಹೆಬ್ಬೂರಿನ ಪ್ರಾಚೀನ ದೇವಾಲಯಗಳ ಸಾಲಿನಲ್ಲಿ ಮೊದಲನೆಯದೇ ಪಾಳು ಬಿದ್ದಿರುವ 'ಬೆಣ್ಣೆ ವೀರಭದ್ರ' ದೇವಾಲಯ. ಈ ದೇವಾಲಯವು ಹಿಂದೆ ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನು ಹೊಂದಿತ್ತು. ಆದರಿಂದ ಗರ್ಭಗೃಹ ಮತ್ತು ಅಂತರಾಳಗಳು ಪಾಳು ಮಣ್ಣಿನರಾಶಿಯಾಗಿ ಪಾಳು ಬಿದ್ದಿವೆ. ನವರಂಗ ಮಂಟಪದ ಭಾಗ ಉಳಿದಿದ್ದು, ಅಲ್ಲೊಂದು ಪಾಣಿಪೀಠವಿದೆ. ಇದರಲ್ಲಿ ಸುಮಾರು ಒಂದುವರೆ ಅಡಿ ಎತ್ತರದ ಭೈರವನ ಮೂರ್ತಿಯನ್ನು ಇಡಲಾಗಿದೆ. ನವರಂಗದ ಕಂಬಗಳನ್ನು ಕಣಶಿಲೆಯಲ್ಲಿ ರೂಪಿಸಲಾಗಿದ್ದು, ಗಂಗ ಶೈಲಿಯಲ್ಲಿವೆ. ಕಂಬದಲ್ಲಿ ಚೌಕಾಕಾರದ ಪಾದ, ಮಣಿಮಾಲೆಯನ್ನು ಹೊಂದಿರುವ ಕಾಂಡಭಾಗ, ಮೇಲೆ ನಾಸಿಕಯುಕ್ತ ಕಳಶ, ದಪ್ಪವಾದ ವೃತ್ತಾಕಾರದ ಕುಂಬ ಮೊದಲಾದವುಗಳನ್ನು ಹೊಂದಿದೆ. ಒಟ್ಟಾರೆ ಪರಿಪೂರ್ಣ ಗಂಗಶೈಲಿಯ ಸ್ಮಾರಕ ಇದಾಗಿದೆ. ಇಲ್ಲಿರುವ ಭೈರವನ ಮೂರ್ತಿಯನ್ನು ಬೇರೆಡೆಯಿಂದ ತಂದಿಡಲಾಗಿದೆ ಎನ್ನಲಾಗಿದ್ದರೂ, ಈ ಶಿಲ್ಪದ ಚತುರ್ಭುಜಗಳಲ್ಲಿ ಕ್ರಮವಾಗಿ ಖಡ್ಗ, ತ್ರಿಶೂಲ, ಢಮರು ಹಾಗೂ ರುಂಡಗಳನ್ನು ನೋಡಬಹುದಾಗಿದೆ. ರುಂಡವನ್ನು ನಾಯಿಯೊಂದು ಕಚ್ಚಿ ತಿನ್ನುತ್ತಿದೆ. ಜಟಾಭಾಗದಲ್ಲಿ ನಗ್ನದೇಹಿ ಭೈರವನು ರುಂಡಮಾಲೆ ಧರಿಸಿದ್ದಾನೆ. ಕಾಲುಗಳಲ್ಲಿ ಅಡ್ಡಿಕೆ ಹಾಗೂ ಪಾದುಕೆಗಳಿವೆ. ಇದು ಭೈರವನ ದೇವಾಲಯವೇ ಆಗಿರಬೇಕೆಂಬ ಅಭಿಪ್ರಾಯವಿದೆ.

ಇಲ್ಲಿನ ಹೊಯ್ಸಳೇಶ್ವರ ದೇಗುಲ ಬಹಳ ಶಿಥಿಲವಾಗಿದ್ದು, ಗರ್ಭಗೃಹ ಹಾಗೂ ಅಂತರಾಳಗಳು ನಶಿಸಿವೆ. ನವರಂಗದ ಬಾಗಿಲುವಾಡವು ಮನಮೋಹಕ ಕೆತ್ತನೆಯಿಂದಾಗಿ ಶ್ರೀಮಂತವಾಗಿದೆ. ಇದು ಇಟ್ಟಿಗೆಯ ನಿರ್ಮಿತಿಯಾಗಿದ್ದು ಗಂಗರ ಕಾಲದ ಇಟ್ಟಿಗೆಯ ಗಾತ್ರವನ್ನು ನೆನಪಿಸುತ್ತದೆ. ಈ ದೇವಾಲಯವು ಹೊಯ್ಸಳರ ಕಾಲದಲ್ಲಿ ಹಾಗೂ ಮತ್ತೊಮ್ಮೆ ಪಾಳೆಯಗಾರರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿದ್ದರೂ, ಪಾಳು ದೇಗುಲವಾಗಿಯೇ ಉಳಿದುಬಂದಿದೆ. ಗರ್ಭಗೃಹದ ಶಿವಲಿಂಗವು ಹೊಯ್ಸಳ ಶೈಲಿಯಲ್ಲಿದ್ದರೆ, ನವರಂಗದಲ್ಲಿರುವ ಬಸವಣ್ಣನ ಮೂರ್ತಿಯು ನಂತರದ ಕಾಲದ್ದಾಗಿದೆ.

ಇಲ್ಲಿಯ ರಾಮೇಶ್ವರ ದೇವಾಲಯವೂ ಕೂಡ ಪ್ರಾಚೀನ ದೇಗುಲವೇ ಆದರೂ ಇತ್ತೀಚಿನ ದಿನಗಳಲ್ಲಿ ಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ. ಇಲ್ಲಿರುವ ಮೂಲಮೂರ್ತಿ ಈ ದೇವಾಲಯದ ಪ್ರಾಚೀನತೆಯನ್ನು ಸೂಚಿಸುತ್ತದೆ. ಕಿರಿದಾದ ಗರ್ಭಗೃಹ ಹಾಗೂ ತೆರೆದ ಅಂತರಾಳವನ್ನು ಹೊಂದಿದ್ದು, ಪಾಣಿಪೀಠದಲ್ಲಿ ಉದ್ಭವಲಿಂಗವಿದ್ದು, ಶಿವಲಿಂಗವು ಗಂಗರ ಕಾಲದ್ದಾಗಿದೆ. ನವರಂಗದ ಕಂಬಗಳು, ಶಿಲ್ಪಗಳು ಹಾಗೂ ಸಪ್ತಮಾತೃಕೆಯರ ಪಟ್ಟಿಕೆ ೧೦ನೇ ಶತಮಾನದ ವಾಸ್ತುಲಕ್ಷಣವನ್ನು ಹೋಲುತ್ತವೆ. ಈ ದೇವಾಲಯವನ್ನು ದ್ರಾವಿಡ ಶೈಲಿಯಲ್ಲಿ ಪುನರ್ರಚಿಸಲಾಗಿದ್ದು, ಶಿಖರದ ನಿರ್ಮಾಣಕ್ಕೆ ಗಾರೆಯನ್ನು ಬಳಸಲಾಗಿದೆ. ಇದರ ಸಮೀಪದಲ್ಲಿಯೇ ಬಸವೇಶ್ವರ ದೇವಾಲಯವಿದೆ.

ಇಲ್ಲಿರುವ ವೀರಭದ್ರ ದೇವಾಲಯ ಕೂಡ, ಪ್ರಾಚೀನದ್ದಾಗಿದ್ದು, ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಟಪ ಮತ್ತು ಪ್ರಾಕಾರಗಳನ್ನು ಹೊಂದಿದೆ. ನಾಲ್ಕು ಅಡಿ ಎತ್ತರದ ವೀರಭದ್ರಸ್ವಾಮಿಯ ಮೂರ್ತಿಯು ಚರ್ತುಭುಜಧಾರಿಯಾಗಿದ್ದು, ಖಡ್ಗ ಮತ್ತು ಬಾಣವಿದ್ದು ಕರಂಡಮಕುಟ ಹಾಗೂ ಕುಂಡಲಗಳನ್ನು ಹೊಂದಿದೆ. ಕೊರಳಲ್ಲಿ ಏಕಾವಳಿ ಹಾಗೂ ಉರಹಾರಗಳಿವೆ. ಉದರಬಂಧವನ್ನು ಹೊಂದಿದ್ದು, ಉದ್ದವಾದ ರುಂಡಮಾಲೆಯೂ ಇದೆ. ತೋಳ್ಬಂದಿ, ಕೈ ಹಾಗೂ ಕಾಲುಗಳಿಗೆ ಕಡಗ, ಪಾದಗಳಲ್ಲಿ ಪಾದಜಾಲಕ ಮತ್ತು ಪಾದುಕೆಗಳೂ ಇವೆ. ದೇವನ ಬಲಭಾಗದಲ್ಲಿ ಅಂಜಲಿ ಬದ್ಧನಾದ ಕುರಿತಲೆಯ ದಕ್ಷ ನಿಂತಿರುವನು. ಉಬ್ಬಿದ ಕಣ್ಣುಗಳು, ಹುರಿಗೊಂಡ ಮೀಸೆ, ಕೋರೆಹಲ್ಲುಗಳು, ದೇವನ ರೌದ್ರ

ಭಾವವನ್ನು ಬಿಂಬಿಸಿವೆ. ಇಲ್ಲಿಯೇ ಪ್ರಾಚೀನ ಶಿವಲಿಂಗ, ನಂದಿ, ಭದ್ರಕಾಳಿ ಮೊದಲಾದ ಶಿಲ್ಪಗಳು ಕಂಡುಬರುತ್ತವೆ. ಅನಂತರದಲ್ಲಿ ಈ ದೇವಾಲಯ ಜೀರ್ಣೋದ್ಧಾರಗೊಂಡಿದೆ. ದೇವಾಲಯದ ಸಮೀಪ ಶಿಲಾಚಕ್ರ ರಥವೊಂದು ನಿಂತಿದೆ. ವೀರಭದ್ರನ ರಥೋತ್ಸವವು ವೈಭವದಿಂದ ನಡೆಯುತ್ತದೆ. ಇಲ್ಲಿ ಎರಡು ವೀರಶೈವ ಮಠಗಳಿದ್ದು, ಊರಿನ ಮಧ್ಯದಲ್ಲಿ ಇರುವ ಹಿರೇಮಠದಲ್ಲಿ ಮಲ್ಲಿಕಾರ್ಜುನ ಸ್ವಾಮಿಗಳ ಗದ್ದುಗೆ ಇದೆ. ಹೆಬ್ಬೂರಿನಲ್ಲಿ ದೂರೆತ ಗಂಗ ದುರ್ವಿನೀತನ ತಾಮ್ರ ಶಾಸನವನ್ನು ಇಲ್ಲಿಯೇ ರಕ್ಷಿಸಿಡಲಾಗಿದ್ದಿತು. ಜಡೆಯಮ್ಮನ ಮಠ ಸಹ ವೀರಶೈವ ಮಠವಾಗಿದ್ದು, ಸಿದ್ಧಲಿಂಗೇಶ್ವರರ ಪರಂಪರೆಗೆ ಸೇರಿದ್ದೆಂದು ಅಭಿಪ್ರಾಯವಿದೆ. ಇಲ್ಲಿ ಎರಡು ಗದ್ದಿಗೆಗಳಿವೆ. ಹೆಬ್ಬೂರಿನ ಇನ್ನಿತರ ದೇವಾಲಯಗಳು ಆಧುನಿಕ ನಿರ್ಮಾಣಗಳಾಗಿವೆ. ಅವುಗಳಲ್ಲಿ ಶ್ರೀ ಕಾಮಾಕ್ಷಿ ದೇವಾಲಯವನ್ನು ಕೋದಂಡರಾಮ ಮಠದ ಆವರಣದಲ್ಲಿ ನಿರ್ಮಾಣ ಮಾಡಲಾಗಿದ್ದು, ಶ್ರೀಚಕ್ರಾಕಾರದಲ್ಲಿ ರಚಿಸಲಾಗಿದೆ. ಇವುಗಳ ಜೊತೆಗೆ ಗ್ರಾಮದೇವತೆ ದೇವಾಲಯ ಹಾಗೂ ಮಸೀದಿಗಳಿವೆ.

**ಹೊನ್ನವಳ್ಳಿ (ಜನಸಂಖ್ಯೆ. ೫,೫೮೮):** ಇದು ತಿಪಟೂರು ತಾಲೂಕಿನ ಪಶ್ಚಿಮಕ್ಕೆ ೧೧ ಕಿ.ಮೀ. ದೂರದಲ್ಲಿದೆ. ಇಲ್ಲಿಯ ಭೈರವ, ಕೈಲಾಸೇಶ್ವರ ಮತ್ತು ನಾರಾಯಣಸ್ವಾಮಿ ದೇವಾಲಯಗಳು ಹೊಯ್ಸಳ ವಾಸ್ತುಶೈಲಿಯಲ್ಲಿವೆ. ಸಪ್ತಮಾತೃಕೆಯ ಶಿಲ್ಪವು ವಿಶಿಷ್ಟವಾಗಿದೆ. ಇಲ್ಲಿನ ಕರಿಸಿದ್ದೇಶ್ವರ ಮಠ ಬಹು ಅಪರೂಪವಿದ್ದು, ಊರಿನ ಮಧ್ಯದ ಎತ್ತರದ ಸ್ಥಳದಲ್ಲಿ, ಮರದಿಂದ ನಿರ್ಮಿಸಿರುವ ಸುಂದರ ಕೆತ್ತನೆಯ ಕಂಬಗಳನ್ನೊಳಗೊಂಡ ಮಠವಾಗಿದೆ. ಮೊದಲು ಇದು ಅರಮನೆಯಾಗಿದ್ದುದಾಗಿ ತಿಳಿದುಬರುತ್ತದೆ. ನವರಂಗದ ಕಂಬಗಳಲ್ಲಿ ಮದನಿಕೆಯರ ವಿಗ್ರಹಗಳನ್ನು ಕೆತ್ತಲಾಗಿದೆ.

ಈ ಮಠವನ್ನು ೧೫೮೦ರಲ್ಲಿ ನಿರ್ಮಿಸಿದ್ದೆಂದು ಹೇಳಲಾಗುತ್ತದೆ. ಇಲ್ಲಿನ ಅಪಾರ ಓಲೆಗರಿ ಸಂಗ್ರಹವಿರುವ 'ಶಾರದಾ ಭಂಡಾರ' ಗಣನೀಯವಾದುದು. ಇಲ್ಲಿರುವ ಸುಮಾರು ೫೦೦ ಕೃತಿಗಳಲ್ಲಿ, ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಯ ಮಹತ್ವದ ಅಪ್ರಕಟಿತ ಕೃತಿಗಳೂ ಸೇರಿವೆ. ಈ ಸಂಗ್ರಹದಲ್ಲಿ ಓಲೆಗರಿಯ ಒಂದೇ ಕಟ್ಟಿನ ೩೪೫ ಗರಿಗಳಲ್ಲಿ ೬೦೦೦ ವಚನಗಳಿದ್ದು, ಸ್ವಲ್ಪ ಭಾಗ ನಷ್ಟವಾಗಿದೆ. ಒಟ್ಟಾರೆ ಈ ಶಾರದಾ ಭಂಡಾರ ಸಾಹಿತ್ಯಾಸಕ್ತರಿಗೆ ನಿಧಿಯಾಗಿದೆ. ಇವುಗಳ ಸೂಚಿಯನ್ನು ಸಿದ್ಧಪಡಿಸಲಾಗಿದೆ.

**ಹೊನ್ನುಡಿಕೆ (ಜನಸಂಖ್ಯೆ. ೨,೯೮೨):** ಹೊನ್ನುಡಿಕೆಯಲ್ಲಿ ದೊರೆತಿರುವ ಒಂಬತ್ತು ಶಾಸನಗಳು ಹಿಂದೆ ಈ ಊರಿಗೆ ಇದ್ದ ಹೆಸರಿನ ವೈವಿಧ್ಯತೆ ಹಾಗೂ ಇಲ್ಲಿನ ದೇವಾಲಯಗಳ ಪ್ರಾಚೀನತೆಯನ್ನು ತಿಳಿಯಲು ನೆರವಾಗುತ್ತದೆ. ಇವುಗಳ ಪೈಕಿ ಅತಿ ಪ್ರಾಚೀನವಾದುದು. ಗಂಗ ಶ್ರೀವಿಕ್ರಮನ ಕ್ರಿ.ಶ.ಸು ೬೫೦ರ ಶಾಸನ ಇದರಲ್ಲಿ 'ಪೊನ್ನುಡಿಕಿ ಎಳ್ಪತ್ತರ' ಉಲ್ಲೇಖವಿದೆ. ನಂತರ ಕ್ರಿ.ಶ.ಸು. ೭೫೦ಕ್ಕೆ ಸೇರಬಹುದಾದ ಮತ್ತೊಂದು ಶಾಸನ 'ಪೊನ್ನಿಡುಕಿ' ಎಂದು ಉಲ್ಲೇಖಿಸಿದೆ. ಕ್ರಿ.ಶ. ೧೧೫೦ರ ವೇಳೆಗೆ ಇದಕ್ಕೆ 'ಅಗ್ರಹಾರ ಗಂಧವಾರಣಪುರವಾದ ಹೊನ್ನುಡಿಕೆ' ಎಂಬ ಅಭಿದಾನ ಪಡೆದಿತ್ತು. ಆ ಸಮಯದಲ್ಲಿ ಗೂಳೂರು ಸೀಮೆಯ ಭಾಗವಾಗಿದ್ದಿತೆಂದೂ ತಿಳಿಯುತ್ತದೆ. ವಿವಿಧ ರೂಪಾಂತರ ಹೊಂದಿ ಈಗ ಹೊನ್ನುಡಿಕೆ ಎಂದು ಕರೆಸಿಕೊಳ್ಳುತ್ತಿದೆ. ಹೊನ್ನುಡಿಕೆಯ ಕೆರೆಯ ಮೇಲಿರುವ ಸ್ವರ್ಣಾಂಬ ದೇವಾಲಯದ ಜೊತೆಗೆ ಕೈಲಾಸೇಶ್ವರ ದೇವಸ್ಥಾನ, ಜನಾರ್ದನ ದೇವಸ್ಥಾನ, ಶ್ರೀ ಬಸವೇಶ್ವರ ದೇವಾಲಯ, ಲಕ್ಷ್ಮೀದೇವಾಲಯ, ರೇವಣಸಿದ್ದೇಶ್ವರ ದೇವಸ್ಥಾನ, ಆಂಜನೇಯಸ್ವಾಮಿ ದೇವಸ್ಥಾನ; ಉಪ್ಪರಿಗೆಮಠ, ಹೊಸಮಠ, ಕರಡಿಗೆಮಠ ಹಾಗೂ ಶ್ರೀಮುರುಗಿಸ್ವಾಮಿಗಳವರ ಗದ್ದುಗೆ, ಶ್ರೀ ಬಸವಲಿಂಗಸ್ವಾಮಿ ಗದ್ದುಗೆ ಮೊದಲಾದವು ಇಲ್ಲಿವೆ.

ಇಲ್ಲಿನ ಹೊನ್ನಾದೇವಿ ಅಮ್ಮನವರ ದೇವಾಲಯ ಅತ್ಯಂತ ಪ್ರಾಚೀನದ್ದಾಗಿದ್ದು, ಗರ್ಭಗೃಹ, ನವರಂಗ, ಅರ್ಧಮಂಟಪಗಳನ್ನು ಹೊಂದಿದ್ದು, ಹೊನ್ನಾದೇವಿಯ ಮೂರ್ತಿಯು ಭವ್ಯವಾಗಿದ್ದು, ರಾಕ್ಷಸ ಮರ್ಧನ ರೂಪದಲ್ಲಿದೆ. ಆರು ಕೈಗಳಿದ್ದು, ಗುರಾಣಿ, ಕತ್ತಿ, ತ್ರಿಶೂಲ, ಢಮರುಗ, ಪಾನಪಾತ್ರೆ, ಅಭಯಹಸ್ತಗಳನ್ನು ಹೊಂದಿದೆ. ಬಲಭಾಗದಲ್ಲಿ ದುರ್ಗಿ, ಎಡಭಾಗದಲ್ಲಿ ಶಾರದಾಮಾತೆಯ ವಿಗ್ರಹವಿದೆ. ಇವೆಲ್ಲ ಮೂರು ಅಡಿ ಎತ್ತರದವು. ದುರ್ಗೆಯು ಚತುರ್ಭುಜಳಾಗಿದ್ದು, ಕತ್ತಿ, ತ್ರಿಶೂಲ, ಢಮರುಗ ಮತ್ತು ಪಾನಪಾತ್ರೆಗಳನ್ನು ಹೊದಿದೆ. ಶಾರದಾದೇವಿ ಚತುರ್ಭುಜಳಾಗಿದ್ದು, ಪದ್ಮಾಸೀನದಲ್ಲಿದ್ದು ಅಭಯಹಸ್ತ, ಓಲೆಗರಿ ಹಾಗೂ ಮತ್ತೆರೆಡು ಕೈಗಳಲ್ಲಿ ವಿಶೇಷ ಆಯುಧಗಳಿವೆ. ದ್ವಾರಬಂಧದಲ್ಲಿ ಗಜಲಕ್ಷ್ಮಿ ಇದ್ದು, ಶಿವದ್ವಾರಪಾಲಕರನ್ನು ಹೊಂದಿದ್ದಾಳೆ. ಎದುರುಗಡೆಯಲ್ಲಿ ನಾಲ್ಕು ಅಡಿ ಎತ್ತರದ ನಂದಿ ಇದೆ. ಕಂಬಗಳಲ್ಲಿ ಹಲವು ಉಬ್ಬು ಶಿಲ್ಪಗಳಿವೆ. ದೇವಾಲಯದ ಪರಿಸರದಲ್ಲಿ ಮೂರು ವೀರಗಲ್ಲು, ಸಿಡಿ ಅರ್ಪಣೆ ಕಲ್ಲುಗಳೂ ಇವೆ.

ಜನಾರ್ದನಸ್ವಾಮಿ ಗುಡಿ ಇಲ್ಲಿಯ ಮತ್ತೊಂದು ಪ್ರಾಚೀನ ದೇಗುಲ. ಇದು ಮಹಾದ್ವಾರ, ಬಲಿಪೀಠ, ಗರುಡಗಂಬ, ದ್ವಾರ, ನವರಂಗ ಪ್ರದಕ್ಷಣಾಪಥ, ಅರ್ಧಮಂಟಪ, ಗರ್ಭಗೃಹಗಳನ್ನು ಹೊಂದಿರುವ ಹೊಯ್ಸಳರ ಕಾಲದ ಭವ್ಯವಾದ ದೇವಾಲಯ. ಗರ್ಭಗೃಹದಲ್ಲಿ ಚತುರ್ಭುಜ ಜನಾರ್ದನ ಶಿಲ್ಪವಿದ್ದು, ಚಕ್ರ, ಶಂಖ, ಅಭಯಹಸ್ತ ಹಾಗೂ ಗದೆಗಳಿವೆ. ಸೂಕ್ಷ್ಮ ಕೆತ್ತನೆಯ ಈ ವಿಗ್ರಹ ಮೂರು ಅಡಿ ಎತ್ತರವಿದ್ದು, ಆಭರಣ ಉಡುಗೆ ಯಜ್ಞೋಪವೀತ ಮೊದಲಾದ ಸೂಕ್ಷ್ಮ ಕೆತ್ತನೆಗಳನ್ನೊಳಗೊಂಡಿದೆ. ಈ ಹಿಂದೆ ಇದ್ದ ಮೂಲಮೂರ್ತಿ ಶಿಥಿಲವಾದ್ದರಿಂದ ಅದೇ ಪೀಠದಮೇಲೆ ಹೊಸ ವಿಗ್ರಹವನ್ನು ಸ್ಥಾಪಿಸಲಾಗಿದ್ದು, ಇಲ್ಲಿನ ಶಾಸನವೊಂದು ಇದನ್ನು ಉಲ್ಲೇಖಿಸುತ್ತದೆ. ಅರ್ಧಮಂಟಪದಲ್ಲಿ ಅಂಜಲಿ ಬದ್ಧರಾದ ರಾಮಾನುಜಾಚಾರ್ಯ ಮತ್ತು ಆಳ್ವಾರರ ವಿಗ್ರಹಗಳಿವೆ. ಶ್ರೀದೇವಿ ಭೂದೇವಿ ಸಹಿತ ಇರುವ ಜನಾರ್ದನನ ಉತ್ಸವಮೂರ್ತಿ ಇದೆ. ಈ ದೇವಾಲಯದ ಬಲಿಪೀಠದಲ್ಲಿ ತಮಿಳು ಮತ್ತು ಕನ್ನಡ ಶಾಸನಗಳಿವೆ.

ಕೈಲಾಸೇಶ್ವರ ದೇವಾಲಯ ಗಂಗರ ಕಾಲದ ದೇವಾಲಯವಾಗಿದ್ದು, ಗರ್ಭಗೃಹ, ಅರ್ಧಮಂಟಪ, ನವರಂಗ, ಹಾಗೂ ಮಹಾದ್ವಾರಗಳನ್ನೊಳಗೊಂಡಿದೆ. ಗರ್ಭಗೃಹದಲ್ಲಿರುವ ಸುಮಾರು ಎರಡು ಅಡಿ ಎತ್ತರದ ಪೀಠದ ಮೇಲಿನ ಶಿವಲಿಂಗಕ್ಕೆ ಅಭಿಮುಖವಾಗಿ ವೃಷಭ ವಿಗ್ರಹವಿದೆ. ನವರಂಗದಲ್ಲಿ ಸುಮಾರು ಮೂರು ಅಡಿ ಎತ್ತರದ ವೈಷ್ಣವೀ ದೇವಿಯ ಶಿಲ್ಪವಿದ್ದು, ಕೈಗಳಲ್ಲಿ ಶಂಖ ಮತ್ತು ಚಕ್ರಗಳಿವೆ. ಮತ್ತೆರಡು ಅಭಯ ಹಸ್ತ ಹಾಗೂ ಮುದ್ರೆಯಲ್ಲಿವೆ. ಪಕ್ಕದಲ್ಲಿ ಅಂಜಲಿಬದ್ಧ ನಾಗಕನ್ಯೆ ಹಾಗೂ ಒಂದುವರೆ ಅಡಿ ಎತ್ತರದ ಗಣಪತಿ ವಿಗ್ರಹಗಳು ಗಂಗ ಶೈಲಿಯ ಸುಂದರ ಮೂರ್ತಿಗಳಾಗಿವೆ. ಮಂಟಪಕ್ಕೆ ಅಭಿಮುಖವಾಗಿ ಉಪಗರ್ಭಗೃಹಗಳಿದ್ದು, ಹೊನ್ನಾದೇವಿ ಮತ್ತು ಲಕ್ಷ್ಮೀದೇವಿಯರ ಉತ್ಸವ ಮೂರ್ತಿಗಳಿಲ್ಲಿವೆ. ಅಲ್ಲಿಯೇ ಗಂಗರ ಕಾಲದ ತ್ರುಟಿತ ಶಾಸನವೊಂದಿದೆ.

ಬಸವೇಶ್ವರ ದೇವಾಲಯವು ಊರಿನ ಮಧ್ಯದಲ್ಲಿದ್ದು, ಗರ್ಭಗುಡಿಯಲ್ಲಿ ಒರಟು ಕಲ್ಲಿನಲ್ಲಿ ಕೆತ್ತಲಾಗಿರುವ ಸುಮಾರು ಮೂರು ಅಡಿ ಎತ್ತರದ ವೃಷಭ ವಿಗ್ರಹವಿದೆ. ಶಿಥಿಲವಾದ್ದರಿಂದ ನವೀಕರಿಸಲಾಗಿದೆ. ಲಕ್ಷ್ಮೀದೇವಾಲಯವು ಊರಮುಂದಿದ್ದು, ದೇವಿಯ ವಿಗ್ರಹ ಸುಖಾಸೀನಭಂಗಿಯಲ್ಲಿದೆ. ಚತುರ್ಭುಜಳಾದ ದೇವಿಯ ಮೇಲಿನ ಕೈಯಲ್ಲಿ ಕಮಲದ ಹೂ ಹಾಗೂ ಕೆಳಗಿನ ಕೈಗಳಲ್ಲಿ ಫಲವನ್ನು ಹಿಡಿದಿದ್ದು, ನಾಲ್ಕು ಅಡಿ ಎತ್ತರವಿದೆ. ಲಕ್ಷ್ಮೀದೇವಿಯ ಉತ್ಸವಮೂರ್ತಿಯನ್ನು ಈಶ್ವರ ದೇವಾಲಯದಲ್ಲಿ ಇಡಲಾಗಿದೆ. ಇದು ಎರಡು ಅಡಿ ಎತ್ತರವಿದ್ದು, ಚತುರ್ಭುಜ ಹೊಂದಿದ್ದು, ಸುಖಾಸೀನ ಭಂಗಿಯಲ್ಲಿದೆ. ಮೇಲಿನ ಎರಡು ಕೈಗಳಲ್ಲಿ ಕಮಲದ ಹೂವನ್ನು ಹಿಡಿದಿದ್ದು, ಇನ್ನೆರಡು ಕೈ ಅಭಯ್ತ ಮತ್ತು ವರದಮುದ್ರೆಗಳಲ್ಲಿವೆ. ವಿಗ್ರಹದ ಕೆತ್ತನೆ ಸುಂದರವಾಗಿದೆ.

ಆಂಜನೇಯಸ್ವಾಮಿ ದೇವಾಲಯವು ರೇವಣಸಿದ್ಧೇಶ್ವರ ದೇವಸ್ಥಾನದ ಎದುರುಗಡೆ ಇದ್ದು, ಒರಟು ಕಲ್ಲುಗಳನ್ನು ಬಳಸಿ ಇದನ್ನು ನಿರ್ಮಿಸಲಾಗಿದೆ. ವಿಗ್ರಹ ಸುಮಾರು ನಾಲ್ಕು ಅಡಿ ಎತ್ತರವಿದ್ದು, ದೇವಾಲಯಕ್ಕೆ ಅಭಿಮುಖವಾಗಿ ಗರುಡಗಂಭವಿದೆ. **ಜಲಗಾರದಿಬ್ಬ** ಎನ್ನುವ ಪ್ರದೇಶ ಹೊನ್ನುಡಿಕೆಗೆ ಸಮೀಪದಲ್ಲಿದ್ದು, ಅಲ್ಲಿ ದೊರೆತ ಬೂದಿಯುಕ್ತ ಫಲವತ್ತಾದ ಮಣ್ಣನ್ನು ಸ್ಥಳೀಯ ರೈತರು ತಮ್ಮ ಕೃಷಿ ಭೂಮಿಗೆ ಬಳಸಿಕೊಂಡಿದ್ದಾರೆ. ಪ್ರಾಚೀನ ವಸ್ತುಗಳಾದ ಒಂದು ಪಾಣಿಪೀಠ, ಇಟ್ಟಿಗೆಯ ಅವಶೇಷ, ಮಡಕೆಯ ಭಾಗಗಳು, ಒಂದು ಪಂಚಲೋಹದ ಬಲಮುರಿ ಗಣೇಶ ಹಾಗೂ ಇನ್ನಿತರ ವಸ್ತುಗಳ ಜೊತೆಗೆ ಒಂದು ಶಿಲಾಶಾಸನ ಇಲ್ಲಿ ದೊರೆತಿದೆ. ಈ ಶಾಸನವು ಮೊದಲಿಗೆ ಕನ್ನಡದ ಬಹು ಪ್ರಾಚೀನ ಶಾಸನವೆಂದಾಗಿತ್ತು, ಆದರೆ ಇದು ಗಂಗ ತ್ರಿವಿಕ್ರಮನ ಕಾಲದ್ದೆಂದು, ಇದರಲ್ಲಿ ಉಲ್ಲೇಖವಾಗಿರುವ 'ಪೊನ್ನುಡಿಕೆ ೭೦' ಎಂಬ ಉಲ್ಲೇಖ ಹೊನ್ನುಡಿಕೆಯ ಪ್ರಾಚೀನತೆಯನ್ನು ತಿಳಿಸಿದೆ. ಇದೇ ಸ್ಥಳದಲ್ಲಿ ಗಂಗ ಶ್ರೀಪುರುಷನ ೭೫೦ರ ಮತ್ತೊಂದು ಶಾಸನ ದೊರೆತಿದ್ದು, ಅದರಲ್ಲಿಯೂ 'ಪೊನ್ನಿಡುಕಿ'ಯ ಉಲ್ಲೇಖವಿದೆ. ಜಲಗಾರ ದಿಬ್ಬದಲ್ಲಿ ದೊರೆತ ಬಲಮುರಿ ಗಣೇಶನ ಮೂರ್ತಿಯು ಗಂಗರ ಕಾಲದ ಅತಿ ಪ್ರಾಚೀನ ಪಂಚಲೋಹದ ಮೂರ್ತಿ ಎಂದು ಹೇಳಬಹುದು. ಇದು ಎಂಟನೇ ಶತಮಾನದ್ದೆಂದು ತಿಳಿಯುತ್ತದೆ. ಇಲ್ಲಿ ದೊರೆತಿರುವ ದೇವಾಲಯವನ್ನು ಇಟ್ಟಿಗೆಯಲ್ಲಿ ನಿರ್ಮಿಸಲಾಗಿದ್ದು ಗುಡಿಯ ತಳವಿನ್ಯಾಸ ದೊರೆತಿದೆ. ಇದರೊಂದಿಗೆ ಕಲ್ಲಿನ ಪಾಣಿಪೀಠ ಕೂಡ ದೊರೆತಿದೆ. ಒಟ್ಟಾರೆ ಗಂಗ ಮನೆತನದ ಆರಂಭದಲ್ಲಿ ಇಟ್ಟಿಗೆ ಬಳಸಿ ದೇವಾಲಯ ನಿರ್ಮಿಸಿದ್ದಕ್ಕೆ ಇದೊಂದು ಒಳ್ಳೆಯ ಉದಾಹರಣೆಯಾಗಿದೆ.

**ಹೊಸಹಳ್ಳಿ (ಜನಸಂಖ್ಯೆ. ೯೭೪)**: ತುರುವೇಕೆರೆ ತಾಲೂಕಿನಲ್ಲಿದ್ದು, ಇಲ್ಲಿನ ಕಲ್ಲೇಶ್ವರ ದೇವಾಲಯವು ಹೊಯ್ಸಳ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಇದು ಗರ್ಭಗೃಹ, ಸುಕನಾಸಿ, ನವರಂಗಗಳನ್ನೊಳಗೊಂಡಿದೆ. ನವರಂಗದ

ಮೇಲ್ಭಾವಣಿಯನ್ನು ನವವಿಭಾಗಗಳಾಗಿ ವಿಂಗಡಿಸಿದ್ದು ಮಧ್ಯದಲ್ಲಿ ಕಮಲದ ಮೊಗ್ಗಿನ ಶಿಲ್ಪವನ್ನು ಕೆತ್ತಲಾಗಿದೆ. ಬಾಗಿಲುವಾಡವು ವಿಶಿಷ್ಟ ಕೆತ್ತನೆಗಳನ್ನೊಳಗೊಂಡಿದೆ. ಗ್ರಾಮದೇವತೆ, ಹೊಸಳ್ಳಿಯಮ್ಮನ ಶಿಲ್ಪವನ್ನು ಗಾರೆಯಲ್ಲಿ ರೂಪಿಸಿ, ಬಣ್ಣಗಳಿಂದ ಚಿತ್ರಿಸಿರುವರು. ಇದೊಂದು ಸುಂದರ ಮೂರ್ತಿಯಾಗಿದೆ.

---೦೦೦---